₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 07.09.2024 ಸಂಪುಟ: 09 ಸಂಚಿಕೆ: 254 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಶುಭಾಶಯಗಳು

ನಮ್ಮೆಲ್ಲ ಓದುಗರು, ಜಾಹೀರಾತುದಾರರು, ಏಜೆಂಟರು ಹಾಗೂ ಹಿತೈಷಿಗಳಿಗೆ ಗಣೇಶ ಚತುರ್ಥಿಯ ಹಾರ್ದಿಕ ಶುಭಾಶಯಗಳು. ವಿಘ್ನನಿವಾರಕನಾದ ಗಜಮುಖನು ಸಕಲರಿಗೂ ಸನ್ಮಂಗಳವನ್ನುಂಟು ಮಾಡಲಿ.

ಬಿಡುವು

ಗಣೇಶ ಚತುರ್ಥಿಯ ನಿಮಿತ್ತ ಸೆ.7ರಂದು ನಮ್ಮ ಕಾರ್ಯಾಲಯಕ್ಕೆ ಬಿಡುವು ಇರುವುದರಿಂದ ಭಾನುವಾರದ ಸಂಚಿಕೆ ಪ್ರಕಟಗೊಳ್ಳುವುದಿಲ್ಲ. ವಾರಾಂತ್ಯಕ್ಕೆ ಪತ್ರಿಕೆ ಇಲ್ಲ ಎಂದು ಚಿಂತಿಸಬೇಡಿ, ಕ್ಷಣಕ್ಷಣದ ಸುದ್ದಿಗಳು, ವಿಡಿಯೊಗಳು www.vishwavani.news ಹಾಗೂ vishwavanitv ಯುಟ್ಯೂಬ್ ಚಾನೆಲ್ ಮೂಲಕ ಲಭ್ಯ.

ಪುಟ ತೆರೆದಂತೆ...

ಕಾಶ್ಮೀರಿಗಳ ಆಸ್ತಿ ಲೂಟಿ ಮಾಡಿದ್ದು ಯಾರು?

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ

ಸಂ.ಪುಟ | 6

ಆಸೆಯ ಮಿತಿಯೇ ಸುಖದ ಮೂಲ

ಸಕಾಲಿಕ
ಪ್ರೊ.ಸಿ.ಶಿವರಾಜು

ಸಂ.ಗಮ | 7

ದಾರಿದೀಪೋಕ್ತಿ

ಯಶಸ್ಸನ್ನು ಸಾಧಿಸಬಯಸಿದರೆ, ಆ ಮಾರ್ಗದಲ್ಲಿ ಎಲಿವೇಟರ್ ಇರಬೇಕೆಂದು ನಿರೀಕ್ಷಿಸಬಾರದು. ಎಷ್ಟೇ ಮೆಟ್ಟಲುಗಳಿದ್ದರೂ ಸ್ವತಃ ಏರುತ್ತಾ ಹೋಗಬೇಕು. ಯಶಸ್ಸು ಅಂದ್ರೆ, ಲಾಟರಿಯಲ್ಲಿ ಬಹುಮಾನ ಗಿಟ್ಟಿಸಿದಂತೆ ಅಲ್ಲ. ಪರಿಶ್ರಮದ ಮಾರ್ಗವೇ ಸೂಕ್ತವಾದುದು.

ವಕ್ರತುಂಡೋಕ್ತಿ

ಉತ್ತಮ ಗಂಡನಾಗುವುದೆಂದರೆ ಸ್ಟ್ಯಾಂಡಪ್ ಕಾಮಿಡಿಯನ್ ಆದಂತೆ. ಪರಿಣತಿ ಪಡೆಯಲು ಕನಿಷ್ಠ ಏಳೆಂಟು ವರ್ಷಗಳಾದರೂ ಬೇಕು.

ಯೋಜನೆಯ ಮೊದಲ ಹಂತ ಲೋಕಾರ್ಪಣೆ

ಎತ್ತಿನಹೊಳೆ ಸಾಕಾರ

ಸಕಲೇಶಪುರ/ಬೆಂಗಳೂರು: ಸಾವಿರಾರು ಕಾರ್ಮಿಕರ ಶ್ರಮ, ಸ್ಥಳೀಯ ಜನರ ತ್ಯಾಗ, ದಶಕದ ನಿರಂತರ ಕಾರ್ಯ, ಲಕ್ಷಾಂತರ ರೈತರ ನಿರೀಕ್ಷೆ, ಮೂಲ ವೆಚ್ಚದ ಮೂರು ಪಟ್ಟು ಅನುದಾನದ ಫಲವಾಗಿ ಎತ್ತಿನಹೊಳೆಯ ಮೊದಲ ಹಂತ ಯಶಸ್ವಿಯಾಗಿ ಉದ್ಘಾಟನೆಯಾಗಿದೆ.

2014ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಶಂಕುಸ್ಥಾಪನೆಗೊಂಡಿದ್ದ ಎತ್ತಿನಹೊಳೆ ಯೋಜನೆ ಅವರಿಂದಲೇ ಶುಕ್ರವಾರ ಉದ್ಘಾಟನೆಗೊಂಡಿದೆ. ಇದರೊಂದಿಗೆ ಪೂರ್ಣಕಾಮಗಾರಿಯನ್ನು 2027ರ ವೇಳೆಗೆ ಪೂರ್ಣಗೊಳಿಸಿ, ಅದನ್ನು ತಮ್ಮ ಸರಕಾರದ ಅವಧಿ ಯಲ್ಲಿಯೇ ಉದ್ಘಾಟನೆ ಮಾಡುವ ಭರವಸೆಯ ಮಾತುಗಳ ಮೂಲಕ, ಈ ಯೋಜನೆಗೆ ಇನ್ನಷ್ಟು ವೇಗ ನೀಡುವ ಸ್ಪಷ್ಟ ಸೂಚನೆಯನ್ನು ಸಿಎಂ ನೀಡಿದರು.

ಏಳು ಜಿಲ್ಲೆಗಳಿಗೆ ಕುಡಿಯುವ ನೀರಿನ ಮಹತ್ವಾಕಾಂಕ್ಷಿ ಯೋಜನೆಯಾಗಿರುವ ಎತ್ತಿನಹೊಳೆ ಯೋಜನೆ ನೂರಾರು ಅಡೆತಡೆಗಳನ್ನು ಮೀರಿ ಕೊನೆಗೂ ಆರಂಭ ಕಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ 'ವಿಶೇಷ ಆಸಕ್ತಿ'ಯಿಂದಾಗಿ ನನೆಗುದಿಗೆ ಬಿದ್ದಿದ್ದ ಎತ್ತಿನಹೊಳೆ ಯೋಜನೆ ಮತ್ತೆ ಜೀವ ತಳೆದಿದೆ. ಕಾಮಗಾರಿಗೆ ಅಗತ್ಯ ಅನುದಾನ ನೀಡಿ, ಶರವೇಗ ಒದಗಿಸುವ ಮೂಲಕ ಮೊದಲ ಹಂತಕ್ಕೆ ನೀರನ್ನು ಲಿಫ್ಟ್ ಮಾಡುವಲ್ಲಿ ಸರಕಾರ ಯಶಸ್ವಿ ಯಾಗಿದೆ. ಶುಕ್ರವಾರ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಹೆಬ್ಬನಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಂಪುಟದ ಹಿರಿಯ ಸಚಿವರು, ಜನಪ್ರತಿನಿಧಿಗಳು ಹಾಜರಿದ್ದರು.

ವಿವರಪುಟ → 5

ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಹೆಬ್ಬನಹಳ್ಳಿಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಎತ್ತಿನಹೊಳೆ ಯೋಜನೆಯ ಪ್ರಥಮ ಹಂತಕ್ಕೆ ಚಾಲನೆ ನೀಡಿದರು.

- ಈವರೆಗೆ 16,076.71 ಕೋಟಿ ರು. ವೆಚ್ಚದಲ್ಲಿ ಮೊದಲ ಹಂತದ ಕಾಮಗಾರಿ
- ಏಳು ಜಿಲ್ಲೆಯ ಸುಮಾರು 527 ಕೆರೆಗಳಿಗೆ ನೀರು ಒದಗಿಸುವ ಯೋಜನೆ
- ಬರೋಬ್ಬರಿ 10 ವರ್ಷದ ಬಳಿಕ ಯೋಜನೆಯ ಮೊದಲ ಹಂತ ಪೂರ್ಣ
- ಮೂಲ ವೆಚ್ಚಕ್ಕೆ ಮೂರರಷ್ಟು ವ್ಯಯ, ವಾಸ್ತು, ಶುದ್ಧೀಕರಣ ಪೂಜೆ ನೆರವೇರಿಸಿದ ಡಿಸಿಎಂ

ಎತ್ತಿನಹೊಳೆ ಯೋಜನೆಯನ್ನು ಆರಂಭಿಸಿದಾಗ ಅನೇಕರು ಸಂಶಯಪಟ್ಟಿದ್ದರು. ಕೆಲವರು ಜನರಲ್ಲಿ ಸಂಶಯ ಹುಟ್ಟುಹಾಕಲು ಪ್ರಯತ್ನಿಸುತ್ತಿದ್ದು, ಅವೆಲ್ಲವೂ ಆಧಾರರಹಿತ, ಜನರನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ. ಮೊದಲನೇ ಹಂತ ಮುಗಿದಿರುವುದನ್ನು ನಾವೆಲ್ಲರೂ ಕಣ್ಣಾರೆ ನೋಡಿದ್ದೇವೆ. ಎತ್ತಿನಹೊಳೆ ಭೂಮಿ ಪೂಜೆ ಮಾಡಿದ್ದ, ಮೊದಲ ಹಂತಕ್ಕೆ ಚಾಲನೆ ನೀಡಲಾಗಿದೆ. 2027ರ ವೇಳೆಗೆ ಎರಡನೇ ಹಂತದ ಕಾಮಗಾರಿ ಪೂರ್ಣಗೊಳ್ಳಲಿದೆ.

– **ಸಿದ್ದರಾಮಯ್ಯ** ಮುಖ್ಯಮಂತ್ರಿ

ಆಲಮಟ್ಟಿ ನಂತರ ಈ ಯೋಜನೆಯು ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಯೋಜನೆ. 2014 ಮಾ.5ರಂದು ಸಿಎಂ ಸಿದ್ದರಾಮಯ್ಯ ಶಂಕುಸ್ಥಾಪನೆ ಮಾಡಿದ್ದರು. ಈಗ ಉದ್ಘಾಟನೆಯಾಗಿದೆ. ಈ ಅವಧಿಯಲ್ಲಿ ಬೇಕಾದಷ್ಟು ಟೀಕೆಗಳು ಕೇಳಿ ಬಂದವು. ಎಲ್ಲ ಮೀರಿ ಯೋಜನೆ ಜಾರಿಯಾ ಗಿದೆ. ಟೀಕೆಗಳು ಸಾಯುತ್ತವೆ, ನಮ್ಮ ಕೆಲಸಗಳು ಶಾಶ್ವತವಾಗಿ ಉಳಿಯುತ್ತವೆ.

– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಎಂಜಿನಿಯರ್‌ಗಳಿಗೆ ಸನ್ಮಾನ

ಎತ್ತಿನಹೊಳೆ ಯೋಜನೆ ಕಾರ್ಯದಲ್ಲಿ ಕಾರ್ಯನಿರ್ವಹಿಸಿದ ಎಂಜಿನಿಯರ್ ಸೇರಿದಂತೆ ಹಲವರನ್ನು ಇದೇ ವೇಳೆ ಸನ್ಮಾನಿಸಲಾಯಿತು. ಪ್ರಮುಖವಾಗಿ ಮುಖ್ಯ ಎಂಜಿನಿಯರ್, ಸಹಾಯಕ ಎಂಜಿನಿಯರ್ ಸೇರಿ ಯೋಜನೆಯ ವಿವಿಧ ಹಂತದಲ್ಲಿ ಕಾರ್ಯನಿರ್ವಹಿಸಿದ ಗುತ್ತಿಗೆದಾರರನ್ನು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅಭಿನಂದಿಸಿ ಸನ್ಮಾನಿಸಿದರು.

ಚಿನ್ನಕ್ಕೆ ಮುತ್ತಿಕ್ಕಿದ ಪ್ರವೀಣ್ ಕುಮಾರ್

ಪ್ಯಾರಾಲಿಂಪಿಕ್ಸ್‌ನಲ್ಲಿ ಮುಂದುವರಿದ ಪದಕಗಳ ಬೇಟೆ | ಭಾರತಕ್ಕೆ ಆರು ಚಿನ್ನ

ಪ್ಯಾರಿಸ್: ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟ ದಲ್ಲಿ ಭಾರತದ ಹೈಜಂಪ್ ಸ್ಪರ್ಧಿ ಪ್ರವೀಣ್ ಕುಮಾರ್ ಅವರು ಪುರುಷರ ಟಿ64 ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಇದು ಕೂಟದಲ್ಲಿ ಭಾರತ ಗೆದ್ದಿರುವ ಆರನೇ ಚಿನ್ನದ ಪದಕ ಆಗಿದೆ. 21 ವರ್ಷದ ನೋಯ್ಡಾ ಮೂಲದ ಪ್ರವೀಣ್, 2.08 ಮೀಟರ್ ಎತ್ತರಕ್ಕೆ ಜಿಗಿಯುವ ಮೂಲಕ ಏಷ್ಯನ್ ದಾಖಲೆಯೊಂದಿಗೆ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಈ ಸ್ಪರ್ಧೆಯಲ್ಲಿ ಅಮೆರಿಕದ ಡೆರೆಕ್ ಲೊಸಿಡೆಂಟ್ ಬೆಳ್ಳಿ (2.06 ಮೀ.) ಮತ್ತು ಉಜ್ಬೇಕಿಸ್ತಾನದ ಟೆಮುರ್ಬೆಕ್ ಗಿಯಾಜೊವ್ (2.03 ಮೀ.) ಕಂಚಿನ ಪದಕ ಗೆದ್ದರು.

ಟೋಕಿಯೊದಲ್ಲೂ ಬೆಳ್ಳಿ: ಪ್ರವೀಣ್ ಕುಮಾರ್ ಕಳೆದ ಟೋಕಿಯೊ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲೂ ಬೆಳ್ಳಿ ಪದಕ ಗೆದ್ದಿದ್ದರು. ಆ ಮೂಲಕ ಸತತ 2ನೇ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಪದಕ ಗೆದ್ದ ಸಾಧನೆ ಮಾಡಿದ್ದಾರೆ.

26ನೇ ಪದಕ

ಪ್ಯಾರಾಲಿಂಪಿಕ್ಸ್ ಇತಿಹಾಸದಲ್ಲೇ ಸರ್ವಶ್ರೇಷ್ಠ ಪ್ರದರ್ಶನ ನೀಡಿರುವ ಭಾರತೀಯ ಸ್ಪರ್ಧಿಗಳು ಈವರೆಗೆ ಒಟ್ಟು 26 ಪದಕಗಳನ್ನು ಗೆದ್ದಿದ್ದಾರೆ. ಇದರಲ್ಲಿ ಆರು ಚಿನ್ನ, 9 ಬೆಳ್ಳಿ ಮತ್ತು 11 ಕಂಚಿನ ಪದಕಗಳನ್ನು ಒಳಗೊಂಡಿದ್ದು, 14ನೇ ಸ್ಥಾನ ಕಾಯ್ದುಕೊಂಡಿದೆ. ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಐದು ಚಿನ್ನ ಸೇರಿದಂತೆ ಭಾರತ ಒಟ್ಟು 19 ಪದಕಗಳನ್ನು ಗೆದ್ದಿತ್ತು.

ಯೋಗರಾಜ್ ಭಟ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಸೆ.3ರಂದು ಅಡಕಮಾರನಹಳ್ಳಿ ಬಳಿ 'ಮನದ ಕಡಲು' ಚಲನಚಿತ್ರದ ಚಿತ್ರೀಕರಣದ ವೇಳೆ ಲೈಟ್ ಮ್ಯಾನ್ ಮೋಹನ್ ಕುಮಾರ್ ಎಂಬುವವರು 30 ಅಡಿಯಿಂದ ಬಿದ್ದು ಮೃತಪಟ್ಟಿದ್ದು, ನಿರ್ಲಕ್ಷ್ಯ, ಅಜಾಗರೂಕತೆ, ಮುಂಜಾಗೃತಾ ಕ್ರಮ ಕೈಗೊಳ್ಳದಿರುವ ಆರೋಪದ ಮೇಲೆ ನಿರ್ದೇಶಕ ಯೋಗರಾಜ್ ಭಟ್ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಫನ್‌ತರಂಗ

– ರಘುಪತಿ ಶೃಂಗೇರಿ –

ದೇವನಹಳ್ಳಿಯಲ್ಲಿ 100 ಕೋಟಿಯಲ್ಲಿ ಹೊಸ ಕಾರಾಗೃಹ



ಸೌರ ವಿದ್ಯುತ್ ಖರೀದಿ ಒಪ್ಪಂದ

ಬೆಂಗಳೂರು: ಪಾವಗಡದ ಸೋಲಾರ್ ಪಾರ್ಕ್‌ನಲ್ಲಿ 300 ಮೆ.ವ್ಯಾ ಸೌರ ವಿದ್ಯುತ್ ಖರೀದಿ ಯೋಜನೆಗೆ ವಿದ್ಯುತ್ ಸರಬರಾಜು ಕಂಪನಿ ನಿಯಮಿತದೊಂದಿಗೆ ಜೆಎಸ್‌ಡಬ್ಲ್ಯು ಎನರ್ಜಿಯ ಅಂಗ ಸಂಸ್ಥೆ ಜೆಎಸ್‌ಡಬ್ಲ್ಯು ರಿನ್ಯೂ ಎನರ್ಜಿಯ ಟ್ವೆಂಟಿ ಲಿಮಿಟೆಡ್, ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿ ಮಾಡಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.

ಅಪಘಾತ ಸರಣಿಗೆ 13 ಬಲಿ

ಬೆಂಗಳೂರು: ಗೌರಿ ಹಬ್ಬದ ಸಂಭ್ರಮ ದಿನದಂದೇ ರಾಜ್ಯದ ಹಲವು ಕಡೆ ರಸ್ತೆ ಅಪಘಾತಗಳು ಸಂಭವಿಸಿದ್ದು, ಒಟ್ಟು 13 ಜನರು ಮೃತಪಟ್ಟಿದ್ದಾರೆ. ವಿಜಯಪುರದಲ್ಲಿ ನಾಲ್ವರು, ರಾಮನಗರದಲ್ಲಿ ಮೂವರು, ಬಾಗಲಕೋಟೆಯಲ್ಲಿ ಇಬ್ಬರು, ಮಂಗಳೂರಿನಲ್ಲಿ ಇಬ್ಬರು, ಉತ್ತರ ಕನ್ನಡ ಜಿಲ್ಲೆಯಲ್ಲಿ ಒಬ್ಬರು, ರಾಯಚೂರಿನಲ್ಲಿ ಒಬ್ಬರು ಮೃತಪಟ್ಟಿದ್ದಾರೆ.

ನೀರಜ್ ಚೋಪ್ರಾ ಫೈನಲ್‌ಗೆ

ದೆಹಲಿ: ಬೆಲ್ಜಿಯಂನ ಬ್ರಸೆಲ್ಸ್‌ನಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಫೈನಲ್‌ಗೆ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತ ಭಾರತದ ತಾರೆ ನೀರಜ್ ಚೋಪ್ರಾ ಪ್ರವೇಶಿಸಿದ್ದಾರೆ. 14 ಸಿರೀಸ್‌ಗಳ ಅಂತ್ಯಕ್ಕೆ ನೀರಜ್ ಅವರು ಒಟ್ಟಾರೆಯಾಗಿ ನಾಲ್ಕನೇ ಸ್ಥಾನ ಗಳಿಸಿದರು. ಸೆಪ್ಟೆಂಬರ್ 13 ಹಾಗೂ 14ರಂದು ಬ್ರಸೆಲ್ಸ್‌ನಲ್ಲಿ ಡೈಮಂಡ್ ಲೀಗ್ ಫೈನಲ್ ನಡೆಯಲಿದೆ.

ಬೆಂಗಳೂರಲ್ಲಿ ಸಿಕ್ಕಿಬಿದ್ದ ನಕ್ಸಲ್

ಬೆಂಗಳೂರು: ನಿಷೇಧಿತ ಸಿಪಿಐ ಮಾವೋವಾದಿಗಳ ಪರ ಕೆಲಸ ಮಾಡುತ್ತಿದ್ದ ಹರಿಯಾಣದ ಅನಿರುದ್ಧ ರಾಜನ್ ಎಂಬ ನಕ್ಸಲ್‌ನನ್ನು ಬೆಂಗಳೂರು ನಗರ ಪೊಲೀಸರು ಬಂಧಿಸಿದ್ದಾರೆ. ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸ್ನೇಹಿತೆ ನೋಡಲು ಬರುವ ಖಚಿತ ಮಾಹಿತಿ ಮೇರೆಗೆ ಸಿಸಿಬಿ ಭಯೋತ್ಪಾದಕ ನಿಗ್ರಹ ದಳದ (ಎಟಿಸಿ) ಅಧಿಕಾರಿಗಳು ಆತನನ್ನು ಬಂಧಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಇನ್‌ಸ್ಟಾಗ್ರಾಮ್ ಸ್ಟಾರ್ ಪೊಲೀಸರ ವಶಕ್ಕೆ

ಬೆಂಗಳೂರು: ಇನ್‌ಸ್ಟಾಗ್ರಾಮ್ ಸ್ಟಾರ್ ಯೂನಿಸ್ ಝುರೂರಾ ಎಂಬಾತನನ್ನು ಬೆಂಗಳೂರು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅನುಮತಿ ಪಡೆಯದೆ ಭಾರಿ ಸಂಖ್ಯೆಯಲ್ಲಿ ಜನರನ್ನು ಸೇರಿಸಿದ್ದರಿಂದ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ. ಆತ ಬೇರೆ ಬೇರೆ ದೇಶಗಳಿಗ ತೆರಳಿ ಅಚ್ಚರಿಯ ಉಡುಗೊರೆ ಕೊಡುತ್ತಿದ್ದ. ಅದರಂತೆ ಯೂನಿಸ್ ಬೆಂಗಳೂರಿನ ಎಂಜಿ ರಸ್ತೆಗೂ ಬಂದಿದ್ದ. ಸರಿಯಾದ ಉತ್ತರ ನೀಡಿದವರಿಗೆ ದುಬಾರಿ ಬೆಲೆಯ ಐಫೋನ್ ಗಿಫ್ಟ್ ಕೊಡುತ್ತಿದ್ದ. ಅಷ್ಟೇ ಅಲ್ಲದೆ ಎಂಜಿ ರಸ್ತೆಯಲ್ಲಿ ದಿ.ಪುನೀತ್ ರಾಜ್‌ಕುಮಾರ್ ಅವರ ಫೋಟೋ ಅನಾವರಣ ಮಾಡಿದ್ದ.

ಯಾಕೆ ಬಂಧನ?: ಆತ ಬಂದ ವಿಚಾರ ತಿಳಿದು ಆತನ ಅಭಿಮಾನಿಗಳು ನಡುರಸ್ತೆಯಲ್ಲಿಯೇ ಗುಂಪು ಸೇರಿದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ಅನುಮತಿ ಪಡೆಯದೆ ಜನರ ಗುಂಪು ಸೇರಿಸಿದ್ದರಿಂದ ಅಶೋಕನಗರ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಹೊಯ್ಸಳ ವಾಹನದ ಒಳಗೆ ಕೂಡ ವಿಡಿಯೋ ಮಾಡಿದ್ದ ಆತ, ಸ್ಟೇಷನ್ ಒಳಗೆ ಫೋಟೋ ಹಾಕಿ ತೊಂದರೆಯಲ್ಲಿದ್ದೇನೆ ಎಂಬ ಸಂದೇಶ ಕಳುಹಿಸಿದ್ದ. ಬಂಧಿಸಿ ಎಚ್ಚರಿಕೆ ನೀಡಿ ಪೊಲೀಸರು ಬಿಟ್ಟು ಕಳಿಸಿದ್ದಾರೆ.

ಸಿಸಿಬಿ ಕೈಗೆ ಸಿಕ್ಕಿಬಿದ್ದ ನಕ್ಸಲೀಯ

ಬೆಂಗಳೂರು: ನಿಷೇಧಿತ ಸಿಪಿಐ ಮಾವೋವಾದಿಗಳ ಪರ ಕೆಲಸ ಮಾಡುತ್ತಿದ್ದ ಆರೋಪದ ಮೇರೆಗೆ ನಕ್ಸಲೀಯನೊಬ್ಬನನ್ನು ಬೆಂಗಳೂರು ನಗರ ಪೊಲೀಸರು ಬಂಧಿಸಿದ್ದಾರೆ.

ಹರಿಯಾಣದ ಅನಿರುದ್ಧ ರಾಜನ್ ಬಂಧಿತ ನಕ್ಸಲೈಟ್. ನಗರದ ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸ್ನೇಹಿತೆಯನ್ನು ನೋಡಲು ಬರುವ ಖಚಿತ ಮಾಹಿತಿ ಮೇರೆಗೆ ಸಿಸಿಬಿ ಭಯೋತ್ಪಾದಕ ನಿಗ್ರಹದಳದ (ಎಟಿಸಿ) ಅಧಿಕಾರಿಗಳು ಆತನನ್ನು ಬಂಧಿಸಿ ಹೆಚ್ಚಿನ ವಿಚಾರಣೆಗೊಳಪಡಿಸಿದ್ದಾರೆ.

ಸಿಪಿಐ ಮಾವೋವಾದಿಗಳ ಪರವಾಗಿ ಕೆಲಸ ಮಾಡುತ್ತಿದ್ದ ಅನಿರುದ್ಧ ನಿಷೇಧಿತ ಬರಹಗಳನ್ನು ಪ್ರಚುರಪಡಿಸುತ್ತಿದ್ದ. ಇದುವರೆಗೂ ಪೊಲೀಸ ರಿಗೂ ಸಿಕ್ಕಿಬಿದ್ದಿರಲಿಲ್ಲ.

ಗೆಳತಿಯನ್ನು ನೋಡಲು ಮೂರರಿಂದ ನಾಲ್ಕು ದಿನಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ಅನಿರುದ್ಧ ನಿಷೇಧಿತ ಸಂಘಟನೆ ಪರ ಕೆಲಸ ಮಾಡುತ್ತಿದ್ದ. ಹಣ ಸಂಗ್ರಹ ಹಾಗೂ ಗುಪ್ತ ಸಭೆ ನಡೆಸುತ್ತಿದ್ದ. ಗುರುವಾರ ಬೆಳಗ್ಗೆ ಮೆಜೆಸ್ಟಿಕ್‌ನಿಂದ ಚೆನ್ನೈಗೆ ಹೋಗಲು ಬಸ್ ನಿಲ್ದಾಣದ ಬಳಿ ಕಾಯುತ್ತಿದ್ದಾಗ ಆತನನ್ನು ಬಂಧಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದರು.

ಹತ್ಯೆ ಬಗ್ಗೆ ಸ್ನೇಹಿತನ ಜತೆ ಪೊಲೀಸ್ ಅಧಿಕಾರಿ ಸಂಭಾಷಣೆ ಆಡಿಯೋ ವೈರಲ್ | ಒಂದೇ ಹೊಡೆತಕ್ಕೆ ಎದೆಮೂಳೆ ಮುರಿತ

ಕೋಳಿಯಂತೆ ಎಸೆದು ಲಾರಿಗೆ ಗುದ್ದಿ ರೇಣುಕಾಸ್ವಾಮಿ ಕೊಲೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಿತ್ರದುರ್ಗದ ರೇಣುಕಾಸ್ವಾಮಿ ಅವರನ್ನು ಕೋಳಿ ಎಸೆದಂತೆ ಎಸೆದು ಲಾರಿಗೆ ಎರಡು ಬಾರಿ ಕೊಲೆ ಮಾಡಿದ ಸೂತ್ರಧಾರಿ ದರ್ಶನ್ ಎಂಬುದು ಸಾಬೀತಾಗಿದೆ.

ರೇಣುಕಾಸ್ವಾಮಿ ಅವರನ್ನು ಹತ್ಯೆ ಮಾಡಿದ ಬಗ್ಗೆ ಪೊಲೀಸ್ ಅಧಿಕಾರಿಯೊಬ್ಬರು ಸ್ನೇಹಿತನ ಜತೆ ಮಾತನಾಡಿರುವ ಆಡಿಯೋ ಈಗ ವೈರಲ್ ಆಗಿದೆ. ಈ ಆಡಿಯೋದಲ್ಲಿ ಕೊಲೆಯನ್ನು ಹೇಗೆ ಮಾಡಲಾಗಿದೆ ಎಂಬುದರ ಬಗ್ಗೆ ಪೊಲೀಸ್ ಅಧಿಕಾರಿ ವಿವರಿಸಿದ್ದಾರೆ.

ರೇಣುಕಾಸ್ವಾಮಿ ಎದೆಗೆ ಶೂ ಕಾಲಿನಿಂದ ಒಂದೇ ಸಮನೆ ಒದ್ದಿದ್ದಾರೆ. ದರ್ಶನ್ ಮೊದಲ ಹೊಡೆತಕ್ಕೆ ರೇಣುಕಾಸ್ವಾಮಿಯ ಎದೆಯಲ್ಲಿನ ಮೂಳೆಗಳ ಮುರಿತವಾಗಿದೆ. ಎರಡನೇ ಬಾರಿ ದರ್ಶನ್, ರೇಣುಕಾಸ್ವಾಮಿಯನ್ನು ಸಿನಿಮೀಯ ಶೈಲಿಯಲ್ಲಿ ಎತ್ತಿ ಲಾರಿಗೆ ಬಿಸಾಕಿದ್ದಾರೆ. ಬಿಸಾಕಿದ ರಭಸಕ್ಕೆ ರೇಣುಕಾಸ್ವಾಮಿ ತಲೆಗೆ ಗಂಭೀರ ಗಾಯವಾಗಿದೆ. ತಲೆಬುರುಡೆಗೆ ಏಟುಬಿದ್ದು ರಕ್ತ ಹೆಪ್ಪುಗಟ್ಟಿದೆ.

ಮೂರನೇ ಬಾರಿ ದರ್ಶನ್, ರೇಣುಕಾಸ್ವಾಮಿಗೆ ಅವನು ಪವಿತ್ರಾ ಗೌಡಗೆ ಕಳಿಸಿದ್ದ ಫೋಟೊವನ್ನು ತೋರಿಸಿದ್ದಾರೆ. 'ಇದೇ ಫೋಟೊ ಅಲ್ವೇನೊ ನೀನು ಕಳಿಸಿದ್ದು ನಿನ್ನ. ಎಂದು ರೇಣುಕಾಸ್ವಾಮಿ ಮರ್ಮಾಂಗಕ್ಕೆ ಒದ್ದಿದ್ದಾರೆ. ಮರ್ಮಾಂಗಕ್ಕೆ

ಒದೆಯುತ್ತಿದ್ದಂತೆ ರೇಣುಕಾಸ್ವಾಮಿಗೆ ಪ್ರಜ್ಞೆ ತಪ್ಪಿಬಿದ್ದಿದ್ದಾನೆ. ಈ ಮೂರು ಹೊಡೆತಗಳೇ ರೇಣುಕಾಸ್ವಾಮಿ ಸಾವಿಗೆ ಕಾರಣ ಎಂದು ಮಾಹಿತಿ ಹೊರಬಿದ್ದಿದ್ದು, ಎಫ್‌ಎಸ್‌ಎಲ್ ವರದಿಯಲ್ಲಿ ಸಾವಿನ ರಹಸ್ಯ ಬಯಲಾಗಿದೆ.

ರೇಣುಕಾಸ್ವಾಮಿ ವಿಕೃತ ಮನಸ್ಥಿತಿ ಬೆಳಕಿಗೆ: ರೇಣುಕಾಸ್ವಾಮಿ ಕೊಲೆ ಪ್ರಕರಣ ಸಂಬಂಧ ಪೊಲೀಸರು ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ನಟ ದರ್ಶನ್ ಗ್ಯಾಂಗ್ ಕ್ರೌರ್ಯವಷ್ಟೇ ಅನಾವರಣಗೊಂಡಿಲ್ಲ, ರೇಣುಕಾಸ್ವಾಮಿಯ ವಿಕೃತ ಮನಸ್ಥಿತಿ ಹೇಗಿತ್ತು ಎನ್ನುವುದನ್ನು ಪೊಲೀಸರು ಸಾಕ್ಷ್ಯ ಸಮೇತ ಬಯಲು ಮಾಡಿದ್ದಾರೆ. ಗೌತಮ್ ಹೆಸರಲ್ಲಿ ನಕಲಿ ಇನ್ಸ್ಟಾಗ್ರಾಂ ಖಾತೆ ತೆರೆದಿದ್ದ ರೇಣುಕಾಸ್ವಾಮಿ, ಪ್ರತಿನಿತ್ಯ ಪವಿತ್ರಾಗೌಡಗೆ ಅಶ್ಲೀಲ ಸಂದೇಶ ಕಳುಹಿಸುತ್ತಿದ್ದ ಎಂಬುದು ದೋಷಾರೋಪ ಪಟ್ಟಿಯಲ್ಲಿ ಬಯಲಾಗಿದೆ. ರೇಣುಕಾಸ್ವಾಮಿ ಅಶ್ಲೀಲ ಸಂದೇಶದಿಂದ ರೋಸಿಹೋಗಿದ್ದ ನಟಿ ಪವಿತ್ರಾಗೌಡ, ಗೆಳೆಯ ಪವನ್ ಮೂಲಕ ರೇಣುಕಾಸ್ವಾಮಿಯನ್ನು ಲಾಕ್ ಮಾಡಲು ಸಂಚು ಹೂಡಿದ್ದರು. ಇದರ ಭಾಗವಾಗಿಯೇ ಪವಿತ್ರಾಗೌಡ ಹೆಸರಲ್ಲಿ ಪವನ್ ಚಾಟಿಂಗ್ ಮಾಡಲು ಶುರುಮಾಡಿದ್ದ. ಸಮಾಧಾನವಾಗಿ ಮಾತನಾಡುತ್ತಲೇ ರೇಣುಕಾಸ್ವಾಮಿ ಎಲ್ಲಿ ಕೆಲಸ ಮಾಡುತ್ತಾನೆ? ಯಾವ ಊರಲ್ಲಿ ಕೆಲಸ ಮಾಡುತ್ತಾನೆ ಎಂಬುದನ್ನು ಪವನ್ ಮೂಲಕ ಡಿ ಗ್ಯಾಂಗ್ ಪತ್ತೆಹಚ್ಚಿತ್ತು.

ತಿಂಗಳಿಗೆ 10 ಸಾವಿರ ಕೊಡ್ತೀಯೇನೋ ಎಂದು ಎದೆ ಎಲುಬು ಮುರಿದ ದರ್ಶನ್: ಕಳೆದ ಜೂನ್ 5, 6 ಮತ್ತು 7ರಂದು ಬೆಳಗ್ಗೆವರೆಗೂ ಗೌತಮ್ ಆಲಿಯಾಸ್ ರೇಣುಕಾಸ್ವಾಮಿ ಮತ್ತು ಪವಿತ್ರಾಗೌಡ ಹೆಸರಲ್ಲಿ ಪವನ್ ಚಾಟ್ ನಡೆಸಿದ್ದ. ರೇಣುಕಾಸ್ವಾಮಿ ಲೊಕೇಶನ್ ಗೊತ್ತಾಗುತ್ತಲೇ, ಅಪಹರಣಕ್ಕೆ ಸಂಚು ನಡೆದಿತ್ತು. ಶೆಡ್‌ನಲ್ಲಿ ಹಲ್ಲೆ ವೇಳೆ, ಈ ಬಗ್ಗೆ ಪ್ರಸ್ತಾಪಿಸಿ ದರ್ಶನ್ ಕೂಗಾಡಿದ್ದರು. ರೇಣುಕಾಸ್ವಾಮಿ ಮಾಡಿದ್ದ ಅಶ್ಲೀಲ ಸಂದೇಶಗಳನ್ನೇ ಓದುತ್ತಾ ರೇಣುಕಾ ಎದೆಗೆ ಒದ್ದು, ಮರ್ಮಾಂಗದ ಮೇಲೆ ಕಾಲಿಟ್ಟು ಕ್ರೌರ್ಯ ಮೆರೆದಿದ್ದರು. 'ತಿಂಗಳಿಗೆ 10 ಸಾವಿರ ಕೊಡ್ತೀಯೇನೋ? ಪವಿತ್ರಾ ದಿನದ ಖರ್ಚೇ 20 ಸಾವಿರ ಕಣೋ' ಎನ್ನುತ್ತಾ ರೇಣುಕಾ ಎದೆಗೆ ದರ್ಶನ್ ಒದ್ದಿದ್ದರು ಎಂಬ ಎಲ್ಲ ಮಾಹಿತಿ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಗೊಂಡಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ.

ನನ್ನಿಂದ ತಪ್ಪಾಗಿದೆ ಸರ್ ಎಂದು ಹೇಳಿ ತಲೆತಗ್ಗಿಸಿದ ದರ್ಶನ್

ದರ್ಶನ್ ಐಫೋನ್ ರೀಟ್ರೀವ್ ವೇಳೆ, ದರ್ಶನ್ ಯಾರ್ಯಾರ ಜತೆ ನಿಕಟ ಸಂಪರ್ಕದಲ್ಲಿದ್ದ ಎಂಬುದು ಗೊತ್ತಾಗಿದೆ. ವಿನಯ್ ಜತೆ ನಡೆಸಿದ್ದ ವಾಟ್ಸಪ್ ಚಾಟ್, ಮ್ಯಾನೇಜರ್ ನಾಗರಾಜ್ ಜತೆ 32 ಬಾರಿ ನಡೆಸಿದ್ದ ವಾಟ್ಸಪ್ ಕಾಲ್. ಪ್ರದೋಷ್ ಜೊತೆಗಿನ 10 ವಾಟ್ಸಪ್ ಕಾಲ್ ವಿವರಗಳು ಸಿಕ್ಕಿವೆ. ಭಾನುವಾರ ಮಧ್ಯಾಹ್ನ ಪವಿತ್ರಾಗೆ ಕರೆ ಮಾಡುವ ದರ್ಶನ್, ಪೊಲೀಸರು ವಿಚಾರಿಸಿದರೆ ನನಗೇನೂ ಗೊತ್ತಿಲ್ಲ ಎಂದು ಹೇಳು ಅಂದಿದ್ದರು. ರೇಣುಕಾಸ್ವಾಮಿ ಸಾವಿನ ವಿಚಾರ ತಿಳಿದ ಪವಿತ್ರಾಗೌಡ, ನಂತರ ದರ್ಶನ್ ಸಂಪರ್ಕಿಸಲು ಹೆದರಿದ್ದರು. ದರ್ಶನ್ ಬಂಧಿಸಲು ಪೊಲೀಸರು ತೆರಳಿದ್ದ ಸಂದರ್ಭದಲ್ಲಿ ನಟನ ಬಾಡಿಗಾರ್ಡ್‌ಗಳು ದಾರಿತಪ್ಪಿಸಲು ಯತ್ನಿಸಿದ್ದರು. ಆದರೆ, ಪೊಲೀಸರು ಬಿಡದೇ ದರ್ಶನ್‌ನನ್ನು ಬಂಧಿಸಿದ್ದರು. ಈ ವೇಳೆ, 'ನನ್ನಿಂದ ತಪ್ಪಾಗಿದೆ ಸರ್ 'ಎಂದು ನಟ ದರ್ಶನ್ ತಲೆ ತಗ್ಗಿಸಿದ್ದ.

ಸಸ್ಯಾಹಾರಿ ಎಂದರೂ ಬಿರಿಯಾನಿ ತಿನ್ನಿಸಿದ ದರ್ಶನ್

ಚಿತ್ರದುರ್ಗದಿಂದ ರೇಣುಕಾಸ್ವಾಮಿಯನ್ನು ಕರೆದುಕೊಂಡು ಬಂದಿದ್ದ ಡಿ ಗ್ಯಾಂಗ್ ಶೆಡ್‌ನಲ್ಲಿ ಕೂಡಿಹಾಕಿದ್ದರು. ಈ ವೇಳೆ ರೇಣುಕಾಸ್ವಾಮಿಗೆ ದರ್ಶನ್ ಹಾಗೂ ಸಹಚರರು ಹೊಡೆದು-ಬಡಿದು ಚಿತ್ರಹಿಂಸೆ ನೀಡಿದ್ದಾರೆ. ಅಷ್ಟೇ ಅಲ್ಲದೇ ರೇಣುಕಾಸ್ವಾಮಿ ನಾನು ಮಾಂಸ ತಿನ್ನೋದಿಲ್ಲ ಸಸ್ಯಾಹಾರಿ ಎಂದರೂ ಬಿಡದೆ ನಟ ದರ್ಶನ್, ಬಿರಿಯಾನಿ ತಿನ್ನಿಸಿದ್ದಾನೆ. ನನಗೆ ಬಿರಿಯಾನಿ ಎಲ್ಲ ಬೇಡ ಅಂತಿದ್ದ ರೇಣುಕಾಸ್ವಾಮಿಗೆ ಬಲವಂತವಾಗಿ ನಟ ದರ್ಶನ್ ಚಿಕನ್ ಬಿರಿಯಾನಿ ತುರುಕಿದ್ದಾನೆ. ಈ ವೇಳೆ ಬಾಯಿಗೆ ಹಾಕಿದ ಬಿರಿಯಾನಿಯನ್ನು ರೇಣುಕಾಸ್ವಾಮಿ ಉಗಿದಿದ್ದಾರೆ. ಸಿಟ್ಟಾದ ದರ್ಶನ್, ಊಟಕ್ಕೆ ಬೆಲೆ ಕೊಡೋ ಎಂದು ಕೆಟ್ಟ ಪದಗಳಿಂದ ನಿಂದಿಸಿ ಬಲವಂತವಾಗಿ ರೇಣುಕಾಸ್ವಾಮಿಗೆ ಬಿರಿಯಾನಿ ತಿನ್ನಿಸಿದ್ದಾನೆ.

ಡ್ರಗ್ ಕಂಟ್ರೋಲರ್ ಆಫ್ ಜನರಲ್‌ಗೆ ಹೈಕೋರ್ಟ್ ನಿರ್ದೇಶನ

ಔಷಧಗಳ ಮಾದರಿ ವರದಿ 60 ದಿನದಲ್ಲಿ ಲಭ್ಯ

ಬೆಂಗಳೂರು: ಔಷಧಿಗಳ ಮಾದರಿಗಳನ್ನು ಪರೀಕ್ಷೆಗಾಗಿ ಕಳುಹಿಸಿದ 60 ದಿನಗಳಲ್ಲಿ ಅದರ ಪರೀಕ್ಷೆ ಮತ್ತು ವಿಶ್ಲೇಷಣಾ ವರದಿ ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡುವ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವ ಸಂಬಂಧ ಕ್ರಮ ಕೈಗೊಳ್ಳುವಂತೆ ಡ್ರಗ್ ಕಂಟ್ರೋಲರ್ ಆಫ್ ಜನರಲ್ (ಡಿಸಿಜಿ) ಇಂಡಿಯಾಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಮೆಸ್ ಜಿಮ್ ಲ್ಯಾಬೊರೇಟರೀಸ್, ಅದರ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಮತ್ತಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ಎಸ್. ಸಂಜಯ್ ಗೌಡ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿದೆ. ಮಾದರಿಗಳ ಪರೀಕ್ಷೆಯ ಎಲ್ಲ ಪ್ರಕ್ರಿಯೆ ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡಬೇಕಾಗಿದೆ. ಇದರಿಂದ ಪರೀಕ್ಷೆ ಫಲಿತಾಂಶ ಮತ್ತು ಪ್ರಕ್ರಿಯೆಯ ಕುರಿತ ಪಾರದರ್ಶಕತೆ ಕಾಯ್ದಿಟ್ಟುಕೊಳ್ಳುವುದು ಮತ್ತು ಈ ಕುರಿತ ವಿವರಣೆ ಸಂಬಂಧಪಟ್ಟ ಎಲ್ಲ ಪಾಲುದಾರರಿಗೂ ಲಭ್ಯವಾಗಲಿದೆ. ನಿಯಮ ಗಳ 45ರ ಅನುಸಾರ ಪರೀಕ್ಷೆಗಾಗಿ ಸರ್ಕಾರದ ಪ್ರಯೋಗಾಲಯಕ್ಕೆ ರವಾನಿಸಿದ ಬಳಿಕ 60 ದಿನಗಳ ಮಿತಿಯನ್ನು ನಿಗದಿಪಡಿಸಲಾಗಿದೆ. ಆದರೆ, ಒಂದು ಪರೀಕ್ಷೆ ನಡೆಸುವುದಕ್ಕಾಗಿ ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ತೆಗೆದುಕೊಂಡರೆ ಅದರಿಂದ ಔಷಧಗಳು ಮಾರುಕಟ್ಟೆಗೆ ಚಲಾವಣೆಗೆ ಬರುವ ಸಾಧ್ಯತೆಯಿದ್ದು, ಅದರ ದುಷ್ಪರಿಣಾಮ ಸಾಮಾನ್ಯ ಜನರ ಮೇಲೆ ಬೀಳಲಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ತಯಾರಕರಿಗೆ ವಿವರ ರವಾನಿಸಿ: ಔಷಧ ತಯಾರಿಸಿದ ಸ್ಥಳ, ಔಷಧ ಮಾದರಿ ಪರೀಕ್ಷೆ, ವಿಶ್ಲೇಷಣೆಗಾಗಿ ಸರ್ಕಾರಿ ವಿಶ್ಲೇಷಗೆ ಕಳುಹಿಸಿರು ವುದು ಗೊತ್ತಾಗಲಿದೆ. ವರದಿ ಸ್ವೀಕರಿಸಿದ ನಂತರ

ಕಾಯಿದೆಯ ಸೆಕ್ಷನ್ 18ಎ ಅಡಿ ವಿವರಗಳನ್ನು ಒದಗಿಸಲಾದ ಔಷಧದ ತಯಾರಕರಿಗೆ ತಕ್ಷಣ ರವಾನಿಸಬೇಕು. ಹೀಗಾಗಿ, ಪರೀಕ್ಷಾ ವರದಿಯ ಪ್ರತಿಯನ್ನು ಒದಗಿಸುವವರೆಗೂ ತನಿಖಾಧಿಕಾರಿ ಅಂತಹ ಸಂಸ್ಥೆಯ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದಕ್ಕೆ ಅವಕಾಶವಿಲ್ಲ ಎಂದು ಪೀಠ ತಿಳಿಸಿದೆ.

ಪ್ರಕರಣದ ಹಿನ್ನೆಲೆ: ಕರ್ನಾಟಕ ವಿಭಾಗದ ಔಷಧ ಗುಣಮಟ್ಟ ನಿಯಂತ್ರಣಾ ಇಲಾಖೆ ಇನ್ಸ್‌ಪೆಕ್ಟರ್ ಅವರು 2013ರ ಫೆಬ್ರವರಿ 28ರಂದು ಮಂಗಳೂರಿನ ಇಎಸ್‌ಐ ಆಸ್ಪತ್ರೆಯಿಂದ ಒಂದು ಔಷಧದ ಮಾದರಿ ಮತ್ತು 2014ರ ಜೂನ್ 12ರಂದು ಬೆಂಗಳೂರಿನ ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯಲ್ಲಿ ಮತ್ತೊಂದು ಮಾದರಿ ಸಂಗ್ರಹಿಸಿದ್ದರು. ಈ ಔಷಧ ತಯಾರಿಸಿರುವುದು 2012ರಲ್ಲಿ ಮತ್ತು ಅದರ ಕಾಲಾವಧಿ 2015 ಆಗಿತ್ತು. ಇದರಲ್ಲಿ ಒಂದು ಭಾಗವನ್ನು ಇಎಸ್‌ಐ ಆಸ್ಪತ್ರೆಗೆ ಮತ್ತೊಂದು ಭಾಗವನ್ನು ಕೊಲ್ಕತ್ತದಲ್ಲಿರುವ ಪ್ರಯೋಗಾಲಯಕ್ಕೆ 2013ರ ಮಾರ್ಚ್ 4ರಂದು ರವಾನಿಸಲಾಗಿತ್ತು.

ಜಿ.ಪಂ, ತಾ.ಪಂ ಚುನಾವಣೆ: ಸರಕಾರಕ್ಕೆ 3 ವಾರ ಕಾಲಾವಕಾಶ

ಬೆಂಗಳೂರು: ರಾಜ್ಯದ ತಾಪಂ ಹಾಗೂ ಜಿಪಂ ಕ್ಷೇತ್ರಗಳಿಗೆ ಮೀಸಲು ನಿಗದಿಪಡಿಸಲು ರಾಜ್ಯ ಸರಕಾರಕ್ಕೆ ಹೈಕೋರ್ಟ್ ಮತ್ತೆ ಮೂರು ವಾರ ಕಾಲಾವಕಾಶ ನೀಡಿದೆ.

ನಿಗದಿತ ಅವಧಿಯಲ್ಲಿ ಜಿಪಂ ಮತ್ತು ತಾಪಂ ಕ್ಷೇತ್ರ ಪುನರ್‌ವಿಂಗಡಣೆ ಹಾಗೂ ಮೀಸಲು ಪ್ರಕಟಿಸಲು ವಿಫಲವಾಗಿರುವ ರಾಜ್ಯ ಸರಕಾರದ ವಿರುದ್ಧ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿ ಜತೆಗೆ, ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನದ ಮೀಸಲಾತಿ ಪ್ರಕಟಿಸಲು ಏಕಸದಸ್ಯ ಪೀಠದ ಆದೇಶ ಪಾಲಿಸುವಲ್ಲಿ ಸರಕಾರ ವಿಫಲವಾಗಿದೆ ಎಂದು 2023ರಲ್ಲಿ ಸಲ್ಲಿಸಲಾದ ಎರಡು ಪ್ರತ್ಯೇಕ ನ್ಯಾಯಾಂಗ ನಿಂದನೆ ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ವಿ.ಕಾಮೇಶ್ವರ್ ರಾವ್ ಮತ್ತು ಕೆ ರಾಜೇಶ್ ರೈ ಅವರ ನೇತೃತ್ವದ ವಿಭಾಗೀಯ ಪೀಠದ ಗುರುವಾರ ವಿಚಾರಣೆ ನಡೆಸಿತು. ರಾಜ್ಯ ಸರಕಾರದ ಪರ ಹೆಚ್ಚುವರಿ ಅಡ್ವೋಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು ಎಲ್ಲಾ 31 ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆ ಕಾರ್ಯ ಮುಗಿದಿದೆ. ಈಗ ಮೀಸಲಾತಿ ನಿಗದಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ಅದಕ್ಕಾಗಿ ಮೂರು ವಾರ ಕಾಲಾವಕಾಶಬೇಕು ಎಂದು ಕೋರಿದರು. ಇದನ್ನು ದಾಖಲಿಸಿಕೊಂಡ ಪೀಠ ವಿಚಾರಣೆಯನ್ನು ಸೆ. 30ಕ್ಕೆ ಮುಂದೂಡಿತು. ರಾಜ್ಯ ಚುನಾವಣಾ ಆಯೋಗದ ಪರ ಹಿರಿಯ ವಕೀಲ ಕೆ ಎನ್ ಫಣೀಂದ್ರ, ಅರ್ಜಿದಾರರ ಪರ ವಕೀಲ ಎ.ಮೊಹಮ್ಮದ್ ತಾಹೀರ್ ಹಾಜರಿದ್ದರು.

ರಾಜರಾಜೇಶ್ವರಿ ನಗರದ ಲಲಿತ್ ಕ್ಯಾಸಲ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಶಿಕ್ಷಕರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಡಾ. ಕಲಾಶಂಕರ್ ಹಾಗೂ ಕಾರ್ಯದರ್ಶಿ ಸವಿತಾ ಕಲಾಶಂಕರ್ ಇದ್ದರು.

ಲಲಿತ್ ಕ್ಯಾಸಲ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ

ಮಕ್ಕಳ ಮನಸ್ಥಿತಿ ಅರಿತು ಕಲಿಕಾ ಸಾಮರ್ಥ್ಯ ಹೆಚ್ಚಿಸಿ

ಬೆಂಗಳೂರು: ರಾಜರಾಜೇಶ್ವರಿ ನಗರದಲ್ಲಿರುವ ಲಲಿತ್ ಕ್ಯಾಸಲ್ ಇಂಟರ್‌ನ್ಯಾಷನಲ್ ಶಾಲೆಯ ಆವರಣದಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು. ನಿಸ್ವಾರ್ಥ ಸೇವೆ ಮೂಲಕ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು. ಶಿಕ್ಷಕರು ಮಕ್ಕಳ ಮನಸ್ಥಿತಿ ಅರಿತು ಕಲಿಕಾ ಸಾಮರ್ಥ್ಯ ವೃದ್ಧಿಸುವಲ್ಲಿ ಶ್ರಮಿಸಬೇಕು ಎಂದು ಸನ್ಮಾನಿತ ನಿವೃತ್ತ ಸರಕಾರಿ ಶಿಕ್ಷಕಿಯರಾದ ಕುಮಾರಿ ಅಮೃತಬಾಯಿ ತಿಳಿಸಿದರು. ನಿವೃತ್ತ ಸರಕಾರಿ ಶಿಕ್ಷಕಿ ರತ್ನಮ್ಮ ಮಾತನಾಡಿ, ಶಿಕ್ಷಕರನ್ನು ಗುರುತಿಸಿ ನಮ್ಮನ್ನು ಬರಮಾಡಿಕೊಂಡು ಹಳೆಯ ವಿದ್ಯಾರ್ಥಿಯಾದ ಡಾ. ಕಲಾಶಂಕರ್ ಸನ್ಮಾನಿಸಿದ್ದು ನಮಗೆ ತುಂಬಾ ಸಂತೋಷ. ಮನಪೂರ್ವಕವಾಗಿ ಗುರುಗಳ ಆಶೀರ್ವಾದ ಎಂದಿಗೂ ಇರುತ್ತದೆ ಎಂದು ಆಶೀರ್ವದಿಸಿದರು. ಗುರು ಎಂದರೆ ವ್ಯಕ್ತಿಯಲ್ಲ ಒಂದು ಶಕ್ತಿ. ಅಜ್ಞಾನದಿಂದ ಸುಜ್ಞಾನದೆಡೆಗೆ ಕರೆದೊಯ್ಯುವ ಶಕ್ತಿಯೇ ಗುರು. ನಾವು ಎಷ್ಟು ಓದಿದ್ದೇವೆ ಎಂಬುದು ಮುಖ್ಯವಲ್ಲ ಆ ಓದು ನಮಗೆ ಎಷ್ಟು ಸಂಸ್ಕಾರವನ್ನು ಕಲಿಸಿದೆ ಎಂಬುದು ಬಹಳ ಮುಖ್ಯ ಎಂಬ ವಿಷಯವನ್ನು ಶಾಲೆಯ ಅಧ್ಯಕ್ಷರಾದ ಡಾ. ಕಲಾಶಂಕರ್ ಅವರು ಶಿಕ್ಷಕರನ್ನು ಹಾಗೂ ವಿದ್ಯಾರ್ಥಿಗಳನ್ನು ಕುರಿತು ಈ ಸಂದರ್ಭದಲ್ಲಿ ಮಾತನಾಡಿದರು. ಮುಗ್ಧಮನದಲ್ಲಿ ಅಕ್ಷರ ಬಿತ್ತಿ ಮಕ್ಕಳ ಭವಿಷ್ಯಕ್ಕೆ ಬೆಳಕನ್ನು ಚೆಲ್ಲಿ ಸುಂದರನಾಡು ಕಟ್ಟುವ ಪ್ರಜೆಯಾಗಬೇಕೆಂದು ಪ್ರೇರೇಪಿಸಬೇಕೆಂಬುದೇ ನಮ್ಮ ಶಾಲೆಯ ಶಿಕ್ಷಕರು ಪ್ರಯತ್ನಿಸಬೇಕು ಎಂದು ಕಾರ್ಯದರ್ಶಿ ಸವಿತಾ ಕಲಾಶಂಕರ್ ಹೇಳಿದರು. ಈ ಸಂದರ್ಭದಲ್ಲಿ ಶಾಲೆಯ ಎಲ್ಲಾ ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಓಲಾ ಆಟೋಚಾಲಕನ ಸೆರೆ

ಬೆಂಗಳೂರು: ಬುಕ್ ಮಾಡಿದ್ದ ಓಲಾ ಆಟೋ ರದ್ದು ಮಾಡಿದ್ದಕ್ಕೆ ಆಕ್ರೋಶಗೊಂಡ ಆಟೋಚಾಲಕನೊಬ್ಬ ಯುವತಿಯನ್ನು ಹಿಂಬಾಲಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ ಘಟನೆ ನಗರದಲ್ಲಿ ನಡೆದಿದ್ದು, ಪೊಲೀಸರು ಆಟೋಚಾಲಕನನ್ನು ಬಂಧಿಸಿದ್ದಾರೆ. ಮಾಗಡಿ ರೋಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೆ.2ರಂದು ಯುವತಿ, ಓಲಾ ಆಟೋ ಬುಕ್ ಮಾಡಿದ್ದರು. ಸಕಾಲಕ್ಕೆ ಆಟೋ ಬಾರದ ಕಾರಣ ಮತ್ತೊಂದು ಆಟೋ ಬುಕ್ ಮಾಡಿದ್ದರು. ಮುಂಚಿತವಾಗಿ ಬಂದ ಆಟೋ ಹತ್ತಿ, ಈ ಹಿಂದೆ ಬುಕ್ ಮಾಡಿದ್ದ ಆರ್ಡರ್ ರದ್ದು ಮಾಡಿದ್ದರು. ಇದನ್ನು ಗಮನಿಸಿದ ಆಟೋಚಾಲಕ ಯುವತಿಯನ್ನು ಹಿಂಬಾಲಿಸಿದ್ದಲ್ಲದೇ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಮುಂದಾಗಿದ್ದಾನೆ. ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು ವಿಡಿಯೋದಲ್ಲಿ ಸೆರೆಯಾಗಿದೆ. ಇದೇ ವಿಡಿಯೋವನ್ನು ಸಾಮಾಜಿಕ ಜಾಲತಾಣ 'ಟ್ವಿಟರ್'ನಲ್ಲಿ ಯುವತಿಯ ಸ್ನೇಹಿತೆ ನಗರ ಪೊಲೀಸರಿಗೆ ಟ್ಯಾಗ್‌ಮಾಡಿ ಪೋಸ್ಟ್ ಮಾಡಿದ್ದಾರೆ. ಘಟನೆ ಬೆಳಕಿಗೆ ಬರುತ್ತಿದ್ದಂತೆ ಪರಿಶೀಲಿಸಿದ ಪೊಲೀಸರು, ಆಟೋಚಾಲಕ ಮುತ್ತುರಾಜ್ ಎಂಬಾತನನ್ನು ಕರೆಸಿ ವಿಚಾರಣೆ ನಡೆಸಿದ್ದಾರೆ.

ಇ-ಸ್ವತ್ತು ನೀಡಿಕೆ ವಿಳಂಬ: ಕೇಂದ್ರದ ಎನ್‌ಐಸಿ ಸೇವೆ ರದ್ದು

ಬೆಂಗಳೂರು: ಗ್ರಾಮೀಣ ಪ್ರದೇಶಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳು ವಿತರಿಸುತ್ತಿರುವ ಇ-ಸ್ವತ್ತು ದಾಖಲೆ ಪಡೆಯುವಲ್ಲಿ

ವಿಳಂಬವಾಗುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿವೆ. ಹೀಗಾಗಿ, ಸಂಬಂಧಿಸಿದ ತಂತ್ರಜ್ಞಾನ ಅಳವಡಿಸಿರುವ ಕೇಂದ್ರ ಸರಕಾರದ ಎನ್.ಐ.ಸಿ ಸೇವೆಯನ್ನು ರದ್ದು ಮಾಡುವಂತೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದ್ದಾರೆ.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಸಭೆ ನಡೆಸಿದ ಸಚಿವರು, ಗ್ರಾಮೀಣ ರೈತರ ಸ್ನೇಹಿಯಾಗಿ ಕಾರ್ಯ ನಿರ್ವಹಿಸಬೇಕಿದ್ದ ಇ-ಸ್ವತ್ತು ಕಾರ್ಯಕ್ರಮ ಕಳೆದ 8 ತಿಂಗಳಿಂದ ಒಂದಲ್ಲ ಒಂದು ಕಾರಣಕ್ಕೆ ಸಮರ್ಪಕವಾಗಿ ಕಾರ್ಯ ನಿರ್ವಹಿಸದಿದ್ದರೂ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದಿರುವುದನ್ನು ಸಚಿವರು ಆಕ್ಷೇಪಿಸಿದರು. ತಕ್ಷಣವೇ ಪರ್ಯಾಯ ಕ್ರಮಗಳನ್ನು ತೆಗೆದುಕೊಂಡು, ವಿಳಂಬವಿಲ್ಲದೇ ಹಾಗೂ ಭ್ರಷ್ಟಾಚಾರರಹಿತವಾಗಿ ಇ-ಸ್ವತ್ತು ದಾಖಲೆಗಳನ್ನು ನೀಡುವಂತೆ ಮಾರ್ಪಾಡುಗಳನ್ನು ತರಬೇಕೆಂದು ಸೂಚಿಸಿದರು.

ಸಬಲೀಕರಣ-ಸರಳೀಕರಣ: ಈ ಕಾರ್ಯಕ್ರಮವನ್ನು ಸಬಲೀಕರಣಗೊಳಿಸುವುದರೊಂದಿಗೆ ಸರಳೀಕರಣ ಮಾಡಲು ತಿಳಿಸಿದ ಸಚಿವರು, ಭ್ರಷ್ಟಾಚಾರರಹಿತವಾಗಿ ಜನರು ಇ-ಸ್ವತ್ತು ದಾಖಲೆಗಳನ್ನು ಶೀಘ್ರಗತಿಯಲ್ಲಿ ಪಡೆದುಕೊಳ್ಳುವಂತೆ ವ್ಯವಸ್ಥೆಗೆ ಕಾಯಕಲ್ಪ ನೀಡಲು ತಕ್ಷಣವೇ ಕ್ರಮ ಕೈಗೊಳ್ಳಬೇಕು. ತಂತ್ರಜ್ಞಾನ ಕೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದರೂ, ಕೇಂದ್ರ ಸರಕಾರದ ಎನ್.ಐ.ಸಿ ಸಂಸ್ಥೆ ತಂತ್ರಜ್ಞಾನ ಅಳವಡಿಕೆಯಲ್ಲಿ ಇನ್ನೂ ಬಹಳಷ್ಟು ಹಿಂದೆ ಇರುವುದರಿಂದ ನಮ್ಮ ಗ್ರಾಮೀಣ ರೈತರು ತೊಂದರೆಗೊಳಗಾಗಿದ್ದಾರೆ. ಇ ಸ್ವತ್ತು ನೀಡಿಕೆಯಲ್ಲಿ ಆಗುತ್ತಿರುವ ವಿಳಂಬ ಗತಿ ಹಾಗೂ ಮತ್ತಿತರ ಕಾರಣಗಳು ಇಡೀ ಗ್ರಾಮೀಣಾಭಿವೃದ್ಧಿ ಇಲಾಖೆಯ ಆಡಳಿತ ಯಂತ್ರದ ಮೇಲೆ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿದರು. ಸಭೆಯಲ್ಲಿ ಪಂಚಾಯತ್ ರಾಜ್ ಆಯುಕ್ತೆ ಡಾ.ಅರುಂಧತಿ ಚಂದ್ರಶೇಖರ್, ಇ-ಗೌರ್ನೆನ್ಸ್ ನಿರ್ದೇಶಕಿ ಡಾ.ನಂದಿನಿ ದೇವಿ ಸಭೆಯಲ್ಲಿದ್ದರು.

ನಿರ್ದೇಶಕ ಯೋಗರಾಜ್ ಭಟ್ ವಿರುದ್ಧ ಎಫ್‌ಐಆರ್

ಬೆಂಗಳೂರು: 'ಮನದ ಕಡಲು' ಸಿನಿಮಾ ಚಿತ್ರೀಕರಣದ ವೇಳೆ 30 ಅಡಿ ಎತ್ತರದ ಏಣಿಯಿಂದ ಬಿದ್ದು ಲೈಟ್ ಬಾಯ್ ಮೃತಪಟ್ಟಿರುವ ಘಟನೆ ಬೆಂಗಳೂರಿನ ಮಾದನಾಯಕನ ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಈ ಸಂಬಂಧ ಚಿತ್ರದ ನಿರ್ದೇಶಕ ಯೋಗರಾಜ ಭಟ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ತುಮಕೂರು ಜಿಲ್ಲೆಯ ಕೊರಟಗೆರೆ ಮೂಲದ ಮೋಹನ್ ಕುಮಾರ್ (30) ಮೃತ ಲೈಟ್ ಬಾಯ್. ಸೆ.3ರಂದು ಮಾದನಾಯಕನಹಳ್ಳಿ ಸಮೀಪದ ವಿಆರ್‌ಎಲ್ ಅರೇನಾ ಬಳಿ ಚಿತ್ರೀಕರಣ ನಡೆಯುತ್ತಿತ್ತು. ಆ ವೇಳೆ ಅವಘಡ ಸಂಭವಿಸಿದೆ. ಮೃತ ಮೋಹನ್ ಹಾಗೂ ಅವರ ಸಹೋದರ ಬೆಂಗಳೂರು ನಗರದ ಬಡಾವಣೆಯೊಂದರಲ್ಲಿ ನೆಲೆಸಿದ್ದರು. ಚಿತ್ರರಂಗದಲ್ಲಿ ಇಬ್ಬರೂ ಲೈಟ್‌ಬಾಯ್‌ಗಳಾಗಿ ಕೆಲಸ ಮಾಡುತ್ತಿದ್ದರು. ಸೆ.3ರಂದು ಚಿತ್ರೀಕರಣದ ವೇಳೆ ಮೋಹನ್ 30 ಅಡಿ ಎತ್ತರದ ಏಣಿಯಿಂದ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ. ಅವನನ್ನು ಗೊರಗುಂಟೆ ಪಾಳ್ಯದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಗುರುವಾರ ಮೃತಪಟ್ಟಿದ್ದಾನೆ.

ಚಿತ್ರೀಕರಣದ ವೇಳೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ ಆರೋಪ ಅಡಿ ಚಿತ್ರ ನಿರ್ದೇಶಕ ಯೋಗರಾಜ್ ಭಟ್ ಹಾಗೂ ವ್ಯವಸ್ಥಾಪಕ ಸುರೇಶ್ ಸೇರಿ ಮೂವರ ವಿರುದ್ಧ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

Canarys
Solution is our Mantra
ಕ್ಯಾನರೀಸ್ ಆಟೋಮೇಶನ್ ಲಿಮಿಟೆಡ್
(ಹಿಂದಿನ ಹೆಸರು: ಕ್ಯಾನರೀಸ್ ಆಟೋಮೇಶನ್ಸ್ ಪ್ರೈವೇಟ್ ಲಿಮಿಟೆಡ್)
CIN: L31101KA1991PLC012096
ನೋಂ. ಕಚೇರಿ ವಿಳಾಸ: # 566 & 567, 2ನೇ ಮಹಡಿ, 30ನೇ ಮೈನ್, ಅತ್ತಿಮಬ್ಬೆ ರಸ್ತೆ, ಬನಗಿರಿನಗರ, ಬನಶಂಕರಿ 3ನೇ ಹಂತ, ಬೆಂಗಳೂರು-560085, ಕರ್ನಾಟಕ, ಭಾರತ.
ಸಂಪರ್ಕ ಸಂ: +91 98458 62780 : **ಇ-ಮೇಲ್ ಐಡಿ:** fin@ecanarys.com, **ವೆಬ್‌ಸೈಟ್:** www.ecanarys.com

ಸೂಚನೆ

ಕ್ಯಾನರೀಸ್ ಆಟೋಮೇಶನ್ಸ್ ಲಿಮಿಟೆಡ್(ಹಿಂದಿನ ಹೆಸರು: ಕ್ಯಾನರೀಸ್ ಆಟೋಮೇಶನ್ಸ್ ಪ್ರೈವೇಟ್ ಲಿಮಿಟೆಡ್) ("ಕಂಪನಿ") ಇದರ ಸದಸ್ಯರ **33ನೇ ವಾರ್ಷಿಕ ಮಹಾಸಭೆಯು ("ಎಜಿಎಂ") ಸೋಮವಾರ 30ನೇ ಸೆಪ್ಟಂಬರ್ 2024 ರಂದು ಸಂಜೆ 04:00 ಗಂಟೆಗೆ** ವಿಡಿಯೋಕಾನ್ಫರೆನ್ಸ್ (ವಿಸಿ)/ಇತರೆ ಆಡಿಯೋ ವಿಷಯಲ್ಸ್ ಮೀನ್ಸ್ (ಒಎವಿಎಂ) ಮೂಲಕ ಸೂಚನೆಯಲ್ಲಿ ನಿಗದಿಪಡಿಸಿದಂತೆ ವ್ಯವಹಾರಗಳ ವಹಿವಾಟಿಗಾಗಿ ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದಿಂದ ("ಎಂಸಿಎ") ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ (ಸೆಬಿ) ಯಿಂದ ನೀಡಲಾದ ವಿವಿಧ ಸುತ್ತೋಲೆಗಳಂತೆ ಎಜಿಎಂ ನ್ನು ವಿಸಿ/ಒಎವಿಎಂ ಮೂಲಕ ಒಂದೇ ಸ್ಥಳದಲ್ಲಿ ಸದಸ್ಯರ ಭೌತಿಕ ಹಾಜರಾತಿ ಇಲ್ಲದೆ ನಡೆಸಲು ಅನುಮತಿ ನೀಡಲಾಗಿದೆ ಮತ್ತು ಸದಸ್ಯರಿಗೆ ಎಜಿಎಂ ಸೂಚನೆ ಮತ್ತು ವಾರ್ಷಿಕ ವರದಿಯ ಭೌತಿಕ ಪ್ರತಿಗಳನ್ನು ಕಳುಹಿಸಿಕೊಡುವ ಪ್ರಕ್ರಿಯೆಗೆ ವಿನಾಯಿತಿ ಲಭ್ಯವಾಗಿದೆ. ವಿಸಿ/ಒಎವಿಎಂ ಮೂಲಕ ಹಾಜರಾಗುವ ಸದಸ್ಯರನ್ನು ಸೆಕ್ಷನ್ 103 ರ ಕಾಯಿದೆಯಂತೆ ಕೋರಂ ಉದ್ದೇಶಕ್ಕಾಗಿ ಲೆಕ್ಕ ಹಾಕಲಾಗುವುದು. ವಿಸಿ/ಒಎವಿಎಂ ಮೂಲಕ ಎಜಿಎಂ ನಡೆಯುತ್ತಿರುವುದರಿಂದ ಸದಸ್ಯರಿಂದ ಪ್ರಾಕ್ಸಿಗಳನ್ನು ನೇಮಿಸುವ ಸೌಲಭ್ಯವು ಲಭ್ಯವಿರುವುದಿಲ್ಲ. 33ನೇ ಎಜಿಎಂ ಸೂಚನೆ ಮತ್ತು ಆರ್ಥಿಕ ವರ್ಷ 2023-24ರ ವಾರ್ಷಿಕ ವರದಿಯನ್ನು ಸದಸ್ಯರ ಇ-ಮೇಲ್ ವಿಳಾಸವು ಕಂಪನಿ/ಡೆಪಾಸಿಟರಿ ಪಾರ್ಟಿಸಿಪೆಂಟ್(ಟ್ಸ್) / ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ರ ಬಳಿ ಈಗಾಗಲೇ ನೋಂದಾಯಿತವಾಗಿದ್ದರೆ ಅಂಥವರಿಗೆ ಇ-ಮೇಲ್ ಮೂಲಕ ಕಳುಹಿಸಿಕೊಡುವ ಪ್ರಕ್ರಿಯೆ **ಶುಕ್ರವಾರ 06ನೇ ಸೆಪ್ಟಂಬರ್, 2024** ರಂದು ಮುಕ್ತಾಯಗೊಂಡಿದೆ.

ಸದಸ್ಯರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ಸಭೆಯ ಸೂಚನೆ ಮತ್ತು ಮೇಲೆ ಹೇಳಲಾದ ದಾಖಲೆಗಳು ಕಂಪನಿಯ ವೆಬ್‌ಸೈಟ್ www.ecanarys.com ಮತ್ತು ಲಿಂಕ್ ಇನ್ ಟೈಮ್ ಇಂಡಿಯ ಪ್ರೈವೇಟ್ ಲಿಮಿಟೆಡ್ ನ ವೆಬ್‌ಸೈಟ್ www.linkintime.co.in ನಲ್ಲಿ ಲಭ್ಯವಿರುತ್ತದೆ.

ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಸೆಕ್ಷನ್ 108ರ ಕಂಪನಿಗಳ ಕಾಯಿದೆ, 2013ರ ನಿಯಮ 20 ನ್ನು ಓದಿಕೊಂಡಂತೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 (ತಿದ್ದುಪಡಿ(ಗಳು), ಬದಲಾವಣೆ(ಗಳು), ಅಥವಾ ಮರು ಎನಾಕ್ಟ್‌ಮೆಂಟ್ (ಗಳು) ಇದ್ದಲ್ಲಿ), ನಿಯಂತ್ರಣ 44ರ ಸೆಬಿ ಲಿಸ್ಟಿಂಗ್ ಅಬ್ಲಿಗೇಷನ್ಸ್, ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್-2 (ಎಸ್‌ಎಸ್-2) ಸಾಮಾನ್ಯ ಸಭೆಗಳು ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯ, ಎಂಸಿಎ ಸುತ್ತೋಲೆಗಳು ಮತ್ತು ಸೆಬಿ ಸುತ್ತೋಲೆಗಳಂತೆ ಕಂಪನಿಯು ಸದಸ್ಯರಿಗೆ ಎಜಿಎಂ ನಲ್ಲಿ ವಿದ್ಯುನ್ಮಾನ ಮೂಲಕ ಎಜಿಎಂ ನಲ್ಲಿ ವ್ಯವಹಾರಗಳ ಮೇಲೆ ಮತದಾನ ನಡೆಸಲು ಇ-ವೋಟಿಂಗ್ ಸರ್ವಿಸಸ್ (**"ರಿಮೋಟ್ ಇ-ವೋಟಿಂಗ್"**) ಮೂಲಕ ಮತದಾನದ ಸೌಲಭ್ಯವನ್ನು ಲಿಂಕ್ ಇನ್ ಟೈಮ್ ಇಂಡಿಯ ಪ್ರೈವೇಟ್ ಲಿಮಿಟೆಡ್ (**"ಲಿಂಕ್‌ಇನ್‌ಟೈಮ್"**) ಮೂಲಕ ಕಲ್ಪಿಸಿದೆ. ಕಂಪನಿಯು ವಿಸಿ/ಒಎವಿಎಂ ಮೂಲಕ ನಡೆಯುವ ಎಜಿಎಂ ಸಂದರ್ಭದಲ್ಲೂ ಸಹ ಇ-ಮತದಾನ ಸೌಲಭ್ಯ (**"ಇ-ವೋಟಿಂಗ್"**)ನ್ನು ಷೇರುದಾರರಿಗೆ ಒದಗಿಸಿದ್ದು, ರಿಮೋಟ್ ಇ-ಮತದಾನದ ಮೂಲಕ ಈಗಾಗಲೇ ಮತ ಚಲಾಯಿಸದ ಸದಸ್ಯರಿಗೆ ತಮ್ಮ ಮತವನ್ನು ಇ-ಮತದಾನದ ಮೂಲಕ ಚಲಾಯಿಸಲು ಅವಕಾಶ ನೀಡಿದೆ.

ಎಂಸಿಎ ಸುತ್ತೋಲೆಗಳು ಮತ್ತು ಸೆಬಿ ಸುತ್ತೋಲೆಗಳ ಅನುಸಾರ ಷೇರುದಾರರು ತಮ್ಮ ಇ-ಮೇಲ್ ಐಡಿಗಳನ್ನು ಈ ಕೆಳಗಿನಂತೆ ಅಪ್‌ಡೇಟ್ ಮಾಡುವ ಮೂಲಕ ಸೂಚನೆಯ ಎಲೆಕ್ಟ್ರಾನಿಕ್ ಪ್ರತಿಗಳು/ಲಾಗಿನ್ ವಿವರಗಳನ್ನು ಪಡೆಯಲು ಸಾಧ್ಯವಾಗುತ್ತದೆ.

ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು :	ಈಗಾಗಲೇ ಷೇರುದಾರರು ತಮ್ಮ ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿದ್ದು, ತಮ್ಮ ಇ-ಮೇಲ್ ವಿಳಾಸವನ್ನು ಕಂಪನಿ/ಡೆಪಾಸಿಟರಿ ಪಾಟಿಸಿಪೆಂಟ್(ಟ್ಸ್)/ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ಸ್ (ಆರ್‌ಟಿಎ) ಬಳಿ ನೋಂದಾಯಿಸಿಲ್ಲವಾದರೆ, ಕಂಪನಿಯವರು ಆರ್‌ಟಿಎ **ಲಿಂಕ್ ಇನ್‌ಟೈಮ್ ಇಂಡಿಯ ಪ್ರೈವೇಟ್ ಲಿಮಿಟೆಡ್** ಗೆ "ಇ-ಮೇಲ್ ಅಪ್‌ಡೇಟ್ ಮಾಡಲು ವಿನಂತಿ" ಎಂದು ಲಿಖಿತ ಮೂಲಕ ಮನವಿಯನ್ನು instameet@linkintime.co.in ಗೆ ಕಳುಹಿಸಬೇಕು. ಷೇರುದಾರರು ತಮ್ಮ ಪತ್ರದಲ್ಲಿ ಫೋಲಿಯೋ ಸಂಖ್ಯೆ, ಷೇರುದಾರರ ಹೆಸರು ಜೊತೆಗೆ ಷೇರು ಪ್ರಮಾಣಪತ್ರಗಳ ಸ್ಕ್ಯಾನ್ ಪ್ರತಿ (ಹಿಂಭಾಗ ಮತ್ತು ಮುಂಭಾಗ) ಹಾಗೂ ಸ್ವಯಂ ದೃಢೀಕರಿಸಿದ ಪ್ಯಾನ್‌ಕಾರ್ಡ್ ಪ್ರತಿ ಮತು ಯಾವುದೇ ದಾಖಲೆಗಳು (ಅಂದರೆ ಚಾಲನಾ ಪರವಾನಿಗೆ, ಪಾಸ್‌ಪೋರ್ಟ್, ಬ್ಯಾಂಕ್ ಹೇಳಿಕೆಗಳು, ಆಧಾರ್ ಇತ್ಯಾದಿ) ಗಳನ್ನು ಷೇರುದಾರರ ನೋಂದಾಯಿತ ವಿಳಾಸದ ಜೊತೆಗೆ ಕಳುಹಿಸಬೇಕು.
ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು:	ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ತಮ್ಮ ಇ-ಮೇಲ್ ವಿಳಾಸವನ್ನು ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಬಳಿ ಅಪ್‌ಡೇಟ್ ಮಾಡದೆ ಇದ್ದರೆ ಅವರನ್ನು ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಬಳಿ ನೋಂದಾಯಿಸಲು ಕೋರಲಾಗಿದೆ.

ಕಂಪನಿಯು ಮೆ॥ ಗಣಪತಿ ಮತ್ತು ಮೋಹನ್, ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿ (ಸದಸ್ಯತ್ವ ಸಂ. 5659 ಮತ್ತು ಪ್ರಾಕ್ಟೀಸ್ ಪ್ರಮಾಣಪತ್ರ ಸಂ. 4520) ಇವರನ್ನು ರಿಮೋಟ್ ಇ-ಮತದಾನ ಮತ್ತು ಎಜಿಎಂ ಸಂದರ್ಭದಲ್ಲಿ ನಡೆಯುವ ಇ-ಮತದಾನದ ಪಾರದರ್ಶಕತೆಗಾಗಿ ಪರಿಶೀಲಕರನ್ನಾಗಿ ನೇಮಿಸಿದೆ.

ರಿಮೋಟ್ ಇ-ಮತದಾನದ ಸೂಚನೆಗಳು ಮತ್ತು ಇ-ಮತದಾನದ ಸೂಚನೆಗಳನ್ನು ಎಜಿಎಂ ನಲ್ಲಿ ನೀಡಲಾಗಿದೆ. ಷೇರುದಾರರು ಅದನ್ನು ಗಮನಿಸಲು ಕೋರಲಾಗಿದೆ.

ಎ) ರಿಮೋಟ್ ಇ-ಮತದಾನವು **ಶುಕ್ರವಾರ, ಸೆಪ್ಟಂಬರ್ 27, 2024ರಂದು ಬೆಳಿಗ್ಗೆ 9.00 ಗಂಟೆಗೆ** ಆರಂಭವಾಗಿ **ಭಾನುವಾರ ಸೆಪ್ಟಂಬರ್ 29, 2024ರಂದು ಸಂಜೆ 5.00 ಗಂಟೆಗೆ** (ಭಾರತೀಯ ಕಾಲಮಾನ) **ಮುಕ್ತಾಯಗೊಳ್ಳಲಿದೆ**. ರಿಮೋಟ್ ಇ-ಮತದಾನದ ಮಾಡ್ಯೂಲ್‌ನ್ನು ಆ ನಂತರ ಲಿಂಕ್‌ಇನ್‌ಟೈಮ್ ನಿಷ್ಕ್ರಿಯಗೊಳಿಸಲಿದೆ ಹಾಗೂ ಆ ದಿನಾಂಕ ಮತ್ತು ಸಮಯದ ನಂತರ ವಿದ್ಯುನ್ಮಾನವಾಗಿ ಮತ ಚಲಾಯಿಸಲು ಅವಕಾಶವಿರುವುದಿಲ್ಲ. ಈ ಸಂದರ್ಭದಲ್ಲಿ ಕಂಪನಿಯ ಷೇರುದಾರರು ಭೌತಿಕ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುಗಳನ್ನು **ಅಂತಿಮ ದಿನಾಂಕ, ಸೋಮವಾರ ಅಂದರೆ ಸೆಪ್ಟಂಬರ್ 23, 2024 ರವರೆಗೆ** ಹೊಂದಿರುವವರು ತಮ್ಮ ಮತವನ್ನು ಎಜಿಎಂ ಸೂಚನೆಯಲ್ಲಿ ತಿಳಿಸಿರುವಂತೆ ರಿಮೋಟ್ ಇ-ಮತದಾನದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಎಜಿಎಂ ಗೆ ಮೊದಲೇ ರಿಮೋಟ್ ಇ-ಮತದಾನ ಮಾಡಿದ್ದಲ್ಲಿ ಅವರು ವಿಸಿ/ಒಎವಿಎಂ ಮೂಲಕ ಎಜಿಎಂ ಗೆ ಹಾಜರಾಗಬಹುದು ಆದರೆ ಅವರಿಗೆ ಮತ್ತೊಮ್ಮೆ ಮತ ಚಲಾಯಿಸಲು ಅವಕಾಶವಿರುವುದಿಲ್ಲ. ಷೇರುದಾರರು ಒಂದು ಬಾರಿ ಮತ ಚಲಾಯಿಸಿದ ನಂತರ ಯಾವುದೇ ಕಾರಣಕ್ಕೂ ಅದನ್ನು ಬದಲಾಯಿಸಲು ಅವಕಾಶ ನೀಡಲಾಗುವುದಿಲ್ಲ.

ಬಿ) ಷೇರುದಾರರ ಮತದಾನದ ಹಕ್ಕು (ರಿಮೋಟ್ ಇ-ವೋಟಿಂಗ್ ಅಥವಾ ಇ-ಮತದಾನ ಎಜಿಎಂ ಸಂದರ್ಭದಲ್ಲಿ) ಅಂದರೆ **ಕಟ್‌ಆಫ್ ದಿನಾಂಕ ಸೋಮವಾರ, 23ನೇ ಸೆಪ್ಟಂಬರ್ 2024 ರವರೆಗೆ** ಷೇರುದಾರರ ಪಾವತಿಸಿದ ಈಕ್ವಿಟಿ ಷೇರು ಬಂಡವಾಳಕ್ಕೆ ಸಮನಾಗಿರುತ್ತದೆ. ಒಬ್ಬ ವ್ಯಕ್ತಿಯ ಹೆಸರು ಷೇರುದಾರರ ರಿಜಿಸ್ಟರ್‌ನಲ್ಲಿ ಅಥವಾ ಡೆಪಾಸಿಟರಿಗಳು/ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್‌ರು ನಿರ್ವಹಿಸುವ ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಕಟ್‌ಆಫ್ ದಿನಾಂಕದವರೆಗೆ ಇದ್ದರೆ, ಆಗ ಅವರು ರಿಮೋಟ್ ಇ-ಮತದಾನ ಹಾಗೂ ಎಜಿಎಂ ಸಂದರ್ಭದಲ್ಲಿ ಇ-ಮತದಾನದ ಹಕ್ಕನ್ನು ಪಡೆಯುತ್ತಾರೆ.

ಸಿ) ಯಾವುದೇ ವ್ಯಕ್ತಿ ಎಜಿಎಂ ನೋಟೀಸನ್ನು ಕಳುಹಿಸಿದ ನಂತರ ಷೇರುಗಳನ್ನು ಹೊಂದಿ ಮತ್ತು ಕಟ್‌ಆಫ್ ದಿನಾಂಕದ ನಂತರ ಕಂಪನಿಯ ಷೇರುದಾರರಾದರೆ, ಅವರು ಎಜಿಎಂ ನ ಸೂಚನೆಯಲ್ಲಿ ನೀಡಲಾದ ಸೂಚನೆಗಳನ್ನು ಅನುಸರಿಸಬೇಕು. ಯಾವುದೇ ವ್ಯಕ್ತಿ ಕಟ್‌ಆಫ್ ದಿನಾಂಕದವರೆಗೆ ಷೇರುದಾರರಲ್ಲದಿದ್ದರೆ ಅವರು ಎಜಿಎಂ ಸೂಚನೆಯಲ್ಲಿ ರಿಮೋಟ್ ಇ-ಮತದಾನ ಮತ್ತು ಇ-ಮತದಾನದ ಬಗ್ಗೆ ಮಾಹಿತಿಯನ್ನು ಕೇವಲ ಮಾಹಿತಿ ಉದ್ದೇಶಕ್ಕೆ ಮಾತ್ರ ಬಳಸಬೇಕು.

ಎಜಿಎಂ ನ ಸೂಚನೆಯ ಪ್ರತಿ ಕಂಪನಿಯ ವೆಬ್‌ಸೈಟ್ www.ecanarys.com ಮತ್ತು ಕಂಪನಿಯ ಷೇರುಗಳನ್ನು ಪಟ್ಟಿಮಾಡಲಾದ ವೆಬ್‌ಸೈಟ್ ಅಂದರೆ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ www.nseindia.com ರಲ್ಲಿ ಲಭ್ಯವಿರುತ್ತದೆ. ಎಜಿಎಂ ಸೂಚನೆಯ ಪ್ರತಿಯು ಲಿಂಕ್‌ಇನ್‌ಟೈಮ್ ವೆಬ್‌ಸೈಟ್ www.linkintime.co.in ನಲ್ಲಿ ಲಭ್ಯವಿರುತ್ತದೆ.

ರಿಮೋಟ್ ಇ-ಮತದಾನ ಮತ್ತು ಇ-ಮತದಾನದ ಫಲಿತಾಂಶಗಳನ್ನು ಎಜಿಎಂ ಮುಗಿದ ಎರಡು ಕೆಲಸದ ದಿನಗಳಿಗಿಂತ ಮೊದಲೇ ಘೋಷಿಸಲಾಗುವುದು, ಫಲಿತಾಂಶಗಳನ್ನು ಪರಿಶೀಲಕರ ವರದಿ ಜೊತೆಗೆ ಕಂಪನಿಯ ವೆಬ್‌ಸೈಟ್ www.ecanarys.com ನಲ್ಲಿ ಕೂಡಲೇ ಘೋಷಿಸಲಾಗುವುದು ಮತ್ತು ಲಿಂಕ್‌ಇನ್‌ಟೈಮ್ ಅಂದರೆ www.linkintime.co.in ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ www.nseindia.com ಗೆ ಮಾಹಿತಿ ನೀಡಲಾಗುವುದು.

ಒಂದು ವೇಳೆ ರಿಮೋಟ್ ಇ-ಮತದಾನ ಮತ್ತು ಇ-ಮತದಾನದ ಬಗ್ಗೆ ಯಾವುದೇ ವಿಚಾರಣೆಗಳಿದ್ದರೆ, ಆಗಾಗ ಕೇಳುವ ಪ್ರಶ್ನೆಗಳು (ಎಫ್‌ಎಕ್ಯು) ಆಧಾರ ಮಾಡಿಕೊಳ್ಳಿ ಮತ್ತು ಇ-ಮತದಾನ ಕೈಪಿಡಿ **www.linkintime.co.in** ನಲ್ಲಿ ಹೆಲ್ಪ್ ವಿಭಾಗದಲ್ಲಿ ಲಭ್ಯವಿರುತ್ತದೆ ಅಥವಾ **instameet@linkintime.com** ಗೆ ಇ-ಮೇಲ್ ಮಾಡಿರಿ. ಅಥವಾ ಸಂಪರ್ಕಿಸಿ: ಶ್ರೀ ರಾಜೀವ್ ರಂಜನ್, ಸಹಾಯಕ ಉಪಾಧ್ಯಕ್ಷರು, ಇ-ವೋಟಿಂಗ್ (91 22 49186060 ಸಂಪರ್ಕ ಸಂಖ್ಯೆ).

ಷೇರುದಾರರು ಎಜಿಎಂ ಸಂದರ್ಭದಲ್ಲಿ ಸ್ಪೀಕರ್‌ಗಳಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅಥವಾ ಪ್ರಶ್ನೆಗಳನ್ನು ಕೇಳಲು ತಮ್ಮ ಮನವಿಯನ್ನು ನೋಂದಾಯಿತ ಇ-ಮೇಲ್ ವಿಳಾಸದೊಂದಿಗೆ ತಮ್ಮ ಹೆಸರು, ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ/ಫೋಲಿಯೊ ಸಂಖ್ಯೆ, ಪ್ಯಾನ್ ನಂಬರ್, ಮೊಬೈಲ್ ಸಂಖ್ಯೆಗಳ ಜೊತೆಗೆ ತಮ್ಮ ವಿಚಾರಣೆಗಳನ್ನು **ambikeshwari.m@ecanarys.com** ಗೆ ಸಭೆಯ ಏಳು ದಿನಗಳ ಮೊದಲಾಗಿ ಕಳುಹಿಸಬೇಕು.

ಕ್ಯಾನರೀಸ್ ಆಟೋಮೇಶನ್ಸ್ ಲಿಮಿಟೆಡ್
(ಹಿಂದಿನ ಹೆಸರು: ಕ್ಯಾನರೀಸ್‌ಆಟೋಮೇಶನ್ಸ್ ಪ್ರೈವೇಟ್ ಲಿಮಿಟೆಡ್)
ಸಹಿ/-
ಸಿಎಸ್ ಅಂಬಿಕೇಶ್ವರಿ ಎಂ ಎ
ಕಂಪನಿ ಕಾರ್ಯದರ್ಶಿ ಮತ್ತು ಕಾಂಪ್ಲಯನ್ಸ್ ಅಧಿಕಾರಿ
ಸ್ಥಳ: ಬೆಂಗಳೂರು
ದಿನಾಂಕ: ಸೆಪ್ಟಂಬರ್ 06, 2024

ಬೆಂಗಳೂರು, ಮೈಸೂರು, ಮಂಗಳೂರಿನಲ್ಲಿ ವಾಯುಗುಣಮಟ್ಟ ಕುಸಿತ | ಸರಕಾರಕ್ಕೆ ಎಚ್ಚರಿಕೆ

3 ಜಿಲ್ಲೆಗಳಲ್ಲಿ ಮಾಲಿನ್ಯ ಪ್ರಮಾಣ ಅಪಾಯಕಾರಿ ಮಟ್ಟಕ್ಕೆ

ಬೆಂಗಳೂರು: ಕರ್ನಾಟಕದ ಮೂರು ಪ್ರಮುಖ ನಗರಗಳಾದ ಬೆಂಗಳೂರು, ಮೈಸೂರು ಹಾಗೂ ಮಂಗಳೂರಿನಲ್ಲಿ ನಾವು ಉಸಿರಾಡುವ ಗಾಳಿಯ ಗುಣಮಟ್ಟ ತೀವ್ರವಾಗಿ ಕುಸಿದಿದ್ದು, ಮಾಲಿನ್ಯದ ಪ್ರಮಾಣ ಅಪಾಯಕಾರಿ ಮಟ್ಟಕ್ಕೆ ತಲುಪಿದೆ.

ಚಾಮುಂಡಿ ಬೆಟ್ಟದ ಮಡಿಲಲ್ಲಿರುವ, ಬಂಡೀ ಪುರ, ನಾಗರಹೊಳೆ ಮತ್ತಿತರ ಸಮೃದ್ಧ ಅರಣ್ಯ ಪ್ರದೇಶಗಳಿಂದ ಸುತ್ತುವರಿದಿರುವ ಮೈಸೂರು ನಗರದ ಗಾಳಿಯ ಗುಣಮಟ್ಟ ತೀವ್ರ ಕುಸಿತ ಕಂಡಿದೆ ಎಂಬ ಆಘಾತಕಾರಿ ಅಂಶ ಗ್ರೀನ್‌ಪೀಸ್ ಸಂಶೋ ಧನಾ ವರದಿಯಲ್ಲಿ ಬಹಿರಂಗಗೊಂಡಿದೆ. ಈ ವರದಿ, ವಾಯು ಮಾಲಿನ್ಯದಿಂದ ನಗರದ ಜನತೆಯ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳ ಬಗ್ಗೆ ಎಚ್ಚರಿಕೆ ನೀಡಿದೆ. ಈ ಕೂಡಲೇ ವಾಯುಮಾಲಿನ್ಯ ತಗ್ಗಿಸಲು ಸೂಕ್ತ ಕ್ರಮ ಕೈಗೊಳ್ಳದಿದ್ದರೆ, ನಮ್ಮ ಆರೋಗ್ಯದ ಮೇಲೆ ಅದು ತೀವ್ರ ತೆರನಾದ ದುಷ್ಪರಿಣಾಮ ಬೀರಲಿದೆ. ದಕ್ಷಿಣ ಭಾರತದ 10 ಪ್ರಮುಖ ನಗರಗಳ ಗಾಳಿಯಲ್ಲಿ ಮಾಲಿನ್ಯಕಾರಕ ಕಣಗಳಾದ ಪಿಎಂ 2.5 (ಸೂಕ್ಷ್ಮ) ಮತ್ತು ಪಿಎಂ 10 (ಅತಿ ಸೂಕ್ಷ್ಮ)ಗಳ ಪ್ರಮಾಣವು ಡಬ್ಲ್ಯುಎಚ್‌ಒ ಮಾರ್ಗಸೂಚಿ ನಿಗದಿಪಡಿಸಿದ ಸರಾಸರಿ ಮಟ್ಟ ಗಳನ್ನು ಮೀರಿದ್ದು ಇದು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣ

ವಾಗಬಹುದು ಎಂದು ಗ್ರೀನ್‌ಪೀಸ್ ಇಂಡಿಯಾದ ಸ್ಪೇರ್ ದಿ ಏರ್-2' ವರದಿಯು ಎಚ್ಚರಿಸಿದೆ.

ದಕ್ಷಿಣ ಭಾರತದ ಪ್ರಮುಖ ನಗರಗಳ ಗಾಳಿಯೂ ಶುದ್ಧವಲ್ಲ: ವರದಿಯು ದಕ್ಷಿಣ ಭಾರತದ ಪ್ರಮುಖ ನಗರಗಳಾದ ಬೆಂಗಳೂರು, ಮಂಗಳೂರು, ಮೈಸೂರು, ಹೈದರಾಬಾದ್, ಚೆನ್ನೈ, ವಿಶಾಖಪಟ್ಟಣ, ಕೊಚ್ಚಿ, ಅಮರಾವತಿ, ವಿಜಯವಾಡ, ಮತ್ತು ಪುದುಚೇರಿ ನಗರಗಳಲ್ಲಿ ಗಾಳಿಯ ಗುಣಮಟ್ಟವನ್ನು ವಿಶ್ಲೇಷಿಸುತ್ತದೆ. ಈ ಹತ್ತು ನಗರಗಳ ಪೈಕಿ ವಿಶಾಖ ಪಟ್ಟಣದಲ್ಲಿ ಗಾಳಿಯ ಗುಣಮಟ್ಟ ತೀವ್ರ ಕುಸಿತ ಕಂಡಿದೆ. ಇಲ್ಲಿನ ಗಾಳಿಯಲ್ಲಿ ಪಿಎಂ 2.5 ಕಣಗಳ ಪ್ರಮಾಣ ಡಬ್ಲ್ಯುಎಚ್‌ಒ ಮಾರ್ಗಸೂಚಿ ನಿಗದಿ ಪಡಿಸಿದ ಮಾನದಂಡಕ್ಕಿಂತ 10 ಪಟ್ಟು ಮತ್ತು ಪಿಎಂ 10 ಕಣಗಳ ಪ್ರಮಾಣ 9 ಪಟ್ಟು ಹೆಚ್ಚಿರುವುದು ದೃಢ ಪಟ್ಟಿದೆ. ಅಷ್ಟೇ ಅಲ್ಲದೆ, ಇದು ಗಾಳಿಯ ಗುಣಮಟ್ಟ ಮಾಪಕ ನ್ಯಾಷನಲ್ ಎಂಬಿಯಂಟ್ ಏರ್ ಕ್ವಾಲಿಟಿ ಸ್ಟಾಂಡರ್ಡ್ (ಎನ್‌ಎಎಕ್ಯೂಎಸ್) ನಿಗದಿಪಡಿಸಿದ ಮಿತಿಗಳನ್ನೂ ಮೀರಿದೆ ಎಂದು ಅಧ್ಯಯನವು ಸ್ಪಷ್ಟಪಡಿಸಿದೆ.

ಗಾಳಿಯ ಶುದ್ಧತೆ ಕಾಪಾಡುವುದು ಮುಖ್ಯ: ಈ ಸಂಶೋಧನಾ ತಂಡದ ನೇತೃತ್ವವನ್ನು ವಹಿಸಿದ್ದ ಸಂಶೋಧಕಿ, ಆಕಾಂಕ್ಷಾ ಸಿಂಗ್, ಶುದ್ಧ ಗಾಳಿ ನಮ್ಮ ಆರೋಗ್ಯದ ಮೂಲಭೂತ ಅಗತ್ಯಗಳಲ್ಲಿ ಒಂದು. ಆದರೆ ಪ್ರಸ್ತುತ ವರದಿಯು ದೇಶದ ಎಲ್ಲಾ ಪ್ರಮುಖ ನಗರಗಳಲ್ಲಿನ ಮಾಲಿನ್ಯಕಾರಕ ಪಿಎಂ (ಪರ್ಟಿ ಕ್ಯುಲೇಟ್ ಮ್ಯಾಟರ್ಸ್) ಕಣಗಳ ಮಟ್ಟವು ಡಬ್ಲ್ಯು ಎಚ್ಒನಿಂದ ಪರಿಷ್ಕೃತ ನಿಗದಿತ ಮಾರ್ಗಸೂಚಿಗಳನ್ನು ಮೀರಿದೆ ಎಂಬುದನ್ನು ಸ್ಪಷ್ಟಪಡಿಸುತ್ತಿದೆ ಎಂದರು. ಪ್ರಸ್ತುತ ಅಧ್ಯಯನವು ಗಾಳಿಯ ಗುಣ ಮಟ್ಟಕ್ಕೆ ಸಂಬಂಧಿಸಿದಂತೆ ನ್ಯಾಶನಲ್ ಆಂಬಿಯೆಂಟ್ ಏರ್ ಕ್ವಾಲಿಟಿ ಸ್ಟ್ಯಾಂಡರ್ಸ್ (ಎನ್‌ಎಎಕ್ಯೂಎಸ್) ಮಾರ್ಗಸೂಚಿಯಲ್ಲಿ ತಿಳಿಸಲಾದ ಮಾನದಂಡ ಗಳನ್ನು ಮೀರಿರುವ ನಗರಗಳ ಮೇಲೆ ಕೇಂದ್ರೀಕೃತ ವಾಗಿದೆ. ಆದರೆ, ಈಗಾಗಲೇ ನಿಗದಿಪಡಿತ ಮಾನ ದಂಡಗಳನ್ನು ಅನುಸರಿಸುತ್ತಿರುವ ನಗರಗಳನ್ನೂ ಈ ಅಧ್ಯಯನಕ್ಕೆ ಒಳಪಡಿಸುವುದು ಅತ್ಯಗತ್ಯ. ಗಾಳಿಯ ಗುಣಮಟ್ಟ ಮಾನದಂಡಗಳನ್ನು ಮೀರುವ ಮುಂಚಿತವಾಗಿಯೇ ಕಾಪಾಡಿಕೊಳ್ಳುವುದು ಅಗತ್ಯ ಎಂದು ಎಚ್ಚರಿಕೆ ನೀಡಿದರು.

5 ಬೃಹತ್‌ನಗರಗಳಲ್ಲಿ ಗಾಳಿಯ ಗುಣಮಟ್ಟ ಕುಸಿತ

ಗ್ರೀನ್‌ಪೀಸ್ ಇಂಡಿಯಾದ ಸ್ಪೇರ್ ದಿ ಏರ್-2 ವರದಿಯು ವರದಿಯು ದಕ್ಷಿಣ ಭಾರತದ 10 ನಗರಗಳನ್ನು ಒಳಗೊಂಡಿದೆ. ಅವುಗಳಲ್ಲಿ ಐದು ನಗರಗಳು (ಬೆಂಗಳೂರು, ಹೈದರಾಬಾದ್, ಚೆನ್ನೈ, ವಿಜಯವಾಡ ಮತ್ತು ಪುದುಚೇರಿ) ಎನ್‌ಸಿಎಪಿ-ನ್ಯಾಶನಲ್ ಕ್ಲೀನ್ ಏರ್ ಪ್ರೋಗ್ರಾಮ್ ಅಡಿಯಲ್ಲಿ ನಿಗದಿಪಡಿಸಲಾದ ಗಾಳಿಯ ಗುಣಮಟ್ಟ ನಿರ್ಧರಿಸುವ ನಿರ್ದಿಷ್ಟ ಮಾನದಂಡಗಳನ್ನು ಸತತ ಐದು ವರ್ಷವೂ ಮೀರಿವೆ. ಈ ವರದಿಯಲ್ಲಿ ಉಲ್ಲೇಖಿಸಲಾಗಿರುವ ದಕ್ಷಿಣ ಭಾರತದ ನಗರಗಳ ಗಾಳಿಯಲ್ಲಿರುವ ಪಿಎಂ 2.5 ಮತ್ತು ಪಿಎಂ 10 ಕಣಗಳ ಪ್ರಮಾಣಕ್ಕೆ ಸಂಬಂಧಿಸಿದಂತೆ ವಾರ್ಷಿಕ ಮತ್ತು ಮಾಸಿಕ ಅಂಕಿ-ಅಂಶಗಳನ್ನು ಗಮನಿಸಿದಾಗ ಎಲ್ಲಾ ನಗರಗಳು ಡಬ್ಲ್ಯುಎಚ್‌ಒ ನಿಗದಿ ಪಡಿಸಿರುವ ಮಾನದಂಡಗಳನ್ನು ಮೀರಿರುವುದನ್ನು ಗಮನಿಸಬಹುದು. ಮಂಗಳೂರು, ಹೈದರಾ ಬಾದ್, ಕೊಚ್ಚಿ, ಅಮರಾವತಿ, ಚೆನ್ನೈ ಮತ್ತು ವಿಜಯವಾಡಗಳಲ್ಲಿ ಪಿಎಂ 10 ಕಣಗಳ ವಾರ್ಷಿಕ ಸರಾಸರಿಯು ಎನ್‌ಎಎಕ್ಯೂಎಸ್ ಮಾನದಂಡಗಳಿಗಿಂತ ಸ್ವಲ್ಪಮಟ್ಟಿಗೆ ಎಂದರೆ 1.5 ಪಟ್ಟು ಹೆಚ್ಚಾಗಿದೆ.

ಹೆಂಗಳೆಯರಲ್ಲಿ ಹರ್ಷ ಮೂಡಿಸಿದ ಗೌರಿ ಹಬ್ಬ

ಬೆಂಗಳೂರು: ನಗರದಲ್ಲಿ ಗೌರಿ ಹಬ್ಬ ಶುಕ್ರವಾರ ಅತ್ಯಂತ ಸಂಭ್ರಮದಿಂದ ನಡೆಯಿತು.

ನಗರದ ಗಲ್ಲಿ ಗಲ್ಲಿಗಳಲ್ಲಿ ಮಣ್ಣಿನ ಗೌರಿ-ಗಣೇಶನ ಮೂರ್ತಿಗಳ ಮಾರಾಟ ಎಲ್ಲೆಡೆ ಕಳೆಗಟ್ಟಿತ್ತು. ಕೆಲವರು ಗುರುವಾರ ಸಂಜೆಯೇ ಮೂರ್ತಿಗಳನ್ನು ಮನೆಗೆ ತಂದಿದ್ದರೆ, ಇನ್ನು ಕೆಲವರು ಶುಕ್ರವಾರ ಬೆಳಗ್ಗೆಯೇ ಮೂರ್ತಿಗಳನ್ನು ಮನೆಗೆ ತಂದು ಪೂಜಿಸಿದರು.

ಕಳಸ ಇಡುವ ಸಂಪ್ರದಾಯವುಳ್ಳವರು ದೇವಿಗೆ ಸಂಪ್ರದಾಯಬದ್ಧವಾಗಿ ಕಳಸವಿಟ್ಟು ಸೀರೆ-ಕುಪ್ಪಸದೊಂದಿಗೆ ಗೌರಿಯನ್ನು ಬಗೆ ಬಗೆಯ ಹೂವು, ಹಣ್ಣುಗಳಿಂದ ಅಲಂಕರಿಸಿದ್ದರು. ರಾಹುಕಾಲಕ್ಕೆ ಮುನ್ನವೇ ಮಹಾಮಂಗಳಾರತಿ ಮಾಡಿ ಗೌರಿಗೆ ಬಾಗೀನ ಅರ್ಪಿಸಿದರು. ಗಂಡನ ಮನೆಯಿಂದ ತವರು ಮನೆಗೆ ಆಗಮಿಸಿದ್ದ ಹೆಣ್ಣು ಮಕ್ಕಳಿಗೆ ಬಾಗೀನ ನೀಡಿದರು. ಸಂಜೆ ಕೂಡ ದೀಪ ಹಚ್ಚಿ ವಿದ್ಯುದ್ದೀಪಗಳಿಂದ ದೇವರ ಗುಡಿಯನ್ನು ಅಲಂಕರಿಸಿ ಆರತಿ ಬೆಳಗಿ ಮುತ್ತೈದೆಯರಿಗೆ ಅರಿಶಿನಿ-ಕುಂಕುಮದ ಬಾಗೀನ ನೀಡಲಾಯಿತು.

ಮಕ್ಕಳು, ಮಹಿಳೆಯರು ರೇಷ್ಮೆ ಬಟ್ಟೆಗಳನ್ನು ಧರಿಸಿ ನೆರೆ ಹೊರೆಯವರ ಮನೆಗಳಿಗೆ ಭೇಟಿ ನೀಡುತ್ತಿದ್ದ ದೃಶ್ಯ ಎಲ್ಲೆಡೆ ಕಂಡುಬಂತು. ಹಬ್ಬದವೆಂದರೆ ಸಿಹಿ ಅಡುಗೆಗಳು ಪ್ರಧಾನವಾಗಿರುತ್ತವೆ. ಹೀಗಾಗಿ ಕೆಲವರು ಘಮ ಘಮ ಹೋಳಿಗೆ ಮಾಡಿದರೆ, ಇನ್ನು ಕೆಲವರು ಪಾಯಸ ಇತ್ಯಾದಿಗಳೊಂದಿಗೆ ಹಬ್ಬದ ಅಡುಗೆ ಮಾಡಿ ಸವಿದರು.

ಇಂದು ಗಣೇಶ ಚತುರ್ಥಿ

ಮೊದಲ ದಿನ ಅಮ್ಮ ಗೌರಮ್ಮನನ್ನು ಪೂಜಿಸಿದರೆ, ಮರುದಿನ ಅಂದರೆ ಶನಿವಾರ ಗೌರಿಪುತ್ರ, ವಿಘ್ನ ನಿವಾರಕ ಗಣೇಶನ ಪೂಜೆ. ಹಲವರು ಗಣೇಶ ನನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಮನೆ ಮನೆಗಳಲ್ಲಿ ಕೆಲವರು ಗಣಪನನ್ನು ಪ್ರತಿಷ್ಠಾಪಿಸಿದರೆ, ರಸ್ತೆಗೊಂದರಂತೆ ಗಣೇಶೋತ್ಸವ ಸಮಿತಿಗಳಿಂದ ವಿಶೇಷವಾಗಿ ಗಣೇಶನನ್ನು ಪ್ರತಿಷ್ಠಾಪಿಸಿ ಇಡೀ ಬಡಾವಣೆಯ ಜನರನ್ನು ಸೇರಿಸಿಕೊಂಡು ಹಬ್ಬ ಆಚರಿಸಲು ಅಣಿಯಾಗಿದ್ದರು. ಹಲವೆಡೆ ವಿಶೇಷ ವೇದಿಕೆಯನ್ನು ನಿರ್ಮಿಸಲಾಗುತ್ತಿತ್ತು. ಮಣ್ಣಿನ ಗಣಪತಿ, ಪೇಪರ್ ಗಣಪತಿ ಸೇರಿದಂತೆ ಹಲವರು ಪರಿಸರ ಸ್ನೇಹಿ ಗಣಪನನ್ನು ಕೂರಿಸಲು ಮೂರ್ತಿಗಳನ್ನು ಖರೀದಿಸಿ ಕೊಂಡೊಯ್ಯುತ್ತಿ ದ್ದರು. ದೊಡ್ಡ ಮಟ್ಟದಲ್ಲಿ ಆಚರಿಸುವ ಸಂಘ ಸಂಸ್ಥೆಗಳು ಎತ್ತರದ ಪಿಒಪಿ ಮೂರ್ತಿಗಳನ್ನು ಬಾಡಿಗೆಗೆ ಖರೀದಿಸುತ್ತಿದ್ದರು.

ದೇವಾಲಯಗಳಲ್ಲಿ ವಿಶೇಷ ಪೂಜೆ: ನಗರದ ಬನಶಂಕರಿ ದೇವಿಗೆ ಗೌರಿ ಹಬ್ಬದ ಪ್ರಯುಕ್ತ ವಿಶೇಷವಾಗಿ ಹೂವಿನ ಅಲಂಕಾರ ಮಾಡಲಾಗಿತ್ತು. ಭಕ್ತರಿಗೆ ಎಂದಿನಂತೆ ಅನ್ನ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಶುಕ್ರವಾರ

ವಿವಿಧ ಗಣಪಗಳು

ನಗರದ ವಿವಿಧ ಭಾಗಗಳಲ್ಲಿ ಮಾರಾಟವಾಗುತ್ತಿರುವ ಮುದ್ದು ಮುದ್ದಾಗಿರುವ ಏಕದಂತನ ನೋಡಲು ಎರಡು ಕಣ್ಣುಗಳು ಸಾಲದು. ಮಾರುಕಟ್ಟೆಗೆ ನಾನಾ ವಿನ್ಯಾಸದ ಗಣೇಶನ ಮೂರ್ತಿಗಳು ಕಾಲಿಟ್ಟಿದ್ದು, ಭರ್ಜರಿ ವ್ಯಾಪಾರ ನಡೆಯುತ್ತಿದೆ. ಒಂದು ಕಡೆ ಶಿವನ ಅವತಾರದಲ್ಲಿ, ಮತ್ತೊಂದು ಕಡೆ ಕೃಷ್ಣನ ಅವತಾರದಲ್ಲಿರುವ ವಿಘ್ನ ವಿನಾಶಕ ಕಾಣಸಿಗುತ್ತಿದ್ದಾನೆ. ಇನ್ನೊಂದು ಕಡೆ ಅಯೋಧ್ಯೆಯ ರಾಮನ ಜೊತೆ ಇರುವ ಬಾಲಚಂದ್ರ, ಕರಗ ಹೊತ್ತು ನಿಂತಿರುವ ವಿಘ್ನೇಶ್ವರ, ಇಷ್ಟೇ ಅಲ್ಲದೇ ಬಣ್ಣಬಣ್ಣದ ಬೃಹತ್ ಆಕಾರದ ಗಣೇಶ ಭಕ್ತರನ್ನು ಸೆಳೆಯುತ್ತಿದ್ದಾನೆ. ನಗರದ ಆರ್.ವಿ.ರಸ್ತೆಯಲ್ಲಿ ಸಿದ್ದರಾಮಯ್ಯ ಅವರನ್ನು ಒಳಗೊಂಡು ಅಕ್ಕಿ ವಿತರಿಸುತ್ತಿರುವ ಗ್ಯಾರಂಟಿ ಗಣಪ ವಿಶೇಷವಾಗಿ ಗಮನ ಸೆಳೆಯುತ್ತಿದ್ದ. ಮತ್ತೊಂದೆಡೆ ಕಾರ್ಗಿಲ್ ಯುದ್ಧವನ್ನು ನೆನಪಿಸುವ ಗಣಪ ಕೂಡ ಆರ್.ವಿ.ರಸ್ತೆಯಲ್ಲಿ ವಿಶೇಷವಾಗಿತ್ತು. ಇವುಗಳನ್ನು ಮೂರ್ತಿ ತಯಾರಕ ಶ್ರೀನಿವಾಸ್ ಅವರು ಸಿದ್ಧಪಡಿಸಿದ್ದಾರೆ.

ಮಾರುಕಟ್ಟೆಯಲ್ಲಿ ಹಬ್ಬದ ಖರೀದಿ ಭರಾಟೆ

ಗೌರಿ -ಗಣೇಶ ಹಬ್ಬವನ್ನು ಸಂಭ್ರಮ - ಸಡಗರದಿಂದ ಆಚರಿಸಲು ನಗರದ ಜನತೆ ಸಜ್ಜಾಗುತ್ತಿದ್ದು, ಹಬ್ಬಕ್ಕೆ ಬೇಕಾಗಿರುವ ವಿಗ್ರಹ, ಹೂವು, ಹಣ್ಣು, ಪೂಜಾ ಸಾಮಗ್ರಿಗಳು, ಅಗತ್ಯ ವಸ್ತುಗಳ ಖರೀದಿ ಭರಾಟೆ ಜೋರಾಗಿತ್ತು.

ಕೆ.ಆರ್.ಮಾರುಕಟ್ಟೆ, ಚಿಕ್ಕಗಡಿಯಾರ, ಶಿವಾಜಿನಗರ ಮಾರುಕಟ್ಟೆ, ಸೇರಿದಂತೆ ಸಗಟು ಮಾರುಕಟ್ಟೆಯಾದ ಆರ್ ಎಂಸಿ ಮಾರುಕಟ್ಟೆಗಳಲ್ಲಿಂದು ಜನರು ಪೂಜಾ ಸಾಮಗ್ರಿಗಳ ಖರೀದಿಯಲ್ಲಿ ಮಗ್ನರಾಗಿರುವುದು ಕಂಡುಬಂತು. ಹಣ್ಣು-ತರಕಾರಿ, ಹೂ, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದರೂ ಗ್ರಾಹಕರು ಖರೀದಿಗೆ ಮುಗಿ ಬಿದ್ದಿದ್ದಾರೆ. ಕನಕಾಂಬರ, ಮಲ್ಲಿಗೆ, ಕಾಕಡ, ಸೇವಂತಿಗೆ ಮತ್ತು ಚೆಂಡುಹೂ ದರ ತುಸು ಹೆಚ್ಚಾಗಿದೆ. ಮತ್ತೊಂದೆಡೆ, ಜನರು ಪರಿಸರ ಸ್ನೇಹಿ ಗಣಪತಿ ಖರೀದಿಗೆ ಒಲವು ತೋರಿದ್ದರು.

ಸಮಾಚಾರ ಸಣ್ಣದಲ್ಲ

ಗೌರಿ-ಗಣೇಶ ಹಬ್ಬ: ಸಂಚಾರ ದಟ್ಟಣೆ

ಬೆಂಗಳೂರು: ಗೌರಿ ಗಣೇಶ ಹಬ್ಬದ ಪ್ರಯುಕ್ತ ಸಾಲು ಸಾಲು ರಜೆ ಇರುವುದರಿಂದ ಜನರು ತಮ್ಮ ತಮ್ಮ ಊರುಗಳಿಗೆ ತೆರಳಿದ ಪರಿಣಾಮ ನಗರದಲ್ಲಿ ಹಲವೆಡೆ ಸಂಚಾರ ದಟ್ಟಣೆ ಉಂಟಾಗಿತ್ತು. ಗಣೇಶ

ಹಬ್ಬದ ಪ್ರಯುಕ್ತ ಶನಿವಾರ ಮತ್ತು ಭಾನುವಾರ ರಜೆ ಇರುವುದರಿಂದ ತಮ್ಮ ಊರುಗಳಿಗೆ ತೆರಳಲು ಬಸ್ ನಿಲ್ದಾಣಗಳಲ್ಲಿ ಜನಸಂದಣಿ ಹೆಚ್ಚಾಗಿತ್ತು. ಇನ್ನೂ ಕೆಲವರು ಪ್ರವಾಸಿತಾಣ, ರೆಸಾರ್ಟ್ ಹೊರರಾಜ್ಯಗಳಿಗೆ ಕುಟುಂಬ ಸಮೇತ ತೆರಳುವವರಿಗೇನೂ ಕಡಿಮೆ ಇರಲಿಲ್ಲ. ಒಟ್ಟಾರೆ ಶುಕ್ರವಾರ ಸಂಜೆಯಿಂದಲೇ ಸಂಚಾರ ದಟ್ಟಣೆ ನಿಯಂತ್ರಿಸುವಲ್ಲಿ ಸಂಚಾರಿ ಪೊಲೀಸರು ಹೈರಾಣಾದರು. ಬೀದರ್‌ನಿಂದ ಹಿಡಿದು ಮಂಗಳೂರು, ಚಾಮರಾಜನಗರದವರೆಗೆ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೆ. ತಮಿಳುನಾಡು, ಕೇರಳ, ಆಂಧ್ರಪ್ರದೇಶ ರಾಜ್ಯಗಳಿಗೂ ವಿಶೇಷ ಬಸ್ ವ್ಯವಸ್ಥೆ ಕಲ್ಪಿಸಲಾಗಿತ್ತು. ಹಬ್ಬದ ಖರೀದಿಗೆ ಹೆಚ್ಚಿನ ಜನರು ರಸ್ತೆಗೆ ಬಂದಿರುವುದರಿಂದ ನಗರದ ಕೆಆರ್ ಮಾರುಕಟ್ಟೆ, ಲಾಲ್‌ಬಾಗ್, ವೈಟ್‌ಫೀಲ್ಡ್, ಗಾಂಧಿ ಬಜಾರ್, ಮಲ್ಲೇಶ್ವರ ಸೇರಿದಂತೆ ಹಲವು ಬಡಾವಣೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಜನರು ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ಮಾರುಕಟ್ಟೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು, ವಾಹನ ದಟ್ಟಣೆಯೂ ಹೆಚ್ಚಿತ್ತು. ಪ್ರಮುಖ ರಸ್ತೆಗಳಲ್ಲಿ ವಾಹನಗಳು ನಿಧಾನಗತಿಯಲ್ಲಿ ಸಾಗಿದವು. ಮೆಜೆಸ್ಟಿಕ್, ಮೈಸೂರು ರಸ್ತೆ, ಕೆ.ಆರ್.ಪುರಂನ ಐಟಿಐ ಗೇಟ್, ಆನಂದರಾವ್ ಸರ್ಕಲ್‌ನಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಪ್ರಯಾಣಿಕರು, ಸವಾರರು ಪರದಾಡಬೇಕಾಯಿತು.

10 ಕೆಜಿ ಅಕ್ಕಿ ಕೊಡುವ ಯೋಜನೆ ಜಾರಿಗೊಳಿಸಿ

ಬೆಂಗಳೂರು: ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ. ಅಕ್ಕಿ ಕೊಡುವ ಯೋಜನೆಯನ್ನು ಕೂಡಲೇ ಜಾರಿಗೊಳಿಸುವಂತೆ ಕರ್ನಾಟಕ ರಾಜ್ಯ ಸರಕಾರಿ

ಪಡಿತರ ವಿತರಕರ ಸಂಘ ಒತ್ತಾಯಿಸಿದೆ. ಸಂಘದ ಅಧ್ಯಕ್ಷ ಟಿ.ಕೃಷ್ಣಪ್ಪ ಅವರು ಪ್ರಕಟಣೆ ಮೂಲಕ ಒತ್ತಾಯಿಸಿದ್ದು, ರಾಜ್ಯದಲ್ಲಿ 1.25 ಕೋಟಿ ಪಡಿತರ ಚೀಟಿ ಪೈಕಿ 4.45 ಕೋಟಿ ಸದಸ್ಯರು ಪಡಿತರ ಪಡೆಯುತ್ತಿದ್ದಾರೆ. ಸರಕಾರದ ಗ್ಯಾರಂಟಿ ಯೋಜನೆಗಳಲ್ಲಿ 10 ಕೆ.ಜಿ. ಅಕ್ಕಿ ಕೊಡುವ ಅನ್ನಭಾಗ್ಯ ಯೋಜನೆ ಪ್ರಮುಖವಾಗಿತ್ತು. ಆದರೆ ಪ್ರಸ್ತುತ 5 ಕೆ.ಜಿ ಅಕ್ಕಿ ಕೇಂದ್ರ ಸರಕಾರ ನೀಡುತ್ತಿದ್ದು, ರಾಜ್ಯ ಸರಕಾರದ ವತಿಯಿಂದ ಸಮನಾದ ಹಣವನ್ನು ಮಾತ್ರ ನೀಡಲಾಗುತ್ತಿದೆ. ಅಲ್ಲದೆ ಸದರಿ ಡಿಬಿಟಿ ಹಣವನ್ನು ಸಾರ್ವಜನಿಕರಿಗೆ ಸಕಾಲದಲ್ಲಿ ಸಮರ್ಪಕವಾಗಿ ರವಾನೆಯಾಗುತ್ತಿಲ್ಲ ಎಂಬುದು ಸಾರ್ವಜನಿಕರ ಅಳಲಾಗಿದೆ. ನಾಗರೀಕರು ಸಿದ್ದರಾಮಯ್ಯ ಅವರನ್ನು ಅನ್ನರಾಮಯ್ಯ ಎಂದು ಸ್ಮರಿಸುತ್ತಿದ್ದಾರೆ. ಇಂತಹ ವಿಷಯವನ್ನು ಮರೆತು ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಬಿಟ್ಟು ಕೇಂದ್ರ ಸರಕಾರ ನೀಡುವ 5 ಕೆ.ಜಿ. ಅಕ್ಕಿಯನ್ನು ತಿರಸ್ಕರಿಸುವ ಮನೋಭಾವ ಬಡ ಜನತೆಯ ಹೊಟ್ಟೆಯ ಮೇಲೆ ಬರೆ ಎಳೆದಂತೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಭಾರತೀಯ ಸಂಸ್ಕೃತಿ ಬಗ್ಗೆ ಯುವ ಸಮೂಹಕ್ಕೆ ಅರಿವು ಮೂಡಿಸಿ

ಇನ್ಫೋಸಿಸ್ ಫೌಂಡೇಶನ್‌ನ ಅಧ್ಯಕ್ಷೆ ಸುಧಾಮೂರ್ತಿ ಅಭಿಮತ

ಗೌರಿ, ಗಣೇಶ ಹಬ್ಬದ ಪ್ರಯುಕ್ತ ನಿಕಟಪೂರ್ವ ಬಿಬಿಎಂಪಿ ಸದಸ್ಯೆ ಎಚ್.ಸಿ.ನಾಗರತ್ನ ರಾಮಮೂರ್ತಿ ಅವರು ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ, ಬಿಜೆಪಿ ಮಹಿಳಾ ಮುಖಂಡೆ ಮಾಳವಿಕಾ ಅವಿನಾಶ್, ತಾರಾ ಅನುರಾಧ ಅವರು ಮಹಿಳೆಯರಿಗೆ ಬಾಗಿನ ವಿತರಣೆ ಮಾಡಿದರು.

ಬೆಂಗಳೂರು: ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಹಬ್ಬ ಗೌರಿ ಹಬ್ಬ. ಮಹಿಳೆಯರಿಗೆ ಗೌರಿ ಹಬ್ಬದ ಸಂದರ್ಭದಲ್ಲಿ ತವರಿನಿಂದ ಬಾಗಿನ ನೀಡಲಾಗುತ್ತದೆ. ಈ ಹಬ್ಬದ ಪ್ರತೀಕವಾಗಿ ಎಲ್ಲರೂ ಸಂಸ್ಕೃತಿ, ಪದ್ಧತಿ, ಪಾರಂಪರಿಕ ಸಂಪ್ರದಾಯವನ್ನು ಉಳಿಸಬೇಕು. ಇಂದಿನ ಯುವ ಸಮೂಹಕ್ಕೆ ಅವುಗಳನ್ನು ತಿಳಿಸಬೇಕು ಎಂದು ಇನ್ಫೋಸಿಸ್ ಫೌಂಡೇಶನ್‌ನ ಅಧ್ಯಕ್ಷೆ, ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ತಿಳಿಸಿದರು.

ಜಯನಗರ ಶಾಸಕ ಸಿ.ಕೆ.ರಾಮಮೂರ್ತಿ ಅವರ ಮನೆಯಲ್ಲಿ ಗೌರಿ, ಗಣೇಶ ಹಬ್ಬದ ಪ್ರಯುಕ್ತ ಗೌರಿ ಪೂಜೆ ಮತ್ತು 500 ಸುಮಂಗಲಿಯರಿಗೆ ಬಾಗಿನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೋಮಾರಿಗಳಾಗದೇ ಎಲ್ಲರೂ ಕಾಯಕದ ಮಹತ್ವ ಅರಿತು, ದುಡಿದು, ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಶಾಸಕ ಸಿ.ಕೆ.ರಾಮಮೂರ್ತಿ ಮಾತನಾಡಿ, ಜಯನಗರ ವಿಧಾನಸಭಾ ಕ್ಷೇತ್ರ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ, ಸಂಪ್ರದಾಯ ಸಾಂಸ್ಕೃತಿಕ ಕೇಂದ್ರವಾಗಿದೆ. ಜಯನಗರ ವಿಧಾನಸಭಾ ಕ್ಷೇತ್ರದ ಜನರು ನನ್ನ ಕುಟುಂಬದಂತೆ ಎಲ್ಲರೂ ಒಟ್ಟಾಗಿ ಹಬ್ಬದ ಆಚರಣೆ ಮಾಡಬೇಕು ಎಂಬ ಉದ್ದೇಶದಿಂದ ಗೌರಿ ಹಬ್ಬದಲ್ಲಿ ಮಹಿಳೆಯರಿಗೆ ತವರಿನಿಂದ ಬಾಗಿನ ಕೊಡುವಂತೆ ನನ್ನ ಮನೆಯಿಂದ ಮಹಿಳೆಯರಿಗೆ ಬಾಗಿನ ನೀಡಲಾಗುತ್ತಿದೆ. ಗೌರಿ ವ್ರತ ಆಚರಣೆಯಿಂದ ಎಲ್ಲರ ಬಾಳಿನಲ್ಲಿ ಸುಖ, ನೆಮ್ಮದಿ, ಸಂಪತ್ತು ಲಭಿಸುತ್ತದೆ ಎಂಬ ನಂಬಿಕೆ ಇದೆ ಎಂದರು.

ಹತ್ತು ದಿನದ ಕರಕುಶಲ ಮೇಳಕ್ಕೆ ಚಾಲನೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಸೆ. 15ರ ವರೆಗೆ ಹತ್ತು ದಿನ ನಡೆಯಲಿರುವ ಕರಕುಶಲ ಮೇಳಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಗೌರಿ, ಗಣೇಶ ಹಬ್ಬದ ವಿಶೇಷಗಳು, ಬಾಗೀನ ಮತ್ತಿತರೆ ವಸ್ತುಗಳು ಲಭ್ಯವಿದೆ. ಹೊಸ ಲೋಕವೇ ಅನಾವರಣಗೊಂಡಿದೆ. ಕುಶಲ ಕರ್ಮಿಗಳ ಅಸಾಧಾರಣ ಕೈಚಳಕದಿಂದ ಮೂಡಿ ಬಂದ ವೈವಿಧ್ಯಮಯ ವಸ್ತ್ರ ವಡವೆ, ವಿನೂತನ ವಸ್ತು ಮಾರಾಟ ಮಾಡಲಾಗುತ್ತಿದೆ. ಇಲ್ಲಿ ಮಧ್ಯವರ್ತಿಗಳಿಲ್ಲದೇ ನೇರ ವಾಗಿ ಕುಶಲ ಕರ್ಮಿಗಳಿಂದ ಗ್ರಾಹಕರಿಗೆ ತಲುಪಿಸಲಾಗುತ್ತಿದೆ. ವಿಭಿನ್ನವಾದ ದೇವರ ವಿಗ್ರಹಗಳು, ಲಾಫಿಂಗ್ ಬುದ್ಧ, ಕುಂಬಾರಿಕೆಯಲ್ಲಿ ಮೂಡಿ ಬಂದ ಬಣ್ಣ ಬಣ್ಣದ ವಸ್ತುಗಳು, ಸೀರೆಗಳು, ಕಂತೆರ್ಗಳನ್ನೊಳಗೊಂಡ ಒಂದೊಂದು ಮಳಿಗೆಯೂ ವಿಭಿನ್ನವಾಗಿವೆ. ಬೆಂಗಳೂರು ನಗರದ ನಾಗರಿಕರನ್ನು ಮೇಳ ಕೈಬೀಸಿ ಕರೆಯುತ್ತಿದೆ. ಕಲಾವಿದೆ ಮಂದಾರ ದೇವರಾಜ್ ಮೇಳಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರತಿಯೊಂದು ವಸ್ತು ಅಮೂಲ್ಯ, ಇವುಗಳನ್ನು ಮನೆಗೆ ಕೊಂಡೊಯ್ಯುವುದು ನಿಜಕ್ಕೂ ಸಂಭ್ರಮ ತರುವ ವಿಷಯ. ಮಹಿಳೆಯರು, ಮಕ್ಕಳು, ಮನೆ ಮಂದಿ ಮಳಿಗೆಗೆ ಆಗಮಿಸಿ ಖರೀದಿಯ ಸಡಗರದಲ್ಲಿ ಭಾಗಿಯಾಗಬೇಕು ಎಂದರು.

ಹಬ್ಬದ ವಿಶೇಷಗಳು, ಬಾಗೀನ ಮತ್ತಿತರೆ ವಸ್ತುಗಳು ಲಭ್ಯ

ವೈವಿಧ್ಯಮಯ ವಸ್ತ್ರ ವಡವೆ, ವಿನೂತನ ವಸ್ತುಗಳ ಮಾರಾಟ

ಸಾವಿತ್ರಿಬಾಯಿ, ಜ್ಯೋತಿಬಾ ಫುಲೆ ಪ್ರಶಸ್ತಿಗೆ ಹಡಪದ ಆಯ್ಕೆ

ಬೆಂಗಳೂರು : ಕನ್ನಡ ಸಂಘರ್ಷ ಸಮಿತಿ ಕೊಡಮಾಡುವ ಸಾವಿತಿಬಾಯಿ ಫುಲೆ ಹಾಗೂ ಜ್ಯೋತಿಬಾ ಫುಲೆ ಪ್ರಶಸ್ತಿಗೆ ನಿವೃತ್ತ ಶಿಕ್ಷಕ ಹಾಗೂ ಕವಿ ಚಂದ್ರಶೇಖರ ಹಡಪದ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ಐದು ಸಾವಿರ ರು. ನಗದು ಒಳಗೊಂಡಿದೆ. ಸೆ.8 ರಂದು ಬೆಳಗ್ಗೆ 11 ಗಂಟೆಗೆ ನರಸಿಂಹರಾಜ ಕಾಲೋನಿಯ ಬಿ.ಎಂ.ಶ್ರೀ. ಕಲಾ

ಭವನದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಹಡಪದ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು.ಜಾನಪದ ಪರಿಷತ್ತಿನ ಅಧ್ಯಕ್ಷ ಪ್ರೊ. ಹಿ.ಚಿ. ಬೋರಲಿಂಗಯ್ಯ ಉದ್ಘಾಟಿಸಲಿದ್ದು, ಹಿರಿಯ ಕವಯತ್ರಿ ಡಾ. ಕೆ. ಷರೀಫಾ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ಎ.ಎಸ್ .ನಾಗರಾಜಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಸಮಿತಿಯ ರಾಮಣ್ಣ ಎಚ್. ಕೋಡಿಹೊಸಹಳ್ಳಿ ಅವರು ಉಪಸ್ಥಿತರಿರುವರು ಎಂದು ಸಮಿತಿ ತಿಳಿಸಿದೆ.

ಪ್ರತಿ ಶುಕ್ರವಾರ
ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್

ಗೌರಿ ಹಬ್ಬದ ದಿನ ದುರಂತ: ಪ್ರತ್ಯೇಕ ಅಪಘಾತದಲ್ಲಿ 13 ಸಾವು

ಬೆಂಗಳೂರು: ರಾಜ್ಯದಲ್ಲಿ ಗೌರಿ ಹಬ್ಬದ ಸಂಭ್ರಮ ದಿನದಂದೇ ರಾಜ್ಯದ ಹಲವು ಕಡೆ ರಸ್ತೆ ಅಪಘಾತಗಳು ಸಂಭವಿಸಿದ್ದು ಒಟ್ಟು 13 ಜನರು ಮೃತಪಟ್ಟಿದ್ದಾರೆ.

ವಿಜಯಪುರ, ಬಾಗಲಕೋಟೆ, ರಾಮನಗರ, ಮಂಗಳೂರಿನಲ್ಲಿ ರಸ್ತೆ ಅಪಘಾತಗಳು ಸಂಭವಿಸಿವೆ. ಮೃತರ ಕುಟುಂಬಸ್ಥರ ಪಾಲಿಗೆ ಕರಾಳ ದಿನವಾಗಿದೆ. ರಾಜ್ಯದಲ್ಲಿ ಇತ್ತೀಚಿಗೆ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಆತಂಕ ಮೂಡಿಸಿದ್ದು, ಗೌರಿ ಹಬ್ಬದ ದಿನದಂದು ವಿವಿಧ ರಸ್ತೆ ದುರಂತಗಳಲ್ಲಿ 13 ಮಂದಿ ಮೃತಪಟ್ಟಿದ್ದಾರೆ.

ರಾಯಚೂರು: ಟಂಟಂ ವಾಹನ ಹಾಗೂ ಲಾರಿ ಮುಖಾಮುಖಿ ಡಿಕ್ಕಿ ಹೊಡೆದ ಘಟನೆ ರಾಯಚೂರು ಹೈದರಾಬಾದ್ ಹೆದ್ದಾರಿಯಲ್ಲಿ ನಡೆದಿದೆ. ಓವರ್ ಟೇಕ್ ಮಾಡುವ ವೇಳೆ ಎದುರಿಗೆ ಬರುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಲಾರಿಯಲ್ಲಿದ್ದ ಕ್ಲೀನರ್ ಸಾವನ್ನಪ್ಪಿದ್ದಾನೆ. ಅಪಘಾತದ ವೇಳೆ ತರಕಾರಿ ಲಾರಿ ಸಂಪೂರ್ಣ ನುಜ್ಜುಗುಜ್ಜಾಗಿದೆ.

ಟಂಟಂ ವಾಹನ ಚಾಲಕರು, ಕ್ಲೀನರ್ ಸಣ್ಣಪುಟ್ಟ ಗಾಯಗಳಿಂದ ಪಾರಾಗಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮನಗರ: ಲಾರಿಗೆ ಬೈಕ್ ಡಿಕ್ಕಿ ಹೊಡೆದು ಮೂವರ ಸಾವನ್ನಪ್ಪಿದ ಘಟನೆ ರಾಮನಗರ ತಾಲೂಕಿನ ಮಾಯಗಾನಹಳ್ಳಿ ಬಳಿ ನಡೆದಿದೆ. ಘಟನೆಯಲ್ಲಿ ಓರ್ವನಿಗೆ ಗಂಭೀರ ಗಾಯವಾಗಿದೆ. ಮೃತರನ್ನು ಗುರುಮೂರ್ತಿ (39), ಶೇಕ್ ಹಫೀಜ್ (45), ವೆಂಕಟೇಶ್ (50) ಎಂದು ಗುರುತಿಸಲಾಗಿದೆ. ಮೃತ ರೆಲ್ಲರೂ ಗಾರೆ ಕೆಲಸವರಾಗಿದ್ದು, ಗಾಯಾಳು ಹನುಮಂತಗೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗು ತ್ತಿದೆ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇಯ ಸರ್ವೀಸ್ ರಸ್ತೆಯಲ್ಲಿ ಈ ಅವಘಡ ಸಂಭವಿಸಿದೆ. ರಾಮನಗರದಿಂದ ಬಿಡದಿ ಕಡೆಗೆ ಹೋಗುತ್ತಿದ್ದಾಗ ಬೈಕ್ ಲಾರಿಗೆ ಡಿಕ್ಕಿ ಹೊಡೆದಿದೆ. ಒಂದೇ ಬೈಕ್ ನಲ್ಲಿ ನಾಲ್ವರು ಪ್ರಯಾಣ ಮಾಡುತ್ತಿದ್ದರು. ಈ ವೇಳೆ ಲಾರಿ ಅಡ್ಡ ಬಂದ ಹಿನ್ನಲೆ ಬೈಕ್ ಡಿಕ್ಕಿ ಹೊಡೆದು ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಉತ್ತರ ಕನ್ನಡ: ಯಲ್ಲಾಪುರ ತಾಲೂಕಿನ ಅರಬೈಲ್‌ನ ರಾಷ್ಟ್ರೀಯ ಹೆದ್ದಾರಿ 63 ರಲ್ಲಿ ಸರಣಿ ಅಪಘಾತ ಸಂಭವಿಸಿದೆ. ಸಿಮೆಂಟ್ ತುಂಬಿದ್ದ ಲಾರಿ ನಿಯಂತ್ರಣ ತಪ್ಪಿ ಕಂಟೈನರ್ ಹಾಗೂ ಮಂಗಳೂರಿಗೆ ತೆರಳುತ್ತಿದ್ದ ಬಸ್‌ನ ಹಿಂಭಾಗಕ್ಕೆ ಡಿಕ್ಕಿ ಹೊಡೆದಿದೆ. ಮಂಗಳೂರಿಗೆ ತೆರಳುತ್ತಿದ್ದ ರೇಷ್ಮಾ ಹೆಸರಿನ ಬಸ್ ಹಿಂಬದಿಗೆ ಡಿಕ್ಕಿ ಹೊಡೆದಿದೆ.

ಲಾರಿ ಹಿಂಭಾಗದಿಂದ ಡಿಕ್ಕಿ ಹೊಡೆದ ಪರಿಣಾಮ ಬಸ್ ಚಾಲಕ ನಿಯಂತ್ರಣ ತಪ್ಪಿ ಮುಂಭಾಗದಲ್ಲಿ ಬರುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದ್ದಾನೆ. ಬಸ್ ನಲ್ಲಿದ್ದ ಚಾಲಕ ಅಯೂಬ್‌ಗೆ ಗಾಯವಾಗಿದೆ. ಯಲ್ಲಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಗಲಕೋಟೆ: ಎರಡು ಬೈಕ್‌ಗಳ ನಡುವೆ ಡಿಕ್ಕಿಯಾದ ಪರಿಣಾಮ ಮೂವರ ಸಾವನ್ನಪ್ಪಿದ ಘಟನೆ ಬಾಗಲಕೋಟೆಯ ನವನಗರದಲ್ಲಿ ತಡರಾತ್ರಿ ನಡೆದಿದೆ. ಸ್ಕೂಟಿಯಲ್ಲಿದ್ದ ಗೆಳತಿಯರಿಬ್ಬರು ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಇನೊಂದು ಬೈಕ್‌ನಲ್ಲಿದ್ದ ಇಬ್ಬರು ಯುವಕರ ಪೈಕಿ ಒಬ್ಬರು ಸಾವನ್ನಪ್ಪಿದ್ದು, ಮತ್ತೊಬ್ಬನಿಗೆ ಗಾಯವಾಗಿದೆ.

ನವನಗರದ ಅಬಕಾರಿ ಇಲಾಖೆ ಸಮೀಪದಲ್ಲಿ ನಡೆದಿರುವ ಘಟನೆ ಇದಾಗಿದೆ. ಪ್ರೊಫೆಸರ್ ಕೃತಿಕಾ ಒಂಟಕುದರಿ (32), ಸ್ನೇಹಿತೆ ರಜನಿ ಒಂಟಕುದರಿ (34), ಅಭಿಷೇಕ ಬಂಡಿ ವಡ್ಡರ ಮೃತರು ಎಂದು ಗುರುತಿಸಲಾಗಿದೆ.



ಮಂಗಳೂರು: ಬೈಕ್ ಅಪಘಾತದಲ್ಲಿ ಸವಾರರಿಬ್ಬರು ಸಾವನ್ನಪ್ಪಿದ ಘಟನೆ ಮಂಗಳೂರು ಹೊರವಲಯದ ಯೆಯ್ಯಾಡಿಯ ಹರಿಪದವು ಎಂಬಲ್ಲಿ ನಡೆದಿದೆ. ಉಪ್ಪಿನಂಗಡಿಯ ಚೇತನ್ (24) ಮತ್ತು ಕೋಡಿಕಲ್‌ನ ಕಾಶೀನಾಥ್ (17) ಮೃತ ದುರ್ದೈವಿಗಳು.

ಲಾರಿಯೊಂದಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋದಾಗ ಬೈಕ್ ನಿಯಂತ್ರಣ ತಪ್ಪಿದೆ. ಬೈಕ್‌ನಿಂದ ಬಿದ್ದು ಸವಾರರು ಮೃತ ಪಟ್ಟಿದ್ದಾರೆ. ಅಪಘಾತದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಜಾತ್ರೆಗೆ ಬಂದವರು ಮಸಣ ಸೇರಿದರು

ವಿಜಯಪುರ: ಜಾತ್ರೆಗೆಂದು ಬಂದವರು ಅಪಘಾತದಲ್ಲಿ ಸಾವನ್ನಪ್ಪಿದ ಘಟನೆ ಮುದ್ದೇ ಬಿಹಾಳ ತಾಲೂಕಿನ ಕುಂಟೋಜಿ ಗ್ರಾಮದ ಹೊರವಲಯದಲ್ಲಿ ಸಂಭವಿಸಿದೆ. ಬೈಕ್ ಸವಾರ ವ್ಹೀಲಿಂಗ್ ಮಾಡಿದ ಪರಿಣಾಮ ಪಾದಚಾರಿಗಳ ಮೇಲೆ ಪಲ್ಸರ್ 200 ಸಿಸಿ ಬೈಕ್ ಹರಿದಿದೆ. ಅಪಘಾತದಲ್ಲಿ ನಾಲ್ವರು ಯುವಕರು ಸಾವನ್ನ ಪ್ಪಿದ್ದಾರೆ. ಮೂವರ ಸ್ಥಿತಿ ಗಂಭೀರವಾಗಿದೆ. ಗುರುವಾರ ರಾತ್ರಿ 11.30ಕ್ಕೆ ನಡೆದ ಘಟನೆ ಇದಾಗಿದೆ. ಅನಿಲ ಖೈನೂರ (23), ನಿಂಗರಾಜ್ ಚೌಧರಿ (ಬೈಕ್ ಸವಾರ) (22), ಕುಮಾರ ಪ್ಯಾಟಿ (18), ರಾಯಪ್ಪ ಬಾಗೇವಾಡಿ (24) ಮೃತರು. ಶಾಹಿದ್ ಹುನಗುಂದ, ಪ್ರಶಾಂತ ಕುರುಬಗೌಡರ್, ಹನುಮಂತ ಕುರುಬಗೌಡರ್ ಸ್ಥಿತಿ ಚಿಂತಾಜನಕ ವಾಗಿದೆ. ಗಾಯಾಳುಗಳನ್ನು ಬಾಗಲಕೋಟೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಭ್ರೂಣಹತ್ಯೆ: ಆರೋಪಿಗಳಿಗೆ ನ್ಯಾಯಾಂಗ ಬಂಧನ

ಪಾಂಡವಪುರ: ಪಟ್ಟಣದ ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ನಡೆಯುತ್ತಿದ್ದ ಹೆಣ್ಣುಭ್ರೂಣ ಹತ್ಯೆ ಪ್ರಕರಣ ಹಾಗೂ ದೇವೇಗೌಡನಕೊಪ್ಪಲಿನ ಭ್ರೂಣಹತ್ಯೆ ಪ್ರಕರಣ ಸಂಬಂಧ ಪಾಂಡವಪುರ ಪೊಲೀಸರು ಬಂಧಿಸಿರುವ 10 ಆರೋಪಿಗಳನ್ನು ನ್ಯಾಯಾಂಗದ ವಶಕ್ಕೆ ಒಪ್ಪಿಸಲಾಗಿದೆ. ಭ್ರೂಣಹತ್ಯೆ ಪ್ರಕರಣಗಳಲ್ಲಿ 31 ಮಂದಿ ಆರೋಪಿಗಳಿದ್ದು, ಈವರೆಗೆ 27 ಮಂದಿಯನ್ನು ಬಂಧಿಸಿ ನ್ಯಾಯಾಂಗದ ವಶಕ್ಕೆ ನೀಡಲಾಗಿದೆ. ಉಳಿದ ನಾಲ್ವರಿಗಾಗಿ ಪತ್ತೆ ಕಾರ್ಯ ನಡೆಯುತ್ತಿದೆ. ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ನಡೆದ ಭ್ರೂಣ ಹತ್ಯೆ ಪ್ರಕರಣದಲ್ಲಿ ಮಾತ್ರ 24 ಆರೋಪಿಗಳಿದ್ದು, ಈ ಪೈಕಿ 23 ಮಂದಿ ಯನ್ನು ಬಂಧಿಸಲಾಗಿದೆ. ಒಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ. ದೇವೇಗೌಡನಕೊಪ್ಪಲು ಪ್ರಕರಣದ ಏಳು ಆರೋಪಿಗಳ ಪೈಕಿ ನಾಲ್ವರನ್ನು ಬಂಧಿಸಲಾಗಿದೆ. ಉಳಿದ ಮೂವರು ತಲೆಮರೆಸಿಕೊಂಡಿದ್ದಾರೆ.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರ್.ಸಿ.ಹೆಚ್. ಘಟಕ ಜಿಲ್ಲಾ ಆಸ್ಪತ್ರೆ ಆವರಣ, ಅನಂತಪುರ ರಸ್ತೆ , ಬಳ್ಳಾರಿ ದೂರವಾಣಿ: 08392-273739.
ಸಂಖ್ಯೆ:ಎನ್.ಹೆಚ್.ಎಂ./ಆರ್.ಸಿ.ಹೆಚ್/300/2024-25 ದಿನಾಂಕ: 05.09.2024
ಟೆಂಡರ್ ಪ್ರಕಟಣೆ
2024-25ನೇ ಸಾಲಿನಲ್ಲಿ ಪಿ.ಎಂ. ಅಭೀಮ್ ಕಾರ್ಯಕ್ರಮದ ಅನುದಾನದಲ್ಲಿ 12 ನಮ್ಮ ಕ್ಲಿನಿಕ್‌ಗಳಿಗೆ ಔಷಧಿಗಳನ್ನು ಖರೀದಿಸಲು ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000ರ ಮೇರೆಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ, ಟೆಂಡರ್‌ನಲ್ಲಿ ದಾಸ್ತವೇಜುಗಳನ್ನು ಇಂದೀಕರಿಸಲು ಪ್ರಾರಂಭಿಸುವ ದಿನಾಂಕ: 06.09.2024 ಕೊನೆಯ ದಿನಾಂಕ: 20.09.2024 ಸಮಯ ಸಂಜೆ: 05.00 ಗಂಟೆಯ ವರೆಗೆ, ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಮೊತ್ತ ರೂ.28,80,000/- ಇ.ಎಂ.ಡಿ. ಮೊತ್ತ ರೂ.57,600/- ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ರಲ್ಲಿ ಪರಿಶೀಲಿಸಿ.
ಸಹಿ/-ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/422/ಕೆಎಸ್‌ಎಂಸಿಎ/2024-25

ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ. ತುಮಕೂರು-572 103,
ಸಂಖ್ಯೆ:ತುವಿ:ಅ.ವಿ:ಅ.ಉ.ನೇ:2024-25/2059 ದಿನಾಂಕ: 05.09.2024
ಅಧಿಸೂಚನೆ
ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿ ತರಗತಿಗಳಿಗೆ ವಿಷಯವಾರು ಬೋಧನೆ ಮಾಡಲು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಸಂಬಂಧ ಯು.ಜಿ.ಸಿ. ನಿಯಮಾನುಸಾರ ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖೇನ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ವಿಷಯಗಳು: ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಸಂಸ್ಕೃತ, ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಪತ್ರಿಕೋದ್ಯಮ, ರಾಜ್ಯಶಾಸ್ತ್ರ, ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣೆ, ಸಮಾಜಕಾರ್ಯ, ಮನೋವಿಜ್ಞಾನ, ಗ್ರಂಥಾಲಯ & ಮಾಹಿತಿ ವಿಜ್ಞಾನ, ಪರಿಸರ ವಿಜ್ಞಾನ, ದೈಹಿಕ ಶಿಕ್ಷಣ, ವಿದ್ಯುನ್ಮಾನ, ಗಣಕ ವಿಜ್ಞಾನ, BCA, BCA Data Science, B.Voc, ಸೂಕ್ಷ್ಮಜೀವಶಾಸ್ತ್ರ, ಜೈವಿಕ ತಂತ್ರಜ್ಞಾನ, ಜೀವರಸಾಯನಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ, ಭೌತಶಾಸ್ತ್ರ, ಸಸ್ಯಶಾಸ್ತ್ರ ಮತ್ತು ರಸಾಯನಶಾಸ್ತ್ರ.
ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಟನಿಲಯದ ವೆಬ್‌ಸೈಟ್ www.tumkuruniversity.ac.in ರಿಂದ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ಅಭ್ಯರ್ಥಿಗಳು ಆನ್‌ಲೈನ್ ಮುಖೇನ ದಿನಾಂಕ:18.09.2024 ರ ಒಳಗಾಗಿ ಅರ್ಜಿಗಳನ್ನು ಸಲ್ಲಿಸುವುದು.
ಸಹಿ/-ಉಪ ಕುಲಸಚಿವರು,
(ಅಭಿವೃದ್ಧಿ ವಿಭಾಗ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಜಿಲ್ಲಾಡಳಿತಭವನ, ಬೀರಸಂದ್ರ, ಚಪ್ಪರದಕಲ್ಲು, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110.
Ph. No.: 08029781051, Email I'd: ceoruralzp5@gmail.com
ಸಂಖ್ಯೆ: ಬೆಂಗ್ರಾಜಿಪಂ/ಡಿ.ಆರ್.ಡಿ.ಎ/ಸಂಜೀವಿನಿ/ಮಾ.ಸಂ.ಟೆಂ/2023-24, ದಿನಾಂಕ: 06.09.2024
ಟೆಂಡರ್ ಪ್ರಕಟಣೆ
ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (ಎನ್.ಆರ್.ಎಲ್.ಎಮ್) ಅಡಿಯಲ್ಲಿ ಮಾನವ ಸಂಪನ್ಮೂಲ ಒದಗಿಸುವ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಇ-ಟೆಂಡರ್ ಆಹ್ವಾನಿಸಲಾಗಿದೆ.

1	ಟೆಂಡರ್ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ	BRZP-NRLM/DRDA/HR/2023-24 BENGALURU RURAL ZP
2	ಟೆಂಡರ್ ಅಂದಾಜು ಮೌಲ್ಯ	ರೂ.1,65,91,200/-
3	ಇಎಂಡಿ ಮೊತ್ತ	ರೂ.4,14,780/-
4	ಟೆಂಡರ್ ಪ್ರಾರಂಭವಾಗುವ ದಿನಾಂಕ	09.09.2024 10.30 a.m
5	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ	15.09.2024 5.30 a.m
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	18.09.2024 11.30 a.m
7	ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	19.09.2024 11.30 a.m
8	ಗುತ್ತಿಗೆ ಅವಧಿ	ಒಪ್ಪಂದದ ದಿನಾಂಕದಿಂದ 2 ವರ್ಷಗಳು

ಟೆಂಡರ್ ತೆರೆಯುವ ಸ್ಥಳ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ, ಚಪ್ಪರಕಲ್ಲು-562110, ದೇವನಹಳ್ಳಿ ತಾಲ್ಲೂಕು.
ಸಹಿ/- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ
ವಾಸಾಸಂಇ/ವಾಪ್ರ/1879/2024-25

KARNATAKA NEERAVARI NIGAM LIMITED
(A Government of Karnataka Enterprises)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ ಕನೀನಿನಿ,ಘಬದಂಕಾನಿ ವಿಭಾಗ ಸಂ.3 ಗೋಕಾಕ ಫೋನ ನಂ. 08332-225213.
ಸಂಖ್ಯೆ: ಕನೀನಿನಿ/ಜಿಆರ್‌ಬಿಸಿಸಿವಿ-3/ಡಿಬಿ/ಬಳ್ಳಾರಿ ನಾಲಾ/ಟೆಂಡರ್/2024-25/02 ದಿನಾಂಕ:- 05-09-2024
ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಘ.ಬ.ದಂ.ಕಾ.ನಿ. ವಿಭಾಗ ಸಂ.3, ಗೋಕಾಕ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ರ ಪ್ರಕಾರ act 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ ಕೆ.ಡಬ್ಲ್ಯೂ-IV ನಿಯಮದನ್ವಯ ನೊಂದಾಯಿತರಾದ ಅರ್ಹ ಸಲಹೆಗಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ QCBS ಮಾದರಿ ಆಧಾರದ ಮೇಲೆ ಟೆಂಡರ ಕರೆಯಲಾಗಿದ್ದು ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ ದ್ವಿ ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರನ್ನು ದ್ವಿ ಲಕೋಟಿ ವಿಧಾನದಲ್ಲಿ ಸಲ್ಲಿಸಬೇಕು.
ಕಾಮಗಿರಿಯ ಹೆಸರು:- Consultancy Services for obtaining Forest Clearance for the Ballary Nala Irrigation Project, Belagavi Taluk, Belagavi District. (Indent No: 1369)
ಟೆಂಡರಗೆ ಇಟ್ಟ ಅಂದಾಜು ಮೊತ್ತವು (ಜಿ.ಎಸ್.ಟಿ. ಒಳಗೊಂಡಿರುತ್ತದೆ) ರೂ. 117.40 ಲಕ್ಷ ಗಳು ಇರುತ್ತದೆ
ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿ.ಆರ್.ಬಿ.ಸಿ.ಸಿ. ವಿಭಾಗ ನಂ.3, ಗೋಕಾಕ ಕಚೇರಿಯಲ್ಲಿ ಟೆಂಡರ ಕುರಿತು ವಿಚಾರಣೆ ನಡೆಸಲು ಕೊನೆಯ ದಿನಾಂಕ 17-09-2024, 17.00 ಘಂಟೆಯವರೆಗೆ. ಟೆಂಡರಗಳನ್ನು ದಿ: 09-09-2024 ರಿಂದ ದಿ: 18-09-2024 ರಂದು 16.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. ಟೆಂಡರ ಪೂರ್ವಭಾವಿ ಸಭೆ ದಿನಾಂಕ:13-09-2024 ರಂದು ಮುಂಜಾನೆ 11-00 ಗಂಟೆಗೆ ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ, ಕನೀನಿನಿ, ಜಿ.ಆರ್.ಬಿ.ಸಿ.ಸಿ. ವಿಭಾಗ ಸಂ.3, ಗೋಕಾಕ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ & ಸಮಯ 18-09-2024 ರಂದು 16.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 20-09-2024, 11.00 ಘಂಟೆಗೆ, ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು
ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ https://www.kppp.karnataka.gov.in ವೆಬ್‌ಸೈಟನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರನಲ್ಲಿ ಯಾವುದೇ ಬದಲಾವಣೆಗಳು/ ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆಪಿಪಿ - ಪೋರ್ಟಲ್ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/-(ಹೆಚ್.ಎಸ್.ಕಾಖಂಡಕಿ)
ಕಾರ್ಯನಿರ್ವಾಹಕ ಇಂಜಿನೀಯರು,
ಕನೀನಿನಿ ಜಿಆರ್‌ಬಿಸಿಸಿ ವಿಭಾಗ ನಂ-3, ಗೋಕಾಕ.
DIPR/BGM/RO-NO-765/KSMCA/2024-25

ವಿದ್ಯುತ್ ಮಗ್ಗ ಘಟಕಗಳ, ಸಬ್ಸಿಡಿ ಮಿತಿ ರದ್ದು: ಶಿವಾನಂದ ಪಾಟೀಲ

ಬೆಂಗಳೂರು: ರಾಜ್ಯ ಸರಕಾರ ವಿದ್ಯುತ್ ಮಗ್ಗ ಮತ್ತು ಮಗ್ಗಪೂರ್ವ ಘಟಕಗಳ ವಿದ್ಯುತ್ ಸಬ್ಸಿಡಿ ಮಿತಿ ರದ್ದುಪಡಿಸಿದೆ. ಇದರಿಂದ ಪ್ರತಿ ನೇಕಾರರಿಗೆ ವಾರ್ಷಿಕ ಕನಿಷ್ಠ 40 ಸಾವಿರ ಉಳಿತಾಯವಾಗಲಿದೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 10.1 ಎಚ್‌ಪಿಯಿಂದ 20 ಎಚ್‌ಪಿವರೆಗಿನ ವಿದ್ಯುತ್ ಮಗ್ಗ ಮತ್ತು ಮಗ್ಗ ಪೂರ್ವ ಘಟಕಗಳು ಬಳಕೆ ಮಾಡುವ ಪೂರ್ಣ ವಿದ್ಯುತ್‌ಗೆ ಸಬ್ಸಿಡಿ ನೀಡಲಿದ್ದು, ನೇಕಾರರು ಪ್ರತಿ ಯೂನಿಟ್‌ಗೆ 1.25 ರು. ಮಾತ್ರ ಪಾವತಿ ಮಾಡಬೇಕು. ಸರಕಾರದ ಈ ಕ್ರಮದಿಂದ 4000 ಘಟಕಗಳಿಗೆ ಅನುಕೂಲವಾಗಲಿದೆ. ಇದುವರೆಗೆ ಮಾಸಿಕ 500 ಯೂನಿಟ್ ಗೆ ಮಾತ್ರ ಸಬ್ಸಿಡಿ ನೀಡಲಾಗುತ್ತಿತ್ತು. ಹೆಚ್ಚುವರಿ ಬಳಕೆಯ ವಿದ್ಯುತ್ ನೇಕಾರರು ವಿದ್ಯುತ್ ಕಂಪನಿಗಳು ನಿಗದಿಪಡಿಸಿರುವ ದರದಲ್ಲಿ ವಿದ್ಯುತ್ ಶುಲ್ಕ ಪಾವತಿಸಬೇಕಿತ್ತು. ಸರಕಾರ ಸಬ್ಸಿಡಿ ಮಿತಿ ರದ್ದುಪಡಿಸಿರುವುದರಿಂದ ಮಾಸಿಕ ಎಷ್ಟೇ ಯೂನಿಟ್ ವಿದ್ಯುತ್ ಬಳಕೆ ಮಾಡಿದರೂ 1.25 ರು. ವಿಧಿಸಲಾಗುವುದು ಎಂದರು. ಚುನಾವಣೆ ಸಮಯ ದಲ್ಲಿ ಕೊಟ್ಟ ಮಾತಿನಂತೆ 10 ಎಚ್‌ಪಿ ವರೆಗಿನ ಎಲ್ಲಾ ವಿದ್ಯುತ್ ಮಗ್ಗ ಮತ್ತು ಮಗ್ಗಪೂರ್ವ ಘಟಕಗಳಿಗೆ ಶೂನ್ಯದರದಲ್ಲಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ ಎಂದರು.

ಪುರಸಭಾ ಕಾರ್ಯಾಲಯ, ಬೇಲೂರು
E-mail: itstaff_ulb_belur@yahoo.co.in, townmunicipal.belur@gmail.com ದೂರವಾಣಿ: 08177-222221
ನಂ:ಪು.ಸ.ಬೇ/ಹಿಆನಿ/04/2024-25 ದಿನಾಂಕ:04-09-2024.
ಟೆಂಡರ್ ಪ್ರಕಟಣೆ
(ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ) ಬೇಲೂರು ಪುರಸಭೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲಗಳನ್ನು ಅಧಿಕೃತ ಏಜೆನ್ಸಿಗಳಿಂಗ ಟೆಂಡರ್‌ಅನ್ನು ಅಹ್ವಾನಿಸಲಾಗಿದ್ದು, ಅರ್ಹ ಏಜೆನ್ಸಿದಾರರು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಕ್ರ.ಸಂ. 1)ವಿವರ: DMA/2024-25/SE3560 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)75.11 2)ವಿವರ: DMA/2024-25/SE3559 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)43.98 3)ವಿವರ: DMA/2024-25/SE3557 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)5.77 4)ವಿವರ: DMA/2024-25/SE3555 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)5.64 ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಮುಖ್ಯಾಧಿಕಾರಿ, ಪುರಸಭೆ, ಬೇಲೂರು ರವರುಗಳಿಂದ ಈ ಕಛೇರಿಯಲ್ಲಿ ಪಡೆಯಬಹುದು.
ಸಹಿ/-ಮುಖ್ಯಾಧಿಕಾರಿ,
ಪುರಸಭೆ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/414/ಕೆಎಸ್‌ಎಂಸಿಎ/2024-25

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ: ಮನಪಾ/ಲೋವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇಪ್ರೊ/2024-25/
ದಿನಾಂಕ: 06.09.2024
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ ಸನ್ 2021-22 ನೇ ಸಾಲಿನ NMPC (Non-Million Plus Cities) 15ನೇ ಹಣಕಾಸು ಯೋಜನೆಯಲ್ಲಿ 01 ಕಾಮಗಾರಿಗಳು Indent No: DMA/2024-25/OWS/WORK_INDENT29160 ಮತ್ತು ಮಹಾನಗರ ಪಾಲಿಕೆ ಅನುದಾನದಲ್ಲಿ 01, ಸವಿಸ್ ಕಾಮಗಾರಿ Indent No: DMA/2024-25/SE3600 ಕೆ.ಪಿ.ಡಬ್ಲ್ಯೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆವ್ಹಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.
ಸೂಚನೆ: ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು.
1. ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 21.09.2024.
ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/231/ಕೆಎಸ್‌ಎಂಸಿಎ/2024-25

ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಜಿಲ್ಲಾ ನಗರಾಭಿವೃದ್ಧಿ ಕೋಶ) ಚಾಮರಾಜನಗರ ಜಿಲ್ಲೆ, ಚಾಮರಾಜನಗರ
08226-223761 08226-222831 Fax :08226-223180 e-mail: dudcchamarajanagar@gmail.com
ಚಾಜಿನಕೋ/ಘವನಿ/ಸಿಆರ್/38/2018-19 ದಿನಾಂಕ: 03.09.2024
ಅಲ್ಪಾವಧಿ ಟೆಂಡರ್ ಇ-ಪ್ರಕಟಣೆ (ಕೆ.ಪಿ.ಪಿ. ಪೋರ್ಟಾಲ್ ಮುಖಾಂತರ)
ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿಯಲ್ಲಿ ಚಾಮರಾಜನಗರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಒಣತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಮೆಟರಿಯಲ್ ರಿಕವರಿ ಫೆಸಿಲಿಟಿ (ಎಂ.ಆರ್.ಎಫ್) ಘಟಕ ಸ್ಥಾಪಿಸುವ ಕಾಮಗಾರಿಗಳನ್ನು ಮತ್ತು ಯಳಂದೂರು ಪಟ್ಟಣ ಪಂಚಾಯಿತಿಗೆ ಅನುಮೋದನೆಗೊಂಡಿರುವ ಘನತ್ಯಾಜ್ಯ ವಸ್ತು ನಿರ್ವಹಣೆ ಡಿ.ಪಿ.ಆರ್. ನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಕೆ.ಪಿ.ಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. 1) ಯಳಂದೂರು ಪಟ್ಟಣ ಪಂಚಾಯಿತಿಯಲ್ಲಿ ಸ್ವಚ್ಛ ಭಾರತ ಯೋಜನೆಯಡಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಅನುಮೋದನೆಗೊಂಡಿರುವ ವಿಸ್ತೃತ ಯೋಜನಾ ವರದಿಯಲ್ಲಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು. (Indent No.DMA/2024-25/OW/WORK_INDENT 22002/call-2), ಟೆಂಡರ್‌ಗಿಟ್ಟ ಮೊತ್ತ ರೂ. 208.20 ಲಕ್ಷಗಳು, ಇಎಂಡಿ ಮೊತ್ತ ರೂ. 3.13 ಲಕ್ಷಗಳು, ಕಾಲಾವಧಿ 09 ತಿಂಗಳು, 2) ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಒಣತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಮೆಟರಿಯಲ್ ರಿಕವರಿ ಫೆಸಿಲಿಟಿ (ಎಂ.ಆರ್.ಎಫ್) ಘಟಕ ಸ್ಥಾಪಿಸುವ ಕಾಮಗಾರಿ (Indent No: DMA/2024-25/OW/WORK_ INDENT 21526call-2) ಟೆಂಡರ್‌ಗಿಟ್ಟ ಮೊತ್ತ ರೂ. 105.00 ಲಕ್ಷಗಳು, ಇ.ಎಂ.ಡಿ ಮೊತ್ತ ರೂ. 1.57 ಲಕ್ಷಗಳು ಕಾಲಾವಧಿ 06 ತಿಂಗಳು, 3) ಕೊಳ್ಳೇಗಾಲ ನಗರಸಭೆ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಒಣತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಮೆಟರಿಯಲ್ ರಿಕವರಿ ಫೆಸಿಲಿಟಿ (ಎಂ.ಆರ್.ಎಫ್) ಘಟಕ ಸ್ಥಾಪಿಸುವ ಕಾಮಗಾರಿ (Indent No: DMA/2024-25/OW/WORK INDENT21527/call-2) ಟೆಂಡರ್‌ಗಿಟ್ಟ ಮೊತ್ತ ರೂ. 105.00 ಲಕ್ಷಗಳು, ಇಎಂಡಿ ಮೊತ್ತ ರೂ. 1.57 ಲಕ್ಷಗಳು ಕಾಲಾವಧಿ 06 ತಿಂಗಳು, ಮತ್ತು 4) ಗುಂಡ್ಲುಪೇಟೆ ಪುರಸಭೆ, ಹನೂರು ಮತ್ತು ಯಳಂದೂರು ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಒಣತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಮೆಟರಿಯಲ್ ರಿಕವರಿ ಫೆಸಿಲಿಟಿ (ಎಂ.ಆರ್.ಎಫ್) ಘಟಕ ಸ್ಥಾಪಿಸುವ ಕಾಮಗಾರಿ (Indent No: DMA/2024-25/OW/WORK_INDENT21193/call-2) ಟೆಂಡರ್‌ಗಿಟ್ಟ ಮೊತ್ತ ರೂ. 96.50 ಲಕ್ಷಗಳು. ಇಎಂಡಿ ಮೊತ್ತ ರೂ. 1.93 ಲಕ್ಷಗಳು ಕಾಲಾವಧಿ ಆಸಕ್ತಿಯುಳ್ಳ ಗುತ್ತಿಗೆದಾರರು ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಸಲ್ಲಿಸತಕ್ಕದ್ದು. ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಕೊನೆಯ ದಿನಾಂಕ : 21-09-2024 ರ ಸಂಜೆ 5.30 ಗಂಟೆಯವರೆಗೆ, ಪ್ರೀ ಬಿಡ್ ಮಿಟಿಂಗ್ ದಿನಾಂಕ & ಸ್ಥಳ: 12-09-2024 ರ ಬೆಳಿಗ್ಗೆ 11.00 ಗಂಟೆಗೆ, ಕೊಠಡಿ ಸಂಖ್ಯೆ: 127, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ, ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: :21-09-2024 ರ ಸಂಜೆ 5.30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:23-09-2024ರ ಬೆಳಿಗ್ಗೆ 11.00 ಗಂಟೆಯವರೆಗೆ ಇರುತ್ತದೆ. ಹೆಚ್ಚಿನ ಮಾಹಿತಿ ಕಾಮಗಾರಿ ನಿಬಂಧನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಹಾಗೂ www.chamarajanagaradudc.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದಾಗಿರುತ್ತದೆ.
ಸಹಿ/-
ಜಿಲ್ಲಾಧಿಕಾರಿ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ಸಂ:ವಾಸಾಸಂಇ:ಚಾನಗರ:231:2024-25

ಸುಗ್ರೀವ 5190 ಕೆಜಿ ತೂಕ | ಎಲ್ಲ ಆನೆಗಳ ಆರೋಗ್ಯ ಉತ್ತಮ

2ನೇ ತಂಡದಲ್ಲಿ ಸುಗ್ರೀವನೇ ಬಲಶಾಲಿ

ಮೈಸೂರು: ನಾಡಹಬ್ಬ ದಸರಗೆ ನಗರಕ್ಕೆ ಆಗಮಿಸಿರುವ 2ನೇ ತಂಡದ ಗಜಪಡೆಗೆ ಶುಕ್ರವಾರ ತೂಕ ಪರೀಕ್ಷೆ ನಡೆಸಲಾಯಿತು.

ಮೊದಲ ತಂಡದ ಆನೆಗಳ ತೂಕದಲ್ಲಿ ಕ್ಯಾಪ್ಟನ್ ಅಭಿಮನ್ಯು ನಂ.1 ಎಂಬುದನ್ನು ಸಾಬೀತುಪಡಿಸಿದರೆ, 2ನೇ ತಂಡದಲ್ಲಿ ಸುಗ್ರೀವ ಬಲಶಾಲಿ ಎನಿಸಿಕೊಂಡಿದ್ದಾನೆ.

ವಿಶ್ರಾಂತಿಯಲ್ಲಿ ಕಂಜನ್ ಆನೆ

ಗಜಪಯಣ ಮೂಲಕ ಮೊದಲ ತಂಡದಲ್ಲಿ ಆಗಮಿಸಿದ್ದ ಕಂಜನ್ ಅರಣ್ಯ ಭವನದಲ್ಲಿ ಲಾರಿಯಿಂದ ಕೆಳಗಿಳಿಯುವ ಸಂದರ್ಭದಲ್ಲಿ ಕಾಲಿಗೆ ಪೆಟ್ಟಾಗಿತ್ತು. ಹಾಗಾಗಿ ಕಂಜನ್‌ಗೆ ತಾಲೀಮಿನಿಂದ ದೂರ ಇರಿಸಿದ್ದು, ಚಿಕಿತ್ಸೆ ನೀಡಲಾಗಿದೆ. ಕಂಜನ್ ಇನ್ನೂ ಕೆಲ ದಿನ ತಾಲೀಮಿಗೆ ಭಾಗವಹಿಸುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಸರೆಯಲ್ಲಿ ಪಾಲ್ಗೊಳ್ಳಲು 2ನೇ ತಂಡದಲ್ಲಿ ನಗರಕ್ಕಾಗಮಿಸಿರುವ ಐದು ಆನೆಗಳು ಗಜಪಡೆಯ ಸಾರಥಿ ಅಭಿಮನ್ಯು ತಂಡಕ್ಕೆ ಸಾಥ್ ನೀಡಿವೆ. ಹೀಗಾಗಿ ಅರಮನೆ ಅಂಗಳದಲ್ಲಿ ಬೀಡುಬಿಟ್ಟಿರುವ ಐದು ಆನೆಗಳಿಗೆ ಸಂಪ್ರದಾಯದಂತೆ ತೂಕ ಪರೀಕ್ಷೆ ನಡೆಸಲಾಯಿತು. ನಗರದ ಧನ್ವಂತರಿ ರಸ್ತೆಯಲ್ಲಿರುವ ಸಾಯಿ ರಾಂ ವೇ ಬ್ರಿಡ್ಜ್‌ನಲ್ಲಿ ನಡೆಸಲಾದ ಆನೆಗಳ ತೂಕ ಪರೀಕ್ಷೆಯಲ್ಲಿ ಸುಗ್ರೀವ 5190 ಕೆಜಿ ತೂಕ ಹೊಂದುವ ಮೂಲಕ ಎರಡನೇ ತಂಡದಲ್ಲಿ ನಂ.1 ಎಂಬುದನ್ನು ಸಾಬೀತುಪಡಿಸಿದೆ.



ಅರಮನೆ ಅಂಗಳದಲ್ಲಿ ಬೀಡುಬಿಟ್ಟಿರುವ ಐದು ಆನೆಗಳಿಗೆ ಸಂಪ್ರದಾಯದಂತೆ ತೂಕ ಪರೀಕ್ಷೆ ನಡೆಸಲಾಯಿತು.

ಉಳಿದಂತೆ ಮಹೇಂದ್ರ 4910 ಕೆಜಿ ಹಾಗೂ ಪ್ರಶಾಂತ 4875 ಕೆಜಿ ತೂಕವಿದ್ದರೆ. ಹೆಣ್ಣಾನೆಗಳಾದ ಲಕ್ಷ್ಮೀ 3485 ಕೆಜಿ ಹಾಗೂ ಹಿರಣ್ಯ 2930 ಕೆಜಿ ತೂಕ ಹೊಂದಿದ್ದು, ಉಳಿದೆಲ್ಲಾ ಆನೆಗಳಿಗಿಂತಲೂ ಹಿರಣ್ಯ ಆನೆ ಅತಿ ಕಡಿಮೆ ತೂಕದ ಹೊಂದಿದೆ. ಒಟ್ಟಾರೆ ಈ ಬಾರಿಯ ವಿಶ್ವವಿಖ್ಯಾತ ದಸರಾ ಮಹೋತ್ಸವದಲ್ಲಿ ಒಟ್ಟು 14 ಆನೆಗಳು ಪಾಲ್ಗೊಂಡಿದ್ದು, ಎಲ್ಲ ಆನೆಗಳು ಅರಮನೆ ಅಂಗಳದಲ್ಲಿ ವಾಸ್ತವ್ಯ ಹೂಡಿವೆ. ಮೊದಲನೇ ಹಂತದ ಆನೆಗಳಿಗೆ ಈಗಾಗಲೇ ಭಾರ ಹೊರುವ ತಾಲೀಮು ನಡೆಸಲಾಗಿದ್ದು, ಮುಂದಿನ ದಿನಗಳಲ್ಲಿ 2ನೇ ತಂಡದಲ್ಲಿ ಬಂದಿರುವ ಆನೆಗಳಿಗೂ ಭಾರ ಹೊರುವ ತಾಲೀಮು ನಡೆಸಲಾಗುತ್ತದೆ.

> 2ನೇ ಹಂತದ ಗಜಪಡೆಗೆ ತೂಕ ಪರೀಕ್ಷೆ ಮಾಡಲಾಗಿದ್ದು, ಅಭಿಮನ್ಯು ನಂತರ ಸುಗ್ರೀವ ಹೆಚ್ಚು ತೂಕ ಹೊಂದಿದ್ದಾನೆ. ಎಲ್ಲ ಆನೆಗಳ ಆರೋಗ್ಯ ಉತ್ತಮವಾಗಿದ್ದು, ಶುಕ್ರವಾರ ಸಂಜೆಯಿಂದಲೇ ಎಲ್ಲ ಆನೆಗಳು ತಾಲೀಮಿನಲ್ಲಿ ಭಾಗಿಯಾಗುತ್ತವೆ. ಸೆ.15ರ ಬಳಿಕ ಮರದ ಅಂಬಾರಿ ಹೊರಿಸಿ ತಾಲೀಮು ನಡೆಸಲಾಗುತ್ತದೆ. ಗಜಪಡೆಯ ಕ್ಯಾಂಪಿನಲ್ಲಿ ವರಲಕ್ಷ್ಮಿ ಅತ್ಯಂತ ಹಿರಿಯ ಆನೆಯಾಗಿದ್ದು, ಅವಶ್ಯಕತೆ ಇದ್ದಾಗ ಮಾತ್ರವೇ ವರಲಕ್ಷ್ಮಿಯನ್ನು ತಾಲೀಮಿಗೆ ಕರೆತರಲಾಗುತ್ತದೆ.
> -ಡಾ.ಪ್ರಭುಗೌಡ, ಡಿಸಿಎಫ್

ಗಜಪಡೆಗೆ ಇಂದು ಪೂಜೆ, ಇಷ್ಟದ ತಿನಿಸುಗಳು: ಗಣೇಶ ಚತುರ್ಥಿ ಹಬ್ಬದ ಶನಿವಾರ ಅರಮನೆ ಕೋಡಿ ಸೋಮೇಶ್ವರ ದೇವಸ್ಥಾನ ಬಳಿ ದಸರೆಯ ಎಲ್ಲ ಆನೆಗಳಿಗೂ ಅರ್ಚಕ ಪ್ರಹ್ಲಾದರಾವ್ ವಿಶೇಷ ಪೂಜೆ ನೆರವೇರಿಸಲಿದ್ದಾರೆ. ಪಂಚಫಲ, ಕೋಡುಬಳೆ ಒಬ್ಬಟ್ಟು, ರವೆ ಉಂಡೆ, ಸಿಹಿ ಕಡುಬು, ಕರ್ಜಿಕಾಯಿ, ಲಾಡು, ಚಕ್ಕುಲಿ, ನಿಪ್ಪಟ್ಟು, ಹೋಳಿಗೆ, ಬೆಲ್ಲ, ಕಬ್ಬು, ಕಲ್ಲು ಸಕ್ಕರೆ, ಮೋದಕ, ಹೀಗೆ ಗಣೇಶನ ಇಷ್ಟದ ತಿನಿಸುಗಳನ್ನು ಗಜಪಡೆಗೆ ನೀಡಲಾಗುತ್ತದೆ.

ಟಿಬಿ ಡ್ಯಾಂ ಮೇಲೆ ಫೋಟೊಶೂಟ್

ಕೊಪ್ಪಳ: ನಿಷೇಧವಿದ್ದರೂ ತುಂಗಭದ್ರಾ ಜಲಾಶಯದ ಬಳಿ ಜೋಡಿಯೊಂದು ಪ್ರೀ ವೆಡ್ಡಿಂಗ್ ಫೋಟೊ ಶೂಟ್ ಮಾಡಿಸಿಕೊಂಡಿದ್ದು, ಸ್ಥಳೀಯರು ಆಕ್ರೋಶಕ್ಕೆ ಕಾರಣವಾಗಿದೆ.

ಹೊಸಪೇಟೆ ಮೂಲದ ಜೋಡಿ ಫೋಟೊ ಶೂಟ್ ಮಾಡಿಸಿಕೊಂಡವರು ಎಂದು ತಿಳಿದು ಬಂದಿದೆ. ಫೋಟೊ ಹಾಗೂ ವಿಡಿಯೋ ಶೂಟ್ ಮಾಡಿಸಿಕೊಂಡಿದ್ದಾರೆ. ಸದ್ಯ ಛಾಯಾಚಿತ್ರಗಳು ವೈರಲ್ ಆಗಿವೆ. ಕೆಎ-01 ಎಂ ವೈ 2174 ನಂಬರ್ ಹೊಂದಿರುವ ಕಾರಿನಲ್ಲಿ ಕುಳಿತು ಪ್ರೀ ವೆಡ್ಡಿಂಗ್ ಶೂಟ್ ಮಾಡಿಸಿಕೊಂಡಿದ್ದಾರೆ. ಇತ್ತೀಚೆಗಷ್ಟೇ ದುರಸ್ತಿಗೊಂಡ ಕ್ರಸ್ಟ್ ಗೇಟ್ ಆಪರೇಟರ್ ಸಿಸ್ಟಮ್ ಪಕ್ಕದಲ್ಲಿಯೇ ಕುಳಿತು ಫೋಟೊ ಶೂಟ್ ಮಾಡಿಸಿದ್ದಾರೆ. ಟಿಬಿ ಡ್ಯಾಂನ 19ನೇ ಕ್ರಸ್ಟ್ ಗೇಟ್ ಕಿತ್ತುಹೋದ ಪ್ರಕರಣ ಬಳಿಕ ಡ್ಯಾಂ ಮೇಲೆ ಪ್ರವೇಶವನ್ನು ನಿಷೇಧಿಸಲಾಗಿತ್ತು. ಸಾರ್ವಜನಿಕರು ಸೇರಿದಂತೆ ಮಾಧ್ಯಮದವರಿಗೂ ಪ್ರವೇಶವನ್ನು ನಿಷೇಧಿಸಲಾಗಿದೆ. ನಿಷೇಧವಿದ್ದರೂ ಜೋಡಿ ಪ್ರೀ ವೆಡ್ಡಿಂಗ್ ಶೂಟ್ ಮಾಡಿಸಿಕೊಂಡಿದ್ದು ಹೇಗೆ ಎಂದು ಪ್ರಶ್ನೆ ವ್ಯಕ್ತವಾಗಿದೆ.

ತನಿಖೆಗೆ ಸ್ಥಳೀಯರ ಆಗ್ರಹ

ವೈರಲ್ ಆದ ಚಿತ್ರಗಳಲ್ಲಿ ಜೋಡಿ ಇದ್ದ ಕಾರಿನ ಹಿಂದೆ ಇನ್ನೊಂದು ಕಾರು ನಿಂತಿರುವುದು ಕಾಣಿಸಿದೆ. ಫೋಟೊಶೂಟ್‌ಗೆ ಅಧಿಕಾರಿಗಳು ಸಹಕಾರ ನೀಡಿದ್ದಾರಾ ಎಂದು ಸ್ಥಳೀಯರು ಪ್ರಶ್ನಿಸಿದ್ದಾರೆ. ನಿಷೇಧಿತ ಸ್ಥಳದಲ್ಲಿ ಪ್ರೀವೆಡ್ಡಿಂಗ್ ಶೂಟ್ ನಡೆದಿರುವ ಕುರಿತು ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.

ತುಂಗಭದ್ರಾ ಗೇಟ್ ಪ್ರಕರಣ: ತನಿಖೆಗೆ ತಂಡ ರಚನೆ

ಹೊಸಪೇಟೆ: ತುಂಗಭದ್ರಾ ಅಣೆಕಟ್ಟೆಯ 19ನೇ ಕ್ರಸ್ಟ್ ಗೇಟ್ ಕಳೆದ ಆ.10ರಂದು ರಾತ್ರಿ ನೀರಲ್ಲಿ ಕೊಚ್ಚಿ ಹೋಗಲು ಕಾರಣವಾದ ಅಂಶಗಳನ್ನು ಪತ್ತೆಮಾಡಲು ಕೇಂದ್ರೀಯ ನೀರಾವರಿ ಸಮಿತಿಯ (ಸಿಡಬ್ಲ್ಯುಸಿ) ಮಾಜಿ ಅಧ್ಯಕ್ಷ ಎ.ಕೆ.ಬಜಾಜ್ ನೇತೃತ್ವದ ತಾಂತ್ರಿಕ ತನಿಖಾ ತಂಡ ರಚಿಸಲಾಗಿದೆ. ಅಣೆಕಟ್ಟು ಗೇಟ್ ತಜ್ಞರಾದ ಹರ್ಕೇಶ್ ಕುಮಾರ್, ತಾರಾಪುರಂ ಸುಧಾಕರ್, ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಸರಕಾರಗಳ ತಾಂತ್ರಿಕ ಸಲಹಾ ಸಮಿತಿಯ ಪ್ರತಿನಿಧಿಗಳು ಈ ತಂಡದಲ್ಲಿ ಸದಸ್ಯರಾಗಿದ್ದಾರೆ. 15 ದಿನದಲ್ಲಿ ತನಿಖಾ ವರದಿ ಸಲ್ಲಿಸಲು ಸೂಚಿಸಲಾಗಿದೆ ಎಂದು ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಓ.ಆರ್.ಕೆ.ರೆಡ್ಡಿ ತಿಳಿಸಿದ್ದಾರೆ.

ಏನೆಲ್ಲಾ ತನಿಖೆ?: ಚೈನ್ ಲಿಂಕ್ ಬಲದೊಂದಿಗೆ ಲಂಬವಾಗಿ ನಿಂತಿದ್ದ ಕ್ರಸ್ಟ್‌ಗೇಟ್ ಕಳಚಿಕೊಳ್ಳಲು ನೈಜ ಕಾರಣವೇನು? ಮಳೆಗಾಲಕ್ಕೆ ಮೊದಲು ಮತ್ತು ನಂತರ ಗೇಟ್ ಮತ್ತು ಚೈನ್‌ಲಿಂಕ್‌ಗಳನ್ನು ಆಗಾಗ್ಗೆ ಪರೀಕ್ಷಿಸಲಾಗುತ್ತಿತ್ತೇ ಎಂಬುದಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಈ ತಂಡ ಮಾಡಲಿದೆ. ಕ್ರಸ್ಟ್‌ಗೇಟ್‌ಗಳ ಆಯಸ್ಸು, ಕೊನೆಯ ಬಾರಿಗೆ ಮಾಡಿದ ದುರಸ್ತಿ, ಗೇಟ್ ಬದಲಿಸಿದ್ದರೆ ಯಾವಾಗ ಎಂಬುದನ್ನು ಅರಿತು ತಂಡ, ತುರ್ತು ಸಂದರ್ಭದಲ್ಲಿ ಬದಲಿ ಗೇಟ್ ಯಾಕೆ ಸಿದ್ಧಪಡಿಸಿರಲಿಲ್ಲ ಎಂಬುದನ್ನು ಪರಿಶೀಲಿಸಲಿದೆ. ಇತರ ಅಣೆಕಟ್ಟೆಗಳಲ್ಲಿ ಸ್ಟಾಪ್‌ಲಾಗ್ ಗೇಟ್ ಇದ್ದರೂ, ತುಂಗಭದ್ರಾ ಅಣೆಕಟ್ಟೆಯಲ್ಲಿ ಅದು ಇಲ್ಲ, ಇದುವರೆಗೆ ಯಾಕೆ ಅದನ್ನು ಅಳವಡಿಸಿಲ್ಲ ಎಂಬುದನ್ನು ಅಂದಾಜಿಸಲಿರುವ ತಂಡ, ಗೇಟ್‌ಗಳನ್ನು ಬಲಪಡಿಸಲು ಹಾಗೂ ಕ್ರಸ್ಟ್‌ಗೇಟ್‌ಗಳು ಮತ್ತೆ ಕೊಚ್ಚಿಕೊಂಡು ಹೋಗದಂತೆ ನೋಡಿಕೊಳ್ಳುವ ಕ್ರಮಗಳ ಬಗ್ಗೆ ಶಿಫಾರಸು ಮಾಡಲಿದೆ.

ಮಾಜಿ ಸಚಿವ ಎಚ್.ಡಿ.ರೇವಣ್ಣ ಗುಡುಗು | ವಿರೋಧಿಗಳಿಗೆ ಎಚ್ಚರಿಕೆ

ನನ್ನನ್ನು, ದೇವೇಗೌಡರನ್ನು ಮುಗಿಸೋಕೆ ಸಾಧ್ಯವಿಲ್ಲ

ಹಾಸನ: ಕೆಲವರನ್ನು ನಾನೇ ಮೇವು ಹಾಕಿ ಸಾಕಿದ್ದೇನೆ. ಈಗ ಅವರು ನನ್ನ ಮೇಲೆಯೇ ಕುಸ್ತಿ ಮಾಡ್ತಿದ್ದಾರೆ ಎಂದು ಮಾಜಿ ಸಚಿವ ಎಚ್.ಡಿ.ರೇವಣ್ಣ ಬೇಸರ ಹೊರ ಹಾಕಿದ್ದಾರೆ.

ಜಿಲ್ಲೆಯ ಹಾಲು ಒಕ್ಕೂಟ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ನಾನು ಶಾಸಕನಾಗಿ 30 ವರ್ಷ ಆಯ್ತು. ನನ್ನ ಮನೆ ಕೆಲಸ ಮಾಡಿಲ್ಲ. ಒಂದು ಕಾರು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ರೇವಣ್ಣ ಅವರನ್ನು ಮುಗಿಸುತ್ತೇವೆ ಎಂದಿದ್ದಾರೆ. ಆದರೆ ನನ್ನನ್ನು, ದೇವೇ ಗೌಡರನ್ನು ಮುಗಿಸೋಕೆ ಯಾರಿಂದಲೂ ಆಗಲ್ಲ. 1500 ಸೊಸೈಟಿ ನಡೆಸುವುದು ಸುಲಭ ಅಲ್ಲ. ಕೆಲವರನ್ನು ನಾನೇ 15, 20 ವರ್ಷ ಮೇವು ಹಾಕಿ ಸಾಕಿದ್ದೆ. ಈಗ ಅವು ನನ್ನ ಮೇಲೆಯೇ ಕುಸ್ತಿಗೆ ಇಳಿದಿದ್ದಾರೆ. ಎಲ್ಲಿ ಹೋಗ್ತಾರೆ ನನ್ ಕೈಗೆ ಸಿಗದೇ, ಕಾಯ್ತಾ ಇದ್ದೀನಿ. ಯಾವುದು ಏನ್ ಇವತ್ತಿಗೆ ಮುಗಿಯಲ್ಲ ಎಂದು ವಿರೋಧಿಗಳ ವಿರುದ್ಧ ಗುಡುಗಿದರು.

> ದೇವೇಗೌಡರು ಅಂದ್ರೆ ಒಂದು ಶಕ್ತಿ. ಈ ವಯಸ್ಸಿನಲ್ಲಿ ಕಾಶ್ಮೀರಕ್ಕೆ ಹೋಗಿದ್ದರು. ಅಲ್ಲಿ ಅವರ ಕಾಲದಲ್ಲಿ ಮಾಡಿದ ಯೋಜನೆಯನ್ನು ನೋಡಿ ಬಂದಿದ್ದಾರೆ. ನಾವು ಇನ್ನು 3-4 ವರ್ಷ ಹೋದರೆ ಮೂಲೆಯಲ್ಲಿ ಕೂರುತ್ತೇವೆ. ದೇವೇಗೌಡರಿಗೆ 92 ವರ್ಷವಾದರೂ ಓಡಾಡ್ತಾರೆ. ಅವರು ಕೇವಲ ಹತ್ತೂವರೆ ತಿಂಗಳಲ್ಲಿ ಇಡೀ ದೇಶಕ್ಕೆ ಮಾದರಿಯಾದ ಕೆಲಸ ಮಾಡಿದ್ದಾರೆ. ಸಮಯ ಬಂದಾಗ ವಿಧಾನ ಸಭೆಯಲ್ಲಿ ಎಲ್ಲವನ್ನೂ ಎಳೆಎಳೆಯಾಗಿ ಬಿಡಿಸಿ ಹೇಳ್ತೇನೆ.
> -ಎಚ್.ಡಿ.ರೇವಣ್ಣ, ಮಾಜಿ ಸಚಿವ

ದೇವರೇ ಶಿಕ್ಷೆ ಕೊಡುತ್ತಾನೆ: ಏನೋ ಒಂದ್ ಮೊಕದ್ದಮೆ ಹಾಕಿ ರೇವಣ್ಣನನ್ನು ಹೆದರಿಸುತ್ತೇವೆ ಅನ್ಕೊಂಡಿದ್ದೀರಾ? ನಾನೇನು ಹೆದರಿ ಓಡಿಹೋಗೋದಿಲ್ಲ. ರೇವಣ್ಣ ಅವರನ್ನು, ದೇವೇಗೌಡರನ್ನು ಮುಗಿಸೋಕೆ ಯಾರಿಂದಲೂ ಆಗಲ್ಲ. ದೇವರೇ ಶಿಕ್ಷೆ ಕೊಡುವ ಕಾಲ ಬರುತ್ತದೆ ಎಂದರು.

ಮಹದಾಯಿ ಯೋಜನೆ: ಸುಪ್ರೀಂ ಕೋರ್ಟ್ ಮೊರೆ

ಗದಗ: ಮಹದಾಯಿ ಯೋಜನೆ ಜಾರಿಗೆ ಕೇಂದ್ರ ಸರಕಾರ ವನ್ಯಜೀವಿ ಮಂಡಳಿಯಿಂದ ಅಡೆತಡೆ ಉಂಟು ಮಾಡುತ್ತಿದೆ. ಈ ಕುರಿತು ರಾಜ್ಯ ಸರಕಾರ ಗಂಭೀರವಾಗಿ ಚಿಂತನೆ ಮಾಡಿದ್ದು, ಸರ್ವಪಕ್ಷಗಳ ಸಭೆ ಕರೆದು, ಪ್ರಧಾನಿ ಬಳಿ ಸರ್ವಪಕ್ಷ ನಿಯೋಗ ತೆಗೆದುಕೊಂಡು ಹೋಗಲು ಸಿಎಂ ಸಿದ್ದರಾಮಯ್ಯ ಅವರು ತೀರ್ಮಾನಿಸಿದ್ದಾರೆ ಎಂದು ಕಾನೂನು, ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಹೇಳಿದರು. ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಬೆಂಬಲ ಬೆಲೆ ಯೋಜನೆಯಡಿ ಹೆಸರು ಖರೀದಿಸಲು ಖರೀದಿ ಕೇಂದ್ರಕ್ಕೆ ಚಾಲನೆ ನೀಡಿದ ಅವರು, ಮಹದಾಯಿ ವಿಚಾರವಾಗಿ ಕಾನೂನು ತಜ್ಞರನ್ನು ಸಂಪರ್ಕಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಚಿಂತನೆ ನಡೆಸಲಾಗುತ್ತಿದೆ ಎಂದರು.

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

2011ರಲ್ಲಿ ಭಾಗ್ಯಲಕ್ಷ್ಮೀ ಯೋಜನೆಯಲ್ಲಿ 23 ಕೋಟಿ ಅಕ್ರಮ ನಡೆದಿರುವ ಬಗ್ಗೆ ಬಿಜೆಪಿ ಮೌನವಾಗಿರುವುದೇಕೆ..? ಈ ಹಗರಣದಲ್ಲಿ ಲೆಹರ್ ಸಿಂಗ್ ಪಾತ್ರವೇನು..?ಭ್ರಷ್ಟ ಹಣದಲ್ಲಿ ಪಾಲೆಷ್ಟು..? ನಾಡಿನ ಮಹಿಳೆಯರಿಗೆ ಕೊಡುವ ಸೀರೆ ಖರೀದಿಯಲ್ಲಿ ಲೂಟಿಹೊಡೆದ ಪ್ರಕರಣದ ತನಿಖೆಯ ಬಗ್ಗೆ ಸದನದಲ್ಲಿ ಕಾಂಗ್ರೆಸ್ ಒತ್ತಾಯಿಸಿದ್ದರೂ ಅಂದಿನ ಬಿಜೆಪಿ ಸರಕಾರ ತನಿಖೆಗೆ ಮುಂದಾಗಲಿಲ್ಲ ಏಕೆ..?

ಗುರುಪಾದಪ್ಪ, ಬೆಂಗಳೂರು

ಗೃಹಲಕ್ಷ್ಮಿ ಯೋಜನೆ ಹೆಸರಿನಲ್ಲಿ ಸಾವಿರಾರು ಕೋಟಿ ಭ್ರಷ್ಟಾಚಾರ ಆಗಿದೆ. ಸಿಬಿಐನಿಂದ ತನಿಖೆ ನಡೆಸಿ. ಎಸ್ಐಟಿ ತನಿಖೆಯಿಂದ ನ್ಯಾಯ ಸಿಗುವುದು ಸಾಧ್ಯವೇ..? ಅದ ಸರಕಾರದ ಕೈಗೊಂಬೆ.

ಸಮಾಚಾರ ಸಣ್ಣದಲ್ಲ

ಪುತ್ತಿಲ ವಿರುದ್ಧ ಅತ್ಯಾಚಾರ ಆರೋಪ

ಪುತ್ತೂರು: ಲೈಂಗಿಕ ದೌರ್ಜನ್ಯ, ನಂಬಿಕೆದ್ರೋಹ ಪ್ರಕರಣಕ್ಕೆ ಸಂಬಂಧಿಸಿ ಬಿಜೆಪಿ ಮುಖಂಡ ಅರುಣ್ ಕುಮಾರ್ ಪುತ್ತಿಲ ವಿರುದ್ಧ ಅತ್ಯಾಚಾರ ಆರೋಪವನ್ನೂ ಪೊಲೀಸರು ಸೇರಿಸಿದ್ದಾರೆ. ಸಂತ್ರಸ್ತ ಮಹಿಳೆ ನ್ಯಾಯಾಧೀಶರೆದುರು ನೀಡಿದ ಹೇಳಿಕೆ ಆಧಾರದಲ್ಲಿ ಅತ್ಯಾಚಾರ ಆರೋಪವನ್ನು ಸೇರಿಸಲಾಗಿದೆ. ಘಟನೆಯು ಬೆಂಗಳೂರಿನಲ್ಲಿ ನಡೆದಿರುವುದರಿಂದ ಪ್ರಕರಣವನ್ನು ಬೆಂಗಳೂರು ಸಿಟಿ ಸಿವಿಲ್ ನ್ಯಾಯಾಲಯಕ್ಕೆ ವರ್ಗಾಯಿಸುವಂತೆ ಪೊಲೀಸರು ಪುತ್ತೂರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ನ್ಯಾಯಾಲಯ ತೆಗೆದುಕೊಳ್ಳುವ ತೀರ್ಮಾನದ ಆಧಾರದಲ್ಲಿ ಪ್ರಕರಣ ವರ್ಗಾವಣೆ ನಿರ್ಧಾರಗೊಳ್ಳಲಿದೆ. 2023ರ ಜೂ.1ರಿಂದ 8ರ ನಡುವಿನ ಅವಧಿಯಲ್ಲಿ ಬೆಂಗಳೂರಿನಲ್ಲಿ ಕೃತ್ಯ ನಡೆದಿರುವುದಾಗಿ ಸಂತ್ರಸ್ತೆ ಹೇಳಿಕೆ ನೀಡಿದ್ದಾರೆ.

ಯತ್ನಾಳ್ ಭಾವಚಿತ್ರ ಹರಿದ ಕಿಡಿಗೇಡಿಗಳು

ವಿಜಯಪುರ: ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರ ಭಾವಚಿತ್ರ ಸಹಿತ ಗಣೇಶೋತ್ಸವದಲ್ಲಿ ಬೆಂಬಲಿಗರು ಹಾಕಿದ್ದ ಬ್ಯಾನರನ್ನು ಕಿಡಿಗೇಡಿಗಳು ಹರಿದು ಹಾಕಿದ ಘಟನೆ ನಗರದಲ್ಲಿ ನಡೆದಿದೆ. ವಿವಿಧ ವೃತ್ತಗಳಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಬೆಂಬಲಿಗರು ತಮ್ಮ ಭಾವಚಿತ್ರ ಸಹಿತ ಶಾಸಕ ಯತ್ನಾಳ, ಅವರ ಪುತ್ರ ರಾಮನಗೌಡ ಅವರ ಭಾವಚಿತ್ರ ಇರುವ ಗಣೇಶೋತ್ಸವ ಹಬ್ಬದ ಶುಭಾಶಯ ಕೋರುವ ಬ್ಯಾನರ್ ಅಳವಡಿಸಿದ್ದಾರೆ. ಆದರೆ ಕಿಡಿಗೇಡಿಗಳು ನಗರದ ವಾಟರ್‌ಟ್ಯಾಂಕ್, ಜೋರಾಪುರಪೇಠ ಪ್ರದೇಶದಲ್ಲಿ ಅಳವಡಿಸಿರುವ ಬ್ಯಾನರ್ ಹರಿದು ಹಾಕಿದ್ದಾರೆ. ಸ್ಥಳಕ್ಕೆ ಧಾವಿಸಿರುವ ವಿಜಯಪುರ ಮಹಾನಗರ ಪಾಲಿಕೆ ಸಿಬ್ಬಂದಿ ಸಹಿತ ಸ್ಥಳಕ್ಕೆ ಧಾವಿಸಿರುವ ಪೊಲೀಸರು ಹರಿದ ಬ್ಯಾನರ್ ತೆರವುಗೊಳಿಸಿದ್ದಾರೆ.

ಕರ್ನಾಟಕಕ್ಕೆ ಯೋಗಿ ಆದಿತ್ಯನಾಥ ಅಗತ್ಯ

ಮಂಗಳೂರು: ಕರ್ನಾಟಕಕ್ಕೆ ಒಬ್ಬ ಯೋಗಿ ಆದಿತ್ಯನಾಥ ಬೇಕೇ ಹೊರತು ಜಾತಿವಾದಿ ನಾಯಕರಲ್ಲ ಎಂದು ಮೈಸೂರಿನ ಮಾಜಿ ಸಂಸದ ಪ್ರತಾಪ್‌ಸಿಂಹ ಪಕ್ಷದ ನಾಯಕರ ವಿರುದ್ಧವೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸುಳ್ಯದಲ್ಲಿ ವಿಶ್ವ ಹಿಂದೂ ಪರಿಷತ್ ಮತ್ತು ಮೊಸರು ಕುಡಿಕೆ ಉತ್ಸವ ಸಮಿತಿ ಆಯೋಜಿಸಿದ್ದ 11ನೇ ವರ್ಷದ ಉತ್ಸವ ಮತ್ತು ಶೋಭಾಯಾತ್ರೆ ವೇಳೆ ಮಾತನಾಡಿದ ಅವರು, ಪ್ರವೀಣ್ ನೆಟ್ಟಾರು ಮತ್ತು ಹರ್ಷ ಹತ್ಯೆ ಆರೋಪಿಗಳನ್ನು ಎನ್‌ಕೌಂಟರ್ ಮಾಡದಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ಬಿಜೆಪಿ ಕಾರ್ಯಕರ್ತರು ಮನೆ ಮನೆಗೆ ಹೋಗಿ ಬಾವುಟ, ಕರಪತ್ರ ಹಂಚಿ 2018 ರಲ್ಲಿ ಸರಕಾರವನ್ನು ತಂದಿದ್ದೀರಿ. ಪ್ರವೀಣ್ ನೆಟ್ಟಾರು ಹತ್ಯೆಯಾಯಿತು. ಹಂತಕರು ಎಲ್ಲಿ ಇದ್ದಾರೆ ಎಂದು ಪೊಲೀಸರಿಗೆ ಗೊತ್ತಿತ್ತು. ಅವರ ಬಂದೂಕು ಟ್ರಿಗ್ಗರ್ ಎಳೆಯಬೇಡಿ ಎಂದು ಬಿಜೆಪಿ ಸರಕಾರಕ್ಕೆ ಆದೇಶಿಸಿದವರು ಯಾರು? ಎಂದು ಪ್ರಶ್ನಿಸಿದರು.

{ **ಪ್ರಲ್ಹಾದ್ ಜೋಶಿ** } ಕೇಂದ್ರ ಸಚಿವ

ಮುಡಾ ಹಗರಣ ಹಾಗೂ ವಾಲ್ಮೀಕಿ ಹಗರಣವನ್ನು ಡೈವರ್ಟ್ ಮಾಡುವ ಹಾಗೂ ಮಾಧ್ಯಮ ಮುಂದೆ ಮುಡಾ ಹಗರಣದಿಂದ ತಪ್ಪಿಸಿಕೊಳ್ಳುವ ದುರಾಲೋಚನೆಯಿಂದ ದರ್ಶನ್ ಫೋಟೊ ವೈರಲ್ ಮಾಡುವ ನಾಟಕವನ್ನು ರಾಜ್ಯ ಕಾಂಗ್ರೆಸ್ ಸರಕಾರ ಮಾಡುತ್ತಿದೆ.
ಮಹದಾಯಿ ಕುರಿತಂತೆ ಕಾಂಗ್ರೆಸ್ ಏನೂ ಪ್ರಯತ್ನ ಮಾಡಿಲ್ಲ.

575 ಕೆರೆಗಳನ್ನು ತುಂಬಿಸುವ ಮೂಲಕ ಅಂತರ್ಜಲ ಮಟ್ಟ ಹೆಚ್ಚಿಸುವ ಯೋಜನೆ | 75 ಲಕ್ಷ ಜನರಿಗೆ ನೀರುಣಿಸಲಿರುವ ಯೋಜನೆ

ಸಪ್ತ ಜಿಲ್ಲೆಗೆ ನೀರುಣಿಸುವ ಮಹತ್ವದ ಯೋಜನೆ

ಸಕಲೇಶಪುರ/ಬೆಂಗಳೂರು

ಎತ್ತಿನಹೊಳೆ ಯೋಜನೆ ಪ್ರಸ್ತಾಪವಾದ ಸಮಯದಲ್ಲಿ ಅನೇಕರು, ಹಲವು ಪ್ರಶ್ನೆಗಳನ್ನು ಎತ್ತಿದ್ದರು. ಅದರಲ್ಲಿಯೂ ಪಶ್ಚಿಮಘಟ್ಟದಿಂದ ನೀರು ತರುವುದು 'ಅಸಾಧ್ಯ'ವೆಂದವರೇ ಹೆಚ್ಚು, ಇನ್ನು ಕೆಲವರು ದುಡ್ಡುಹೊಡೆಯುವ ಯೋಜನೆಯೆಂದು ಜರಿದರು. ಆದರೆ ಈ ಎಲ್ಲವನ್ನೂ ಮೀರಿ ಎತ್ತಿನಹೊಳೆ ಯೋಜನೆಯ ಮೊದಲ ಹಂತವನ್ನು ಜಾರಿಗೊಳಿಸುವಲ್ಲಿ ರಾಜ್ಯ ಸರಕಾರ ಯಶಸ್ವಿಯಾಗಿದೆ.

ಬಯಲುಸೀಮೆಯ ಕೆರೆಗಳನ್ನು ತುಂಬಿಸುವ ಮೂಲಕ ಅಂತರ್ಜಲ ಮಟ್ಟ ಹೆಚ್ಚಿಸುವ ಹಾಗೂ ಏಳು ಜಿಲ್ಲೆಗಳಿಗೆ ಲಕ್ಷಾಂತರ ಜನರಿಗೆ ಶಾಶ್ವತ ಕುಡಿಯುವ ನೀರು ಒದಗಿಸುವ ನಿಟ್ಟಿನಲ್ಲಿ ಈ ಯೋಜನೆ, ರಾಜ್ಯದಲ್ಲಿರುವ ಹಲವು ನೀರಾವರಿ ಯೋಜನೆಗಳಲ್ಲಿ ಪ್ರಮುಖ ಹಾಗೂ ಮುಖ್ಯವಾದದ್ದು. ಒಟ್ಟು 24 ಟಿಎಂಸಿ ನೀರನ್ನು ಮೇಲೆತ್ತಿ ಹರಿಸುವ ಈ ಯೋಜನೆಯಲ್ಲಿ 14 ಟಿಎಂಸಿ ಕುಡಿಯುವ ನೀರಿಗಾಗಿ, 10 ಟಿಎಂಸಿ ನೀರನ್ನು ಉದ್ದೇಶಿತ ಏಳು ಜಿಲ್ಲೆಗಳ 527 ಕರೆಗಳನ್ನು ತುಂಬಿಸುವ ನಿಟ್ಟಿನಲ್ಲಿ ಈ ಯೋಜನೆ ಹೆಚ್ಚು ಮಹತ್ವ ಪಡೆದಿದೆ. ಯೋಜನೆಯನ್ನು ಒಟ್ಟು ನಾಲ್ಕು ಭಾಗಗಳಾಗಿ ವಿಭಾಗ ಮಾಡಲಾಗಿದೆ. ನೀರೆತ್ತುವ ತೊಟ್ಟಿಗಳು, ಗುರುತ್ವ ಕಾಲುವೆ, ಸಮತೋಲನ ಜಲಾಶಯ ಮತ್ತು ಪೈಪ್‌ಲೈನ್‌ಗಳಾಗಿ ನಾಲ್ಕು ಭಾಗಮಾಡಿ ಯೋಜನೆ ಕಾಮಗಾರಿ ನಡೆಸಲಾಗಿದೆ. ಇದಕ್ಕಾಗಿ ಎಂಟು ಜಲಮೂಲಗಳಿಂದ ನೀರು ಹರಿಸಲು ಎಂಟು ಪೈಪ್‌ಲೈನ್ ನಿರ್ಮಾಣ ಮಾಡಲಾಗಿದೆ.

42 ಕಿ.ಮೀ. ಉದ್ದದ ಕಾಲುವೆಯಲ್ಲಿ ಸರಾಗ ನೀರು

ಇದರೊಂದಿಗೆ ಒಂಬತ್ತು ಪಂಪ್‌ಹೌಸ್, 8 ಸಬ್ ಸ್ಟೇಷನ್ ಮೂಲಕ ಈ ಯೋಜನೆಯ ನೀರು ಹರಿಯುತ್ತದೆ. 261 ಕಿ.ಮೀ ನಷ್ಟು ಯೋಜನೆಯಲ್ಲಿ ನೀರು ಹರಿಯುವ ಕಾಲುವೆಯ ಉದ್ದವಾಗಿದೆ. ಈಗಾಗಲೇ ಸುಮಾರು 42 ಕಿ.ಮೀ ಬೇಲೂರು ತಾಲೂಕಿನ ಐದಳ್ಳ ಕಾವಲುವವರೆಗೂ ನೀರು ಸರಾಗವಾಗಿ ಹರಿಯಲು ಅವಶ್ಯವಾಗಿರುವ ಕಾಮಗಾರಿಗಳು ಮುಕ್ತಾಯದ ಹಂತ ತಲುಪಿವೆ. ಆದರೆ ಐದಳ್ಳ ಕಾವಲು ಬಳಿ 5 ಕಿ.ಮೀ. ಅರಣ್ಯಭೂಮಿಯಲ್ಲಿ ಕಾಲುವೆ ಹೋಗಬೇಕಿರುವುದರಿಂದ ಅಲ್ಲಿ ಕಾಮಗಾರಿ ಆಗದೇ 32ನೇ ಕಿ.ಮೀ.ನಲ್ಲಿ ನೀರನ್ನು ಬೇರೆ ಕಡೆಗೆ ತಿರುಗಿಸಿ, ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಸಾಗರದತ್ತ ಹರಿಸಲಾಗುತ್ತಿದೆ.

ಸುರಂಗ, ಪೈಪ್‌ಲೈನ್ ಗುರುತ್ವ ಬಲದಿಂದ ಹರಿಯಲಿದೆ ನೀರು: ಪಶ್ಚಿಮಘಟ್ಟ ಪ್ರದೇಶದಿಂದ ಬಯಲುಸೀಮೆ ಪ್ರದೇಶಕ್ಕೆ ನೀರು ಹರಿಸುವ ಎತ್ತಿನಹೊಳೆ ಯೋಜನೆ ಸುಲಭದ್ದಾಗಿರಲಿಲ್ಲ. ಈ ಯೋಜನೆ ಜಾರಿ ಸಂದರ್ಭದಲ್ಲಿ ವ್ಯಾಪಕ ವಿರೋಧವಿತ್ತು. ಆದರೆ ಎಲ್ಲ ವಿರೋಧಗಳ ನಡುವೆ ಈಗ ಯೋಜನೆ ಮುಕ್ತಾಯದ ಹಂತಕ್ಕೆ ಬಂದು ತಲುಪಿದೆ. 2027ರ ವೇಳೆಗೆ ಈ ಯೋಜನೆ ಸಂಪೂರ್ಣ ಮುಕ್ತಾಯಗೊಂಡು, ಎಲ್ಲ ಜಿಲ್ಲೆಗಳಿಗೆ ನೀರು ಹರಿಯಲಿದೆ ಎನ್ನುವ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ. ಎತ್ತಿನಹೊಳೆ ಯೋಜನೆಯ ಒಟ್ಟು ಉದ್ದ 290 ಕಿಲೋಮೀಟರ್. ಅದರಲ್ಲಿ ಗುರುತ್ವಾಕರ್ಷಣೆ ಬಲದ ಮೂಲವೇ 261 ಕಿಲೋಮೀಟರ್ ಅಂದ್ರೆ ಸಕಲೇಶಪುರ ತಾಲೂಕಿನ ಹೆಬ್ಬನಹಳ್ಳಿ ಬಳಿಯಿಂದ ದೊಡ್ಡಬಳ್ಳಾಪುರದ ವರೆಗೆ ನೀರು ಹರಿಯುತ್ತದೆ.

162 ಕಾಲುವೆ ಕೆಲಸ ಪೂರ್ಣ: ಅದರಲ್ಲಿ 126 ಕಿಲೋಮೀಟರ್ ಪೈಪ್‌ಲೈನ್ ಮೂಲಕ ನೀರು ಹರಿದರೆ ಉಳಿದಂತೆ 140 ಕಿಲೋಮೀಟರ್ ನಷ್ಟು ಪ್ರಮಾಣದಲ್ಲಿ ತೆರೆದ ಕಾಲುವೆಗಳ ಮೂಲಕ ನೀರು ಹರಿದು ಗುರಿಮುಟ್ಟಲಿದೆ. ಈ ದೊಡ್ಡ ಯೋಜನೆಯಲ್ಲಿ ಈಗ 162 ಕಿಲೋಮೀಟರ್ ಕಾಲುವೆ ಕೆಲಸ ಸಂಪೂರ್ಣವಾಗಿ ಮುಗಿದಿದ್ದರೆ, 24 ಕಿಲೋಮೀಟರ್ ಕೆಲಸ ಪ್ರಗತಿಯಲ್ಲಿದೆ. 50 ಕಿಲೋಮೀರ್ ಪ್ರದೇಶದಲ್ಲಿ 19 ಕಿಲೋಮೀಟರ್ ಅರಣ್ಯ ಪ್ರದೇಶವಿದ್ದು, ಆ ಪ್ರದೇಶದ ಕೆಲಸ ಕೂಡ ಬಾಕಿ ಇದ್ದು 502 ಎಕರೆ ಬದಲಿ ಭೂಮಿಯನ್ನು ಕೊಟ್ಟು ಅರಣ್ಯ ಪ್ರದೇಶದಲ್ಲಿ ಕೂಡ ಕೆಲಸ ಶುರುಮಾಡಲು ಪ್ರಯತ್ನ ನಡೆದಿದೆ.

ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಸದ್ಯ 42 ಕಿಲೋಮೀಟರ್‌ವರೆಗೂ ನೀರು ಬಂದು ತಲುಪವಷ್ಟು ಕಾಮಗಾರಿ ತಲುಪಿದೆ. ಆದರೆ ಬೇಲೂರು ತಾಲೂಕಿನ ಐದಳ್ಳ ಕಾವಲು ಬಳಿ ಅರಣ್ಯ ಪ್ರದೇಶದಲ್ಲಿ ಕೆಲಸ ಆಗಬೇಕಿರುವುದರಿಂದ 32 ಕಿಲೋಮೀಟರ್‌ನಿಂದ ನೀರನ್ನು ಬೇರೆಡೆ ತಿರುಗಿಸಿ ಅಲ್ಲಿಂದ 132 ಕಿಲೋಮೀಟರ್ ದೂರದಲ್ಲಿರುವ ವಾಣಿವಿಲಾಸ ಸಾಗರಲ್ಲಿ ನೀರು ಹರಿಸಲಾಗುತ್ತಿದೆ. ಹಳೇಬೀಡು ಕೆರೆ, ಚಿಕ್ಕಮಗಳೂರು ಜಿಲ್ಲೆಯ ಬೆಳವಾಡಿ ಕೆರೆಗಳ ಮೂಲಕ ನೀರು ವೇದಾ ನದಿಗೆ ಸೇರಿ ಅಲ್ಲಿಂದ ವಾಣಿವಿಲಾಸ ಸೇರಲು ಬೇಕಾದ ವ್ಯವಸ್ಥೆ ಕೈಗೊಳ್ಳಲಾಗಿದೆ.

ಸಕಲೇಶಪುರ ತಾಲೂಕಿನ ಹೆಬ್ಬನಹಳ್ಳಿಯಲ್ಲಿ ಎತ್ತಿನಹೊಳೆ ಯೋಜನೆಯ ಮೊದಲ ಹಂತಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ಕೊಟ್ಟರು. ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಎಂ.ಬಿ.ಪಾಟೀಲ್, ಡಾ.ಪರಮೇಶ್ವರ್, ಕೆ.ಎನ್.ರಾಜಣ್ಣ, ಮಾಜಿ ಸಿಎಂ ವೀರಪ್ಪ ಮೊಯ್ಲಿ ಹಾಗೂ ಇತರರು ಇದ್ದರು.

ಮನುಷ್ಯ ಹುಟ್ಟಿದ ಮೇಲೆ ಸಾಕ್ಷಿ ಗುಡ್ಡೆಗಳನ್ನು ಬಿಟ್ಟು ಹೋಗಬೇಕು. ಕರ್ನಾಟಕದಲ್ಲಿ ಆಲಮಟ್ಟಿ ಜಲಾಶಯಕ್ಕೆ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಶಂಕುಸ್ಥಾಪನೆ ಮಾಡಿದರು. ಅದನ್ನು ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಉದ್ಘಾಟನೆ ಮಾಡಿದರು. 2014 ರಲ್ಲಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕಾಮಗಾರಿ ಪ್ರಾರಂಭವಾಗಿ ಅವರಿಂದಲೇ ಉದ್ಘಾಟನೆಯಾಗುತ್ತಿದೆ. ಇದು ಕಾಂಗ್ರೆಸ್ ಸರಕಾರದ ಸಾಕ್ಷಿ ಗುಡ್ಡೆ
-**ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

- ಪರಿಷ್ಕೃತ ಅಂದಾಜು ಮೊತ್ತ **23,251.66** ಕೋಟಿ
- 2024ರ ಜುಲೈ ಅಂತ್ಯಕ್ಕೆ ವೆಚ್ಚ **16,076.71** ಕೋಟಿ
- ಯೋಜನೆ ಒಟ್ಟು ನೀರಿನ ಪ್ರಮಾಣ **24.01** ಟಿಎಂಸಿ
- ಕುಡಿಯುವ ನೀರಿನ ಹಂಚಿಕೆ **14.056** ಟಿಎಂಸಿ
- ಕೆರೆಗಳನ್ನು ತುಂಬಿಸಲು **9.953** ಟಿಎಂಸಿ
- ಕೆರೆಗಳ ಸಂಖ್ಯೆ **527**

ಯೋಜನೆ ವಿರುದ್ಧ ಅರ್ಜಿ

ಏಳು ಜಿಲ್ಲೆಗಳ 6,657 ಗ್ರಾಮಗಳ 75 ಲಕ್ಷ ಜನರ ಬಾಯಾರಿಕೆ ನೀಗಿಸುವ ಈ ಯೋಜನೆಯ ವಿರುದ್ಧ ಅನೇಕ ಜನರು ಎನ್ ಜಿಟಿಗೆ ಅರ್ಜಿ ಹಾಕಿದ್ದರು. ಎಲ್ಲಾ ತಕರಾರುಗಳನ್ನು ವಜಾ ಮಾಡಿ ನಮ್ಮ ಪರವಾಗಿ ಎನ್‌ಜಿಟಿ ತೀರ್ಪು ನೀಡಿತು. ಇದರಿಂದ 527 ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತದೆ. ಸವಾಲಾಗಿ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಎಲ್ಲರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಎತ್ತಿಗಾಗಿ ನೀರಲ್ಲ

ಎತ್ತಿಗೆ ಸಾಕಾಗುವಷ್ಟು ನೀರು ಮಾತ್ರ ಇಲ್ಲಿದೆ. ಈ ನೀರನ್ನು ಬೆಂಗಳೂರು ಸುತ್ತಮುತ್ತ ತೆಗೆದುಕೊಂಡು ಹೋಗಲು ಹೇಗೆ ಸಾಧ್ಯ ಎಂದು ಪತ್ರಕರ್ತರೊಬ್ಬರು ಹಾಸನ ಜಿಲ್ಲಾಧಿಕಾರಿ ಬಳಿ ಕೇಳಿದ್ದರಂತೆ. ಇದು ಎತ್ತಿಗಾಗಿ ನೀರಲ್ಲ, ಬಯಲುಸೀಮೆಯ ಜನರ ಬದುಕಿಗಾಗಿ ಎತ್ತುತ್ತಿರುವ ನೀರು ಎಂದು ಅಂದಿನ ಜಿಲ್ಲಾಧಿಕಾರಿ ತಿಳಿಸಿದ್ದರು.

ಎಂಟು ಪೈಪ್‌ಲೈನ್ ಮೂಲಕ ನೀರು

ಎತ್ತಿನಹೊಳೆಯ ಯೋಜನೆಗಾಗಿ ಸಕಲೇಶಪುರ ತಾಲೂಕಿನ ವಿವಿಧ ಭಾಗಗಳಲ್ಲಿ ಎಂಟು ಪೈಪ್ ಲೈನ್‌ಗಳ ಮೂಲಕ ನೀರು ಹರಿಯಲಿದ್ದು ಮೊದಲ ಪೈಪ್‌ಲೈನ್‌ನಲ್ಲಿ 6.6 ಟಿಎಂಸಿ ನೀರು ಸಿಗಲಿದೆ, ಎರಡನೇ ಪೈಪ್‌ನಲ್ಲಿ 1.0 ಟಿಎಂಸಿ, ಮೂರನೇ ಪೈಪ್‌ಲೈನ್‌ನಲ್ಲಿ 1.4 ಟಿಎಂಸಿ, ನಾಲ್ಕರಲ್ಲಿ 0.98 ಟಿಎಂಸಿ, ಐದನೇ ಪೈಪ್ ಲೈನ್ ನಲ್ಲಿ 1.73 ಟಿಎಂಸಿ, ಆರನೇ ಪೈಪ್ ಲೈನ್‌ನಲ್ಲಿ 2.01 ಟಿಎಂಸಿ, ಏಳನೇ ಪೈಪ್‌ಲೈನ್ ನಲ್ಲಿ 7.76 ಟಿಎಂಸಿ, ಎಂಟನೇಯದ್ದರಲ್ಲಿ 2.51 ಟಿಎಂಸಿ ಸೇರಿ ಒಟ್ಟು 24 ಟಿಎಂಸಿ ನೀರು ಲಭ್ಯವಾಗಲಿದೆ. ಈ ನೀರನ್ನು ಬಯಲುಸೀಮೆಗೆ ಹರಿಸುವ ಈ ಯೋಜನೆಯ ಬಹುಮುಖ್ಯ ಉದ್ದೇಶವಾಗಿದೆ. ಸಕಲೇಶಪುರ ತಾಲೂಕಿನ ದೊಡ್ಡನಗರ ಎಂಬಲ್ಲಿ ಎಂಟು ಪೈಪ್ ಲೈನ್‌ಗಳ ನೀರು ಬಂದು ಅಲ್ಲಿಂದ ಪಂಪ್ ಆಗುವ ನೀರು ಮೂರನೇ ವಿತರಣಾ ತೊಟ್ಟಿ ಸಕಲೇಶಪುರ ತಾಲೂಕಿನ ಹೆಬ್ಬನಹಳ್ಳಿಗೆ ಬಂದು ಅಲ್ಲಿಂದ ಗುರುತ್ವಬಲದಿಂದ ನೀರು ದೊಡ್ಡಬಳ್ಳಾಪುರದತ್ತ ಹರಿಯಲಿದೆ. 2014ರ ಮಾರ್ಚ್ ರಂದು ಈ ಯೋಜನೆ ಆರಂಭವಾಗಿ ಅಂದಾಜು ಮೊತ್ತ 8,500 ಕೋಟಿ ಇತ್ತು. ನಂತರ ಅದು 12 ಸಾವಿರ ಕೋಟಿಗೆ ಹೆಚ್ಚಳವಾಗಿದೆ. ಬಳಿಕ 2023ರ ಜನವರಿಯಂದು ಈ ಯೋಜನೆ ಗಾತ್ರ 23,251 ಕೋಟಿ ಹೆಚ್ಚಳ ಮಾಡುವ ಮೂಲಕ ರಾಜ್ಯದ ಅತಿದೊಡ್ಡ ನಿರಾವರಿ ಯೋಜನೆ ಎನ್ನುವ ಹೆಗ್ಗಳಿಕೆಗೂ ಪಾತ್ರವಾಗಿದೆ. ಇದರಲ್ಲಿ ಬರೋಬ್ಬರಿ 8,500 ಕೋಟಿಯಷ್ಟು ಬೃಹತ್ ಮೊತ್ತವನ್ನು ಪಾವತಿ ಮಾಡಿ ರೈತರ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ.

ಹೆಬ್ಬನಹಳ್ಳಿಯಲ್ಲಿ ಎತ್ತಿನಹೊಳೆ ಯೋಜನೆಯ ಮೊದಲ ಹಂತಕ್ಕೆ ಸಿಎಂ ಸಿದ್ದರಾಮಯ್ಯ , ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ ಕೊಟ್ಟರು.

ಎತ್ತಿನಹೊಳೆಯಿಂದ ಲಕ್ಷಾಂತರ ಜನರಿಗೆ ಫಲ | ಪ್ರತಿಪಕ್ಷಗಳ ಟೀಕೆಗೆ ತಲೆಕೆಡಿಸಿಕೊಳ್ಳುವುದಿಲ್ಲ | ನಾನೇ ಶಂಕುಸ್ಥಾಪನೆ ಮಾಡಿದ್ದ ಯೋಜನೆಗೆ ನನ್ನಿಂದಲೇ ಉದ್ಘಾಟನೆ

2027ಕ್ಕೆ ಯೋಜನೆ ಪೂರ್ಣ: ಸಿಎಂ ಅಭಯ

ಹೆಬ್ಬನಹಳ್ಳಿಯಿಂದ ವಾಣಿವಿಲಾಸ ಸಾಗರದೆಡೆಗೆ ಹರಿಯುತ್ತಿರುವ ಜಲರಾಶಿ

ಬಿಜೆಪಿ ನಾಯಕರಿಗೆ ಸಿಎಂ ಸಿದ್ದರಾಮಯ್ಯ ಟಾಂಗ್

ನಿಮ್ಮ ಕಣ್ಣೆದುರಿಗಿರುವ ಸತ್ಯವನ್ನು ಸುಳ್ಳು ಎಂದು ಬಿಂಬಿಸಿ ನಿಮ್ಮನ್ನು ಮೋಸಮಾಡಲು ಕೆಲವರು ಪ್ರಯತ್ನಿಸುತ್ತಾರೆ. ಈ ಬಗ್ಗೆ ಎಚ್ಚರಿಕೆಯಿಂದ ಇರಿ. ಹೀಗಿದ್ದರೂ ಕೆಲವರು, ನಿಮ್ಮ ಕಣ್ಣೆದುರಿಗೇ ಇರುವ ಸತ್ಯವನ್ನು ಸುಳ್ಳು ಎಂದು ಬಿಂಬಿಸಿ ನಿಮಗೆ ಗೊಂದಲ ಮೂಡಿಸಲು ಕೆಲವರು ಯತ್ನಿಸುತ್ತಾರೆ. ಆದ್ದರಿಂದ ಅಪನಂಬಿಕೆ ಸೃಷ್ಟಿಸುವವರ ಮಾತುಗಳನ್ನು ಕೇಳಬೇಡಿ. ನಿಮ್ಮ ಕಣ್ಣೆದುರಿಗೆ ಇರುವುದನ್ನು ನಂಬಿ ಎಂದು ಹೇಳುವ ಮೂಲಕ ಬಿಜೆಪಿ, ಜೆಡಿಎಸ್ ನಾಯಕರಿಗೆ ಸಿಎಂ ಸಿದ್ದರಾಮಯ್ಯ ಪರೋಕ್ಷ ಟಾಂಗ್ ನೀಡಿದರು.

ಎರಡನೇ ಹಂತವನ್ನೂ ನಾನೇ ಉದ್ಘಾಟಿಸುವೆ

ಎತ್ತಿನಹೊಳೆಗೆ ನನ್ನ ಕಾಲದಲ್ಲೇ ಭೂಮಿಪೂಜೆ ಆಗಿತ್ತು. ಮೊದಲ ಹಂತದ ಯೋಜನೆಯನ್ನೂ ನಾನೇ ಉದ್ಘಾಟಿಸಿದ್ದು, ಎರಡನೇ ಹಂತದ ಯೋಜನೆಯನ್ನೂ ನಾನೇ ಉದ್ಘಾಟಿಸಿ ಯೋಜನೆಯನ್ನು ಪೂರ್ಣ ಮಾಡಿ ಕುಡಿಯುವ ನೀರನ್ನು ಕೊಟ್ಟೇ ಕೊಡ್ತೀವಿ. ಕೆರೆಗಳನ್ನು ತುಂಬಿಸಿಯೇ ತೀರುವುದೂ ಶತಸಿದ್ಧ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

ಬೆಂಗಳೂರು: ಎತ್ತಿನಹೊಳೆ ಯೋಜನೆಯ ಬಗ್ಗೆ ಅನೇಕರು ಸಂಶಯವ್ಯಕ್ತಪಡಿಸಿದ್ದರು. ಆದರೀಗ ಮೊದಲ ಹಂತದ ಕಾಮಗಾರಿ ಪೂರ್ಣಗೊಂಡು, ಉದ್ಘಾಟನೆಯಾಗಿದೆ. 2027ರ ವೇಳೆಗೆ ಇಡೀ ಯೋಜನೆ ಪೂರ್ಣಗೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶ್ವಾಸವ್ಯಕ್ತಪಡಿಸಿದರು.

ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಹೆಬ್ಬನಹಳ್ಳಿಯ ನಾಲ್ಕನೇ ವಿತರಣಾ ತೊಟ್ಟಿಗೆ ಚಾಲನೆ ನೀಡುವ ಮೂಲಕ ಎತ್ತಿನಹೊಳೆಯ ಮೊದಲ ಹಂತದ ಯೋಜನೆಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಇಡೀ ಯೋಜನೆ 2027ಕ್ಕೆ ಯಶಸ್ವಿಯಾಗಿ ಜಾರಿಯಾಗಿ ಲಕ್ಷಾಂತರ ಫಲಾನುಭವಿಗಳು ಯೋಜನೆಯ ಲಾಭ ಪಡೆಯಲಿದ್ದಾರೆ. ಏಳು ಜಿಲ್ಲೆಯ ಜನತೆಯ ಮನೆಗೆ ಕುಡಿಯುವ ನೀರು ಹಾಗೂ ಹತ್ತಾರು ಕೆರೆಗಳನ್ನು ತುಂಬಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಕುಡಿಯುವ ನೀರಿನ ವಿಚಾರದಲ್ಲಿ ರೈತರಿಗೆ ಅರಣ್ಯಾಧಿಕಾರಿಗಳು ಯಾವುದೇ ತೊಂದರೆ ಕೊಡಬಾರದು. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ 29 ತಾಲೂಕುಗಳ ಬದುಕನ್ನೇ ಬದಲಾಯಿಸುವ ಯೋಜನೆ ಇದಾಗಿದೆ. ಪಶ್ಚಿಮಘಟ್ಟದ ಮೇಲ್ಭಾಗದಲ್ಲಿ ಹರಿಯುವ ಎತ್ತಿನ ಹೊಳೆ, ಕಾಡುಮನೆ ಹೊಳೆ, ಹೊಂಗನಹಳ್ಳ, ಖೇರಿಹೊಳೆ ಹಳ್ಳಗಳಿಗೆ ಅಡ್ಡಲಾಗಿ ತಡೆಗಳನ್ನು ಕಟ್ಟಿ ಮಳೆಗಾಲದಲ್ಲಿ ಪ್ರವಾಹದಿಂದ ಸಿಗುವ ನೀರಿನಲ್ಲಿ 24.11 ಟಿಎಂಸಿ ನೀರನ್ನು ಬರಪೀಡಿತ 7 ಜಿಲ್ಲೆಗಳಿಗೆ ಹರಿಸುವ ಮಹತ್ವಾಕಾಂಕ್ಷೆಯ ಯೋಜನೆ ಸಾಕಾರಗೊಂಡಿದೆ. ಯೋಜನೆಯ ಮೊದಲ ಹಂತದಲ್ಲಿ ಚಿತ್ರದುರ್ಗದ ಹಿರಿಯೂರಿನ ವಾಣಿವಿಲಾಸ ಜಲಾಶಯದತ್ತ ನೀರು ಹರಿಯಲಿದೆ ಎಂದು ಹೇಳಿದರು.

ಪ್ರತಿ ವರ್ಷ ಜೂ.15ರಿಂದ ಅಕ್ಟೋಬರ್ 15ದವರೆಗೆ 4 ತಿಂಗಳು ಪೂರ್ವಾಭಿಮುಖವಾಗಿ ನೀರು ಹರಿಸಿ 7 ಜಿಲ್ಲೆಗಳ 29 ತಾಲೂಕಿನ 38 ಪಟ್ಟಣ ಪ್ರದೇಶ ಹಾಗೂ 6657 ಗ್ರಾಮಗಳ ಸುಮಾರು 75 ಲಕ್ಷ ಜನರಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆ ಇದಾಗಿದ್ದು, ಈ ಯೋಜನೆಯ ಒಟ್ಟು ವೆಚ್ಚ 23,251.66 ಕೋಟಿ ರು. ಗಳಷ್ಟಾಗಿದ್ದು, ಇದುವರೆಗೆ 16,0076.71 ಕೋಟಿ ವೆಚ್ಚ ಮಾಡಲಾಗಿದೆ. ರಾಜ್ಯಸರಕಾರ ಎಲ್ಲರಿಗೂ ಕುಡಿಯುವ ನೀರು ಒದಗಿಸಲು ಬದ್ಧವಾಗಿದ್ದು, ಎತ್ತಿನಹೊಳೆ ಯೋಜನೆ ಸಾಕಾರದಿಂದ ಹಲವು ಜಿಲ್ಲೆಗಳ ಜನರಿಗೆ ಅನುಕೂಲವಾಗಲಿದೆ ಎಂದರು.

ಟೀಕೆಗಳು ಸಾಯುತ್ತವೆ, ಕೆಲಸಗಳು ಶಾಶ್ವತವಾಗಿರುತ್ತವೆ

ಕಾರ್ಯಕ್ರಮದಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್, ನೀರಾವರಿ ಸಚಿವ ಡಿ.ಕೆ.ಶಿವಕುಮಾರ್, ಟೀಕೆಗಳು ಸಾಯುತ್ತವೆ, ನಮ್ಮ ಕೆಲಸ ಶಾಶ್ವತವಾಗಿ ಉಳಿಯುತ್ತದೆ ಎಂದು ನಂಬಿದ್ದು ಈ ಯೋಜನೆ ಬಗ್ಗೆ ಟೀಕೆ ಮಾಡಿದವರಿಗೆ ಕೆಲಸ ಮಾಡುವ ಮೂಲಕ ಉತ್ತರಿಸುವೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಇತಿಹಾಸದಲ್ಲಿ ಈ ಗಳಿಗೆಯಲ್ಲಿ ಒಂದು ವಿಶಿಷ್ಟ ಮೈಲಿಗಲ್ಲು ಸ್ಥಾಪನೆಯಾಗಿದ್ದು ಆಲಮಟ್ಟಿ ಯೋಜನೆಗೆ ಲಾಲ್ ಬಹದ್ದೂರ್ ಶಾಸ್ತ್ರಿ ಶಂಕುಸ್ಥಾಪನೆ ಮಾಡಿದ್ದರು. 2006ರಲ್ಲಿ ಅಬ್ದುಲ್ ಕಲಾಂ ಅವರು ಯೋಜನೆ ಉದ್ಘಾಟನೆ ಮಾಡಿದ್ದರು. ಆಲಮಟ್ಟಿ ಯೋಜನೆ ಜಾರಿ ನಂತರ ಎತ್ತಿನಹೊಳೆ ಯೋಜನೆಯು ಕರ್ನಾಟಕ ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಕುಡಿಯುವ ನೀರಿನ ಯೋಜನೆಯಾಗಿದೆ. 2014 ಮಾರ್ಚ್ 5ರಂದು ಸಿಎಂ ಸಿದ್ದರಾಮಯ್ಯ ಅವರು ಎತ್ತಿನಹೊಳೆ ಯೋಜನೆಗೆ ಶಂಕುಸ್ಥಾಪನೆ ಮಾಡಿದ್ದರು. ಈಗ ಅವರ ನೇತೃತ್ವದಲ್ಲಿ ಈ ಯೋಜನೆ ಉದ್ಘಾಟನೆಯಾಗಿದೆ. 10 ವರ್ಷಗಳು ಕಳೆದಿದ್ದು, ಬೇಕಾದಷ್ಟು ಟೀಕೆ ಟಿಪ್ಪಣಿಗಳು ಕೇಳಿಬಂದವು. ಎಲ್ಲವನ್ನೂ ಮೆಟ್ಟಿನಿಂತು ಯೋಜನೆ ಜಾರಿಯಾಗಿದೆ. ಈ ಯೋಜನೆಗೆ ಬೇರೆ ಸರಕಾರಗಳು ಪ್ರಯತ್ನಿಸಿದ್ದು, ನಾನು ಯಾರನ್ನೂ ದೂಷಿಸುವುದಿಲ್ಲ ಎಂದರು.

ಶೀಘ್ರವೇ ತುಮಕೂರಿಗೆ ನೀರು: ಈ ಇಲಾಖೆ ಜವಾಬ್ದಾರಿ ವಹಿಸಿಕೊಂಡ ನಂತರ ಯೋಜನೆಯನ್ನು ಪೂರ್ಣಗೊಳಿಸಲೇಬೇಕು ಎಂದು ತೀರ್ಮಾನ ಮಾಡಿ ಆದ್ಯತೆ ಮೇರೆಗೆ ಕೆಲಸ ಮಾಡಲಾಗಿದೆ. ಪರಿಣಾಮ ಪಶ್ಚಿಮಘಟ್ಟಗಳಿಂದ ಬಯಲುಸೀಮೆಯ ಪ್ರದೇಶಕ್ಕೆ ನೀರನ್ನು ತೆಗೆದುಕೊಂಡು ಹೋಗಲಾಗುತ್ತಿದೆ. ಈಗ 123 ಕಿ.ಮೀ ದೂರದ ವಾಣಿವಿಲಾಸ ಅಣೆಕಟ್ಟಿಗೆ ನೀರು ಸೇರುತ್ತಿದೆ. ಈ ಯೋಜನೆಯ ಕಾಲುವೆ ಹಾದುಹೋಗುವ ಮಧ್ಯಭಾಗಗಳಲ್ಲಿ ಅರಣ್ಯ ಪ್ರದೇಶದಲ್ಲಿ ಒಂದಷ್ಟು ಕೆಲಸ ಬಾಕಿ ಇವೆ. ಕೆಲವೇ ತಿಂಗಳಲ್ಲಿ ಆ ಕೆಲಸ ಪೂರ್ಣಗೊಳ್ಳಲಿದ್ದು, ನಂತರ ತುಮಕೂರಿಗೆ ಈ ನೀರನ್ನು ತೆಗೆದುಕೊಂಡು ಹೋಗಲಾಗುವುದು ಎಂದು ಡಿಸಿಎಂ ವಿವರಿಸಿದರು.

ಯೋಜನೆ ಕುರಿತಾಗಿ ಅನೇಕ ನಾಯಕರು ಸದನ ಹಾಗೂ ಸಂಸತ್ತಿನಲ್ಲಿ ಮಾತನಾಡಿದ್ದಾರೆ. ಈ ಯೋಜನೆ ಜಾರಿ ಸಾಧ್ಯವೇ ಇಲ್ಲ ಎಂದು ಬಿಜೆಪಿ ನಾಯಕರು ಟೀಕೆ ಮಾಡುತ್ತಿದ್ದರು ಟೀಕೆಗೆ ನಾನು ಈಗ ಉತ್ತರ ನೀಡುವುದಿಲ್ಲ. ನನ್ನ ಕೆಲಸಗಳೇ ಉತ್ತರ ನೀಡುತ್ತವೆ. ಅವರಿಗೆ ಅಽವೇಶನದಲ್ಲಿ ಉತ್ತರ ನೀಡುತ್ತೇನೆ. ಗೌರಿ ಹಾಗೂ ಗಣೇಶ ಹಬ್ಬದ ಸಂದರ್ಭದಲ್ಲಿ ವಿಘ್ನಗಳ ನಿವಾರಕ ವಿನಾಯಕನನ್ನು ಪ್ರಾರ್ಥಿಸುತ್ತೇನೆ. ಈ ಶುಭ ಸಂದರ್ಭದಲ್ಲಿ ಒಳ್ಳೆಯ ವಿಚಾರಗಳನ್ನಷ್ಟೇ ಮಾತನಾಡೋಣ ಎಂದು ಟಾಂಗ್ ನೀಡಿದರು.

ಅಶುಭದ ಮಾತು ಬೇಡ: ನುಡಿದರೆ ಮುತ್ತಿನ ಹಾರದಂತಿರಬೇಕು ಎಂಬ ಬಸವಣ್ಣನವರ ವಚನದಂತೆ ನಮ್ಮ ಮಾತುಗಳು ಉತ್ತಮವಾಗಿರಲಿ. ಶುಭ ಸಂದರ್ಭದಲ್ಲಿ ಅಶುಭದ ಮಾತುಗಳು ಬೇಡ. ಯೋಜನೆಯಲ್ಲಿ ನಿರೀಕ್ಷಿತ ಮಟ್ಟದ ನೀರು ಸಿಗುವುದೇ ಎಂಬ ಅನುಮಾನವಿತ್ತು. ಈ ನೀರು ಸಾಕಾಗದೆ ಹೋದರೆ ಎಂಬ ಆತಂಕವಿತ್ತು. ನಾವು ಕುಡಿಯುವ ಉದ್ದೇಶಕ್ಕೆ 14 ಟಿಎಂಸಿ ಹಾಗೂ ಕೆರೆಗಳ ತುಂಬಿಸಲು ಸುಮಾರು 10 ಟಿಎಂಸಿ. ಒಟ್ಟು 24 ಟಿಎಂಸಿ ನೀರನ್ನು ತೆಗೆಯುವ ಗುರಿಯಿಟ್ಟುಕೊಂಡಿದ್ದು ಕಾರ್ಯಾಚರಣೆ ಯಶಸ್ವಿಯಾಗಿದೆ ಎಂದು ತಿಳಿಸಿದರು.

ಫಲಾನುಭವಿ ಜಿಲ್ಲೆಗಳ ಉಸ್ತುವಾರಿ ಸಚಿವರುಗಳಿಂದ ಚಾಲನೆ: ಎತ್ತಿನಹೊಳೆ, ಕಾಡುಮನೆಹೊಳೆ, ಕೇರಿಹೊಳೆ, ಹೊಂಗದಹಳ್ಳಗಳಲ್ಲಿ ಇರುವ ಏಳು ವಿಆರ್ ಗಳನ್ನು ಫಲಾನುಭವಿ ಜಿಲ್ಲೆಗಳ ಉಸ್ತುವಾರಿ ಸಚಿವರು ಚಾಲನೆ ನೀಡಿದರು. ಶುಕ್ರವಾರ (ಸೆ. 6 ರಿಂದ) 60 ದಿನಗಳ ಕಾಲ ನಿರಂತರವಾಗಿ ಸುಮಾರು 5 ಟಿಎಂಸಿ ನೀರನ್ನು ಎತ್ತಿ ವೇದಾ ವ್ಯಾಲಿ ಮೂಲಕ ವಾಣಿವಿಲಾಸ ಅಣೆಕಟ್ಟಿಗೆ ಹರಿಸಲಾಗುವುದು.

ಹೆಬ್ಬನಹಳ್ಳಿಯಲ್ಲಿ ಎತ್ತಿನಹೊಳೆ ಯೋಜನೆಯ ಮೊದಲ ಹಂತದ ಲೋಕಾರ್ಪಣೆ ಕಾರ್ಯಕ್ರಮವನ್ನು ಶುಕ್ರವಾರ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು. ಸಚಿವರಾದ ಎಂ.ಬಿ.ಪಾಟೀಲ್, ಡಾ.ಪರಮೇಶ್ವರ್, ಬೋಸರಾಜು, ಕೆ.ಎನ್.ರಾಜಣ್ಣ, ಮಾಜಿ ಸಿಎಂ ವೀರಪ್ಪ ಮೊಯ್ಲಿ ಮೊದಲಾದ ಗಣ್ಯರು ಇದ್ದರು.

ಈ ವರ್ಷ ಈಗಾಗಲೇ 15 ಟಿಎಂಸಿ ನೀರನ್ನು ಎತ್ತಲಾಗಿದೆ. ಡಿಸೆಂಬರ್ ವೇಳೆಗೆ ತುಮಕೂರು ಗಡಿವರೆಗೂ 5 ಟಿಎಂಸಿ ನೀರನ್ನು ಹರಿಸಲು ಗುರಿ ಹೊಂದಿದ್ದೇವೆ. ನಮ್ಮ ಇಲಾಖೆಯಲ್ಲಿ ಅತ್ಯುತ್ತಮ ಅಧಿಕಾರಿಗಳು ಇದ್ದಾರೆ. ನನ್ನ ರಾಜಕೀಯ ಜೀವನದ ಒಂದು ಮೈಲಿಗಲ್ಲು. ಅತ್ಯಂತ ಹೆಮ್ಮೆಯ ಕ್ಷಣಗಳಲ್ಲಿ ಇದು ಒಂದು. ನನಗೆ ಇಂತಹ ಅವಕಾಶ ಕೊಟ್ಟ ಕನ್ನಡನಾಡಿನ ಜನರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.
-**ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ನೀರಿನ ಪೋಲು ತಡೆಗೆ ಕಾನೂನು

ಮಾರ್ಗಮಧ್ಯೆ ನೀರನ್ನು ವ್ಯರ್ಥ ಮಾಡಬಾರದು ಎಂದು ಹೊಸ ಕಾನೂನು ತರಲಾಗಿದೆ. ಈ ಯೋಜನೆಗೆ 23 ಸಾವಿರ ಕೋಟಿ ವೆಚ್ಚದ ಅಂದಾಜು ಮಾಡಲಾಗಿದೆ. ಈ ಯೋಜನೆಯಲ್ಲಿ 8 ವಿಆರ್‌ಗಳ ಮೂಲಕ ನೀರನ್ನು ಎತ್ತಿ ಹರಿಸಲಾಗುವುದು.ಸದ್ಯಕ್ಕೆ 1,500 ಕ್ಯುಸೆಕ್ ನೀರನ್ನು ಹರಿಸಲಾಗುವುದು. ಆ ಮೂಲಕ ಗೌರಿ ಹಬ್ಬದ ದಿನ ಗಂಗೆಗೂ ಪೂಜೆ ಮಾಡಲಾಗಿದೆ. ಇಬ್ಬರೂ ದೇವತೆಗಳನ್ನು ಒಟ್ಟಾಗಿ ಪೂಜಿಸುತ್ತಿದ್ದೇವೆ ಎಂದು ಡಿಸಿಎಂ ಡಿಕೆಶಿ ತಿಳಿಸಿದರು.

ವಾಸ್ತು ಹಾಗೂ ಶುದ್ಧೀಕರಣ ಪೂಜೆ

ಗೌರಿ ಹಬ್ಬದ ದಿನ ಶುಭಮುಹೂರ್ತ, ಶುಭಘಳಿಗೆ, ಶುಭದಿನದಂದು ಎತ್ತಿನಹೊಳೆ ಯೋಜನೆಯ ಚಾಲನೆ ಯಾವುದೇ ವಿಘ್ನಗಳಿಲ್ಲದೆ ನೆರವೇರಲಿ ಎಂದು ಹಿಂದಿನ ದಿನ (ಗುರುವಾರದಂದು) ಸಂಕಲ್ಪ ಪೂಜೆಯಲ್ಲಿ ಪಾಲ್ಗೊಂಡಿದ್ದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ಬೆಳಗ್ಗೆ 6 ಗಂಟೆಯ ವೇಳೆಗಾಗಲೇ ಸಕಲೇಶಪುರ ದೊಡ್ಡನಗರದ ಎತ್ತಿನಹೊಳೆ ಡಿಸಿ 3- ಪಂಪ್ ಹೌಸ್ ನಲ್ಲಿ ಮೈಸೂರಿನ ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ಅವರ ನೇತೃತ್ವದಲ್ಲಿ ನಡೆದ ವಾಸ್ತುಪೂಜೆ ಹಾಗೂ ಶುದ್ಧೀಕರಣ ಪೂಜೆಯಲ್ಲಿ ಪಾಲ್ಗೊಂಡಿದ್ದರು. ದೊಡ್ಡನಗರದ ಡಿ.ಸಿ 3 ಪಂಪ್ ಹೌಸ್‌ನಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್, ಸಚಿವರಾದ ಪರಮೇಶ್, ಎಂ.ಬಿ. ಪಾಟೀಲ್ ಅವರು ಡಿಸಿ-3 ಪಂಪ್‌ಹೌಸ್ ನಲ್ಲಿ ನೀರೆತ್ತುವ ಯಂತ್ರಗಳಿಗೆ ಚಾಲನೆ ನೀಡಿದರು. ಇಲ್ಲಿಂದ 1500 ಕ್ಯುಸೆಕ್ ನೀರನ್ನು ಮೇಲಕ್ಕೆ ಎತ್ತಿ ಹೆಬ್ಬನಹಳ್ಳಿಯಲ್ಲಿರುವ ಡಿಸಿ - 4ಕ್ಕೆ ಹರಿಸಲಾಯಿತು. ಹೆಬ್ಬನಹಳ್ಳಿಯಲ್ಲಿ ಮಹತ್ವಾಕಾಂಕ್ಷಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಮೊದಲ ಹಂತವನ್ನು ಉದ್ಘಾಟಿಸಲಾಯಿತು.

ಯೋಜನೆ ವ್ಯಾಪ್ತಿಯ ಜಿಲ್ಲೆಗಳು

ಚಿಕ್ಕಮಗಳೂರು, ಹಾಸನ, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಮತ್ತು ಕೋಲಾರ

ಯೋಜನೆ ಉದ್ಘಾಟನೆ ವೇಳೆ ಪುರೋಹಿತರಿಂದ ಸಿಎಂ ಸಿದ್ದರಾಮಯ್ಯನವರಿಗೆ ತಿಲಕ ಧಾರಣೆ

ವಿಶ್ವವಾಣಿ

ಸಂಪಾದಕೀಯ

ಮಹದಾಯಿ ವಿಚಾರದಲ್ಲಿ ತಾರತಮ್ಯ

ಅಂತಾರಾಜ್ಯ, ಗಡಿ ಮತ್ತು ನದಿ ನೀರಿನ ವ್ಯಾಜ್ಯಗಳು ಬಂದಾಗ ಕರ್ನಾಟಕಕ್ಕೆ ಅನ್ಯಾಯವಾಗುತ್ತಲೇ ಇದೆ. ಮಹದಾಯಿ ವಿಚಾರದಲ್ಲಿ ಇದು ಮತ್ತೊಮ್ಮೆ ಸ್ಪಷ್ಟವಾಗಿದೆ. ಕುಡಿಯುವ ನೀರಿಗಾಗಿ ರೂಪಿಸಿರುವ ಈ ಯೋಜನೆಗೆ ಅನುಮತಿ ಕೋರಿ ಕಳೆದ ಎರಡು ದಶಕಗಳಿಂದ ರಾಜ್ಯ ಹೋರಾಡುತ್ತಲೇ ಬಂದಿದೆ. ಮೊದಲು ಯೋಜನೆಗೆ ಒಪ್ಪಿದ್ದ ಗೋವಾ ಸರಕಾರ, ನಂತರ ರಾಜಕೀಯ ಕಾರಣಗಳಿಗಾಗಿ ಇದನ್ನು ವಿರೋಧಿಸಿತು. ಕೊನೆಗೆ ಸುಪ್ರೀಂಕೋರ್ಟ್ ಆದೇಶದಂತೆ ನ್ಯಾಯಾಧೀಕರಣ ರಚನೆಯಾಯಿತು. ನ್ಯಾಯಮಂಡಳಿಯು 2018ರ ಆಗಸ್ಟ್‌ನಲ್ಲಿ 3.90 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿ ತೀರ್ಪು ನೀಡಿದೆ. ಯೋಜನೆಯ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ 2022ರ ಡಿಸೆಂಬರ್‌ನಲ್ಲಿ ಅನುಮೋದನೆ ನೀಡಿದೆ. ಇದರಲ್ಲಿ ಕಳಸಾ ನಾಲಾ ತಿರುವು ಯೋಜನೆಗೆ 1.78 ಟಿಎಂಸಿ ಅಡಿ ಮೀಸಲಿಡಲಾಗಿದೆ. ಇದಾದ ಬಳಿಕ ಕಳಸಾ ನಾಲಾ ತಿರುವು ಯೋಜನೆಗೆ 26.92 ಹೆಕ್ಟೇರ್ ಅರಣ್ಯ ಭೂಮಿ ಮತ್ತು ಬಂಡೂರಾ ನಾಲಾ ತಿರುವು ಯೋಜನೆಗೆ 22.80 ಹೆಕ್ಟೇರ್ ಅರಣ್ಯ ಬಳಸಿಕೊಳ್ಳಲು ಅನುಮೋದನೆ ಕೋರಿ ರಾಜ್ಯ ಸರಕಾರ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಸಚಿವಾಲಯಕ್ಕೆ ಪ್ರಸ್ತಾಪ ಸಲ್ಲಿಸಿತ್ತು. ಆದರೆ ವನ್ಯಜೀವಿ ಧಾಮದ ಮೂಲಕ ಕರ್ನಾಟಕವು ನೀರು ಕೊಂಡೊಯ್ಯುತ್ತಿದೆ ಎಂಬ ಗೋವಾದ ಹೊಸ ತಗಾದೆ ಹಿನ್ನೆಲೆಯಲ್ಲಿ ಸಚಿವಾಲಯದ ಒಪ್ಪಿಗೆ ಇನ್ನೂ ಸಿಕ್ಕಿಲ್ಲ. ಇದೀಗ ಕರ್ನಾಟಕದ ಮೂಲಕ ಹಾದು ಹೋಗಲಿರುವ ಗೋವಾದ 400 ಕೆವಿ ವಿದ್ಯುತ್ ಪೂರೈಕೆ ಯೋಜನೆಗೆ ಪರಿಸರ ಸಚಿವಾಲಯ ಅನುಮತಿ ಕೊಟ್ಟಿದೆ. ಈ ಯೋಜನೆಯಲ್ಲಿ ಕರ್ನಾಟಕದ 435 ಎಕರೆ ಅರಣ್ಯ ಭೂಮಿ ಬಳಕೆಯಾಗಲಿದೆ. ಇದು ರಾಷ್ಟ್ರೀಯ ಮಹತ್ವದ ಯೋಜನೆಯಾ ಗಿದ್ದು ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸದಂತೆ ಸ್ವತ: ಪ್ರಧಾನಿ ಕರ್ನಾಟಕದ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಮಹದಾಯಿ ಯೋಜನಾ ಪ್ರದೇಶದ ಅಧ್ಯಯನಕ್ಕಾಗಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು ತಜ್ಞರ ತಂಡವನ್ನು ಕಳುಹಿಸಿತ್ತು. ಆದರೆ ಪ್ರಾಧಿಕಾರವು ಈ ತನಕ ತನ್ನ ಅಂತಿಮ ಅಭಿಪ್ರಾಯ ತಿಳಿಸಿಲ್ಲ. ಗೋವಾದ ವಿಚಾರದಲ್ಲಿ ಆಕ್ಷೇಪವೆತ್ತದ ಪ್ರಾಧಿಕಾರ ಕರ್ನಾಟಕದ ಅರಣ್ಯ ಭೂಮಿ ಬಳಕೆ ವಿಚಾರದಲ್ಲಷ್ಟೇ ತಕರಾರು ತೆಗೆದಿದೆ. ರಾಜ್ಯದ ಸಂಸದರು ಪಕ್ಷಭೇದ ಮರೆತು ಕೇಂದ್ರದ ಈ ನಿಲುವನ್ನು ಖಂಡಿಸಬೇಕು. ಮಹದಾಯಿ ಯೋಜನೆಗೆ ತಕ್ಷಣ ಅನುಮತಿ ನೀಡುವಂತೆ ಒತ್ತಡ ಹೇರಬೇಕು.

ಸೊಂಪಾದಕೀಯ

ಅಂತಿಮ ಚುಂಬನಂ ದಂತ ಭಗ್ನಂ?!

ಕನ್ನಡದಲ್ಲಿ ಸದ್ಯಕ್ಕೆ ದುನಿಯಾ ವಿಜಯ್ ಹವಾ ಇದ್ದರೆ, ತಮಿಳಿನಲ್ಲಿ ದಳಪತಿ ವಿಜಯ್ ಹವಾ. ದುನಿಯಾ ವಿಜಯ್ ತಮ್ಮ ಭೀಮ ಚಿತ್ರದ ಮೂಲಕ ಸದ್ದು ಮಾಡಿದ್ದಾರೆ. ಈ ಚಿತ್ರ ಈಗಾಗಲೇ ಚಿತ್ರಮಂದಿರಗಳಲ್ಲಿ ಯಶಸ್ವಿ ಪ್ರದರ್ಶನವನ್ನು ಮುಗಿಸಿ ಓಟಿಟಿ ಬಾಗಿಲಿಗೆ ಬಂದಿದೆ. ಪ್ರೈಮ್ ವಿಡಿಯೋದಲ್ಲಿ ಈಗ ಭೀಮ ಚಿತ್ರ ಪ್ರಸಾರವಾಗುತ್ತಿದೆ. ಇದೇ ನಿಟ್ಟಿನಲ್ಲಿ ದಳಪತಿ ವಿಜಯ್ ಅಭಿನಯದ ಗೋಟ್ ಚಿತ್ರ ತಮಿಳಿನಲ್ಲಿ ಸಾಕಷ್ಟು ಸುದ್ದಿ ಮಾಡುತ್ತಿದೆ. ವಿಜಯ್ ಚಿತ್ರ ಅಂದಮೇಲೆ ಅದಕ್ಕೆ ಅಬ್ಬರದ ಮತ್ತು ಹಬ್ಬದ ಎನ್ನುವಂಥ ಪ್ರಚಾರ ಇದ್ದೇ ಇರುತ್ತದೆ. ಆದರೆ ಇದು ವಿಜಯ್ ಅಭಿನಯದ ಕೊನೆಯ ಚಿತ್ರ ಎಂಬ ಕಾರಣಕ್ಕೆ ಇನ್ನಷ್ಟು ಹೆಚ್ಚು ಸುದ್ದಿ ಮಾಡಿತ್ತು. ಇದಾದ ನಂತರ ವಿಜಯ್ ಅವರು ಅಧಿಕೃತವಾಗಿ ರಾಜಕೀಯಕ್ಕೆ ಎಂಟ್ರಿ ಕೊಡಲಿದ್ದಾರೆ, ಸಿನಿಮಾ ರಂಗಕ್ಕೆ ಗುಡ್ ಬೈ ಹೇಳಲಿದ್ದಾರೆ ಎಂಬ ಸುದ್ದಿ ಇದೆ. ಹಾಗಾಗಿ ಈ ಸಿನಿಮಾದ ಮೇಲೆ ವಿಜಯ್ ಅಭಿಮಾನಿಗಳು ಅಷ್ಟೇ ಅಲ್ಲದೆ, ಇತರ ಪ್ರೇಕ್ಷಕರ ನಿರೀಕ್ಷೆ ಕೂಡಾ ಜಾಸ್ತಿ ಇತ್ತು. ಆದರೆ ಚಿತ್ರ ನೋಡಿದ ಮೇಲೆ ಪ್ರೇಕ್ಷಕರಿಂದ ಬರುತ್ತಿರುವ ಪ್ರತಿಕ್ರಿಯೆಯನ್ನು ಕೇಳಿದರೆ ಚಿತ್ರ ನಿರೀಕ್ಷಿತ ಮಟ್ಟ ಮುಟ್ಟಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಸಿನಿಮಾ ನೋಡಿದ ಪ್ರೇಕ್ಷಕರು ಅಸಮಾಧಾನದ ನಿಟ್ಟುಸಿರು ಬಿಡುತ್ತಿದ್ದಾರೆ. ಕೆಲವರಂತೂ ಈ ಚಿತ್ರದ ಮೂಲಕ ಪ್ರೇಕ್ಷಕರನ್ನೇ ಗೋಟ್ ಅಂದ್ರೆ ಕುರಿ ಅಂದರೆ ಬಕ್ರ ಮಾಡಲಾಗಿದೆ ಅಂತಲೇ ವಿಮರ್ಶೆ ಬರೆದು ಬಿಟ್ಟಿದ್ದಾರೆ. ಹೊಸದಾಗಿ ಚಿತ್ರರಂಗಕ್ಕೆ ಬರುವವರ ಸಿನಿಮಾ ಫ್ಲಾಪ್ ಆದರೆ ಪ್ರಥಮ ಚುಂಬನಂ ದಂತ ಭಗ್ನಂ ಅಂತಾರೆ. ಆದರೆ ದಳಪತಿ ವಿಜಯ್ ಲೆಕ್ಕದಲ್ಲಿ ಅಂತಿಮ ಚುಂಬನಂ ದಂತ ಭಗ್ನಂ ಎನ್ನುವಂತಾಗಿದೆ. ಈ ಸಿನಿಮಾ ತೆಗೆದುಕೊಂಡಿರುವ ಆರಂಭವನ್ನು ನೋಡಿದರೆ ಬಾಕ್ಸಾಫೀಸ್‌ನಲ್ಲಿ ಅಥವಾ ದಳಪತಿ ವಿಜಯ್ ಅವರ ಕೊನೆಯ ಚಿತ್ರ ಎಂದು ಲೆಕ್ಕಪತ್ರದಲ್ಲಿ ಆಗಲಿ ಇದು ಯಾವ ವಿಶೇಷ ದಾಖಲೆಯನ್ನು ಮಾಡುವುದು ಅನುಮಾನ ಎನ್ನಲಾಗುತ್ತಿದೆ. ಈಗ ವಿಜಯ್ ಅಭಿಮಾನಿಗಳ ಪಾಲಿಗೆ ಇರುವ ನಿರೀಕ್ಷೆ ಎಂದರೆ ಕೊನೆಯ ಸಿನಿಮಾ ಅಂದುಕೊಂಡಿದ್ದು ಹೀಗಾಯಿತು ಅನ್ನೋ ಕಾರಣಕ್ಕೆ ದಳಪತಿ ವಿಜಯ್ ರಾಜಕೀಯಕ್ಕೆ ಹೋಗುವ ಮುನ್ನ ಇನ್ನೊಂದು ಸಿನಿಮಾ ಮಾಡ್ತಾರಾ ಅನ್ನುವುದು.

ಸಂಪಾದಕರ ಸದ್ಯಶೋಧನೆ

ವಿಮಾನ ಪ್ರಯಾಣದಲ್ಲಿ ಟರ್ಬುಲೆನ್ಸ್

ವಿಮಾನ ಪ್ರಯಾಣ ವೇಗವೊಂದೇ ಅಲ್ಲ, ಸುರಕ್ಷಿತವೂ ಹೌದು. ಆದರೂ ಕೆಲವರು ವಿಮಾನದಲ್ಲಿ ಪ್ರಯಾಣಿಸಲು ಭಯ ಪಡುತ್ತಾರೆ. ಇದಕ್ಕೆ ಕಾರಣ, ವಿಮಾನ ಮೇಲಕ್ಕೆ ಹಾರುವಾಗ ಜೋರಾಗಿ ಅಲ್ಲಾಡುವುದು. ಟರ್ಬುಲೆನ್ಸ್ (ಪ್ರಕ್ಷುಬ್ಧ) ಆದಾಗ ಇಡೀ ವಿಮಾನ ಗಾಳಿಯಲ್ಲಿ ಹುಯ್ದಾಡುತ್ತದೆ. ಇದು ಎಂಥವರಲ್ಲೂ ಭಯವನ್ನುಂಟು ಮಾಡುತ್ತದೆ. ವಿಮಾನ ಮೂವತ್ತೆಂಟು ಸಾವಿರ ನಲವತ್ತು ಸಾವಿರ ಅಡಿ ಎತ್ತರದಲ್ಲಿ ಹಾರುವಾಗ ಏಕಾಏಕಿ ಹುಯ್ದಾಡಲು ಆರಂಭಿಸಿದರೆ, ಪ್ರಾಣ ಹೋದ ಅನುಭವವಾಗುತ್ತದೆ. ಕೆಲವೊಮ್ಮೆ ಇದು ಪ್ರಯಾಣಿಕರಿಗೆ ಅಸ್ವಸ್ಥತೆಯನ್ನುಂಟು ಮಾಡಬಹುದು. ಹಾಗಂತ ವಿಮಾನ ಬಿದ್ದು ಹೋಗುವುದಿಲ್ಲ ಅಥವಾ ದುರಂತ ಸಂಭವಿಸುವುದಿಲ್ಲ. ವಿಮಾನ ಸುರಕ್ಷಿತವಾಗಿರುತ್ತದೆ. ಟರ್ಬುಲೆನ್ಸ್ ಪರಿಣಾಮಗಳನ್ನು ತಡೆದುಕೊಳ್ಳಲು ಶಕ್ಯವಾಗುವ ರೀತಿಯಲ್ಲಿ ವಿಮಾನಗಳನ್ನು ನಿರ್ಮಿಸಲಾಗಿರುತ್ತವೆ. ಆದರೂ ವಿಮಾನ ಆಗಸದಲ್ಲಿ ಅಷ್ಟು ಎತ್ತರದಲ್ಲಿ ಹಾರುವಾಗ ಹಠಾತ್ ಅಲುಗಾಡಲಾರಂಭಿಸಿದರೆ, ಅನುಭವಿ ಪ್ರಯಾಣಿಕರ ಎದೆ ಗುಂಡಿಗೆ ಪತರಗುಟ್ಟಲಾರಂಭಿಸುತ್ತದೆ. ವಿಮಾನ ಸ್ವಲ್ಪ ಅಲುಗಾಡಿದರೂ ಸಾಕು, ನಿಮ್ಮ ಸ್ಥಾನಕ್ಕೆ ಮರಳುವಂತೆ, ಸೀಟ್ ಬೆಲ್ಟ್‌ನ್ನು ಕಟ್ಟಿಕೊಳ್ಳುವಂತೆ, ಟಾಯ್ಲೆಟ್ ಬಳಸದಂತೆ ಪೈಲಟ್ ಧ್ವನಿವರ್ಧಕದ ಮೂಲಕ ಆದೇಶ ನೀಡುತ್ತಾನೆ. ವಿಮಾನ ಅಲುಗಾಡುವುದು ಆತಂಕಕಾರಿಯಾಗಿರುತ್ತದೆ, ಆದರೆ ಹಾನಿಕಾರಕವಲ್ಲ ಎಂದು ಎಷ್ಟೇ ಹೇಳಿದರೂ ಪ್ರಯಾಣಿಕರಿಗೆ ಸಮಾಧಾನವಾಗುವುದಿಲ್ಲ. ಅವರು ತಕ್ಷಣ ಭಗವಂತನನ್ನು ಪ್ರಾರ್ಥಿಸಲಾರಂಭಿಸುತ್ತಾರೆ. ವಿಮಾನ ಬಿದ್ದರೆ ಏನು ಗತಿ ಎಂದು ಚಿಂತಿಸಲಾರಂಭಿಸುತ್ತಾರೆ. ಅಷ್ಟಕ್ಕೂ ಟರ್ಬುಲೆನ್ಸ್ ಎಂದರೆ ಗಾಳಿಯಲ್ಲಿನ ಅಸ್ಥಿರತೆ. ಇದು ವಿವಿಧ ಕಾರಣಗಳಿಂದ ಉಂಟಾಗಬಹುದು, ಉದಾಹರಣೆಗೆ ಬಿಸಿ ಮತ್ತು ತಂಪಾದ ಗಾಳಿಯ ಸಂಪರ್ಕ, ಗಾಳಿಯ ಹರಿವು ಅಥವಾ ಮಳೆಬಿಲ್ಲುಗಳು. ಗಾಳಿ ಜೋರಾಗಿ ಬೀಸಲಾರಂಭಿಸಿದಾಗ, ಮೋಡಗಳು ವೇಗವಾಗಿ ಚಲಿಸಲಾರಂಭಿಸಿದಾಗ ಅದರ ಪರಿಣಾಮ ವಿಮಾನ ಹಾರಾಟದ ಮೇಲಾಗುತ್ತದೆ. ವಿಮಾನವು ಗಾಳಿಯಲ್ಲಿ ಚಲಿಸುವಾಗ, ಗಾಳಿಯ ಒತ್ತಡದಲ್ಲಿ ಆಗುವ ಬದಲಾವಣೆಯಿಂದ ವಿಮಾನ ಕಂಪಿಸುವುದರಿಂದ ಟರ್ಬುಲೆನ್ಸ್ ಉಂಟಾಗಬಹುದು. ಇದು ವಿಮಾನದ ಎತ್ತರ, ಹವಾಮಾನ ಮತ್ತು ಗಾಳಿಯ ವೇಗದ ಮೇಲೆಯೂ ಅವಲಂಬಿತವಾಗಿರುತ್ತದೆ. ಟರ್ಬುಲೆನ್ಸ್‌ನಿಂದ ತಪ್ಪಿಸಿಕೊಳ್ಳಲು ಸಾಧ್ಯವೇ? ಈ ಪ್ರಶ್ನೆ ಎಲ್ಲ ಪ್ರಯಾಣಿಕರ ಯೋಚನೆಯಲ್ಲಿ ಹಾದುಹೋಗುತ್ತದೆ. ಇದಕ್ಕೆ ಉತ್ತರ – ಇಲ್ಲ. ಟರ್ಬುಲೆನ್ಸ್‌ನಿಂದ ಸಂಪೂರ್ಣವಾಗಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಕೆಲವು ಸಲಹೆಗಳನ್ನು ಅನುಸರಿಸುವ ಮೂಲಕ ಅದರ ಪರಿಣಾಮವನ್ನು ಕಡಿಮೆ ಮಾಡಬಹುದು. ಉದಾ ಹರಣೆಗೆ, ●ವಿಮಾನದ ಮಧ್ಯದಲ್ಲಿ ಕುಳಿತುಕೊಳ್ಳಬೇಕು ಇಲ್ಲಿ ಟರ್ಬುಲೆನ್ಸ್ ಕಡಿಮೆ ಇರುತ್ತದೆ. ●ಬೆಳಗಿನ ಜಾವ ಅಥವಾ ಸಂಜೆಯ ವೇಳೆ ಪ್ರಯಾಣಿಸ ಬೇಕು. ಈ ಸಮಯದಲ್ಲಿ ಗಾಳಿ ಶಾಂತವಾಗಿರುತ್ತದೆ. ಹಾಗಂತ ಆ ಸಮಯ ದಲ್ಲಿ ಟರ್ಬುಲನ್ಸ್ ಸಂಭವಿಸುವುದೇ ಇಲ್ಲ ಎನ್ನುವಂತಿಲ್ಲ. ●ವಿಂಡೋ ಸೀಟ್‌ನಲ್ಲಿ ಕುಳಿತುಕೊಳ್ಳಬಾರದು. ವಿಂಡೋ ಸೀಟ್‌ನಲ್ಲಿ ಕುಳಿತಾಗ ಟರ್ಬುಲೆನ್ಸ್‌ನ ಪರಿಣಾಮ ಹೆಚ್ಚಾಗಿ ಅನುಭವವಾಗುತ್ತದೆ. ●ಆಹಾರವನ್ನು ಸೇವಿಸುವಾಗ ಜಾಗರೂಕರಾಗಿರಬೇಕು. ಟರ್ಬುಲೆನ್ಸ್‌ನ ಸಮಯದಲ್ಲಿ ಆಹಾರವನ್ನು ಸೇವಿಸುವುದು ಸುರಕ್ಷಿತವಲ್ಲ. ವಿಮಾನ ಅಲ್ಲಾಡುವಾಗ ಆಹಾರಗಳು ಮೈಮೇಲೆ ಬಿದ್ದು ಮತ್ತಷ್ಟು ಗಾಬರಿಯನ್ನು ಮೂಡಿಸಬ ಹುದು. ●ವಿಮಾನ ಪ್ರಯಾಣದುದ್ದಕ್ಕೂ ಸೀಟ್ ಬೆಲ್ಟ್ ಧರಿಸಿರು ವುದು ಸುರಕ್ಷಿತ. ●ವಿಮಾನ ಹೊರಡುವ ಮುನ್ನ ಮತ್ತು ಇಳಿಯುವಾಗ ಟರ್ಬು ಲೆನ್ಸ್ ಹೆಚ್ಚಾಗಿರುತ್ತದೆ ಎಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು. ಅದೆಷ್ಟೇ ಬಲವಾದ ಟರ್ಬುಲೆನ್ಸ್ ಸಂಭವಿಸಲಿ, ವಿಮಾನಕ್ಕೆ ಏನೂ ಆಗುವು ದಿಲ್ಲ ಎಂಬುದನ್ನು ಗಟ್ಟಿಯಾಗಿ ಮನಸ್ಸಿನಲ್ಲಿ ಸ್ಥಾಪಿಸಿಕೊಳ್ಳ ಬೇಕು. ●ಯಾವ ಕಾರಣಕ್ಕೂ ಭಯ ಪಡಬಾರದು. ಕಾರಣ ಪೈಲಟ್‌ಗಳು ಈ ಸಂದರ್ಭವನ್ನು ನಿಭಾಯಿಸಲು ಸುಸಜ್ಜಿತರಾಗಿರುತ್ತಾರೆ. ●ಗಗನಸಖಿ ಯರ ಸೂಚನೆಗಳನ್ನು ಪಾಲಿಸಬೇಕು. ಅವರು ನಿಮಗೆ ಸುರಕ್ಷಿತವಾಗಿರಲು ಎಲ್ಲ ಸಹಾಯ ಮಾಡುತ್ತಾರೆ.

ಕಾಶ್ಮೀರಿಗಳ ಆಸ್ತಿ ಲೂಟಿ ಮಾಡಿದ್ದು ಯಾರು?

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ

camohanbn@gmail.com

ಭಾರತದ ಸಂವಿಧಾನ ರಚನೆಯ ಸಂದರ್ಭದಲ್ಲಿ ಬಾಬಾಸಾಹೇಬರ ಇಚ್ಛೆಗೆ ವಿರುದ್ಧವಾಗಿ ಪರಿಚ್ಛೇದ 370 ನ್ನು ಜಾರಿಗೆ ತಂದು ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಲಾಗಿತ್ತು. ಒಂದು ದೇಶದಲ್ಲಿ ಎರಡೆರಡು ಸಂವಿಧಾನ ಇರಬಾರದೆಂದು ಹಲವು ನಾಯಕರು ನೆಹರೂವಿಗೆ ಹೇಳಿದ್ದರೂ, ಕಾಂಗ್ರೆಸ್ ಪಕ್ಷ ಅಬ್ದುಲ್ಲಾನನ್ನು ಓಲೈಸಲು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡಿತ್ತು. ಕಾಶ್ಮೀರಕ್ಕೆ ನೀಡಿದ ವಿಶೇಷ ಸ್ಥಾನಮಾನದಿಂದ ಅಲ್ಲಿನ ನಾಗರೀಕರಿಗೆ ಯಾವ ಅನುಕೂಲವೂ ಆಗಲಿಲ್ಲ. ಬದಲಾಗಿ ವಿಶೇಷ ಸ್ಥಾನಮಾನವನ್ನೇ ಬಳಸಿಕೊಂಡು ಸಾವಿರಾರು ಕೋಟಿಯಷ್ಟು ಸರಕಾರಿ ಜಾಗಗಳನ್ನು ಅಬ್ದುಲ್ಲಾ ಮತ್ತು ಮುಫ್ತಿ ಕುಟುಂಬಗಳು ಕಬ್ಜ ಮಾಡಿಕೊಂಡವು. 2019 ರಲ್ಲಿ ಭಾರತೀಯ ಜನತಾ ಪಕ್ಷ ಎರಡನೇ ಅವಧಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಕಿತ್ತು ಹಾಕುವ ಮೂಲಕ ಬಾಬಾಸಾಹೇಬರ ಮೂಲ ಆಶಯವನ್ನು ಸಾಕಾರಗೊಳಿಸಿತು. ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿಸಿ ಶಾಂತಿ ಮರುಸ್ಥಾಪಿಸುವ ಮೂಲಕ ವಿವಿಧ ಕಂಪನಿಗಳು ಕಣಿವೆ ರಾಜ್ಯದಲ್ಲಿ ವ್ಯವಹಾರ ಪ್ರಾರಂಭಿಸುವಂತೆ ಮಾಡಲಾಯಿತು. ಸೈನಿಕರ ವಾಹನಗಳಿಗೆ ಕಲ್ಲು ತೂರುತ್ತಿದ್ದ ಯುವಕರ ಕೈಗೆ ಕೆಲಸ ನೀಡಲಾಯಿತು. ಶ್ರೀನಗರದಲ್ಲಿ ಜಿ–20 ಸಮ್ಮೇಳನ ನಡೆಸಲಾಯಿತು, ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಸಲಾಯಿತು. ವಿಶೇಷ ಸ್ಥಾನಮಾನ ರದ್ದತಿಯಾದ ನಂತರ ಮೊದಲ ಬಾರಿಗೆ ಕಣಿವೆ ರಾಜ್ಯ ಜಮ್ಮು ಕಾಶ್ಮೀರ ಚುನಾವಣೆ ಎದುರಿಸುತ್ತಿದೆ, ಭಾರತೀಯ ಜನತಾ ಪಕ್ಷ, ಕಾಂಗ್ರೆಸ್, ಪಿ.ಡಿ.ಪಿ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಪಕ್ಷಗಳು ಚುನಾವಣಾ ಕಣದಲ್ಲಿವೆ. ಕಾಂಗ್ರೆಸ್ಸಿನ ರಾಹುಲ್ ಗಾಂಧಿ ಚುನಾವಣಾ ಪ್ರಚಾರದಲ್ಲಿ ಅಧಿಕಾರಕ್ಕೆ ಬಂದರೆ ವಿಶೇಷ ಸ್ಥಾನಮಾನವನ್ನು ಕಣಿವೆ ರಾಜ್ಯಕ್ಕೆ ಮತ್ತೊಮ್ಮೆ ನೀಡುವುದಾಗಿ ಹೇಳಿದ್ದಾರೆ. ಬಾಬಾಸಾಹೇಬರ ಸಂವಿಧಾನವನ್ನು ಕೈಯಲ್ಲಿ ಹಿಡಿದು ಭಾಷಣ ಮಾಡುವ ರಾಹುಲ್, ಬಾಬಾಸಾಹೇಬರ ಇಚ್ಛೆಗೆ ವಿರುದ್ಧವಾಗಿ ಕಾಶ್ಮೀರಕ್ಕೆ ಬೇರೆಯದ್ದೇ ಸಂವಿಧಾನವನ್ನು ಮತ್ತೊಮ್ಮೆ ನೀಡುವುದಾಗಿ ಹೇಳುತ್ತಾರೆ. ಕಾಶ್ಮೀರಿಗಳ ಹಕ್ಕನ್ನು ಕಿತ್ತುಕೊಳ್ಳಲಾಗಿದೆ ಎಂದು ಹೇಳುತ್ತಾರೆ. ಕಾಶ್ಮೀರಿಗಳಿಗೆ ಸೇರಿದ ಆಸ್ತಿಯನ್ನು ಕಿತ್ತುಕೊಳ್ಳಲಾಗಿದೆ ಎಂಬ ಸುಳ್ಳನ್ನು ಹೇಳುತ್ತಿದ್ದಾರೆ.

ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ ವಿಶೇಷ ಸ್ಥಾನಮಾನವನ್ನು ಬಳಸಿಕೊಂಡು ಅಲ್ಲಿನ ಜನರಿಗೆ ಸೇರಿದ ಆಸ್ತಿಯನ್ನು ಲಪಟಾಯಿಸಿದ್ದು ತಮ್ಮದೇ ಪಕ್ಷದ ನಾಯಕರು, ಅಬ್ದುಲ್ಲಾನ ಕುಟುಂಬದವರು ಮತ್ತು ಮುಫ್ತಿ ಕುಟುಂಬದವರು, ಎಂಬುದನ್ನು ರಾಹುಲ್ ಮರೆತಂತಿದೆ. ದಶಕಗಳಿಂದ ರಾಜ್ಯವನ್ನಾಳಿದ ಮೂರು ಪಕ್ಷದವರು ವಿಶೇಷ ಸ್ಥಾನಮಾನವನ್ನೇ ಬಳಸಿಕೊಂಡು ಲಪಟಾಯಿಸಿದ ಭೂಮಿಯ ಬೆಲೆ ಸಾವಿರಾರು ಕೋಟಿ ಯಷ್ಟಿದೆ. ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡಲು ವಿದೇಶಕ್ಕೆ ಕಳುಹಿಸಿ, ಕಣಿವೆ ರಾಜ್ಯದ ಬಡ ಮಕ್ಕಳಿಗೆ ಬಂದೂಕು ನೀಡಲು ಕುಮ್ಮಕ್ಕು ನೀಡುತ್ತಿದ್ದರು. ಕಾಶ್ಮೀರಿ ಪ್ರತ್ಯೇಕತಾವಾದಿಗಳ ಜೊತೆ ಕೈಜೋಡಿಸಿ ತಾವು ಲಪಟಾಯಿಸಿದ ಸರಕಾರೀ ಭೂಮಿಯ ಕಾವಲುಗಾರರನ್ನಾಗಿಸಿಕೊಂಡಿದ್ದರು, ಜಮ್ಮುವಿನಲ್ಲಿ 'ರೋಷನಿ ಕಾಯ್ದೆ' ಅಡಿಯಲ್ಲಿ ಸಾವಿರಾರು ಕೋಟಿ ಬೆಲೆಬಾಳುವ ಭೂಮಿಯನ್ನು ಮೂರೂ ಪಕ್ಷದವರು ಲಪಟಾಯಿಸಿದ್ದರು. 2001 ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಫಾರೂಕ್ ಅಬ್ದುಲ್ಲಾ ನೇತೃತ್ವದ ಸರಕಾರ ಒಂದು ಕಾಯ್ದೆಯನ್ನು ಜಾರಿಗೆ ತಂದಿತು. ಈ ಕಾಯ್ದೆಯನ್ವಯ ಅಕ್ರಮವಾಗಿ ಸರಕಾರಿ ಜಾಗವನ್ನು ಆಕ್ರಮಿಸಿಕೊಂಡಿರುವ ನಾಗರೀಕರು ಸರಕಾರಕ್ಕೆ ಇಂತಿಷ್ಟು ಹಣವನ್ನು ಪಾವತಿ ಮಾಡಿ ಸಕ್ರಮ ಮಾಡಿಕೊಳ್ಳಬಹುದಾಗಿತ್ತು. ಎಷ್ಟು ಹಣವನ್ನು ಕಟ್ಟಬೇಕೆಂಬುದನ್ನು ಅಂದಿನ ಸರಕಾರವು ನಿರ್ಧರಿಸಿತ್ತು, ಹಣದ ಜೊತೆಗೆ ಒಂದಷ್ಟು ನಿಯಮಾವಳಿಗಳನ್ನು ತಂದಿತ್ತು. ಈ ನಿಯಮದಡಿಯಲ್ಲಿನ ಅರ್ಹರು ಸರಕಾರಕ್ಕೆ ಅರ್ಜಿ ಹಾಕಿ ಸರಕಾರವು ನಿಗದಿ ಪಡಿಸಿದ ಶುಲ್ಕವನ್ನು ಕಟ್ಟಿ ಭೂಮಿ ಪಡೆಯಬಹುದಿತ್ತು.

ಫಾರೂಕ್ ಅಬ್ದುಲ್ಲಾ ಸರಕಾರದಲ್ಲಿ ತಂದಂತಹ ಈ ಕಾನೂನಿನನ್ವಯ, 1990ರ ವರೆಗೂ ಸರಕಾರೀ ಜಾಗಗಳನ್ನು ಆಕ್ರಮಿಸಿಕೊಂಡಿರುವವರು ತಮ್ಮ ಜಾಗವನ್ನು ಸಕ್ರಮ ಮಾಡಿಕೊಳ್ಳಬಹುದಿತ್ತು. 1991 ರಿಂದ 2001 ರ ವರೆಗಿನ ಅಕ್ರಮವನ್ನು ಸಕ್ರಮ ಮಾಡಲು ಅವಕಾಶವಿರಲಿಲ್ಲ. 2001ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ವಿದ್ಯುತ್‌ಶಕ್ತಿಯ ಬರವಿತ್ತು.ಈ ಬರವನ್ನು ನೀಗಿಸಲು ಬೃಹತ್ ವಿದ್ಯುತ್ ಯೋಜನೆಗಳನ್ನು ಜಾರಿಗೆ ತರಬೇಕಿತ್ತು. ಈ ಬೃಹತ್ ಯೋಜನೆಗಳಿಗೆ ಬೇಕಾದ ಹಣ ಹೊಂದಿಸಲು 2001ರಲ್ಲಿ ಅಕ್ರಮ ಸಕ್ರಮ ಕಾಯ್ದೆಯನ್ನು ಜಾರಿಗೆ ತರಲಾಯಿತು. ವಿದ್ಯುತ್ ಬರ ನೀಗಿಸುವ ಸಲುವಾಗಿ ತಂದಂತಹ ಕಾನೂನಾಗಿದ್ದರಿಂದ ಇದನ್ನು ರೋಷನಿ ಕಾಯ್ದೆ ಎಂದು ಕರೆಯಲಾಯಿತು. ಈ ಕಾಯ್ದೆಯಿಂದ ಸುಮಾರು 25,000 ಕೋಟಿ ರು.ರಷ್ಟು ಆದಾಯವನ್ನು ಫಾರೂಕ್ ಅಬ್ದುಲ್ಲಾ ನೇತೃತ್ವದ ಸರಕಾರ ನಿರೀಕ್ಷಿಸಿತ್ತು. ಈ ಕಾಯ್ದೆಯಡಿಯಲ್ಲಿ ಅಂದಾಜು ಒಂದು ಲಕ್ಷ ಹೆಕ್ಟೇರ್ ಭೂಮಿಯನ್ನು ಸಕ್ರಮ ಮಾಡಲು ನಿರ್ಧರಿಸಲಾಗಿತ್ತು. ಒಂದು ಲಕ್ಷ ಹೆಕ್ಟೇರ್‌ನಲ್ಲಿ ಸುಮಾರು 75,000 ಹೆಕ್ಟೇರ್‌ನಷ್ಟು ಭೂಮಿಯನ್ನು ಜಮ್ಮುವಿನಲ್ಲಿ, 25,000 ಹೆಕ್ಟೇರ್ ಭೂಮಿಯನ್ನು ಕಾಶ್ಮೀರದಲ್ಲಿ ಸಕ್ರಮ ಮಾಡಲು ಯೋಜಿಸಲಾಗಿತ್ತು.

ಅಂದುಕೊಂಡಂತೆ ಆಗಲಿಲ್ಲ, ಕೇವಲ 30,000ಹೆಕ್ಟೇರ್ ಭೂಮಿಯ ಒಡೆತನವನ್ನು ಮಾತ್ರ ವರ್ಗಾವಣೆ ಮಾಡಲು ಅನುಮೋದಿಸಲಾಯಿತು. ಅನುಮೋದನೆ ದೊರೆತದ್ದು 30,000 ಹೆಕ್ಟೇರಿಗೆ, ಆದರೆ ನಿಜವಾಗಿಯೂ ಭೂಮಿಯ ಒಡೆತನದ ವರ್ಗಾವಣೆಯಾದದ್ದು ಸುಮಾರು 17,000 ಹೆಕ್ಟೇರ್ ಮಾತ್ರ. ಈ 17,000 ಹೆಕ್ಟೇರ್‌ನಲ್ಲಿ ಶೇ.90ಕ್ಕಿಂತಲೂ ಹೆಚ್ಚಿನ ಭಾಗ ಜಮ್ಮುವಿನಲ್ಲಿರುವ ಭೂಮಿಯಾಗಿತ್ತು. ತಾವು ಅಂದುಕೊಂಡಂತೆ ಮಾಡಲಾಗುತ್ತಿಲ್ಲವೆಂದು ತಿಳಿದ ಫಾರೂಕ್ ಅಬ್ದುಲ್ಲಾ ನೇತೃತ್ವದ ಸರಕಾರ, ತಾನು ನಿರೀಕ್ಷಿಸುತ್ತಿದ್ದಂತಹ 25,000 ಕೋಟಿಯ ಶುಲ್ಕದ ಗುರಿಯನ್ನು ಕೇವಲ 317 ಕೋಟಿಗೆ ಇಳಿಸಿತು, ಆದರೆ ಅಷ್ಟು ಹಣವೂ ಬರಲಿಲ್ಲ ಕೊನೆಗೆ ಕೇವಲ 76 ಕೋಟಿ ಶುಲ್ಕ ಮಾತ್ರ ಸರಕಾರಕ್ಕೆ ಬಂದಿತ್ತು. ಕೇವಲ 76 ಕೋಟಿಗೆ ಸುಮಾರು 17,000ಹೆಕ್ಟೇರ್ ಭೂಮಿಯನ್ನು ಸಕ್ರಮ ಮಾಡಲಾಗಿತ್ತು. ಈ ಕಾಯ್ದೆಯನ್ವಯ ಹಂಚಿಕೆಯಾದ ಭೂಮಿಯ ಒಡೆತನದ ಮೇಲೆ ಎರಡು ರೀತಿಯ ಅನುಮಾನಗಳು ಕಾಡತೊಡಗಿದ್ದವು. ಹಿಂದೂಗಳು ಹೆಚ್ಚಿರುವ ಜಮ್ಮುವಿನಲ್ಲಿ ಯಾಕೆ ಅಷ್ಟೊಂದು ಭೂಮಿಯನ್ನು ಸಕ್ರಮ ಮಾಡಲಾಯಿತು? ಕಾಶ್ಮೀರದಲ್ಲಿ ಕೇವಲ ಶೇ.10 ಭೂಮಿಯಾದರೆ, ಜಮ್ಮುವಿನಲ್ಲಿ ಶೇ.90 ಭೂಮಿಯನ್ನು ಸಕ್ರಮ ಮಾಡಲಾಗಿತ್ತು. ಜಮ್ಮುವಿನಲ್ಲಿ ಹಂಚಿಕೆಯಾದಂತಹ ಭೂಮಿಯನ್ನು ಅತೀ ಹೆಚ್ಚು ಸಕ್ರಮ ಮಾಡಿಕೊಂಡಂತಹ ಜನರ ಧರ್ಮ ಯಾವುದು? ಜಮ್ಮುವಿನ ದೊಡ್ಡ ಭೂಭಾಗವನ್ನು ಕಾಶ್ಮೀರದಂತೆ ಮುಸಲ್ಮಾನ್ ಧರ್ಮಕ್ಕೆ ಸೀಮಿತ ಮಾಡುವ ಹುನ್ನಾರ ನಡೆದಿತ್ತೇ? ಈ ಕಾಯ್ದೆಯಿಂದ ಜಮ್ಮುವಿನಲ್ಲಿ ನಡೆದಿರುವ ಸಾವಿರಾರುಹೆಕ್ಟೇರ್ ಭೂಮಿಯ ಮಾಲೀಕತ್ವದ ವರ್ಗಾವಣೆಯನ್ನು ಗಮನಿಸಿದರೆ ಕಾಶ್ಮೀರಿ ಪ್ರತ್ಯೇಕತಾವಾದಿಗಳು, ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸಿ ಪಾಕಿಸ್ತಾನದೊಂದಿಗೆ ಸೇರಿಸುವ ಹುನ್ನಾರಕ್ಕೆ ಮತ್ತಷ್ಟು ಪುಷ್ಟಿ ನೀಡಿದಂತಿತ್ತು.

ಫಾರೂಕ್ ಅಬ್ದುಲ್ಲಾ ನಂತರ ಬಂದಂತಹ 'ಮುಫ್ತಿ ಮೋಹಮ್ಮದ್ ಸಯೀದ್' ಸರಕಾರ 2005ರಲ್ಲಿ ಈ ಕಾಯ್ದೆಯನ್ನು ತಿದ್ದುಪಡಿ ಮಾಡಿ 1990ರ ವರೆಗೆ ಇದ್ದಂತಹ ನಿಬಂಧನೆಯನ್ನು ಸಡಿಲಗೊಳಿಸಿ 2004 ರವರೆಗೂ ವಿಸ್ತರಿಸಿತು. ಈ ತಿದ್ದುಪಡಿಯಿಂದ 1990 ಹಾಗೂ 2004ರ ನಡುವೆ ಅಕ್ರಮವಾಗಿ ಆಕ್ರಮಿಸಿಕೊಂಡಿದ್ದಂತಹ ಸರಕಾರಿ ಜಾಗಗಳನ್ನು ಸಕ್ರಮ ಮಾಡಲಾಯಿತು. ಈ ತಿದ್ದುಪಡಿಯಿಂದ ಒಂದು ವಿಷಯವಂತೂ ಸ್ಪಷ್ಟವಾಗುತ್ತದೆ 2001 ರಲ್ಲಿ ತಂದಂತಹ ಕಾಯ್ದೆಯಲ್ಲಿ ಒಮ್ಮೆ ಹಳೆಯ ಅಕ್ರಮಗಳನ್ನು ಸಕ್ರಮಗೊಳಿಸಲಾಯಿತು. ಆದರೆ ಕೇವಲ ಮೂರು ವರ್ಷಗಳ ನಂತರ ತಿದ್ದುಪಡಿಯ ಮೂಲಕ 2001 ರಿಂದ 2004ರ ನಡುವೆ ಅಕ್ರಮ ನಡೆಯದಂತೆ ತಡೆಯುವ ಬದಲು, ಮತ್ತಷ್ಟು ಅಕ್ರಮಗಳನ್ನು ಪೋಷಿಸಲಾಗಿತ್ತು. ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೊಟ್ಟಿದ್ದರ ಪರಿಣಾಮ ಇವರನ್ನು ಕೇಳುವವರು ಇರಲಿಲ್ಲ, ಅವರದ್ದೇ ಸ್ವಂತ ಸಂವಿಧಾನದಂತಿದ್ದ ನೆಹರು ನೀಡಿದ್ದ ಪರಿಚ್ಛೇದ 370 ರ ಅಡಿಯಲ್ಲಿ ಇಷ್ಟೆಲ್ಲಾ ಅಕ್ರಮಗಳನ್ನು ಮಾಡಲಾಗಿತ್ತು. ಅಕ್ರಮದ ಕಥೆ ಇಲ್ಲಿಗೂ ಮುಗಿಯಲಿಲ್ಲ ಕಾಂಗ್ರೆಸ್ ಪೋಷಿತ ಸರಕಾರವನ್ನು ನಡೆಸುತ್ತಿದ್ದ ಗುಲಾಮ್ ನಭಿ ಅಜಾದ್ 2007ರಲ್ಲಿ ಮತ್ತೊಂದು ತಿದ್ದುಪಡಿಯನ್ನು ಮಾಡಿ ದಿನಾಂಕವನ್ನು 2004 ರಿಂದ 2007ಕ್ಕೆ ಏರಿಸಿದ್ದರು. ಈ ತಿದ್ದುಪಡಿಯ ಪರಿಣಾಮವಾಗಿ ಮತ್ತೆ ಮೂರು ವರ್ಷದಲ್ಲಾದ ಅಕ್ರಮಗಳನ್ನು ಸಕ್ರಮಗೊಳಿಸಲಾಯಿತು.

2014ರಲ್ಲಿ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯನೀಡಿದ ವರದಿಯಲ್ಲಿ, ರೋಷನಿ ಕಾಯ್ದೆಯಡಿಯಲ್ಲಿ ನಡೆದಂತಹ ಅಕ್ರಮಗಳನ್ನು ಪರಿಶೀಲಿಸಿ ಅಂದಾಜು 25,000 ಕೋಟಿ ರುಪಾಯಿಯ ಹಗರಣವನ್ನು ಹೇಳಲಾಗಿತ್ತು. ಈ ಕಾಯ್ದೆಯಡಿಯಲ್ಲಿ ಹಲವಾರು ಅಕ್ರಮಗಳು ನಡೆದಿದ್ದು, ಸರಕಾರಿ ಜಮೀನನ್ನು ಅಕ್ರಮ ಮಾಡುವ ಸಲುವಾಗಿ ಸಾವಿರಾರು ಎಕರೆ ಭೂಮಿಯನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಹಲವು ರಾಜಕೀಯ ನಾಯಕರುಗಳಿಗೆ, ಸರಕಾರಿ ಆಡಳಿತಾಧಿಕಾರಿಗಳಿಗೆ, ಸರಕಾರಿ ನೌಕರರಿಗೆ, ಬಂಡವಾಳಶಾಹಿಗಳಿಗೆ ನೀಡಲಾಗಿದೆಯೆಂದು ವರದಿಯಲ್ಲಿ ಉಲ್ಲೇಖಿಸುವ ಮೂಲಕ ದೊಡ್ಡದೊಂದು ಹಗರಣವನ್ನು ಬಯಲಿಗೆಳೆಯಲಾಯಿತು. ಕಾಶ್ಮೀರಕ್ಕೆ ಪ್ರವಾಸಕ್ಕೆಂದು ಹೋದರೆ ಬಹುತೇಕರು ಗುಲ್ ಮಾರ್ಗ್‌ಗೆ ಹೋಗಿರುತ್ತೀರಿ, ಈ ಕಣಿವೆಯಲ್ಲಿರುವ ಸಾವಿರಾರು ಎಕರೆಯ ಸರಕಾರಿ ಜಾಗವನ್ನು ಕೆಲವು ಐಎಎಸ್ ಅಧಿಕಾರಿಗಳು ತಮ್ಮ ಪ್ರಭಾವ ಬಳಸಿ ಸರಕಾರ ವಿಧಿಸಿದ್ದಂತಹ ಮಾನದಂಡವನ್ನು ಪಾಲಿಸದೆ ಈ ಕಾಯ್ದೆಯಡಿಯಲ್ಲಿ ಹಲವರಿಗೆ ಸಕ್ರಮ ಮಾಡಿಕೊಡಿಸಿರುವ ಬಗ್ಗೆ ದೂರು ದಾಖಲಾಯಿತು. ಗುಲ್ ಮಾರ್ಗ್ ಹಗರಣವೆಂದು ಕುಖ್ಯಾತಿ ಪಡೆದಿರುವ ಈ ಹಗರಣದಲ್ಲಿ ಸರಕಾರಿ ಅಧಿಕಾರಿ ಬಶೀರ್ ಅಹ್ಮದ್ ಖಾನ್ ಹೆಸರು ಕೇಳಿ ಬಂತು. ಈತನ ಅವಧಿಯಲ್ಲಿ ಗುಲ್ ಮಾರ್ಗ್ ಅಭಿವೃದ್ಧಿ ಪ್ರಾಧಿಕಾರ ದಡಿಯಲ್ಲಿ ಹಲವು ಪ್ರಭಾವಿಗಳಿಗೆ ಸರಕಾರಿ ನಿಯಮಗಳನ್ನು ಗಾಳಿಗೆ ತೂರಿ ಅತ್ಯಂತ ಕಡಿಮೆ ಬೆಲೆಯಲ್ಲಿ ಸಾವಿರಾರು ಎಕರೆ ಭೂಮಿಯನ್ನು ಸಕ್ರಮ ಮಾಡಲಾಗಿತ್ತು.

ತಮ್ಮದೇ ವಿಶೇಷ ಸಂವಿಧಾನದಡಿಯಲ್ಲಿ ಅಧಿಕಾರ ನಡೆಸಿಕೊಂಡು ಬಂದಂತಹ ಅಬ್ದುಲ್ಲಾ ಹಾಗು ಮುಫ್ತಿಯ ಸಂತಾನ ಸಾವಿರಾರುಹೆಕ್ಟೇರ್ ಸರಕಾರಿ ಭೂಭಾಗವನ್ನು ಕೊಳ್ಳೆಹೊಡೆದಿದ್ದರು. ಈ ಕಾಯ್ದೆಯಡಿಯಲ್ಲಿ ಹಂಚಿಕೆಯಾಗಿರುವ ಬಹುಪಾಲು ಭೂಮಿಯನ್ನು ಕೊಳ್ಳೆ ಹೊಡೆದವರು ಕಾಂಗ್ರೆಸ್, ಪಿಡಿಪಿ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ನಾಯಕರು ಹಾಗೂ ಅಧಿಕಾರಿಗಳು. 25,000 ಕೋಟಿಯ ನಿರೀಕ್ಷೆಯಲ್ಲಿದ್ದ ಸರಕಾರವು ಕೇವಲ 76 ಕೋಟಿ ರು.ಯನ್ನು ಮಾತ್ರ ಗಳಿಸುತ್ತದೆಯೆಂದರೆ ಅಲ್ಲಿ ನಡೆದಿರುವ ಅಕ್ರಮದ ಪರಮಾವಧಿಯನ್ನು ಸಾಮಾನ್ಯ ನಾಗರೀಕನೂ ಅರ್ಥ ಮಾಡಿಕೊಳ್ಳಬಹುದು. ಕಾಶ್ಮೀರದಲ್ಲಿನ ಹಿಂದುಗಳನ್ನು ಓಡಿಸಿದಷ್ಟು ಸುಲಭವಾಗಿ ಜಮ್ಮುವಿನ ಹಿಂದುಗಳನ್ನು ಓಡಿಸಲು ಸಾಧ್ಯವಿಲ್ಲವೆಂದು ಅರಿತ ಪ್ರತ್ಯೇಕತಾವಾದಿಗಳು ಜಮ್ಮುವಿನಲ್ಲಿ ರೋಷನಿ ಕಾಯ್ದೆಯ ಮೂಲಕ ಲ್ಯಾಂಡ್ ಜಿಹಾದ್ ನಡೆಸಿದ್ದರು. ಹಿಂದುಗಳಿರುವ ಪ್ರದೇಶಗಳಲ್ಲಿ ಹೆಚ್ಚು ಮುಸಲ್ಮಾನರಿಗೆ, ಅಕ್ರಮ ಜಾಗಗಳನ್ನು ಸಕ್ರಮ ಮಾಡಿಸಿಕೊಟ್ಟರೆ ಮುಸಲ್ಮಾನರ ಪ್ರಾಬಲ್ಯ ಹೆಚ್ಚಾಗಿ ಜಮ್ಮುವುನಲ್ಲಿರುವ ಹಿಂದುಗಳನ್ನು ಅಲ್ಪ ಸಂಖ್ಯಾತರನ್ನಾಗಿಸಿ ಬಿಡಬಹುದೆಂಬ ದುರಾಲೋಚನೆ ಪ್ರತ್ಯೇಕತಾವಾದಿಗಳ ದ್ದಾಗಿತ್ತು. ಕಾಶ್ಮೀರಿಗಳ ಹಕ್ಕುಗಳ ಬಗ್ಗೆ ಮಾತನಾಡುವ ರಾಹುಲ್ ಗಾಂಧಿ, ಅಲ್ಲಿನ ಜನರಿಗೆ ಸೇರಿದ ಸಾವಿರಾರು ಕೋಟಿ ಬೆಲೆ ಬಾಳುವ ಭೂಮಿಯನ್ನು ದಶಕಗಳಿಂದ ಲೂಟಿ ಮಾಡಿದ್ದು ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳೆಂಬ ಸತ್ಯವನ್ನು ಹೇಳಬೇಕು.

ಹೆಜ್ಜೆ ತಪ್ಪಿದರೆ ಅನಾಹುತ ತಪ್ಪಿದ್ದಲ್ಲ!

ಮಾರು-ಕಟ್ಟೆ

ನಾರಾಯಣ ಯಾಜಿ

vveditoped@gmail.com

ಭಾರತದ ಶೇರು ಮಾರುಕಟ್ಟೆಯಮೇಲೆ ನಿಗಾ ಇಡುವ ಹದ್ದಿನ ಕಣ್ಣಿನ ನಿಯಂತ್ರಣ ಸಂಸ್ಥೆ ಸೆಬಿ (Securities and Exchange Board of India) ಅಗಸ್ಟ್ 28 ರಂದು ಶೇರು ಮಾರುಕಟ್ಟೆಯಲ್ಲಿ ಹೂಡಿಕೆಮಾಡುವವರಿಗೆ ಒಂದು ಎಚ್ಚರಿಕೆಯ ವಿಜ್ಞಾಪನೆಯನ್ನು ಮಾಡಿತು. ಅದರ ಸಾರಾಂಶ ಹೀಗಿದೆ:

'ಕೆಲವೊಂದು SMEಕಂಪನಿಗಳು ಮತ್ತು/ ಅಥವಾ ಅದರ ಪ್ರವರ್ತಕರು ತಮ್ಮ ಕಂಪನಿಯ IPOಗಳು ಯಶಸ್ವಿಯಾಗುವಂತೆ ಮಾಡಲು ಅಂತಹ ಕಂಪನಿಗಳ ಕಾರ್ಯಾಚರಣೆಗಳ ಕುರಿತು ಅನೇಕ ಅವಾಸ್ತವ ಚಿತ್ರಣಗಳನ್ನು ಪ್ರಸ್ತುತ ಪಡಿಸುತ್ತಿದ್ದಾರೆ. ಹೂಡಿಕೆದಾರರಲ್ಲಿ ಧನಾತ್ಮಕ ಅಭಿಪ್ರಾಯಗಳನ್ನು ಮೂಡಿಸಲು ಬೋನಸ್ ಶೇರುಗಳು, ಶೇರುಗಳ ಮುಖಬೆಲೆಯನ್ನು ವಿಭಜಿಸುವುದು, ಆದ್ಯತಾ ಶೇರುಗಳನ್ನು ಕೊಡುವ ಪ್ರಕಟಣೆಗಳ ಮೂಲಕ ಸಾರ್ವಜನಿಕ ಹೂಡಿಕೆದಾರರಲಿ ಧನಾತ್ಮಕ ಅಭಿಪ್ರಾಯ ಬರುವಂತಹ ವಿಧಾನಗಳನ್ನು ಅನುಸರಿಸುತ್ತಿದೆ. ಇವುಗಳ Modus operandi (ಆಮಿಷದ ಕಾರ್ಯಾಚರಣೆಗಳು) ಕುರಿತು ಸಾರ್ವಜನಿಕರು ಎಚ್ಚರಿಕೆ ವಹಿಸುವುದು ಅಗತ್ಯ.' ಎನ್ನುವ ಪ್ರಕಟಣೆಯನ್ನು ನೀಡಿ ತನ್ನ ಕೈ ತೊಳೆದುಕೊಂಡಿತು. ಸೆಬಿ ಹೂಡಿಕೆದಾರರನ್ನು ಕಾಲಕಾಲಕ್ಕೆ ಸಲಹಾತ್ಮಕ ವಿಜ್ಞಾಪನೆಗಳ ಮೂಲಕ ಎಚ್ಚರಿಕೆಯನ್ನು ಮಾಡುತ್ತಿರುತ್ತದೆ. ಆದರೆ ಹೂಡಿಕೆದಾರಲ್ಲಿ ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸಬೇಕಾದ ಮಾಧ್ಯಮಗಳು ಈ ಕುರಿತು ತಮ್ಮ ಧ್ವನಿಯನ್ನು ಎತ್ತಲೇ ಇಲ್ಲ. ಇಂಗ್ಲೀಷಿನ ವಾಣಿಜ್ಯ ಪತ್ರಿಕೆಯಲ್ಲಿ ಎರಡು ಪ್ಯಾರಾಗಳಲ್ಲಿ ಬಂದ ಈ ವಿಷಯ ಕನ್ನಡ ಯಾವ ಪತ್ರಿಕೆಗಳ ಗಮನವನ್ನೂ ಸೆಳೆದಂತಿಲ್ಲ.

ಭಾರತದಲ್ಲಿ ಸಣ್ಣ ಮತ್ತು ಮಧ್ಯಮ ಹಂತದ ಕೈಗಾರಿಕೆಗಳು ಬೆಳೆಯದಿರುವುದಕ್ಕೆ ಮೂಲಕಾರಣ ಅವುಗಳಿಗೆ ಸಕಾಲದಲ್ಲಿ ಬ್ಯಾಂಕುಗಳ ಹಣಕಾಸಿನ ನೆರವು ದೊರೆಯದೇ ಇರುವುದು. ಈ ಕೊರತೆಯನ್ನು ನೀಗಿಸಲು 2012ರಲ್ಲಿ ಅಂದಿನ ಸರಕಾರ ಇಪ್ಪತ್ತೈದು ಕೋಟಿ ರುಪಾಯಿಗಳಿಗೆ ಮೀರದಂತೆ ಇರುವ ಸಣ್ಣ ಮತ್ತು ಮದ್ಯಮ ಕಂಪನಿಗಳು ಮಾರುಕಟ್ಟೆಯಲ್ಲಿ ತಮ್ಮ ಐಪಿಓಗಳನ್ನು ತರುವಮೂಲಕ ಬಂಡವಾಳವನ್ನು ಎತ್ತಲು ಅನುಮೋದಿಸಿದರು. ಕೈಗಾರಿಕೆಗಳ ಬೆಳವಣಿಗೆಯಲ್ಲಿ ಇದೊಂದು ಕ್ರಾಂತಿಕಾರಕ ಬೆಳವಣಿಗೆ. ಅವುಗಳ ಹೂಡಿಕೆಯ ಪ್ರಕ್ರಿಯೆ ಸರಳವಾಗುವಂತೆ ಆಗಲು BSE SME Platform ಮತ್ತು NSE Emerge ಎನ್ನುವ ಹೊಸ ವೇದಿಕೆಯನ್ನು ಕಲ್ಪಿಸಲಾಯಿತು. ಸ್ಟಾರ್ಟ್–ಅಪ್‌ಗಳಿಗಾಗಲೀ, ಅಥವಾ ಇನ್ನಿತರ ಸಣ್ಣ ಕೈಗಾರಿಕೆಗಳಿಗೆ ಇದು ವರದಾನವಾಗಿದೆ. ಇಂದು ಭಾರತದಲ್ಲಿ Main Board IPO ಮತ್ತು SME IPOಎನ್ನುವ ಎರಡು ವಿಧಗಳಿವೆ. ಮೈನ್–ಬೋರ್ಡ್ ಐಪಿಓಗಳು ಹಲವು ಹಂತದ ಪರೀಶೀಲನೆಗಳ ನಂತರ ಮಾರುಕಟ್ಟೆಯನ್ನು ಪ್ರವೇಶಿಸುತ್ತವೆ. ಆದರೆ ಎಸ್‌ಎಮ್‌ಇಗಳಿಗೆ ಹೆಚ್ಚಿನ ಪರಿವೀಕ್ಷಣೆಗಳಿಲ್ಲ, 2012ರಲ್ಲಿ ಪ್ರಾರಂಭಿಸಲಾದ ಈ ಯೋಜನೆಗಳು ಇತ್ತೀಚಿನ ವರ್ಷಗಳ ವರೆಗೂ ಅಷ್ಟು ಜನಪ್ರಿಯವಾಗಿರಲಿಲ್ಲ. ಕಳೆದ ಹನ್ನೊಂದು ವರ್ಷಗಳಲ್ಲಿ ಈ ವೇದಿಕೆಯಲ್ಲಿ ಕೇವಲ 8000ಕೋಟಿ ರುಪಾಯಿಗಳಷ್ಟೇ ಹಣವನ್ನು ಸಂಗ್ರಹಿಸಿದರೆ ಈ ವರ್ಷವೊಂದರಲ್ಲಿಯೇ ಇದುತನಕ 6000 ಕೋಟಿ ರು.ಗಳಷ್ಟು ಬೃಹತ್ ಮೊತ್ತವನ್ನು ಎಸ್‌ಎಮ್‌ಇಐಪಿಓ ಮೂಲಕ ಸಂಗ್ರಹಿಸಿರುವುದು ಗಮನಾರ್ಹ. ಒಟ್ಟು ರೂಪಾಯಿ 14000 ಕೋಟಿ ರು. ರಷ್ಟು ಬಂಡವಾಳವನ್ನು ಮಾರುಕಟ್ಟೆಯಿಂದ ಸಂಗ್ರಹಿಸಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಮೇಯಿನ್ ಬೋರ್ಡ್ ಐಪಿಓಗಳಲ್ಲಿ ಕನಿಷ್ಟ ಹದಿನೈದು ಸಾವಿರದ ಮೊತ್ತದಲ್ಲಿ ಹೂಡಿಕೆ ಮಾಡಬಹುದು. ಆದರೆ SME IPOಗಳಲ್ಲಿ ಅರ್ಜಿಸಲ್ಲಿಕೆಗೆ ಕನಿಷ್ಟ ಒಂದು ಲಕ್ಷ ರುಪಾಯಿ ಬೇಕು.

ಮಧ್ಯಮ ಹಂತದ ಕೈಗಾರಿಕೆಗಳು ಬೆಳೆಯಬೇಕೆನ್ನುವ ಉದ್ದೇಶದಿಂದ ಈ ಯೋಜನೆಯಲ್ಲಿ ಇತ್ತೀಚೆಗೆ ಸುದ್ದಿ ಮಾಡುತ್ತಿರುವುದು ಇಲ್ಲಿ ಪ್ರವೇಶಿಸಿದ ಕಂಪನಿಗಳ ಯಶಸ್ಸಿನಿಂದಾಗಿ. ಒಮ್ಮಿಂದೊಮ್ಮೆಲೇ ಹಣಕಾಸು ಸಂಸ್ಥೆಗಳಿಗೆ ಮತ್ತು ಸಾಮಾನ್ಯ ಹೂಡಿಕೆದಾರರಿಗೆ ಹಣಮಾಡುವ ಅಕ್ಷಯಪಾತ್ರೆಗಳಾಗಿ NSE SME ಎಮರ್ಜ್ ಕಾಣಿಸತೊಡಗಿದೆ. ಮಾರುಕಟ್ಟೆಯನ್ನು ಪ್ರವೇಶಿಸಿದ ಕಂಪನಿಗಳಿಗೆ ಬೇಕಾದ ಹಣಕ್ಕಿಂತ ಕೆಲವು ನೂರುಪಟ್ಟು ಹೆಚ್ಚಿನ ಬೇಡಿಕೆ ಬರುತ್ತಿದೆ. Key Cee Energy ಎನ್ನುವ ಕಂಪನಿ ಕೇವಲ ಹದಿನೈದು ಕೋಟಿ ರುಪಾಯಿ ಸಂಗ್ರಹಿಸುವ ಉದ್ದೇಶದಿಂದ ಮಾರುಕಟ್ಟೆಗೆ ಬಂದರೆ ಅದಕ್ಕೆ ಬೇಡಿಕೆ ಬಂದಿರುವುದು 960 ಪಟ್ಟಿಗೂ ಅಧಿಕ! 54 ರುಪಾಯಿಯ ಬೆಲೆಯ ಶೇರು ಇಂದು ರೂಪಾಯಿ 304 ನ್ನು ಮೀರಿದೆ. ವಾಸ್ತವ ಎಂದರೆ ಅನೇಕ ಕಂಪನಿಗಳು ಲಾಭದ ವಿವರಗಳನ್ನು ತೋರಿಸುತ್ತಾ ಹೂಡಿಕೆದಾರರನ್ನು ಸೆಳೆಯುತ್ತಾ ಇರುವಾಗ ಅವುಗಳ ಉದ್ದೇಶವನ್ನು ಹದ್ದಿನ ಕಣ್ಣಿನಿಂದ ಸೆಬಿ ಪರೀಕ್ಷಿಸತೊಡಗಿದೆ. ಇದಕ್ಕೆ ಮುಖ್ಯ ಕಾರಣ ಕಳೆದ ಅಗಸ್ಟ್ 22, 2024ರಂದು ಬಂದ Resourceful Automobile ಎನ್ನುವ ಕಂಪನಿ. ಈ ಕಂಪನಿ ಹತ್ತು ರುಪಾಯಿ ಮುಖಬೆಲೆಯ ಶೇರನ್ನು 117 ರುಪಾಯಿಗೆ ಸಾರ್ವಜನಿಕರಿಗೆ ಬಿಡುಗಡೆ ಮಾಡಿತು. ಕಂಪನಿ ತನ್ನ ಪ್ರಕಟಣೆಯಲ್ಲಿ ತಿಳಿಸಿದಂತೆ ಕೇವಲ 8 ಪೂರ್ಣಕಾಲಿಕ ಉದ್ಯೋಗಿಗಳಿದ್ದಾರೆ. ದೆಹಲಿಯಲ್ಲಿ ಇದರ ಎರಡು ಯಮಹಾ ಬೈಕುಗಳ ಶೋರೂಮುಗಳಿವೆ. (ಈ ಕಂಪನಿಯನ್ನು ಕೇವಲ ಉದಾಹರಣೆಗಾಗಿ ಉಲೇಖಿಸಿದ್ದಷ್ಟೇ ಅಲ್ಲದೇ ಸೆಬಿಯ ಜ್ಞಾಪನಾ ಪತ್ರಕ್ಕಾಗಲಿ, ಅಥವಾ ಕಂಪನಿಯ ಉದ್ದೇಶದಲ್ಲಿಯಾಗಲೀ ಯಾವುದೇ ದೋಷಪೂರಿತ ಅಂಶಗಳು ಇದುವರೆಗೂ ಕಂಡುಬಂದಿಲ್ಲ) ಹೂಡಿಕೆದಾರರಲ್ಲಿ ಹೆಚ್ಚಿನವರು ಸಾಧಕ ಬಾಧಕಗಳ ಪಟ್ಟಿಯನ್ನು ಗಮನಿಸದೇ ರಸ್ತೆಯಲ್ಲಿ ಪಲ್ಟಿಯಾದ ಟ್ಯಾಂಕರಿನಿಂದ ಪೆಟ್ರೋಲ್ ತುಂಬಿಕೊಳ್ಳುವ ಧಾವಂತದಲ್ಲಿ ಇರುವಂತೆ ಅವಸರಿಸುತ್ತಾನೆ. ಕೇವಲ 11.99 ಕೋಟಿ ರುಪಾಯಿ ಮೊತ್ತದ ಹೂಡಿಕೆಗೆ ಬೇಡಿಕೆ ಬಂದಿರುವುದು 419 ಪಟ್ಟು ಅಧಿಕ. ಇಂದು ಈ ಶೇರೊಂದಕ್ಕೆ ಕೇವಲ 107 ರುಪಾಯಿಗಳಾಗಿ ಹೂಡಿಕೆದಾರ ತನ್ನ ಕೈಸುಟ್ಟುಕೊಂಡಿದ್ದಾನೆ. ಕೇವಲ ಹತ್ತು ದಿನಗಳಲ್ಲಿ ಸಾಮಾನ್ಯ ಹೂಡಿಕೆದಾರನ ಕಿಸೆಯಿಂದ ಸುಮಾರು ಹತ್ತುಸಾವಿರ ರುಪಾಯಿ ಮಾಯವಾಗಿದೆ. ಇನ್ನೊಂದು ಸೀರೆ ಅಂಗಡಿಯೂ ಸಹ ಮೇಯಿನ್ ಬೋರ್ಡ್ ಶೇರುಮಾರುಕಟ್ಟೆಗೆ ಬಂದು ಹೂಡಿಕೆದಾರರಿಗೆ ಬರೆಯನ್ನು ಕೊಟ್ಟಿವೆ. ಕಳೆದ ಮಾರ್ಚ್ ತಿಂಗಳಲ್ಲಿ ಸೆಬಿಯ ಅಧ್ಯಕ್ಷೆ ಮಾಧುರಿ ಬುಚ್ ಅವರು ಎಸ್‌ಎಮ್‌ಇ ವಿಭಾಗದಲ್ಲಿ ಕೆಲವೊಂದು ಕೈಚಳಕಗಳನ್ನು (manipulation in the SME segment) ಗಮನಿಸಿದ್ದೇನೆ, ಈ ಲೋಪ ದೋಷಗಳನ್ನು ಸರಿಮಾಡಲು ಕೆಲ ಸಮಯಗಳು ಬೇಕಾಗುತ್ತದೆ ಎಂದಿದ್ದರು. ಎಲ್ಲಿ ಹಣದ ಹರಿವು ಇರುತ್ತದೆಯೋ ಅಲ್ಲಿಗೆ ಅದನ್ನು ಕಮಾಯಿಸುವವರು ಬಂದೇ ಬರುತ್ತಾರೆ.

ಹೂಡಿಕೆದಾರರ ಈ ಧಾವಂತಕ್ಕೆ ಕಾರಣಗಳಲ್ಲಿ ಪ್ರಮುಖವಾದ ಅಂಶವೆಂದರೆ ಇಂದು ಭಾರತದಲ್ಲಿ ಒಟ್ಟೂ ಡಿಮ್ಯಾಟ್ ಖಾತೆದಾರ ಸಂಖ್ಯೆ 17.11 ಕೋಟಿ ದಾಟಿದೆ. ಇದು ರಷ್ಯ, ಮೆಕ್ಸಿಕೋ ಮತ್ತು ಜಪಾನಿನ ಒಟ್ಟೂ ಜನಸಂಖ್ಯೆಗಳಿಗಿಂತ ಹೆಚ್ಚು. ಹೆಚ್ಚಿನ ಕೆಲವರಿಗೆ ಶೇರುಮಾರುಕಟ್ಟೆ ಎಂದರೆ ಹಣ ಒಂದು ವರುಷದಲ್ಲಿಯೇ ದುಪ್ಪಟ್ಟು ಆಗಿಬಿಡುತ್ತದೆ ಎನ್ನುವ ಕಲ್ಪನಾಲೋಕದಲ್ಲಿ ವಿಹರಿಸುತ್ತಿರುವುದು.

ಜುಲೈ ತಿಂಗಳಲ್ಲಿ ಒಟ್ಟೂ SIP ಮೂಲಕ ಪರಸ್ಪರ ನಿಧಿಗೆ ಹರಿದು ಬಂದ ಹಣ 23, 332 ಕೋಟಿ ರುಪಾಯಿಗಳು. ಇಷ್ಟೊಂದು ಹಣವನ್ನು ಮ್ಯುಚುವಲ್ ಫಂಡ್‌ಗಳು ಹೂಡಿಕೆ ಮಾಡಿ ಲಾಭವನ್ನು ತೋರಿಸಲೇ ಬೇಕಾದ ಅನಿವಾರ್ಯತೆಯಲ್ಲಿ ಇದ್ದಾವೆ. ಹಾಗಾಗಿ ಹೊಸತಾಗಿ ಬರುತ್ತಿರುವ ಕಂಪನಿಗಳಲ್ಲಿ ಹೂಡಿಕೆ ಮಾಡಿ ಲಾಭದಲ್ಲಿ ಮಾರುವ ಪ್ರವೃತ್ತಿ ಹೆಚ್ಚಾಗುತ್ತಿದೆ.

ಬ್ಯಾಂಕಿನ ಬಡ್ಡಿದರ ಹಣದುಬ್ಬರಕ್ಕೆ ಹೋಲಿಸಿದರೆ ಬಹಳಷ್ಟೂ ಕೆಳಮಟ್ಟದಲ್ಲಿರುವ ಕಾರಣ ಜನಸಾಮಾನ್ಯರು ಶೇರು ಮಾರುಕಟ್ಟೆಯತ್ತ ಲಕ್ಷಹರಿಸಿದ್ದಾರೆ.

ಇತೀಚಿನ ವರದಿಯಂತೆ 25 ವರ್ಷಗಳ ಒಳಗಿನ ಯುವ ಜನಾಂಗ ಡಿಮ್ಯಾಟ್ ಖಾತೆಯನ್ನು ಹೆಚ್ಚು ತೆರೆದಿದ್ದಾರೆ. ಶೇರು ಹೂಡಿಕೆಯ ಕುರಿತು ತಿಳಿವಳಿಕೆಯ ಅರಿವಿಲ್ಲದೇ ಹೆಚ್ಚಿನವರು ನಷ್ಟಅನುಭವಿಸುತ್ತಿದ್ದಾರೆ. ನಷ್ಟಗಳಿಸುತ್ತಿರುವ ಕಂಪನಿಗಳೂ ಸಹ ಮಾರುಕಟ್ಟೆಯನ್ನು ಪ್ರವೇಶಿಸಬಹುದು. ಅಂತಹ ಸಂದರ್ಭಗಳಲ್ಲಿ ಅದರ ಶೇ.75 ಶೇರುಗಳನ್ನು ಸಾಂಸ್ಥಿಕ ಖರೀದಿದಾರರು (QIB) ಹೂಡಿಕೆಯನ್ನು ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಸೆಬಿ ಕೇವಲ ಎಚ್ಚರಿಕೆಯ ನೋಟಿಸನ್ನು ಕೊಡಬಹುದೇ ಹೊರತೂ ಕಾನೂನಾತ್ಮಕವಾಗಿ ಪ್ರತಿಬಂಧಿಸಲು ಸಾಧ್ಯವಿಲ್ಲ.

ಈ ಲೇಖನದ ಉದ್ದೇಶ ಹೂಡಿಕೆದಾರರನ್ನು ವಿಮುಖರನ್ನಾಗಿಸುವುದಲ್ಲ. ಯಾವುದೇ ಹೂಡಿಕೆಯನ್ನು ಮಾಡುವಾಗ ಮೊದಲು ಚನ್ನಾಗಿ ಆ ಕಂಪನಿಯ ಹಣಕಾಸಿನ ವಿವರಗಳನ್ನು ಗಮನಿಸಿ. ನಾಲ್ಕುನೂರು ಪುಟಗಳಿಷ್ಟಿರುವ ಎಲ್ಲವನ್ನೂ ನೋಡಲಿಕ್ಕೆ ಆಗಲಾರದು, ಅವುಗಳ ಸಂಕ್ಷಿಪ್ತ ವರದಿಯನ್ನು ಇಂದು ಬೇಕಾದಷ್ಟು ಆರ್ಥಿಕ ಪತ್ರಿಕೆಗಳಲ್ಲಿ ಮತ್ತು ವೆಬ್‌ಗಳಲ್ಲಿ ಲಭ್ಯವಿರುತ್ತದೆ. ಹಾಗಾಗಿ ಯಾವುದಕ್ಕೂ ಒಮ್ಮೆ ಪರೀಕ್ಷಿಸಿ ಹೂಡಿಕೆಯನ್ನು ಮಾಡಿ. ಶೇರು ಮಾರುಕಟ್ಟೆ ಎನ್ನುವುದು ಹಾವು ಏಣಿಯ ಆಟ. ನಿಮ್ಮ ಹಣಕ್ಕೆ ನೀವೇ ಜವಾಬ್ದಾರರು.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅರ್ಥಪೂರ್ಣ ಆಚರಣೆಯಿರಲಿ

ಗಣೇಶ ಚತುರ್ಥಿ ಸಂದರ್ಭದಲ್ಲಿ ಆರ್ಕೆಸ್ಟ್ರಾ ಹಾಕಿಕೊಂಡು ಕುಣಿಯುವುದು, ಅರೆ ಬರೆ ನೃತ್ಯ ಮಾಡುವುದು ಅಸಹ್ಯವಾಗಿ ವರ್ತಿಸುವುದು ಹೆಚ್ಚಾಗುತ್ತಿದೆ, ಬಲವಂತವಾಗಿ ದುಡ್ಡು ವಸೂಲು ಮಾಡುವುದು, ಗಲಾಟೆ ಮಾಡುವುದು ಇವೆಲ್ಲ ಗಣೇಶನ ಹಬ್ಬಕ್ಕೆ ಶೋಭೆ ತರುವುದಿಲ್ಲ. ಸ್ವಾತಂತ್ರ್ಯ ಚಳುವಳಿ ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಾಗ ಬ್ರಿಟೀಷರು ಭಾರತೀಯರು ಗುಂಪಾಗಿ ಸೇರುವುದನ್ನು ನಿಷೇಧಿಸಿದ್ದರು. ಆದರೆ ಲೋಕಮಾನ್ಯ ಬಾಲಗಂಗಾಧರನಾಥ ತಿಲಕರು ಗಣೇಶನ ವಿಗ್ರಹ ಇಟ್ಟು ಹಬ್ಬವನ್ನು ಆಚರಿಸುವುದನ್ನು ತಂದರು, ಈ ಆಚರಣೆ ಸಂದರ್ಭದಲ್ಲಿ ದೇಶವನ್ನು ದಾಸ್ಯದಿಂದ ಹೇಗೆ ಮುಕ್ತಿ ಮಾಡಬೇಕೆಂಬುದನ್ನು ಕುರಿತು ಚಿಂತಿಸಿ ರೂಪುರೇಷೆ ಸಿದ್ಧಪಡಿಸುತ್ತಿದರು, ಇದು ಬ್ರಿಟಿಷರಿಗೆ ಗೊತ್ತಾಗುತ್ತಿರಲಿಲ್ಲ, ಗುಂಪಾಗಿ ಸೇರುವುದನ್ನು ನಿಷೇಧಿಸಿದ್ದ ಬ್ರಿಟಿಷರಿಗೆ ಭಾರತೀಯ ಧಾರ್ಮಿಕ ಚಟುವಟಿಕೆಗಳಿಗೆ ಅಡ್ಡಿ ಉಂಟು ಮಾಡಿದರೆ ಜನ ಧಂಗೆ ಎದ್ದಾರು ಎಂದು ಎಂಬ ಭಯದಿಂದ ಗಣೇಶ ಉತ್ಸವಕ್ಕೆ ಅಡ್ಡಿಪಡಿಸುತ್ತಿರಲಿಲ್ಲ, ಈ ಉತ್ಸವದ ನೆಪದಲ್ಲಿ ಕ್ರಾಂತಿಕಾರಿಗಳು ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವ ವಿಚಾರಗಳನ್ನುಕ್ರಾಂತಿಯ ರೂಪು ರೇಷೆಗಳನ್ನೂ ರೂಪಿಸುತ್ತಿದ್ದರು. ಇಂದು ಮೋಜು ಹೆಚ್ಚಾಗುತ್ತಿದೆ. ಇದನ್ನು ಬಿಟ್ಟು ಯಾವಕಾರಣಕ್ಕೆ ದೇಶ ಗಣೇಶ ಉತ್ಸವ ಆಚರಣೆಗೆ ಬಂತು ಎಂಬುದನ್ನು ಮನಗಾಣಲಿ ಹಾಗೂ ಅರ್ಥ ಪೂರ್ಣ ಆಚರಣೆ ಮಾಡುವಂತಾಗಲಿ ಎಂಬ ಭಯದಿಂದ ಗಣೇಶ ಉತ್ಸವಕ್ಕೆ ಅಡ್ಡಿಪಡಿಸುತ್ತಿರಲಿಲ್ಲ. ಈ ಉತ್ಸವದ ನೆಪದಲ್ಲಿ ಕ್ರಾಂತಿಕಾರಿಗಳು ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವ ವಿಚಾರಗಳನ್ನು ಕ್ರಾಂತಿಯ ರೂಪು ರೇಷೆಗಳನ್ನೂ ರೂಪಿಸುತ್ತಿದ್ದರು, ಇಂದು ಮೋಜು ಹೆಚ್ಚಾಗುತ್ತಿದೆ. ಇದನ್ನು ಬಿಟ್ಟು ಯಾವಕಾರಣಕ್ಕೆ ದೇಶ ಗಣೇಶ ಉತ್ಸವ ಆಚರಣೆಗೆ ಬಂತು ಎಂಬುದನ್ನು ಮನಗಾಣಲಿ, ಬಲವಂತದ ವಸೂಲಿ ಬೇಡ, ಪರಿಸರಕ್ಕೆ ಹಾನಿಯಗುವಂತಹ ರಾಸಾಯನಿಕ ಬಣ್ಣದಿಂದ ಮಾಡಿದ ಗಣೇಶನ ಮೂರ್ತಿ ಬಿಟ್ಟು ಬರಿಯ ಜೇಡಿ ಮಣ್ಣಿನಿಂದ ಮಾಡಿದ ಗಣೇಶನ ಮೂರ್ತಿಗಳನ್ನು ಇಟ್ಟು ಪ್ರತಿಷ್ಠಾಪನೆ ಮಾಡಿ, ಪಟಾಕಿ ಹೊಡೆಯುವುದು ಬೇಡ ಇದರಿಂದ ವಾಯು ಮಾಲಿನ್ಯ, ಶಬ್ದ ಮಾಲಿನ್ಯ ಉಂಟಾಗುತ್ತದೆ ಹಾಗೂ ಅರ್ಥ ಪೂರ್ಣ ಆಚರಣೆ ಮಾಡುವಂತಾಗಲಿ.

–ಎಮ್.ಪರಮೇಶ್ವರ ಮದ್ದಿಹಳ್ಳಿ

ಭಾರವಾದ ಬಾವುಟ

ಪ್ರತಿ ವರ್ಷದಂತೆ ಶಿಕ್ಷಕರ ದಿನಾಚರಣೆಯಂದು ಇಲಾಖೆಯ ವತಿಯಿಂದ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಶಿಕ್ಷಕರ ದಿನಾಚರಣೆ ಬಾವುಟ ಮಾರಾಟ ಮಾಡಿ, ವಂತಿಗೆಯನ್ನು ಸಂಗ್ರಹಸಿಲಾಗುತ್ತದೆ. ಈ ಬಾವುಟ ವಿತರಣೆಯ ವಂತಿಗೆಯ ಹಣವನ್ನು ಶಿಕ್ಷಕರ ಕಲ್ಯಾಣ ಹಾಗೂ ಕ್ಷೇಮಾಭಿವೃದ್ಧಿಗಾಗಿ ಬಳಕೆ ಮಾಡಿಕೊಳ್ಳಲಾಗುತ್ತದೆ. ಆದರೆ ಪ್ರಸುತ್ತ ರಾಜ್ಯದ ಎಲ್ಲ ಸರಕಾರಿ ಶಾಲೆಗಳಲ್ಲಿ ಅತಿಥಿ 45 ಸಾವಿರಕ್ಕೂ ಹೆಚ್ಚು ಅತಿಥಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಅವರ ಗೌರವ ಧನ ದಿನಕ್ಕೆ ರು.333 ಇದೆ. ಇನ್ನು ಅತಿಥಿ ಹಾಗೂ ಅನುದಾನ ರಹಿತ ಶಿಕ್ಷಕರಿಗೆ ಇಲಾಖೆಯ ಶಿಕ್ಷಕರ ಕಲ್ಯಾಣ ನಿಧಿಯಿಂದಾಗಲಿ, ಸರಕಾರದಿಂದಾಗಲಿ ಯಾವ ಪ್ರತ್ಯೇಕ ಸೌಲಭ್ಯವು ಇಲ್ಲ. ಹೀಗಿರುವಾಗ ಏಕಾಏಕಿ ಬಾವುಟದ ದರ ಪರಿಷ್ಕೃತ ಮಾಡಿದರೆ ಅತಿಥಿ ಶಿಕ್ಷಕರಿಗೆ ಆರ್ಥಿಕ ಹೊರೆಯಾಗುತ್ತದೆ. ಕಳೆದ ವರ್ಷ ಮಕ್ಕಳಿಗೆ ರು.5 ಇದ್ದ ಬಾವುಟ ಈ ಬಾರಿ ರು.10 ಹಾಗೂ ಪ್ರಾಥಮಿಕ ಶಿಕ್ಷಕರಿಗೆ ರು.35 ರಿಂದ ರು.50, ಪ್ರೌಢಶಾಲಾ ಶಿಕ್ಷಕರಿಗೆ ರು.50 ರಿಂದ ರು.75 ಮತ್ತು ಪದವಿ ಪೂರ್ವ ಕಾಲೇಜಿನ ಉಪನ್ಯಾಸರಿಗೆ ರು.60 ರಿಂದ ರು.100 ಪರಿಷ್ಕೃತ ದರಗಳನ್ನು ಗೊತ್ತುಪಡಿಸಲಾಗಿದೆ. ಇನ್ನು ಎಸ್‌ಎಟಿಎಸ್‌ನಲ್ಲಿ ಒಂದು ಶಾಲೆಯಲ್ಲಿರುವ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರ ಮಾಹಿತಿ ಇದ್ದರೂ ಸಹ ಎಲ್ಲರಿಗೂ ಸಹ ಪ್ರೌಢಶಾಲಾ ಶಿಕ್ಷಕರ ಬಾವುಟ ಕಳುಹಿಸಲಾಗಿದೆ. ಇಲ್ಲದಿದ್ದರೆ ವಂತಿಗೆ ಪಾವತಿಸಿದವರಿಗೆ ಕಡ್ಡಾಯವಾಗಿ ಸೌಲಭ್ಯವನ್ನಾದರೂ ನೀಡಬೇಕಲ್ಲವೇ? ದಿನಗೂಲಿ ಶಿಕ್ಷಕರ ಹಣದಿಂದ ಇಲಾಖೆ ಹಾಗೂ ಖಾಯಂ ಸರಕಾರಿ ನೌಕರರ ಕಲ್ಯಾಣ ಮಾಡುವುದು ಎಷ್ಟರ ಮಟ್ಟಿಗೆ ಸರಿ.

–ಸುರೇಂದ್ರ ಪೈ, ಭಟ್ಕಳ

ಪಕ್ಷಾಂತರರ ಪಿಂಚಣಿಗೆ ಕತ್ತರಿ?

ಪಕ್ಷಾಂತರ ಕಾಯ್ದೆ ಅಡಿಯಲ್ಲಿ ಅನರ್ಹ ಗೊಳ್ಳುವ ಶಾಸಕರಿಗೆ ಪಿಂಚಣಿ ಸೌಲಭ್ಯವನ್ನು ಮೊಟಕುಗೊಳಿ ಸುವ ವಿಧೇಯಕವನ್ನು ಹಿಮಾಚಲ ಪ್ರದೇಶದ ಕಾಂಗ್ರೆಸ್ ಸರಕಾರ ಮಂಡಿಸಿದ್ದು, ಇದು ರಾಜಕೀಯ ವಲಯದಲ್ಲಿ ಸ್ವಲ್ಪ ಸಂಚಲನ ಮೂಡಿಸಿದೆ. ಇ ದೊಂದು ಶ್ಲಾಘನೀಯ ಹೆಜ್ಜೆ. ಅದರೆ, ಶಾಸಕ ಅನರ್ಗೊಳ್ಳುವವರೆಗೆ ಕಾಯದೇ, ತನ್ನನ್ನು ಅರಿಸಿ ಕಳಿಸಿದ ಪಕ್ಷಕ್ಕೆ ದ್ರೋಹ ಮಾಡಿ ಅಧಿಕಾರದ ಆಶೆಗಾಗಿ ಇನ್ನೊಂದು ಪಕ್ಷವನ್ನು ಸೇರುವವರಿಗೆ ಈ ಶಿಕ್ಷೆಯನ್ನು ತಕ್ಷಣ ಕೊಡಬೇಕು ಮತ್ತು ಅವರು 6 ವರ್ಷಗಳ ಕಾಲ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸದಿರುವಂತೆ ನಿರ್ಬಂಧಿಸಬೇಕು. ಪಕ್ಷಾಂತರ ಕಾಯ್ದೆ ಅಡಿಯಲ್ಲಿ ಅನರ್ಹ ಗೊಳ್ಳುವ ಪ್ರಕ್ರಿಯೆ ತೀರಾ ಉದ್ದವಾಗಿರುತ್ತದೆ. ಈ ನಿಟ್ಟಿನಲ್ಲಿ ಕಾನೂನು ಹೋರಾಟ ತೀರಾ ಸಾಮಾನ್ಯವಾಗಿದ್ದು ಅದರಿಂದ ನುಣುಚಿ ಕೊಳ್ಳುವ ಪ್ರಮೇಯಗಳೇ ಹೆಚ್ಚಾಗಿದ್ದು ವಿಧೇಯಕದ ಉದ್ದೇಶ ಸಾಫಲ್ಯವನ್ನು ಕಾಣುವುದಿಲ್ಲ. ಪಕ್ಷಾಂತರದಿಂದ ದೊರಕುವ ಲಾಭವನ್ನು ಪರಿಗಣಿಸಿದರೆ ದೊರಕುವ ಪಿಂಚಣಿ ಮೊತ್ತ ಜುಜುಬಿ ಎನ್ನಬಹುದು.

–ರಮಾನಂದ ಶರ್ಮಾ, ಬೆಂಗಳೂರು

ಬಿಗಿ ನಿಯಮ ಮಾಡಿ

ಬೆಂಗಳೂರು ನಗರದಲ್ಲಿ ದಿನೇ ದಿನೇ ವಾಹನ ಸಂಚಾರ ಹೆಚ್ಚುತ್ತಿರುವಂತೆ ಅಪಘಾತಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಿದೆ. ಇದು ಖಂಡಿತವಾಗಿಯೂ ಗಾಬರಿಗೊಳಿಸುವಂತಹ ವಿಷಯವಾಗಿದ್ದು ಇದನ್ನು ತಡೆಗಟ್ಟಲು ಯಾವುದೇ ರೀತಿಯ ಉಪಾಯವಿಲ್ಲವೇ ಎಂಬುದಕ್ಕೆ ಇತ್ತೀಚೆಗೆ ಬೆಂಗಳೂರು ಪೊಲೀಸರ ವಿಶೇಷ ಕಾರ್ಯಾಚರಣೆ ಹಾಗೂ ವಿಶೇಷ ಕಟ್ಟುನಿಟ್ಟಿನ ಕ್ರಮದಿಂದಾಗಿ ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಅಪಘಾತದಿಂದ ಮರಣ ಹೊಂದಿದವರ ಸಂಖ್ಯೆ ಇಳಿಕೆಯಾಗಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಜನವರಿಯಿಂದ ಆಗಸ್ಟ್‌ವರೆಗೆ ಅಪಘಾತದಿಂದ ಸತ್ತವರ ಸಂಖ್ಯೆ ಮೂರು ಪಟ್ಟು ಇಳಿಕೆಯಾಗಿದ್ದು ಇದು ತೃಪ್ತಿದಾಯಕ ವಿಷಯ. ಅತಿ ವೇಗ ಹಾಗೂ ಇತರೆ ಚಾಲಕರ ತಪ್ಪುಗಳನ್ನು ಕಂಡುಹಿಡಿಯಲು ಹೊಸ ತಂತ್ರಜ್ಞಾನವನ್ನು ಅಳವಡಿಸಿದ್ದು ಇಲ್ಲಿ ಉಪಯೋಗವಾಗಿದೆ. ನಗರದ ಒಳಗೂ ಡ್ರಿಂಕ್ ಅಂಡ್ ಡ್ರೈವ್ ತಡೆಗಟ್ಟಲು ಹಲವು ರಸ್ತೆಗಳಲ್ಲಿ ಕಾರ್ಯಾಚರಣೆ ಕೈಗೊಂಡು ದಂಡ ಹಾಕಿ ಪೊಲೀಸರು ಬಿಸಿ ಮುಟ್ಟಿಸಿದ್ದಾರೆ. ಫ್ಲೈಓವರ್ ಹಾಗೂ ಇತರ ಮುಖ್ಯ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಮೂರು ನಾಲ್ಕು ಜನರು ಹೆಲ್ಮೆಟ್ ಇಲ್ಲದೆಯೇ ಅತಿ ವೇಗವಾಗಿ ಹೋಗಿ ಅಪಘಾತಕ್ಕೆ ಕಾರಣರಾಗುವವರು, ಸಂಚಾರ ನಿಯಮಗಳನ್ನು ಪಾಲಿಸದೆ ಇರುವವರನ್ನೂ ಹೊಸ ತಂತ್ರಜ್ಞಾನವನ್ನು ಬಳಸಿ ದಂಡ ಅಥವಾ ಶಿಕ್ಷಿಸಿದರೆ ಅಪಘಾತದಿಂದ ಗಾಯಗೊಳ್ಳುವವರು ಹಾಗೂ ಮರಣ ಹೊಂದುವವರ ಸಂಖ್ಯೆ ಕಡಿಮೆಯಾಗುವಂತೆ ಮಾಡುವುದರಲ್ಲಿ ಪೊಲೀಸರಿಗೆ ಕಷ್ಟವಾಗಲಾರದು. ಸರಕಾರವೂ ಹೊಸ ಹೊಸ ತಂತ್ರಜ್ಞಾನವನ್ನು ಅಳವಡಿಸಲು ಹಣ ಬಿಡುಗಡೆ ಮಾಡಿದರೆ ಬೆಳಿಗ್ಗೆ ಮನೆ ಬಿಟ್ಟವರು ಮತ್ತೆ ಮನೆ ಸೇರುವ ಗ್ಯಾರಂಟಿಯನ್ನು ಕೂಡ ಕೊಡಬಹುದು.

–ಜಯರಾಂ ಪಣಿಯಾಡಿ

ಅರ್ಥಪೂರ್ಣ ಆಚರಣೆಯಿರಲಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ಸುರೇಶ ಪ್ರಭು, ಕಾರ್ಕಳ**
ಭಟ್ರೇ, ಜೈಲಿನಲ್ಲಿರುವ ದರ್ಶನ್ ಭೇಟಿ ಮಾಡಲು ನೀವು ಬಯಸಿದ್ದೀರಂತೆ?
- ಅಲ್ಲಿ ಡ್ರೋನ್ ಶೂಟಿಂಗ್‌ಗೆ ಅನುಮತಿ ಕೊಟ್ರೆ ಯೋಚಿಸಬಹುದು!

● **ರಾಘು, ಬಳ್ಳಾರಿ**
ಭಟ್ರೇ, ಕೀರ್ತಿಗಾಗಿ ಜನ ಏನು ಬೇಕಾದರೂ ಮಾಡ್ತಾರಲ್ಲ?
- ಸದ್ಯ ಜನ ಅದಕ್ಕಾಗಿ ರೀಲ್ ಮಾಡಲಾರಂಭಿಸಿದ್ದಾರೆ!

● **ಕೆ.ಸಿದ್ದಪ್ಪ, ಧಾರವಾಡ**
ಭಟ್ರೇ, ಹೆಣ್ಣಿನ ಅಂದವನ್ನು ಬಣ್ಣಿಸಲು ಶಬ್ದಕೋಶ ಬೇಕಾ?
- ಬೇಕಿರುವುದು ಶಬ್ದಕೋಶ ಅಲ್ಲ, ಭಾವಕೋಶ!

● **ಮೋಹನ ಶೆಟ್ಟಿ, ಹೊನ್ನಾವರ**
ಸಾರ್, ಪ್ರೀತಿ ಕರೆದಾಗ ಬರುವುದೇ?
- ಅವಳು ಯಾರು ಎಂಬುದನ್ನು ಮೊದಲು ಸ್ಪಷ್ಟಪಡಿಸು!

● **ರಾಮು ಪಾಟೀಲ್, ಚಿತ್ರದುರ್ಗ**
ಭಟ್ರೇ, 'ಲಿಂಗಾಯತರು-ಮುಸ್ಲಿಮರು ಸಮಾನರು' ಎಂದು ಸಾಣೇಹಳ್ಳಿ ಶ್ರೀ ಹೇಳಿದ್ದಾರಲ್ಲ ?
- ಮುಸ್ಲಿಮರೊಂದಿಗೆ ಹೆಣ್ಣು-ಗಂಡು ಸಂಬಂಧ ಮಾಡಬಹುದು ಎಂದು ಮುಂದೆ ಹೇಳಬಹುದು !

● **ಕೆರೂರು ಕೆ ಗೌಡ, ಬಾಗಲಕೋಟೆ**
ಭಟ್ರೇ, ಸಾಣೇಹಳ್ಳಿ ಶ್ರೀಗಳನ್ನು ಪಾದಪೂಜೆಗೆ ಕರೆಯಬಹುದಾ ?
- ಧಾರಾಳವಾಗಿ... ಗಣಪತಿ ಪೂಜೆ ಮಾಡಬಾರದು ಎಂದಷ್ಟೇ ಅವರು ಹೇಳಿದ್ದಾರೆ, ಅವರ ಪಾದಪೂಜೆಗೆ ಹಾಗೆ ಹೇಳಿಲ್ಲ!

● **ಗಣೇಶ ಕಾಮತ, ಹುಬ್ಬಳ್ಳಿ**
ಭಟ್ರೇ, ಉಪ್ಪು ತಿಂದವರು ನೀರು ಕುಡಿಯಲೇಬೇಕು ಅಂತಾರಲ್ಲ ?
- ಹಾಗಲ್ಲ.. ಉಪ್ಪು ತಿಂದವರು ಬಿಪಿ ಮಾತ್ರೆ ನುಂಗಲೇಬೇಕು!

● **ಕೆ.ವಿ.ಕಟ್ಟಿ, ಧಾರವಾಡ**
ಭಟ್ರೇ, ಶಾಸಕ ಅರವಿಂದ ಬೆಲ್ಲದ ಸಿಎಂ ಕ್ಷಮೆ ಯಾಚಿಸಿದ್ದಾರಲ್ಲ ?
- ತಮ್ಮ ಬಾಯಿಂದ ಅಂಥ ಮಾತಲ್ಲ, 'ಬೆಲ್ಲದ' ಥರ ಮಾತು ಬರಬೇಕಿತ್ತು ಅಂತ ಅವರಿಗೆ ಜ್ಞಾನೋದಯ ಆಯ್ತಂತೆ!

● **ಎಂ.ಶೇಖರ, ಜಯನಗರ**
ಭಟ್ರೇ, ಎರಡನೇ ಮದುವೆಗೆ ಮೊದಲ ಹೆಂಡತಿ ಅನುಮತಿ ಕಡ್ಡಾಯ ಎಂಬ ಕಾನೂನು ಮಾಡಿದರೆ ಹೇಗೆ ?
- ಮೊದಲ ಹೆಂಡತಿಯ ಹಿಂದೆ ಸುತ್ತಾಡಲು ಮತ್ತೊಮ್ಮೆ ಅವಕಾಶ ಸಿಕ್ಕಿದಂತಾಗಬಹುದು!

● **ಭಾವನಾ ಸಿ., ಬೆಂಗಳೂರು**
ಭಟ್ರೇ, ನೀವು ಸದಾ ಬ್ಯುಸಿ ಅಂತ ನನ್ನ ಸ್ನೇಹಿತೆ ಹೇಳ್ತಾಳಲ್ಲ?
- ಅದು ಯಾರು ಕರೆಯುತ್ತಾರೆಂಬುದನ್ನು ಅವಲಂಬಿಸಿರುತ್ತದೆ!

ಆಸೆಯ ಮಿತಿಯೇ ಸುಖದ ಮೂಲ

ಆಸೆಯೇ ದುಃಖಕ್ಕೆ ಮೂಲ ಎಂದಾದರೆ ಆಸೆಯನ್ನು ತ್ಯಜಿಸಿದವರು ಮಹಾತ್ಮರಾಗುತ್ತಾರೆ. ಅಂತಹವರೇ ಮನುಕುಲದ ಒಳಿತಿಗೆ ಕಾರಣರಾಗುತ್ತಾರೆ. ಆಸೆಯಿಂದಲೇ ಸೃಷ್ಟಿ, ಆಸೆಯಿಂದಲೇ ಸ್ಥಿತಿ ಮತ್ತು ಆಸೆಯಿಂದಲೇ ವಿನಾಶ. ಮಾನವನಿಗೆ ದುರಾಸೆಯಾದರೆ ಮಾನವೇತರ ಜೀವಿಗಳದ್ದು ಹಾಗಲ್ಲ. ತಾನು ಬದುಕಿ ಇತರರನ್ನೂ ಬದುಕಲು ಅನುವು ಮಾಡಿಕೊಡುವ ಸಹೃದಯದಿಂದ ಕೂಡಿವೆ.

ಬೋಧಿವೃಕ್ಷ
ಪ್ರೊ.ಸಿ.ಶಿವರಾಜು
vveditoped@gmail.com

ಆಸೆ ಯಾರಿಗಿಲ್ಲ ಹೇಳಿ: ಈ ಜಗತ್ತಿನಲ್ಲಿ ಆಸೆ ಇಲ್ಲದ ಮನುಷ್ಯನಿಲ್ಲ, ಆಸೆ ಎಂಬ ಎರಡಕ್ಷರ ಮನುಷ್ಯನನ್ನು ವಿಚಲಿತನನ್ನಾಗಿ ಮಾಡುತ್ತದೆ. ಸ್ವಾರ್ಥದಿಂದ ಆಸೆಯೇ ಅಥವಾ ಆಸೆಯಿಂದ ಸ್ವಾರ್ಥವೇ? ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ಹುಡುಕುವ ಒಂದು ಸಣ್ಣ ಪ್ರಯತ್ನ ಮಾಡಲಾಗಿದೆ. 'ಆಸೆ ಇರಬೇಕು, ದುರಾಸೆ ಇರಬಾರದು' ಎಂದು ನಮ್ಮ ಹಿರಿಯರು ಹೇಳಿರುವ ಮಾತು ಪ್ರಚಲಿತವಾಗಿದೆ. ಗೌತಮ ಬುದ್ಧ ಆಸೆಯನ್ನು ಕುರಿತು 'ಆಸೆಯೇ ದುಃಖಕ್ಕೆ ಕಾರಣ' ಎಂಬ ವಿಶ್ವ ಸಂದೇಶವನ್ನು ಸಾರಿದ್ದಾರೆ. 'ಆಸೆಯ ಮಿತಿಯೇ ಸುಖದ ಮೂಲ' ಭೂಮಿಯ ಮೇಲೆ ವಾಸಿಸುವ ಪಶು, ಪಕ್ಷಿ, ಪ್ರಾಣಿ, ಮನುಷ್ಯ ಹಾಗೂ ಜಲಚರಾದಿಗಳಿಗೂ ಆಸೆ ಇದ್ದೇ ಇರುತ್ತದೆ. ಆಸೆ ಇಲ್ಲದಿದ್ದರೆ ಬದುಕುವುದಕ್ಕೆ ಆಗುವುದಿಲ್ಲ ಅಥವಾ ಬದುಕಿಗೆ ಅರ್ಥವಿರುವುದಿಲ್ಲ. ಆಸೆ ಎಂಬ ಕನಸು ಮುಂದೊಂದು ದಿನ ಈಡೇರುತ್ತದೆ ಎಂಬ ನಂಬಿಕೆಯಿಂದ ಮನುಷ್ಯ ಜೀವನ ಸಾಗಿಸುತ್ತಿರುತ್ತಾನೆ. ಆಸೆಗೆ ಯಾವಾಗಲೂ ಕೊನೆ ಎನ್ನುವುದಿಲ್ಲ. 'ಹಾಸಿಗೆ ಇದ್ದಷ್ಟು ಕಾಲ ಚಾಚು' ಎಂಬ ಗಾದೆ ಮಾತನ್ನು ನಾವು ಕೇಳಿದ್ದೇವೆ. ಆಸೆಗೆ ಅಂಕುಶವನ್ನು ಹಾಕದಿದ್ದಲ್ಲಿ ನೆಮ್ಮದಿಯ ಜೀವನ ಸಾಗಿಸಲು ಸಾಧ್ಯವಾಗುವುದಿಲ್ಲ.

ಆಸೆಯೇ ದುಃಖಕ್ಕೆ ಮೂಲ ಎಂದಾದರೆ ಆಸೆಯನ್ನು ತ್ಯಜಿಸಿದವರು ಮಹಾತ್ಮರಾಗುತ್ತಾರೆ. ಅಂತಹವರೇ ಮನುಕುಲದ ಒಳಿತಿಗೆ ಕಾರಣರಾಗುತ್ತಾರೆ. ಆಸೆಯಿಂದಲೇ ಸೃಷ್ಟಿ, ಆಸೆಯಿಂದಲೇ ಸ್ಥಿತಿ ಮತ್ತು ಆಸೆಯಿಂದಲೇ ವಿನಾಶ. ಮಾನವನಿಗೆ ದುರಾಸೆಯಾದರೆ ಮಾನವೇತರ ಜೀವಿಗಳದ್ದು ಹಾಗಲ್ಲ. ತಾನು ಬದುಕಿ ಇತರರನ್ನೂ ಬದುಕಲು ಅನುವು ಮಾಡಿಕೊಡುವ ಸಹೃದಯದಿಂದ ಕೂಡಿವೆ. ಆ ಬಗೆಯ ಆಸೆಯನ್ನೇ ಬಹುಶಃ ಮಹಾಪುರುಷರು ಮನುಷ್ಯರಾದ ನಮ್ಮಿಂದ ಅಪೇಕ್ಷಿಸುವುದು. ಆಸೆಯೆಂದರೆ ಸಾಮಾನ್ಯ ಮನುಷ್ಯರಿಗಿರುವ ಹೆಬ್ಬಯಕೆ. ದುರಾಸೆಯನ್ನು ಮನುಷ್ಯರಾದ ನಾವು ತ್ಯಜಿಸಿ ಹೃದಯ ವೈಶಾಲ್ಯತೆಯನ್ನು ಮೆರೆಯಬೇಕಾಗಿದೆ. ಆಸೆ ಮತ್ತು ಅವಶ್ಯಕತೆಗಳನ್ನು ಮಿತಿಯಲ್ಲಿಟ್ಟುಕೊಳ್ಳುವ ಮೂಲಕ ಅನಾವಶ್ಯಕ ಗೊಂದಲಗಳನ್ನು ನಾವು ಕಡಿಮೆ ಮಾಡಿಕೊಳ್ಳಬಹುದು. ನಮ್ಮ ಆಸೆ ಮಿತಿಯಲ್ಲಿದ್ದರೆ, ನಿರಾಶೆಗೆ ಆಸ್ಪದವಿರುವುದಿಲ್ಲ. ನಮ್ಮಲ್ಲಿ ಬಂಗಾರವಿದ್ದ ಮಾತ್ರಕ್ಕೆ ನಮ್ಮ ಬದುಕು ಬಂಗಾರವಾಗುವುದಿಲ್ಲ. 'ನಮ್ಮ ಮನಸ್ಸಿಗೆ ನೆಮ್ಮದಿ ಇದ್ದರೆ ಮಾತ್ರ ನಮ್ಮ ಬಾಳು ಅಪ್ಪಟ ಬಂಗಾರವಾಗುತ್ತದೆ' ಎಂಬುದು ಪ್ರಕೃತಿಯಷ್ಟೇ ಸತ್ಯವಾಗಿದೆ. ದುರಾಸೆಗೆ ಕಡಿವಾಣ ಹಾಕಿ ಕಟ್ಟಿ ಹಾಕಬೇಕಾಗಿದೆ. ಕಡಿವಾಣ ಹಾಕುವ ಮನಸ್ಸು ಮಾಡಬೇಕಾದರೆ, ದುರಾಸೆ ಹಿಡಿತಕ್ಕಾಗಿ ನಾನು ಮೊದಲು ಬದಲಾಗಬೇಕು ನಂತರ ಇತರರನ್ನು ಬದಲಾಗುವಂತೆ ಪ್ರೇರೇಪಿಸಬೇಕು, ನಾನು ಬದಲಾಗದೆ, ಬೇರೆಯವರನ್ನು ನೀ ಬದಲಾಗು ಎನ್ನುವುದರಲ್ಲಿ ಅರ್ಥವಿರುವುದಿಲ್ಲ. ಹೀಗೆ ಮೊದಲು ನಾನು ಬದಲಾಗಿ ನಂತರ ಇತರರನ್ನು ಬದಲಾಯಿಸುವ ಕಾರ್ಯದಲ್ಲಿ ಮುನ್ನುಗ್ಗಬೇಕು.

ಬುದ್ಧರು ಉಪದೇಶಿಸುತ್ತಾ, ಮನುಷ್ಯನ ದುಃಖಕ್ಕೆ ಅಂದರೆ ಜೀವನದಲ್ಲಿ ಬರುವ ನಿರಾಸೆ, ಹತಾಸೆ, ಸಂಕಟ, ಕಷ್ಟಗಳಿಗೆ ಸಮಾಜದಲ್ಲಿರುವ ಶೋಷಣೆ, ಕ್ರೌರ್ಯ ಹಾಗೂ ಹಿಂಸಾಚಾರಗಳಿಗೆ ಮನಸ್ಸೇ ಕಾರಣ ಎಂಬುದನ್ನು ತಮ್ಮ ಧಮ್ಮಪದದಲ್ಲಿ ಉಪದೇಶಿಸಿದ್ದಾರೆ. ಹುಟ್ಟುವ (ಜನ್ಮ ತಾಳುವ) ಸ್ವಭಾವ ಹೊಂದಿದ ಎಲ್ಲವೂ ನಶಿಸುವ ನಿಬಂಧನೆಗೆ ಒಳಪಟ್ಟಿದೆ. 'ಆಸೆಯ ಮಿತಿಯೇ ಸುಖದ ಮೂಲ' ಎಂದಿದ್ದಾರೆ. ಇಂದು ಮಾನವ ಭೋಗ ವಸ್ತುಗಳನ್ನು ಪಡೆಯುವುದು ಅದನ್ನು ಅನುಭವಿಸುವುದೇ ಪರಮ ಸುಖ ಎಂದು ಭಾವಿಸಿದ್ದಾನೆ. ಆಸೆಯ ಮಿತಿಯಿಂದ ಅವನಿಗೆ ಶಾಂತಿ, ನೆಮ್ಮದಿ, ತೃಪ್ತಿ ಹಾಗೂ ಸುಖಗಳನ್ನು ಕಾಣಲು ಸಾಧ್ಯ ಎನ್ನುವುದನ್ನು ಮರೆತಿದ್ದಾನೆ. ಜೀವನ ನಡೆಸಲು ಹಲವಾರು ಮಾರ್ಗಗಳನ್ನು ಬುದ್ಧರು ಉಪದೇಶಿಸಿದ್ದಾರೆ. 'ಮನುಷ್ಯನ ಬೆಳವಣಿಗೆಗೆ ಬೇಕಾದ ಶಕ್ತಿ ಹುಟ್ಟುವುದೇ ಮನಸ್ಸಿನಲ್ಲಿ' ಆದ್ದರಿಂದ ಆಸೆ ಎಂಬ ಮನಸ್ಸನ್ನು ನಿಯಂತ್ರಿಸಿ ಎಂದಿದ್ದಾರೆ. ಮಾನಸಿಕವಾದ ನೆಮ್ಮದಿಗಿಂತ ದೊಡ್ಡದಾದ ಶ್ರೀಮಂತಿಕೆ ಈ ಜಗತ್ತಿನಲ್ಲಿ ಯಾವುದೂ ಇಲ್ಲ. 'ಮನುಷ್ಯನಿಗೆ ಸುಖವಾಗಿರಬೇಕಾದರೆ, ಮಾನಸಿಕ ನೆಮ್ಮದಿ ಬಹಳ ಮುಖ್ಯ. ಅದಿಲ್ಲದಿದ್ದರೆ ಜೀವನ ವ್ಯರ್ಥವೆನಿಸುತ್ತದೆ. ಆಸೆಯಿಂದ ಗಳಿಸಿದಂತಹ

ಸಂಪತ್ತಿನಿಂದ ನೆಮ್ಮದಿ ಸಿಗುವುದಿಲ್ಲ. ಹಣದಿಂದ ಬರುವ ಗೌರವ 'ದೀಪದ ಬೆಳಕಂತೆ, ದೀಪದ ಎಣ್ಣೆ ಇರುವವರೆಗೂ ಮಾತ್ರ ಉರಿಯುತ್ತದೆ.' ಆದ್ದರಿಂದ ದುರಾಸೆಯಿಂದ ಗಳಿಸಿದ ಸಂಪತ್ತು ಸುಖ ಕೊಡುವುದಿಲ್ಲ. ಆ ಸಂಪತ್ತು ಇರುವವರೆಗೂ ಅಷ್ಟೇ ಅದು ನಶಿಸಿ ಹೋದ ಮೇಲೆ ದುಃಖ ಕಾಡಿ ನೆಮ್ಮದಿಯ ಬದುಕು ದೂರವಾಗುತ್ತದೆ. 'ಆಸೆ ಎಂಬ ನಿಮ್ಮ ಮನಸ್ಸನ್ನು ನಿಯಂತ್ರಿಸಿ ಇಲ್ಲವಾದರೆ ಅದು ನಿಮ್ಮನ್ನು ನಿಯಂತ್ರಿಸುತ್ತದೆ'. 'ಬುದ್ಧನಂತೆ ಮಹಾಮೌನಿ ಆಗಬೇಕೆಂಬ ಆಸೆ ಬೆಟ್ಟದಷ್ಟಿದ್ದರೂ ನನ್ನಲ್ಲಿರುವ ಅರ್ಥವಿಲ್ಲದ ದುರಾಸೆಗಳು ಕ್ಷುಲ್ಲಕ ಕನಸುಗಳು ಮತ್ತೆ ಮತ್ತೆ ಮಾತನಾಡುವಂತೆ ಮಾಡುತ್ತಿವೆ' ಎಂಬುದು ಸತ್ಯ, ಆಸೆಗೆ ಕಡಿವಾಣ ಹಾಕಿ ಜೀವನ ನಡೆಸಿದ ಬುದ್ಧನೆಲ್ಲಿ? ಆಸೆ ಬುರುಕ ಮನುಷ್ಯನೆಲ್ಲಿ? 'ನಮ್ಮಲ್ಲಿರುವ ಸಂಪತ್ತನ್ನು ಗಮನಿಸಿದರೆ ನಾವೇ ಇತರರಿಗಿಂತಲೂ ಸಿರಿವಂತರು. ಇಲ್ಲದಿರುವುದನ್ನು ಕೆಣಕುತ್ತಾ ಕುಳಿತರೆ ನಾವೇ ಇತರರಿಗಿಂತಲೂ ಬಡವರು' ಎಂಬುದನ್ನು ಅರಿತು ನಮ್ಮಲ್ಲಿರುವ ಸಂಪತ್ತಿನ ಹಿತಿಮಿತಿಯಲ್ಲಿಯೇ ಸುಖ, ಆನಂದ, ನೆಮ್ಮದಿಯನ್ನು ಕಾಣುವ ಜೀವನ ಶೈಲಿಯನ್ನು ಬೆಳೆಸಿಕೊಳ್ಳಬೇಕು.

ಜೀವಿಯ ಬಯಕೆಗಳೇ ದುಃಖದ ಉದಯಕ್ಕೆ ಕಾರಣವಾಗುತ್ತವೆ. ಅರ್ಥಾತ್ ವ್ಯಕ್ತಿಯ ಯಾವುದೇ ಸ್ವಾರ್ಥಪರ, ಆಸೆ-ಆಕಾಂಕ್ಷೆಗಳು, ಅಂತಿಮವಾಗಿ ದುಃಖದ ಉದಯಕ್ಕೆ ಫಲವತ್ತಾದ ನೆಲೆಗಳಾಗಿಯೇ ಕಾರ್ಯನಿರ್ವಹಿಸುತ್ತವೆ. ಜೀವಿ ತನ್ನ ಆಸೆ, ಬಯಕೆ, ಅಥವಾ ತೃಷ್ಣೆಗಳನ್ನು ಇಲ್ಲವಾಗಿಸಿಕೊಂಡಲ್ಲಿ ಜೀವನದಲ್ಲಿ ಪಡೆದುಕೊಳ್ಳುವುದೇನು? ಏನೂ ಇಲ್ಲವಾದ್ದರಿಂದ ಯಾವ ಸಂಕಷ್ಟಗಳಿಗೂ ಮನುಷ್ಯ ಸಿಕ್ಕಿಕೊಳ್ಳುವುದಿಲ್ಲ. ಮನುಷ್ಯ ಬಯಕೆಗಳ ಪೂರೈಕೆಗಾಗಿ ಅನ್ಯ ಮಾರ್ಗವನ್ನು ಹಿಡಿಯಬೇಕಾಗುತ್ತದೆ. ಅದರ ಪರಿಣಾಮವೇ ಆಸೆಯಿಂದ ಬರುವ ದುಃಖ ಹೀಗೆ ಜೀವಿ ಹುಟ್ಟು-ಸಾವುಗಳ ಭವಚಕ್ರದಲ್ಲಿ ಸಿಲುಕಬೇಕಾಗುತ್ತದೆ.

ಬುದ್ಧರ ಅಷ್ಟಾಂಗ ಮಾರ್ಗಗಳನ್ನು ಅನುಸರಿಸಿ ಮಧ್ಯಮ ಮಾರ್ಗದಲ್ಲಿ ನಡೆಯುವುದನ್ನು ಕಾರ್ಯಗತ ಮಾಡಿಕೊಂಡರೆ ನೆಮ್ಮದಿಯ ಜೀವನ ನಮ್ಮದಾಗುತ್ತದೆ. ನಾವು ಜೀವನ ನಡೆಸಲು ಬೇಕಾಗಿರುವ ಮೂಲ ಭೂತ ಅವಶ್ಯಕತೆಗಳಿಗಿಂತ ಹೆಚ್ಚಾದುದ್ದನ್ನು ಪಡೆಯಲು ದುರಾಸೆ ಪಡುವುದೇ ಮನಷ್ಯನ ನೆಮ್ಮದಿಗೆ ಧಕ್ಕೆ ತರುತ್ತದೆ. ಆತಿಯಾದ ಆಸೆಯಿಂದ ಅಶಾಂತಿ ಅನಾರೋಗ್ಯ, ಅನಿಶ್ಚಿತತೆ, ದುಗುಡ, ಮನಸ್ಸಿನ ಚಂಚಲತೆ, ಉಂಟಾಗಿ ಇವು ಜೀವದ ಮೇಲೆ ಪ್ರಭಾವ ಬೀರಿ, ನೆಮ್ಮದಿಯ ಜೀವನಕ್ಕೆ ಅಡ್ಡಿಯಾಗುತ್ತವೆ. ಆದುದರಿಂದ ನಮ್ಮಲ್ಲಿ ಎಷ್ಟಿದೆಯೋ ಅಷ್ಟರಲ್ಲಿ ತೃಪ್ತಿಪಡಬೇಕು. ಜೀವಿಯ ಅಂತಿಮ ಗುರಿಯೇ ಶಾಂತಿ, ನೆಮ್ಮದಿ, ಸಂತೋಷ, ಆನಂದ, ಹಾಗೂ ಆರೋಗ್ಯ, ಎಂಬುದೇ ಪ್ರಾಪಂಚಿಕ ಸತ್ಯ.

ಬಸವಣ್ಣನವರು ತಮ್ಮ ವಚನಗಳ ಮೂಲಕ ಅನೇಕ ಉಪದೇಶಗಳನ್ನು ನಮ್ಮ ಮುಂದಿಟ್ಟಿದ್ದಾರೆ, ಪ್ರಪಂಚದಲ್ಲಿ ದುರಾಸೆಯಿಂದ ಕೂಡಿದ ಜನರು ಅನ್ಯಾಯದಿಂದ ಸಂಪಾದಿಸಿದ ಹಣವು ಒಳ್ಳೆಯ ಕೆಲಸಕ್ಕೂ ಬಳಸಬಾರದು, ಅಂದರೆ ದೇವರಿಗೆ ದಕ್ಷಿಣೆ ಕೊಡುವುದಕ್ಕೆ ವ್ಯಯಿಸುತ್ತಾರೆ, ಅಂದರೆ ಹಾವನ್ನು ಹೊಡೆದು ಹದ್ದಿಗೆ ಹಾಕಿದಂತೆ. ಹಾಗಾಗಿ ಹಾವನ್ನು ಹೊಡೆಯುವುದು ಬೇಡ, ಹದ್ದಿಗೆ ಹಾಕುವುದು ಬೇಡ ಎಂಬ ನೀತಿಯನ್ನು ಇಲ್ಲಿ ಸ್ಮರಿಸಬಹುದು. ನಾಯಿಯ ಎದೆಯಲ್ಲಿ ನಾಗಂಡಿಗ ಅಂದರೆ ಕೆಚ್ಚಲು ತುಂಬಾ ಹಾಲಿದ್ದರೆ ಅದರ ಮರಿಗಳಿಗಲ್ಲದೆ ಶಿವಪೂಜೆಗೆ (ಪಂಚಾಮೃತ) ಸಲ್ಲುವುದಿಲ್ಲ. ಆದ್ದರಿಂದ ಪಾಪಿಯು ದುರಾಸೆಯಿಂದ ಸಂಪಾದಿಸಿದ ಹಣವನ್ನು ಶರಣರು ಸ್ವೀಕರಿಸುವುದಿಲ್ಲ. ಅಂದರೆ ನ್ಯಾಯಯುತವಾಗಿ (ಕಾಯಕದಿಂದ) ಸಂಪಾದಿಸಿದ ಹಣವನ್ನು ಸತ್ಪಾತ್ರಕ್ಕೆ ಸಲ್ಲಿಸಬೇಕು. (ದಾಸೋಹಕ್ಕೆ) ಅಂಥವರೇ ಶ್ರೀಮಂತರು ಎಂಬ ಸತ್ಯ ಸಂಗತಿಯನ್ನು ನಮಗೆ ಭೋದಿಸಿದ್ದಾರೆ. ಶರಣೆ ಆಯ್ದಕ್ಕಿ ಲಕ್ಕಮ್ಮ 800 ವರ್ಷಗಳ ಹಿಂದೆಯೇ ಆಸೆಯನ್ನು ಕುರಿತು ಉಲ್ಲೇಖಿಸುತ್ತಾ, ನಮ್ಮದು ಹಂಚುವ ಸಂಸ್ಕೃತಿಯಾಗಬೇಕೆ ವಿನಾ ಕೂಡಿಡುವುದಾಗಬಾರದು ಎಂದಿದ್ದಾರೆ.

ಅಂಬೇಡ್ಕರ್ ಅವರು ಈ ದೇಶದಲ್ಲಿ ವಾಸಿಸುವ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು, ಬಹುಜನ ಹಿತಾಯ ಬಹುಜನ ಸುಖಾಯ ಎಂಬ ಬುದ್ಧರ ಹಾದಿಯಲ್ಲಿ ನಡೆದು 'ಬದುಕಿನಲ್ಲಿ ನಾವು ಗೆಲ್ಲವುದು ನಿಜಕ್ಕೂ ಸಾಧನೆ, ಆದರೆ ಇನ್ನೊಬ್ಬರನ್ನು ಗೆಲ್ಲಿಸುವುದು ಮಹಾಸಾಧನೆ ಎಂಬ ಗುರಿಯನ್ನಿಟುಕೊಂಡಿದ್ದರು. ಕೆಟ್ಟ ಆಸೆಯನ್ನಿಟ್ಟುಕೊಂಡು ಸಾಧಿಸಲಾಗದೆ ಆ ನೋವು ಗಳನ್ನು ಮರೆಯಲಿಕ್ಕೆ ಸಣ್ಣ ಸಂತೋಷಗಳಿಗಾಗಿ ಜೀವಿಸುವುದೇ ನಿಜವಾದ ಜೀವನ ಎಂದಿದ್ದಾರೆ. ಹೀಗೆ ಬುದ್ಧ, ಬಸವ, ಅಂಬೇಡ್ಕರ್ ಅವರು ದುರಾಸೆಯ ಬಗ್ಗೆ ತಮ್ಮ ನಿಲುವುಗಳನ್ನು ಪ್ರತಿಪಾದಿಸಿದ್ದಾರೆ.

ಲಭ್ಯವಿರುವುದನ್ನು ಉಪಯೋಗಿಸಿಕೊಂಡು ಬಲಿಷ್ಠವಾಗಿ ಬೆಳೆದು ಅದರಲ್ಲಿಯೇ ಸಂತೋಷ ಕಾಣಬೇಕು, ಮನುಷ್ಯ ಸುಖವಾಗಿರಬೇಕಾದರೆ, ಮೊದಲು ಕಷ್ಟಗಳನ್ನು ಅನುಭವಿಸಬೇಕು, ಕಷ್ಟಗಳನ್ನು ಅನುಭವಿಸಿದ ಮೇಲೆ ಬರುವ ಸುಖವು ಬಹಳ ನೆಮ್ಮದಿಯಿಂದ ಕೂಡಿರುತ್ತದೆ. ಬಿಸಿಲಿನಲ್ಲಿ ನಡೆದು ಬಳಲಿದ ದಾರಿಗನಿಗೆ ಮರದ ನೆರಳು ಹೆಚ್ಚು ಸಂತೋಷ ನೀಡುತ್ತದೆ. ಕೇವಲ ಆಸೆಗಳನ್ನು ಇಟ್ಟುಕೊಳ್ಳುವುದಿಂದ ಪ್ರಯೋಜನವಿಲ್ಲ. ಕಷ್ಟ, ನಷ್ಟ, ದುಃಖ, ದುಮ್ಮಾನ ಅವಮಾನಗಳ ನಂತರ ಸಿಗುವುದೇ ಆನಂದದ ಜೀವನ ಎಂಬುದನ್ನು ಅರಿಯಬೇಕು 'ದುರಾಸೆಗೆ ಸಮಾನವಾದ ರೋಗವಿಲ್ಲ ದಯೆಗಿಂತ ಹೆಚ್ಚಿನ ಧರ್ಮವಿಲ್ಲ.' 'ಸುಂದರವಾದ ಶರೀರದೊಳಗಿನ ಕೆಟ್ಟ (ದುರಾಸೆ) ಮನಸ್ಸು ಬಂಗಾರದ ಪಾತ್ರೆಯಲ್ಲಿರುವ ಹಳಸಿದ ಅನ್ನವಿದ್ದಂತೆ' ಆದ್ದರಿಂದ ಪರರ ವಿಚಾರದಲ್ಲಿ ಒಳ್ಳೆಯ ಭಾವನೆಯನ್ನು ಇಟ್ಟುಕೊಳ್ಳಬೇಕು ಆಸೆಗೆ ಮಿತಿಯಿಲ್ಲ, ಬೆಟ್ಟದಷ್ಟು ಸಂಪತ್ತಿದ್ದರೂ, ಜೀವನದಲ್ಲಿ ಸಂತೋಷವಿಲ್ಲ.

ದುರಾಸೆಯೇ ದುಃಖದ ಮೂಲ, ರುಚಿಯೇ ವ್ಯಾಧಿ(ರೋಗ)ಗಳ ಮೂಲ, ಬಯಕೆ (ದುರಾಸೆ)ಯೇ ಕಷ್ಟಗಳ ಮೂಲ, ಈ ಮೂರನ್ನು ಬಿಟ್ಟು ಸುಖವಂತರಾಗಿ ಬದುಕಬೇಕು. ಯಾವುದಾದರೂ ವಸ್ತುವಿಗೆ ಆಸೆಪಟ್ಟು ಅದು ಸಿಗದೇ ಹೋದರೆ ದುಃಖ ಉಂಟಾಗುತ್ತದೆ. ಅತಿಯಾದ ಲೋಭ ಇಲ್ಲದಿರುವವರು ಸುಖಿಗಳಾಗುತ್ತಾರೆ. ಸುಖಬೇಕು ಎನ್ನುವವರು ದುರಾಸೆ ಪಡಬಾರದು, ಸರಳ ಜೀವನ, ಹಾಗೂ ಇರುವಷ್ಟರಲ್ಲಿ ತೃಪ್ತಿ ಪಡುವುದು ಮನುಷ್ಯನಿಗೆ ಯಾವಾಗಲೂ ಕ್ಷೇಮ ಎಂಬುದನ್ನು ನಾವು ಅರಿಯಬೇಕಾಗಿದೆ. ಹೀಗೆ ಆಸೆಯನ್ನು ಮಿತಿಯಲ್ಲಿಟ್ಟುಕೊಂಡು, ಸುಖ, ಶಾಂತಿ, ನೆಮ್ಮದಿಯ ಜೀವನ ನಡೆಸೋಣ ಎಂಬುವುದೇ ನಮ್ಮೆಲ್ಲರ ಮಹದಾಸೆಯಾಗಬೇಕು. ಜೀವನದ ಅಂತಿಮ ಬಯಕೆಯೇ ಆನಂದ, ಸಂತೋಷ, ತೃಪ್ತಿಯುಬದುಕು ಇದಿಲ್ಲದಿದ್ದರೆ ನೀವು ಗಳಿಸಿರುವ ಸಂಪತ್ತಿಗೆ ಬೆಲೆಸಿಗುವುದಿಲ್ಲ. ನೆಮ್ಮದಿ ಇಲ್ಲದ ಜೀವನ ವ್ಯರ್ಥ. ನಾಳೆಯ ಸಾಧನೆಗಾಗಿ ಈ ದಿನದ ಕ್ಷಣಗಳನ್ನು ವಿನಾಶಮಾಡುವುದರಲ್ಲಿ ಅರ್ಥವಿಲ್ಲ. ಹಿತ ಮಿತ ಸರಳತೆ, ಸಜ್ಜನಿಕೆ, ಆರೋಗ್ಯವೇ ಸುಖದ ಮೂಲ ಆದ್ದರಿಂದ ನಮ್ಮ ನೆರಳಿಗೆ ನಾವು ಹೆದರಬೇಕು. ಜೀವನದ ಪರಮಾನಂದವನ್ನು ಕಾಣಬೇಕು.

ಲೇಖಕರು ಸಂಸ್ಕೃತ ವಿಭಾಗದ ಅಧ್ಯಕ್ಷರು ಬೆಂಗಳೂರು ವಿಶ್ವವಿದ್ಯಾಲಯ

ಪ್ರಸ್ತುತ

ಪುನೀತ್.ಜಿ.ಕೂಡ್ಲೂರು

ಹಿಂದೂ ಪುರಾಣದಲ್ಲಿ ಗಣಪತಿ ವ್ರತದ ಆಚರಣೆ

ಭಾದ್ರಪದ ಮಾಸದ ಶುಕ್ಲ ಪಕ್ಷದ ಚತುರ್ಥಿ ದಿನ ಬಂದರೆ ಭಾರತೀಯರಿಗೆ ಅತ್ಯಂತ ಸಂಭ್ರಮ ಸಡಗರ. ಮನೆ ಮನೆಯಲ್ಲಿ ಬೀದಿ ಬೀದಿಗಳಲ್ಲಿ ಗ್ರಾಮ ಗ್ರಾಮಗಳಲ್ಲಿ ಎಲ್ಲಿ ನೋಡಿದರು ಗಣಪತಿ. ಆಸ್ತಿಕ ಮಹಾಜನತೆಗೆ ಆನಂದ ಪರಮಾನಂದ. ಮನೆ ಮನೆಯ ಗಣಪತಿ ವ್ರತವನ್ನು ಪುರಾಣಗಳಿಂದ ಅರಿತರೆ ಸಾರ್ವಜನಿಕ ಗಣಪತಿಗಳು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರು ಸ್ವಾತಂತ್ರ್ಯ ಚಳುವಳಿಯ ಕಿಚ್ಚು ಹೆಚ್ಚಿಸಲು ಹಿಂದೂಗಳನ್ನು ಬ್ರಿಟೀಷರ ವಿರುದ್ಧ ಒಗ್ಗೂಡಿಸಲು ಸಾರ್ವಜನಿಕ ಗಣೇಶೋತ್ಸವ ಆರಂಭಿಸಿದರು. ಗಣಪತಿ ಭಾರತೀಯರಿಗೆ ಕೇವಲ ದೇವರಲ್ಲ, ಆತ ಒಬ್ಬ ಸ್ವಾತಂತ್ರ್ಯ ಹೋರಾಟಗಾರನೂ ಹೌದು.

ಭಾರತದ ಶ್ರೇಷ್ಠ ಗ್ರಂಥಗಳಾದ ರಾಮಯಣ, ಮಹಾಭಾರತದಲ್ಲಿ ಗಣಪತಿ ಪೂಜೆಯ ಮಹತ್ವ ತಿಳಿಸಿದ್ದಾರೆ. ಆದ್ದರಿಂದ ನಾವು ಗಣಪತಿ ಹಬ್ಬವನ್ನು ಮಹಾಭಾರತದ ಕಾಲದಿಂದ ಇಂದಿನ ವರೆಗೂ ಹಾಗೂ ಮುಂದೆಯೂ ಮಹಾಗಣಪತಿಯ ಪೂಜೆಯನ್ನು ಹಿಂದುಗಳು ಶ್ರದ್ಧಾ ಭಕ್ತಿಯಿಂದ ಮಾಡುತ್ತೇವೆ. ಮಹಾಭಾರತದ ಕತೆಯಲ್ಲಿ ನಾವು ಕೇಳಿದ್ದೇವೆ ಪಾಂಡವರ ಹಿರಿಯಣ್ಣ ಧರ್ಮಪಾಲಕ ಧರ್ಮರಾಯನು ಗ್ರಹಚಾರ ಪ್ರಾಪ್ತಿಯಾಗಿ ದುರ್ಯೋಧನನ ಮೋಸದ ದ್ಯೂತಕ್ರೀಡೆಯಲ್ಲಿ ತಮ್ಮಂದಿರು, ಪತ್ನಿ, ರಾಜ್ಯವೆಲ್ಲವನ್ನು ಸೋತನು. ಎಲ್ಲವನ್ನು ಕಳೆದುಕೊಂಡು ಹೋದ ಧರ್ಮರಾಯನು ಬ್ರಹ್ಮವೆತ್ತರಾದ ಮಹಾಋಷಿಗಳು ತಪಸ್ಸು ಮಾಡುತ್ತಿದ್ದ ಮಹಾರಣ್ಯಕ್ಕೆ ತಮ್ಮಂದಿರು ಹಾಗೂ ಪತ್ನಿಯ ಸಹಿತವಾಗಿ ಹೋದನು. ಋಷಿಗಳನ್ನು ನೋಡಿದ ಧರ್ಮರಾಯನು ಅತ್ಯಂತ ವಿನಯದಿಂದ ನಮಸ್ಕರಿಸಿದನು.

ಸೂತ ಮಹಾಮುನಿಗಳನ್ನು ನೋಡಿ ನಮಸ್ಕರಿಸಿ ಅವರ ಬಳಿ ಧರ್ಮರಾಯನು ಹೀಗೆಂದು ಪ್ರಾರ್ಥಿಸಿದನು, ಸರ್ವ ಶಾಸ್ತ್ರಗಳನ್ನು ತಿಳಿದಿರುವ ಮಹಾಮುನಿಗಳೆ ನಮ್ಮ ಜ್ಞಾತಿಗಳಾದ ಕೌರವರು ನಮ್ಮೊಡನೆ ಮಹಾದ್ಯೂತವನ್ನು ಕಲ್ಪಿಸಿ ನಮ್ಮ ರಾಜ್ಯಾದಿ ಸಕಲೈಶ್ವರ್ಯಗಳನ್ನು ಅಪಹರಿಸಿದರು. ಅಷ್ಟೇಅಲ್ಲದೆ ಅನುಜರೊಡನೆಯೂ, ಭಾರ್ಯೆಯೊಡನೆಯೂ ನನ್ನನ್ನುಅನೇಕ ವಿಧವಾಗಿ ಅವಮಾನಿಸಿ ಈ ಅರಣ್ಯಕ್ಕೆ ಕಳುಹಿಸಿದರು. ಇಷ್ಟೆಲ್ಲ ಕಷ್ಟಗಳೊಡನೆಯೂ ನಿಮ್ಮ ದರ್ಶನಮಾತ್ರದಿಂದ ನನಗೆ ಪರಿಹಾರ ಸಿಗುವುದು ಎಂದನ್ನು ತಮ್ಮನ್ನು ಬೇಟಿಯಾದೆ ಎಂದು ತಿಳಿಸಿದನು. ನಮಗೆ ರಾಜ್ಯವನ್ನು ಮರಳಿ ಪಡೆಯಲು, ನಮ್ಮ ಕಷ್ಟಗಳೆಲ್ಲವೂ ನಶಿಸಿಹೋಗುವಂತೆ ಒಂದು ವ್ರತ ಮಾಡಿಸಿಕೊಡಬೇಕೆಂದು ಸೂತ ಮಹಾಮುನಿಗಳನ್ನು ಧರ್ಮರಾಯ ಕೇಳಿದನು. ಆಗ ಸೂತ ಮಹಾಮುನಿಗಳು ಪಾಂಡುನಂದನನೇ ಆದಿಯಲ್ಲಿ ಸ್ವತಃ ಪರಶಿವನು ಕುಮಾರಸ್ವಾಮಿಗೆ ತಿಳಿಸಿದ ರೀತಿಯಲ್ಲಿ ನಿನಗೆ ಮಹಾಗಣಪತಿ ವ್ರತವನ್ನು ಮಾಡಿಸುತ್ತೇನೆಂದು ಹೇಳಿ ಗಣಪತಿಯ ವ್ರತ ಮಾಡಿಸಿದರು ಎಂಬುದು ಮಹಾಭಾರತದ ಉಲ್ಲೇಖ.

ಭಾದ್ರಪದ ಮಾಸದ ಶುಕ್ಲ ಪಕ್ಷದ ಚತುರ್ಥಿಯ ದಿನ ಸೂರ್ಯೋದಯಕ್ಕೆ ಎದ್ದು ತನ್ನ ನೈಮಿತ್ತಿಕ ಕರ್ಮಗಳನ್ನು ಮುಗಿಸಿ ಸ್ನಾನ, ಜಪ, ತಪಾನುಷ್ಠಾನಗಳನ್ನು ಮುಗಿಸಿ ದ್ರವ್ಯ ಲೋಭವಿಲ್ಲದಂತೆ ಬೆಳ್ಳಿಯಿಂದಾಗಲಿ, ಮಣ್ಣಿನಿಂದಾಗಲಿ, ಬಂಗಾರದಿಂದಾಗಲಿ ವಿನಾಯಕನ ಪ್ರತಿಮೆಯನ್ನು ಮಾಡಿ ತನ್ನ ಮನೆಯ ಉತ್ತರ ಭಾಗದಲ್ಲಿ ಒಂದು ಮಂಟಪವನ್ನು ನಿರ್ಮಿಸಿ ಅದರ ಮೇಲೆ ಎಂಟು ದಳಗಳಿಂದ ಕೂಡಿದ ಪದ್ಮವನ್ನು ಗೋದಿಯಿಂದಾಗಲಿ ಅಥವಾ ಅಕ್ಕಿಯಿಂದಾಗಲಿ ಮಧ್ಯಭಾಗದಲ್ಲಿ ರಚಿಸಿ ಅದರ ಮೇಲೆ ಭಕ್ತಿಭಾವದಿಂದ ವಿನಾಯಕನ ಪ್ರತಿಮೆಯನ್ನು ಇಡಬೇಕು. ವಿನಾಯಕನ ಪ್ರತಿಮೆಗೆ ಬಿಳಿಯದಾದ ಗಂಧದಿಂದಲೂ, ಅಕ್ಷತೆಯಿಂದಲೂ, ಪುಷ್ಪದಿಂದಲೂ, ಗರಿಕೆ ಹುಲ್ಲಿನಿಂದಲೂ, ಇಪ್ಪತ್ತೊಂದು ಬಗೆಯ ಪತ್ರೆಗಳಿಂದಲೂ ಪೂಜಿಸಿ ಧೂಪ, ದೀಪ, ನೈವೇದ್ಯಗಳನ್ನು ಅರ್ಪಿಸಿ, ತುಪ್ಪದಿಂದ ಮಾಡಿದ ಇಪ್ಪತ್ತೊಂದು ಭಕ್ಷ್ಯಗಳಿಂದಲೂ, ತೆಂಗಿನಕಾಯಿ, ಬಾಳೆಹಣ್ಣು, ನೇರಳೆ ಹಣ್ಣು, ಬೇಲದ ಹಣ್ಣು, ಕಬ್ಬು ಮತ್ತು ಅನೇಕ ವಿಧವಾದ ಭಕ್ಷ್ಯಗಳನ್ನು ಫಲಗಳನ್ನು ನಿವೇದನೆ ಮಾಡಿ, ವಿನಾಯಕನ ಎದುರು ನಾಟ್ಯವನ್ನು ಸಲ್ಲಿಸಿ, ಹಾಡುಗಳನ್ನು ಹಾಡಿ, ಪುರಾಣದ ಪಠನವನ್ನು ಮಾಡಿ ವಿನಾಯಕನನ್ನು ಸಂತೃಪ್ತಿಗೊಳಿಸಿ ವೇದಾಧ್ಯಯನ ಮಾಡಿದ ಯೋಗ್ಯ ವ್ಯಕ್ತಿಗೆ ತಾಂಬೂಲ ಸಹಿತವಾಗಿ ಗಣಪತಿಯನ್ನು ದಾನವಾಗಿ ನೀಡಿ ಉಪಾಯನ ದಾನವನ್ನು ನೀಡಿ ತನ್ನ ಇಷ್ಟದ ಬಂಧುಗಳೊಡನೆ ಊಟವನ್ನು ಮಾಡಬೇಕು. ಈ ಪ್ರಕಾರ ವಿನಾಯಕನ ವ್ರತವನ್ನು ಮಾಡಿದವರಿಗೆ ಸಕಲ ಇಷ್ಟಾರ್ಥಗಳು ಸಿದ್ಧಿಸುವವು. ಮಾರನೆಯದಿನ ಸೂರ್ಯೋದಯಕ್ಕೆ ಎದ್ದು ವಿನಾಯಕನಿಗೆ ಪುನಃ ಪೂಜೆಯನ್ನು ಮಾಡಬೇಕು. ಈ ವ್ರತವನ್ನು ದೇವತೆಗಳೂ, ಮುನಿಗಳೂ, ಗಂಧರ್ವರೂ, ಕಿನ್ನರರೂ ಮೊದಲು ಆಚರಿಸಿ ಸಕಲ ಸಾಮ್ಯಗಳನ್ನು ಪಡೆದರು ಎಂದು ಸಾಂಬಮೂರ್ತಿಯು ಕುಮಾರಸ್ವಾಮಿಗೆ ಉಪದೇಶ ಮಾಡಿದರು.

ಧರ್ಮರಾಯನೇ ನೀನು ಸಹ ಈ ವ್ರತವನ್ನು ಮಾಡು. ಈ ವ್ರತದ ಪ್ರಭಾವದಿಂದ ದಮಯಂತಿಗೆ ನಳನು ದೊರೆತನು, ಸ್ವತಃ ಶ್ರೀ ಕೃಷ್ಣ ಪರಮಾತ್ಮನು ಈ ವ್ರತವನ್ನು ಮಾಡಿ ಜಾಂಬವತಿಯನ್ನು, ಸ್ಯಮಂತಕಮಣಿಯನ್ನು ಹೊಂದಿದನು. ಇಂದ್ರನು ವಿನಾಯಕನ ಪೂಜೆಯನ್ನು ಮಾಡಿ ವೃತಾಸುರನನ್ನು ಸಂಹರಿಸಿದನು. ಶ್ರೀರಾಮನು ಈ ವ್ರತವನ್ನು ಆಚರಿಸಿ ರಾವಣನ್ನು ಸಂಹರಿಸಿ ಸೀತೆಯನ್ನು ಪಡೆದನು. ಭಗೀರತನು ಗಂಗೆಯನ್ನು ತರುವಾಗಲೂ, ದೇವಾಸುರರು ಅಮೃತವನ್ನು ಸೃಜಿಸುವಾಗಲೂ, ಸಾಂಬನು ತನ್ನ ಕುಷ್ಠರೋಗ ಪರಿಹಾರ ಕಾಲದಲ್ಲಿಯೂ ಈ ವ್ರತವನ್ನೇ ಆಚರಿಸಿದರು ಎಂದು ಸುತ ಮಹಾಮುನಿಗಳು ಧರ್ಮರಾಯನಿಗೆ ಹೇಳಿದಾಗ. ಧರ್ಮರಾಯನು ಭಾದ್ರಪದ ಶುಕ್ಲ ಚೌತಿಯ ದಿನ ಬರುವುದನ್ನು ಎದುರು ನೋಡುತ್ತಾ ಸಕಾಲವು ಪ್ರಾಪ್ತವಾದ ಕೂಡಲೇ ವ್ರತಾಚರಣೆಯಿಂದ ಸಕಲ ಇಷ್ಟಾರ್ಥ ಸಿದ್ಧಿಗಳನ್ನು ಪಡೆದನು.

ಪ್ರಪಂಚದಲ್ಲಿ ಈ ಅಮೋಘವಾದ ವ್ರತವನ್ನು ಯಾರು ಬೇಕಾದರೂ ಮಾಡಬಹುದು. ಕ್ರಮ ಪ್ರಕಾರ ಮಾಡಿದರೆ ವಿದ್ಯಾರಂಭದಲ್ಲಿ ಪೂಜೆಯನ್ನಾಚರಿಸಿದವರಿಗೆ ವಿದ್ಯಾಲಾಭವು, ಧನಾಕಾಂಕ್ಷಿಗೆ ದ್ರವ್ಯವೂ, ಯಾವ ಅಪೇಕ್ಷೆಯಿಂದ ಅರ್ಚಿಸಿದರೆ ಆ ಕಾರ್ಯಗಳೆಲ್ಲವೂ ನಿಸ್ಸಂಶಯವಾಗಿ ಸಿದ್ಧಿಸುವುದರಿಂದ ಅಬಾಲವೃದ್ಧರೂ ಕಲಿಯುಗದಲ್ಲಿ ಮುಖ್ಯವಾಗಿ ಮಾಡತಕ್ಕ ವ್ರತಗಳಲ್ಲಿ ಇದು ಪರಮ ಶ್ರೇಷ್ಠವಾದುದೆಂದೂ, ಸಕಲ ಇಷ್ಟಾರ್ಥಗಳನ್ನು ಸಿದ್ಧಿಸುವ ದೇವತೆಯಾದುದರಿಂದಲೇ ಈತನಿಗೆ ವರಸಿದ್ಧಿ ವಿನಾಯಕನೆಂಬ ಹೆಸರು ಬಂದಿತೆಂದೂ ಸೂತಪೂರಣಿಕರು ಹೇಳಿದರೆಂದು ಸ್ಕಂದ ಪುರಾಣದ ಉಮಾಮಹೇಶ್ವರ ಸಂವಾದದಲ್ಲಿ ತಿಳಿಸಲಾಗಿದೆ.

ಈ ಪುರಾಣಗಳಿಂದ ವಿನಾಯಕ ವ್ರತದ ಮಹತ್ವವನ್ನು ತಿಳಿದ ಸಮಸ್ತ ಭಾರತೀಯ ಹಿಂದುಗಳು ಅತ್ಯಂತ ಶ್ರದ್ಧಾ ಭಕ್ತಿಯಿಂದ ವಿನಾಯಕವ್ರತವನ್ನು ಮಾಡುತ್ತಿದ್ದಾರೆ. ಆ ವಿನಾಯಕನು ಎಲ್ಲರನ್ನು ಅನುಗ್ರಹಿಸಲೂ ಸಹ ಇದ್ದಾನೆ ಎಂಬುದೇ ನಮ್ಮ ನಂಬಿಕೆ.

(ಲೇಖಕರು: ಸರಸ್ವತೀ ಭಾರತೀಯ ಸಂಸ್ಕಾರ ಕೇಂದ್ರದ ಸಂಸ್ಥಾಪಕರು)

ರಾಜಕೀಯ ಸುಳಿಯಲ್ಲಿ ಸಿಲುಕಿದ ಪ್ರತಿಮೆಗಳು

ರಾಜಬೀದಿ
ವಿನಾಯಕ ಮಠಪತಿ
vveditoped@gmail.com

ಭಾರತದ ರಾಜಕೀಯ ಇತಿಹಾಸದಲ್ಲಿ ಮಹಾತ್ಮರು ಹಾಗೂ ದಾರ್ಶನಿಕರ ಪ್ರತಿಮೆಗಳ ಪಾತ್ರ ಬಹುಮುಖ್ಯವಾಗಿವೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜಕೀಯ ಲಾಭ ಪಡೆಯುವ ನಿಟ್ಟಿನಲ್ಲಿ ಪ್ರತಿಯೊಂದು ರಾಜಕೀಯ ಪಕ್ಷಗಳು ಪ್ರತಿಮೆಗಳನ್ನು ಅಸ್ತ್ರವಾಗಿ ಬಳಸಿಕೊಂಡಿವೆ. ಪ್ರಸ್ತುತ ಕಾಲಘಟ್ಟದಲ್ಲಿ ಒಂದು ಚುನಾವಣೆಯ ವಿಷಯವಾಗಿಯೂ ಪ್ರತಿಮೆಗಳು ತಮ್ಮ ಜೀವಂತಿಕೆ ಉಳಿಸಿಕೊಂಡು ಹೋಗುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಕಳೆದ ಕೆಲ ದಿನಗಳ ಹಿಂದೆ ಮಹಾರಾಷ್ಟ್ರದ ಸಿಂಧುದುರ್ಗದ ಮಾಲ್ವಾನ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 35 ಅಡಿ ಎತ್ತರದ ಪ್ರತಿಮೆ ಉರುಳಿ ಬಿದ್ದ ಕಾರಣಕ್ಕೆ ಸ್ವತಃ ದೇಶದ ಪ್ರಧಾನಿ ನರೇಂದ್ರ ಮೋದಿಯವರೇ ಭಾರತೀಯರ ಮುಂದೆ ತಲೆಬಾಗಿ ಕ್ಷಮೆ ಕೇಳಬೇಕಾಯಿತು. ಇದೇ ಪಕ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ವಿರೋಧಪಕ್ಷದ ಮಹಾ ವಿಕಾಸ್ ಅಘಾಡಿಯ ನಾಯಕರು ಆಡಳಿತಾರೂಢ ಪಕ್ಷದ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ. ಸದ್ಯದಲ್ಲಿ ಮಹಾರಾಷ್ಟ್ರದ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲೇ ಪ್ರತಿಮೆ ಉರುಳಿ ಬಿದ್ದ ಪ್ರಕರಣ ವಿಪಕ್ಷಗಳಿಗೆ ಒಂದು ಅಸ್ತ್ರವಾಗಿದ್ದು ಸುಳ್ಳಲ್ಲ.

ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ನೆಲಕ್ಕುರುಳಿದ್ದೇ ತಡ ವಿರೋಧಪಕ್ಷಗಳು ಆಡಳಿತಾರೂಢ ಬಿಜೆಪಿ ಮೈತ್ರಿಕೂಟದ ವಿರುದ್ಧ ಮುಗಿಬಿದ್ದಿವೆ. ಹೇಳಿ ಕೇಳಿ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಈ ವಿವಾದವನ್ನು ಯಾರು ರಾಜಕೀಯಕ್ಕೆ ಬಳಸಿಕೊಳ್ಳುವುದಿಲ್ಲ ಹೇಳಿ. ಈ ಜಾಗದಲ್ಲಿ ಬಿಜೆಪಿ ಇದ್ದರೂ ಇದೇ ಕೆಲಸ ಮಾಡುತ್ತಿತ್ತಲ್ಲವೇ? ಇಂತಹ ಅನೇಕ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಸದ್ಯ ಮಹಾರಾಷ್ಟ್ರ ರಾಜಕಾರಣದಲ್ಲಿ ವಿಚಿತ್ರ ರಾಜಕೀಯ ಬೆಳವಣಿಗೆ ನಡೆಯುತ್ತಿದೆ. ಶಿವಸೇನೆ ಹಾಗೂ ಎನ್‌ಸಿಪಿ ಪಕ್ಷಗಳು ಇಬ್ಭಾಗವಾಗಿದ್ದು, ಒಂದೇ ಪಕ್ಷದಲ್ಲಿ ಜೋಡಿ ನಾಯಕರು ಹುಟ್ಟಿಕೊಂಡಿದ್ದಾರೆ. ಜೊತೆಗೆ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮಿತ್ರಪಕ್ಷಗಳಿಗೆ ನೀರು ಕುಡಿಸುವಲ್ಲಿ ಮಹಾ ವಿಕಾಸ್ ಅಘಾಡಿ ಯಶಸ್ವಿಯಾಗಿದೆ. ಇಂತಹ ಹಲವಾರು ಚುನಾವಣಾ ವಿಷಯವಿದ್ದರೂ ಪ್ರತಿಮೆಯನ್ನು ಚುನಾವಣಾ ಅಸ್ತ್ರವಾಗಿ ಮುನ್ನಲೆಗೆ ತಂದಿರುವುದರ ಹಿಂದೆ ಬಲವಾದ ಕಾರಣ ಇದೆ.

ಮಹಾರಾಷ್ಟ್ರದಲ್ಲಿ ಕಳೆದ 8 ತಿಂಗಳ ಹಿಂದೆ ಸ್ವತಃ ಪ್ರಧಾನಿ ನರೇಂದ್ರ ಮೋದಿ ಹಸ್ತದಿಂದ ಮಾಲ್ವಾನಿನ ಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 35 ಅಡಿ ಎತ್ತರದ ಪ್ರತಿಮೆ ಉದ್ಘಾಟನೆ ಮಾಡಲಾಗಿತ್ತು. ಲೋಕೋಪಯೋಗಿ ಇಲಾಖೆ ಹಾಗೂ ನೌಕಾಪಡೆ ಸಹಯೋಗದೊಂದಿಗೆ ಪ್ರತಿಮೆ ನಿರ್ಮಾಣ ಮಾಡಲಾಗಿತ್ತಾದರೂ ಕಳಪೆ ಕಾಮಗಾರಿ ಕಾರಣಕ್ಕೆ ಗಾಳಿ, ಮಳೆಗೆ ಇದು ನೆಲಕ್ಕುರಿಳಿದೆ. ಸದ್ಯ ವಿಪಕ್ಷಗಳು ಮೋದಿ ವಿರುದ್ಧ ಬೊಟ್ಟು ಮಾಡುತ್ತಿವೆ. ಪ್ರಧಾನಿ ಕ್ಷಮೆ ಕೇಳಿದರೂ ಬಿಡುತ್ತಿಲ್ಲ. ಹಾಗಾದರೆ ರಾಜಕೀಯ ಪಕ್ಷಗಳು ಪ್ರತಿಮೆ ವಿಚಾರವನ್ನು ಇಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳಲು ಕಾರಣ ಏನೆಂದರೆ ಜನರನ್ನು ಭಾವನಾತ್ಮಕವಾಗಿ ಹಿಡಿದಿಟ್ಟುಕೊಳ್ಳುವುದು. ಇದೇ ವಿಷಯವನ್ನು ಕೆದಕಿ ಮತಗಳನ್ನಾಗಿ ಪರಿವರ್ತನೆ ಮಾಡುವ ಚಾಣಾಕ್ಷತನ. ಇದೇ ಕಾರಣಕ್ಕೆ ಪ್ರತಿಮೆಗಳು ಭಾರತದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದ್ದು.

ಪ್ರತಿಮೆ ರಾಜಕಾರಣದಲ್ಲಿ ಬಿಜೆಪಿ ಕೂಡ ಹಿಂದೆ ಬಿದ್ದಿಲ್ಲ. ಗುಜರಾತ್‌ನಲ್ಲಿ ನಿರ್ಮಾಣವಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಏಕತಾ ಪ್ರತಿಮೆಯನ್ನು ರಾಜಕೀಯ ಲಾಭಕ್ಕೆ ಬಳಸಿಕೊಂಡಿದೆ. ಅಷ್ಟೇ ಏಕೆ, ಕಳೆದ ಕರ್ನಾಟಕ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಅನಾವರಣಗೊಂಡ ಕೆಂಪೇಗೌಡರ ಪ್ರತಿಮೆಯ ನಿರ್ಮಾಣದ ಹಿಂದಿನ ಉದ್ದೇಶ, ಒಕ್ಕಲಿಗ ಸಮುದಾಯದ ಮತ ಸೆಳೆಯುವುದೇ ಆಗಿತ್ತು. ಹಾಗೆಯೇ ಇದೇ ಸಂದರ್ಭದಲ್ಲಿ ತೀವ್ರ ಸ್ವರೂಪ ಪಡೆದಿದ್ದ ಉರಿಗೌಡ ಹಾಗೂ ನಂಜೇಗೌಡ ಎಂಬುವವರ ಪ್ರತಿಮೆಯನ್ನು ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ನಿರ್ಮಾಣ ಮಾಡುತ್ತೇವೆ ಎಂದು, ಅಂದಿನ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿಕೆ ನೀಡಿದ್ದು, ಮತ್ತದೇ ರಾಜಕೀಯ ಲಾಭಕ್ಕೆ ಎಂಬುದು ಸ್ಪಷ್ಟ. ಅಷ್ಟೇ ಅಲ್ಲದೆ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಉಮಿಕಲ್ ಬೆಟ್ಟದ ಮೇಲೆ ಪರಶುರಾಮನ ಕಂಚಿನ ಪ್ರತಿಮೆ ನಿರ್ಮಾಣ ವಿಷಯವೂ ರಾಜಕೀಯ ಸ್ವರೂಪದ ಪಡೆದುಕೊಂಡಿತ್ತು. ಈಗಲೂ ಈ ಕುರಿತು ರಾಜಕೀಯ ಆರೋಪ ಪ್ರತ್ಯಾರೋಪ ಕೇಳಿಬರುತ್ತವೆ.

ಇನ್ನೂ ಪ್ರತಿಮೆ ವಿಚಾರಕ್ಕೆ ದೇಶದಲ್ಲೇ ಅತ್ಯಂತ ಸೂಕ್ಷ್ಮ ಜಿಲ್ಲೆ ಬೆಳಗಾವಿ ಎಂದರೆ ತಪ್ಪಾಗಲಾರದು. ಕನ್ನಡ ಹಾಗೂ ಮರಾಠಿ ಭಾಷಿಕರನ್ನು ಒಳಗೊಂಡಿರುವ ಪ್ರದೇಶವಾಗಿದ್ದು. ಇಲ್ಲಿ ಕೇವಲ ಪ್ರತಿಮೆಗಳ ವಿಷಯಕ್ಕೆ ನಗರವೇ ಹೊತ್ತಿ ಉರಿಯುತ್ತದೆ. ಕಳೆದ ಮೂರು ವರ್ಷಗಳ ಹಿಂದೆ ಬೆಳಗಾವಿಯ ಪಿರನವಾಡಿ ಪ್ರದೇಶದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಪ್ರತಿಮೆಗಾಗಿ ಇಡೀ ರಾಜ್ಯದಲ್ಲೇ ಪ್ರತಿಭಟನೆಗಳು ನಡೆದವು. ಅಸಂಖ್ಯಾತ ಕನ್ನಡಿಗರು ರಾಜ್ಯದ ನಾನಾ ಭಾಗಗಳಿಂದ ಬೆಳಗಾವಿಗೆ ಭೇಟಿ ನೀಡಿ ಪ್ರತಿಮೆ ಪರ ನಿಂತುಕೊಂಡರು. ಪ್ರತಿಮೆಗಳ ವಿಚಾರದಲ್ಲಿ ನಮ್ಮ ಜನ ಬಹಳಷ್ಟು ಸೂಕ್ಷ್ಮಜೀವಿಗಳು. ರಾಜಕಾರಣಿಗಳಿಂದ ಎಷ್ಟೇ ಮೋಸವಾದರು ಜನ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಆದರೆ ಪ್ರತಿಮೆಗಳ ವಿಚಾರಕ್ಕೆ ಬಹಳಷ್ಟು ಜಾಗೃತ. ಸ್ವಲ್ಪ ಅವಘಡ ಸಂಭವಿಸಿದರೂ ಆಳುವ ಸರಕಾರಗಳ ವಿರುದ್ಧ ಹೋರಾಟಗಳೇ ನಡೆಯುತ್ತವೆ. ಸಾಲು ಸಾಲು ಪ್ರತಿಭಟನೆಗಳ ಮೂಲಕ ಜನ ಆಕ್ರೋಶ ಹೊರಹಾಕುತ್ತಾರೆ. ಇದೇ ಕಾರಣಕ್ಕೆ ಭಾರತೀಯ ರಾಜಕಾರಣದಲ್ಲಿ ಪ್ರತಿಮೆಗಳ ಪಾತ್ರ ಬಹುಮುಖ್ಯವಾದದ್ದು.

ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬಂದರೆ ಸಾಕು ಭವಿಷ್ಯದಲ್ಲಿ ತಮ್ಮ ಪಕ್ಷ ಗಟ್ಟಿಗೊಳಿಸಿ ಚುನಾವಣೆ ಗೆಲ್ಲುವ ರಣತಂತ್ರ ಹೆಣೆಯುವ ಲೆಕ್ಕಾಚಾರದಲ್ಲಿ ತೊಡಗುತ್ತವೆ. ಆಯಾ ಸಮುದಾಯದ ಮತ ಸೆಳೆಯಲು ಪ್ರತಿಮೆ ಎಂಬ ಅಸ್ತ್ರ ಪ್ರಯೋಗ ಮಾಡುತ್ತವೆ. ಇದಕ್ಕೆ ಮತ್ತೊಂದು ಉದಾಹರಣೆ ಉತ್ತರ ಪ್ರದೇಶದ ಬಿಎಸ್‌ಪಿ ನಾಯಕಿ ಮಾಯಾವತಿ ಅವರ ಆಡಳಿತಾವಧಿ. 2007 ರಿಂದ 2012 ರ ಅವಧಿಯಲ್ಲಿ ಉತ್ತರ ಪ್ರದೇಶದ ಅಂದಿನ ಮುಖ್ಯಮಂತ್ರಿಯಾಗಿದ್ದ ಮಾಯಾವತಿ ಬರೋಬ್ಬರಿ 2 ಸಾವಿರ ಕೋಟಿ ರು. ವೆಚ್ಚದಲ್ಲಿ ಪ್ರತಿಮೆ ಹಾಗೂ ಸ್ಮಾರಕ ನಿರ್ಮಾಣಕ್ಕೆ ಹಣ ವ್ಯಯಿಸಿದ್ದರು. ಬಡತನ ಹಾಗೂ ಪೌಷ್ಠಿಕ ಆಹಾರದ ಕೊರತೆಯಿಂದ ಯುಪಿ ಮಕ್ಕಳು ಬಳಲುತ್ತಿದ್ದ ಸನ್ನಿವೇಶದಲ್ಲಿಯೂ ಮಾಯಾವತಿ ಪ್ರತಿಮೆಗೆ ಸಾಕಷ್ಟು ಮಹತ್ವ ನೀಡಿದ್ದರು.

ಉತ್ತರ ಪ್ರದೇಶದಲ್ಲಿ ನಿರ್ಮಾಣವಾದ ಪ್ರತಿಮೆ ಹಾಗೂ ಉದ್ಯಾನವನದಲ್ಲಿ ಭ್ರಷ್ಟಾಚಾರ ನಡೆದಿತ್ತು ಎಂಬ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯದ ಪ್ರಕಾರ ಮಾಯಾವತಿ ಅಧಿಕಾರ ಅವಧಿಯಲ್ಲಿ ನಿರ್ಮಾಣಗೊಂಡ ಸ್ಮಾರಕಗಳಲ್ಲಿ ಒಟ್ಟು 111 ಕೋಟಿ ರು. ಅವ್ಯವಹಾರ ಕುರಿತು ತನಿಖೆ ನಡೆಸಿತ್ತು. 2019ರಲ್ಲಿ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯ್ ನೇತೃತ್ವದ ಪೀಠ ಸಾರ್ವಜನಿಕರ ತೆರಿಗೆ ಹಣವನ್ನು ಆನೆಗಳ ನಿರ್ಮಾಣಕ್ಕೆ ಬಳಸಲಾಗಿದ್ದು, ತಮ್ಮ ಜೇಬಿನಿಂದ ಹಣವನ್ನು ಸರಕಾರದ ಬೊಕ್ಕಸಕ್ಕೆ ಜಮೆ ಮಾಡಬೇಕು ಎಂದು ಆದೇಶ ನೀಡಿತ್ತು.

ಉತ್ತರ ಪ್ರದೇಶದ ಪ್ರತಿಮೆ ರಾಜಕಾರಣ ಮಾಯಾವತಿ ಕಾಲದಲ್ಲಿ ಮಾತ್ರ ನಡೆಯಲಿಲ್ಲ, ಇವರ ನಂತರ ಯುಪಿ ಗದ್ದುಗೆ ಹಿಡಿದ ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಕೂಡ ಅನೇಕ ಪ್ರತಿಮೆಗಳನ್ನು ನಿರ್ಮಾಣ ಮಾಡಿದರು. ಇವರ ಆಡಳಿತಾವಧಿಯಲ್ಲಿಯೂ ಪ್ರತಿಮೆ ನಿರ್ಮಾಣದ ರಾಜಕಾರಣ ಜೋರಾಗಿಯೇ ನಡೆಯಿತು. ಅತ್ತ ಮಾಯಾವತಿ ತಮ್ಮ ಬಹುಜನ ಸಮಾಜವಾದಿ ಪಕ್ಷದ ಚಿನ್ಹೆ ಆನೆ ಹಾಗೂ ಕೆಲವು ಪ್ರಮುಖರ ಉದ್ಯಾನವನ ನಿರ್ಮಿಸಿದರೆ ಇತ್ತ ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಅಧಿಕಾರ ಸಿಕ್ಕ ಮರುಕ್ಷಣದಿಂದಲೇ ತಮ್ಮ ಸೈದ್ಧಾಂತಿಕ ರಾಜಕೀಯ ನಾಯಕರ ಪ್ರತಿಮೆ ನಿರ್ಮಾಣದ ರಾಜಕಾರಣ ಮಾಡಿದರು. ಇನ್ನೂ ಬಿಹಾರ, ಮಧ್ಯ ಪ್ರದೇಶ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಸೇರಿ ದೇಶದ ಭಾಗಶಃ ರಾಜ್ಯಗಳು ಪ್ರತಿಮೆ ರಾಜಕಾರಣದ ಕೇಂದ್ರಗಳಾಗಿಯೇ ಮಾರ್ಪಾಡುಗೊಂಡಿವೆ.

ದೇಶದ ಮಹಾನ್ ನಾಯಕರು, ದಾರ್ಶನಿಕರು ಸೇರಿದಂತೆ ಪ್ರಮುಖ ವ್ಯಕ್ತಿಗಳ ಪ್ರತಿಮೆ ನಿರ್ಮಾಣದ ಅಭ್ಯಾಸ ಕೇವಲ ಭಾರತದಲ್ಲಿ ಮಾತ್ರ ಇದೆ ಎಂದಲ್ಲ. ಅಭಿವೃದ್ಧಿ ಹೊಂದಿದ ಅಮೆರಿಕ, ಬ್ರಿಟನ್ ಸೇರಿದಂತೆ ಜಗತ್ತಿನ ಬಹುಪಾಲು ದೇಶದಲ್ಲಿ ಬಾನೆತ್ತರದ ಪ್ರತಿಮೆಗಳು ನಿರ್ಮಾಣವಾಗಿವೆ. 1886ರ ಅಕ್ಟೋಬರ್ 28ರಂದು ಅಮೆರಿಕದಲ್ಲಿ 151 ಅಡಿ ಎತ್ತರದ ಸ್ಟ್ಯಾಚ್ಯೂ ಆಫ್ ಲಿಬರ್ಟಿಯನ್ನು ಪ್ರತಿಷ್ಠಾಪಿಸಲಾಯಿತು. ಇದರ ಮೂಲಕ ಮಾನವ ಹಕ್ಕುಗಳ ಸಂರಕ್ಷಣೆ, ಗಲಾಮಗಿರಿ ನಿರ್ಮೂಲನೆ ಜತೆಗೆ ಸಮಾನತೆಯ ಸಂಕೇತವಾಗಿಯೂ ಪ್ರತಿಮೆಯನ್ನು ಗುರುತಿಸಲಾಯಿತು. ಈಗಲೂ ಅಲ್ಲಿನ ಸರಕಾರ ಪ್ರತಿಮೆಯನ್ನು ಅಚ್ಚುಕಟ್ಟಾಗಿ ಉಳಿಸಿಕೊಂಡಿದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಮತ್ತೊಂದು ಬೆಳವಣಿಗೆ ನಡೆಯಿತು. ಕಳೆದ ಕೆಲ ದಿನಗಳ ಹಿಂದೆ ಬಾಂಗ್ಲಾದೇಶದಲ್ಲಿ ನಡೆದ ದಂಗೆಯಲ್ಲಿ ಅವರ ದೇಶದ ವಿಮೋಚನೆಗಾಗಿ ಹೋರಾಡಿದ್ದ ಶೇಖ್ ಮುಜಿಬುರ್ ರೆಹಮಾನ್ ಅವರ ಪ್ರತಿಮೆಯನ್ನು ಕೆಡವಿ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಲಾಯಿತು. ಈ ಮಟ್ಟಿಗೆ ಇಡೀ ವಿಶ್ವದಲ್ಲಿ ಪ್ರತಿಮೆಗಳು ಜನರನ್ನು ಭಾವನಾತ್ಮಕವಾಗಿ ಬೆಸೆಯುವ ಹಾಗೂ ಜನರ ಆಕ್ರೋಶಕ್ಕೆ ತುತ್ತಾಗುತ್ತಾ ಬಂದಿವೆ.

ಸಾಮಾನ್ಯವಾಗಿ ಪ್ರತಿಮೆಗಳ ನಿರ್ಮಾಣದ ಹಿಂದೆ ಒಂದು ಮಹತ್ವದ ಉದ್ದೇಶವಂತೂ ಅಡಗಿದೆ. ಆ ದೇಶದ ಐಕ್ಯತೆಗಾಗಿ ಧಾರ್ಮಿಕ ಸಮಾನತೆಗೆ ಹೋರಾಡಿದವರನ್ನು ನೆನೆಯುವ ಉದ್ದೇಶ. ತಮ್ಮ ಬದುಕನ್ನೇ ಸಮಾಜಕ್ಕೆ ಮೀಸಲಿಟ್ಟವರ ಜೀವಮಾನದ ಸಾಧನೆಯನ್ನು ಮುಂದಿನ ಪೀಳಿಗೆಗೆ ತಿಳಿಸಿ ಅವರಲ್ಲಿಯೂ ಜಾಗೃತೆ ಮೂಡಿಸುವ ಉದ್ದೇಶ. ಶತಮಾನಗಳ ಹಿಂದೆ ನಡೆದ ಘಟನೆಯ ಸೂಕ್ಷ್ಮತೆಯನ್ನು ಅರಿತು ಇತಿಹಾಸದ ಪಾಠ ಕಲಿಯುತ್ತಾ ತನ್ನ ದೇಶಕ್ಕಾಗಿ ದುಡಿಯುವ ಉದ್ದೇಶವೂ ಇದೆ. ನಮ್ಮಲ್ಲಿಯೇ ಬುದ್ಧ, ಬಸವ, ಅಂಬೇಡ್ಕರ್, ಮಹಾತ್ಮ ಗಾಂಧಿಜಿ, ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್ ರಂತಹ ಮಹಾನ್ ವ್ಯಕ್ತಿಗಳ ಪ್ರತಿಮೆ ಮುಂದೆ ನಿಂತಾಗ ಎಂತವರಿಗಾದರೂ ಉತ್ಸಾಹ ಚಿಮ್ಮುತ್ತದೆ. ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಪ್ರತಿಮೆ ಮುಂದೆ ನಿಂತಾಗ ಸಾಧನೆಯ ಹುಮ್ಮಸ್ಸು ಅರಿವಿಲ್ಲದೆ ನಮ್ಮೊಳಗೆ ಮೂಡುತ್ತದೆ. ಆದರೆ ಇದೇ ವಿಷಯಗಳು ರಾಜಕಾರಣಕ್ಕೆ ಬಳಕೆಯಾದರೆ ಪ್ರತಿಮೆಯ ಮೂಲ ಉದ್ದೇಶವೇ ಬದಿಗೆ ಸರಿದುಬಿಡುತ್ತದೆ. ಮುಂದೆಯೂ ಹೀಗಾಗದಿರಲಿ. ಪ್ರತಿಮೆಗಳನ್ನು ಸ್ವಾಭಿಮಾನದ ಸಂಕೇತವಾಗಿ ನೋಡಬೇಕು ಹೊರತು, ಚುನಾವಣಾ ತಂತ್ರದ ಭಾಗವಾಗಿ ಅಲ್ಲ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 257

ಸಮಾಚಾರ ಸಣ್ಣದಲ್ಲ

ಬಿಜೆಡಿ ಮಾಜಿ ಸಂಸದ ಸುಜೀತ್ ಬಿಜೆಪಿಗೆ

ದೆಹಲಿ: ನವೀನ್ ಪಟ್ನಾಯಕ್ ನಾಯಕತ್ವದ ಬಿಜೆಡಿಯ ಮಾಜಿ ರಾಜ್ಯಸಭಾ ಸಂಸದ ಸುಜೀತ್ ಕುಮಾರ್ ಶುಕ್ರವಾರ ಬಿಜೆಪಿ ಸೇರ್ಪಡೆಯಾಗಿದ್ದಾರೆ. ಪಕ್ಷ ವಿರೋಧಿ ಚಟುವಟಿಕೆ ಕಾರಣ ನೀಡಿ ಬಿಜೆಡಿ ಸುಜೀತ್ ಅವರನ್ನು ಉಚ್ಚಾಟನೆಗೊಳಿಸಿತ್ತು.

ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ ಕೆಲವೇ ಗಂಟೆಗಳಲ್ಲಿ ಸುಜೀತ್ ಕುಮಾರ್ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಗೊಂಡಿದ್ದಾರೆ. ರಾಜ್ಯಸಭಾ ಅಧ್ಯಕ್ಷ ಜಗದೀಪ್ ಧನ್‌ಕರ್ ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದ ಸುಜೀತ್ ಬಿಜೆಪಿ ಸೇರುವ ನಿರ್ಧಾರ ಪ್ರಕಟಿಸಿದ್ದಾರೆ. ಸುಜೀತ್ ಕುಮಾರ್ ಈ ನಡೆಗೆ ಅಸಮಾಧಾನ ವ್ಯಕ್ತಪಡಿಸಿರುವ ಒಡಿಸ್ಸಾ ಮಾಜಿ ಸಿಎಂ ನವೀನ್ ಪಟ್ನಾಯಕ್' ಸುಜೀತ್ ಕುಮಾರ್ ಅವರನ್ನು ರಾಜ್ಯಸಭೆಗೆ ಕಳುಹಿಸಿದ ಪಕ್ಷ ಹಾಗೂ ಕಾಳಹಂಡಿ ಜನರ ಭರವಸೆ ನಿರೀಕ್ಷೆಯನ್ನು ಹುಸಿ ಮಾಡಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

34 ವರ್ಷದ ಹಿಂದೆ ₹20 ಲಂಚ: ಬಂಧನಕ್ಕೆ ಆದೇಶ

ಪಟನಾ : 34 ವರ್ಷಗಳ ಹಿಂದೆ 20 ರು ಲಂಚ ಪಡೆದ ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸಿ ಕೋರ್ಟ್‌ಗೆ ಹಾಜರುಪಡಿಸುವಂತೆ ನ್ಯಾಯಾಲಯ ಆದೇಶಿಸಿದೆ. ಸಹರ್ಸಾದ ವಿಶೇಷ ನ್ಯಾಯಾಲಯದ ನ್ಯಾ.ಸುದೇಶ್ ಶ್ರೀವಾತ್ಸವ ಗುರುವಾರ ಈ ಆದೇಶ ನೀಡಿದ್ದಾರೆ. 1990ರ ಮೇ 6 ರಂದು ಸುರೇಶ್ ಪ್ರಸಾದ್ ಸಿಂಗ್ ಎಂಬ ಕಾನ್‌ಸ್ಟೇಬಲ್ ಸಹರ್ಸಾ ರೈಲ್ವೆ ನಿಲ್ದಾಣದಲ್ಲಿ ಕರ್ತವ್ಯದಲ್ಲಿರುವಾಗ ತರಕಾರಿ ಮಾರುವ ಮಹಿಳೆಯಿಂದ 20 ರು ಲಂಚ ಪಡೆದಿದ್ದ. ಆದರೆ ಸಿಂಗ್ ಲಂಚ ಪಡೆದಿದ್ದನ್ನು ಗಮನಿಸಿದ್ದ ರೈಲ್ವೆ ನಿಲ್ದಾಣದ ಉಸ್ತುವಾರಿ ಅಧಿಕಾರಿ ತಕ್ಷಣ ಆತನನ್ನು ಹಿಡಿದು ಹಣ ವಶಕ್ಕೆ ಪಡೆದಿದ್ದ. ಬಳಿಕ ನ್ಯಾಯಾಲಯ ಈ ಲಂಚ ಪ್ರಕರಣದಲ್ಲಿ ಜಾಮೀನು ಕೂಡ ನೀಡಿತ್ತು . ಆದರೆ ಆರೋಪಿ ಸಿಂಗ್ ಸುಳ್ಳು ದಾಖಲೆಗಳನ್ನು ನೀಡಿ 1999ರಿಂದ ಯಾರ ಕೈಗೂ ಸಿಗದೇ ಪರಾರಿಯಾಗಿದ್ದ. ಈಗ ಜಾಮೀನು ಬಾಂಡ್ ಅವಧಿ ಮುಕ್ತಾಯ ಹಿನ್ನಲೆ ಬಂಧನಕ್ಕೆ ವಾರೆಂಟ್ ಹೊರಡಿಸಲಾಗಿದ್ದು ಕೋರ್ಟ್ ಸುರೇಶ್ ಪ್ರಸಾದ್ ಸಿಂಗ್‌ನನ್ನು ಬಂಧಿಸಲು ಸೂಚನೆ ನೀಡಿದೆ.

ಅಪರಾಜಿತ ಮಸೂದೆ ರಾಷ್ಟ್ರಪತಿ ಅಂಗಳಕ್ಕೆ

ಕೋಲ್ಕತ್ತ : ಪಶ್ಚಿಮ ಬಂಗಾಳದ ಅತ್ಯಾಚಾರ ತಡೆ ಕಾಯ್ದೆ 'ಅಪರಾಜಿತ ಮಸೂದೆ 2024' ನ್ನು ರಾಷ್ಟ್ರಪತಿ ಪರಿಶೀಲನೆಗೆ ಕಳುಹಿಸಲಾಗಿದೆ ಎಂದು ರಾಜಭವನದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಸರಕಾರದ ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್ ಮಸೂದೆ ಹಾಗೂ ಸಂಬಂಧಿಸಿದ ತಾಂತ್ರಿಕ ವರದಿಯನ್ನು ಸಲ್ಲಿಕೆ ಮಾಡಿದ ಬಳಿಕ ರಾಜ್ಯಪಾಲ ಸಿ ವಿ ಆನಂದ ಬೋಸ್ ಶುಕ್ರವಾರ ಮಸೂದೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಪರಿಶೀಲನೆಗೆ ಕಳುಹಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗುರುವಾರವಷ್ಟೇ ರಾಜ್ಯಪಾಲ ಬೋಸ್ ಮಸೂದೆ ಜತೆಗೆ ಅಗತ್ಯವಾದ ತಾಂತ್ರಿಕ ವರದಿಗಳನ್ನು ಸಲ್ಲಿಸಲು ವಿಫಲವಾಗಿದೆ ಎಂದು ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಅವರನ್ನು ಟೀಕಿಸಿದ್ದರು.

ಮಣಿಪುರ: ರಾಕೆಟ್ ದಾಳಿ ಒಬ್ಬನ ಬಲಿ

ಇಂಫಾಲ: ಮಣಿಪುರದಲ್ಲಿ ಗುಂಡಿನ ದಾಳಿಗಳ ಬಳಿಕ ಈಗ ಸರಣಿ ರಾಕೆಟ್ ದಾಳಿ ನಡೆದಿದೆ. ಎಲ್ಲವೂ ಸಹಜ ಸ್ಥಿತಿಗೆ ಬರುತ್ತಿದೆ ಎನ್ನುವಾಗಲೇ ಈಗ ಹಿಂಸಾಚಾರ ಮತ್ತಷ್ಟು ತೀವ್ರಗೊಳ್ಳುವ ಆತಂಕ ವ್ಯಕ್ತವಾಗಿದೆ. ಮಣಿಪುರದ ಮೊಯಿರಂಗ್ ನಗರದಲ್ಲಿ ಎರಡು ರಾಕೆಟ್ ದಾಳಿ ನಡೆದಿದೆ.

ಶುಕ್ರವಾರ ಬೆಳಿಗ್ಗೆಯಿಂದಲೇ ಇಂಫಾಲದಿಂದ 45 ಕಿ ಮೀಟರ್ ದೂರದಲ್ಲಿನ ಟ್ರೋಂಗ್‌ಲಾವೋಬಿ ಜನವಸತಿ ಪ್ರದೇಶವನ್ನು ಗುರಿಯಾಗಿ ಸಿಕೊಂಡು ಕುಕಿ ಪ್ರಾಬಲ್ಯದ ಚುರ್‌ಚಂದಾಪುರ ಜಿಲ್ಲೆಯ ಗುಡ್ಡ ಪ್ರದೇಶದಿಂದ ರಾಕೆಟ್ ದಾಳಿ ನಡೆಸಲಾಗಿದೆ. 3 ಕಿ.ಮೀಟರ್ ದೂರ ಹಾರಬಲ್ಲ ಸಾಮರ್ಥ್ಯದ ಲಾಂಚರ್ ಬಳಸಿ ಈ ರಾಕೆಟ್‌ಗಳನ್ನು ಖಾಲಿ ಕಟ್ಟಡದತ್ತ ಹಾರಿಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಜತೆಗೆ ಶಂಕಿತ ದಂಗೆಕೋರರು ಹಾಗೂ ಭದ್ರತಾ ಪಡೆಗಳ ನಡುವೆ ಗುಂಡಿನ ಚಕಮಕಿ ಕೂಡ ನಡೆದಿದೆ. ಮೈತೇಯಿ ಸಮುದಾಯದ ಹಿರಿಯ ವ್ಯಕ್ತಿಯೊಬ್ಬರು ಪ್ರಾರ್ಥನೆ ಕುಳಿತಿದ್ದಾಗ ರಾಕೆಟ್‌ನ ಚೂರುಗಳು ಸೀದಾ ಅವರ ತಲೆಗೆ ಅಪ್ಪಳಿಸಿದೆ. ಘಟನೆಯಿಂದ ವ್ಯಕ್ತಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಭಾರತೀಯ ರಾಷ್ಟ್ರೀಯ ಸೇನೆಯ ಮ್ಯೂಸಿಯಂ ಗುರಿಯಾಗಿಸಿ ಈ ದಾಳಿ ನಡೆಸಲಾಗಿದೆ ಎಂದು ಹೇಳಲಾಗಿದ್ದು ಮತ್ತೊಂದು ರಾಕೆಟ್ ಮಣಿಪುರದ ಮೊದಲ ಮುಖ್ಯಮಂತ್ರಿ ಮೈರೆಮ್ ಬಮ್ ಕೊಯಿರೆಂಗ್ ಸಿಂಗ್ ಮನೆಗೆ ಅಪ್ಪಳಿಸಿದೆ. ಕಟ್ಟಡ ಖಾಲಿ ಇದ್ದ ಹಿನ್ನಲೆ ಯಾವುದೇ ಅನಾಹುತ ಸಂಭವಿಸಿಲ್ಲ. ಗುರುವಾರ ಸಂಜೆ ಕುಂಬಿ ಗ್ರಾಮದ ಜನ ಕೆಲ ಡ್ರೋನ್ ಹಾರಾಟವನ್ನು ಗಮನಿಸಿರುವುದಾಗಿ ತಿಳಿಸಿದ್ದಾರೆ.

{ ಅನಿಲ್ ವಿಜ್ } ಬಿಜೆಪಿ ಹಿರಿಯ ನಾಯಕ

ದೇಶದ ಮಗಳು ಈಗ ಕಾಂಗ್ರೆಸ್ ಪುತ್ರಿ. ಕಾಂಗ್ರೆಸ್ ಬಹಳ ಕಾಲದಿಂದ ಈ ಕುಸ್ತಿಪಟುಗಳನ್ನು ಬೇಟೆಯಾಡಲು ಪ್ರಯತ್ನಿಸಿತ್ತು. ವಿನೇಶ್ ಫೋಗಟ್ ಮತ್ತು ಬಜರಂಗ ಪುನಿಯಾ ಕಾಂಗ್ರೆಸ್ ಸೇರುವ ವಿಚಾರದಲ್ಲಿ ಬಿಜೆಪಿಗೆ ಅಭ್ಯಂತರವಿಲ್ಲ. ದೆಹಲಿಯಲ್ಲಿ ನಡೆದ ಕುಸ್ತಿಪಟುಗಳ ಪ್ರತಿಭಟನೆಗೆ ಕಾಂಗ್ರೆಸ್ ಪಕ್ಷವೇ ಪ್ರಚೋದನೆ ನೀಡಿತ್ತು.

ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿ ಪ್ರಣಾಳಿಕೆ ಬಿಡುಗಡೆ | ಮನೆಯ ಹಿರಿಯ ಮಹಿಳೆಗೆ ವಾರ್ಷಿಕ 18 ಸಾವಿರ ರು

ಜಮ್ಮು-ಕಾಶ್ಮೀರಕ್ಕೆ ಇದು ಸ್ವರ್ಣಯುಗ: ಅಮಿತ್ ಶಾ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಗೆ ಬಿಜೆಪಿ ಸಜ್ಜಾಗಿದ್ದು ಶುಕ್ರವಾರ ಗೃಹ ಸಚಿವ ಅಮಿತ್ ಶಾ 25 ಭರವಸೆಗಳ ಪ್ರಣಾಳಿಕೆ ಬಿಡುಗಡೆ ಮಾಡಿದ್ದಾರೆ. 2014ರ ನಂತರದ ವರ್ಷಗಳು ಜಮ್ಮು ಮತ್ತು ಕಾಶ್ಮೀರದ ಇತಿಹಾಸದಲ್ಲಿ 'ಸ್ವರ್ಣ ಯುಗ' ಎಂದು ಸಚಿವ ಅಮಿತ್ ಶಾ ಬಣ್ಣಿಸಿದ್ದಾರೆ. ಕಾರ್ಯಕ್ರಮದಲ್ಲಿ ಜಮ್ಮು ಮತ್ತು ಕಾಶ್ಮೀರದ ಬಿಜೆಪಿ ಮುಖ್ಯಸ್ಥ ರವೀಂದ್ರ ರೈನಾ ಸೇರಿ ಹಲವು ನಾಯಕರು ಭಾಗಿಯಾಗಿದ್ದರು.

ಪ್ರಣಾಳಿಕೆ ಬಿಡುಗಡೆ ಬಳಿಕ ಮಾತನಾಡಿದ ಅಮಿತ್ ಶಾ ಆರ್ಟಿಕಲ್ 370 ಜಮ್ಮು ಮತ್ತು ಕಾಶ್ಮೀರದಲ್ಲಿ ಪುನಃ ಸ್ಥಾಪನೆಯಾಗಲು ಸಾಧ್ಯವೇ ಇಲ್ಲ, ಸಾಧ್ಯವಾಗಲು ಬಿಡುವುದೂ ಇಲ್ಲ. ಅದೊಂದು ಇತಿಹಾಸವಷ್ಟೇ. ಆರ್ಟಿಕಲ್ 370 ಇಲ್ಲಿನ ಯುವಜನತೆ ಕೈಯಲ್ಲಿ ಆಯುಧಗಳು, ಕಲ್ಲುಗಳನ್ನು ಹಿಡಿಯುವಂತೆ ಮಾಡಿತ್ತು. ನ್ಯಾಷನಲ್ ಕಾನ್ಫರೆನ್ಸ್ ಪ್ರಾಣಾಳಿಕೆಯಲ್ಲಿ ವಿಶೇಷ ಸ್ಥಾನಮಾನ ಮರುಸ್ಥಾಪಿಸುವ ಭರವಸೆ ನೀಡಲಾಗಿದೆ. ಕಾಂಗ್ರೆಸ್ ಕೂಡ ಮೌನವಾಗಿ ಬೆಂಬಲಿಸಿದೆ. ಆದರೆ ಇದು ಸಾಧ್ಯವೇ ಇಲ್ಲದ ಭರವಸೆ ಎಂದು ಅಮಿತ್ ಶಾ ಟೀಕಿಸಿದ್ದಾರೆ. ಈ ಸಂದರ್ಭದಲ್ಲಿ ಸಚಿವರು ಪಂಡಿತ್ ಪ್ರೇಮ್‌ನಾಥ್ ಡೋಗ್ರಾ ಮತ್ತು ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಹೋರಾಟ, ತ್ಯಾಗವನ್ನು ಸ್ಮರಿಸಿದರು.

ಜಮ್ಮು ಮತ್ತು ಕಾಶ್ಮೀರ ಎಂದಿಗೂ ಭಾರತದೊಳಗೆ.

ಸ್ವಾತಂತ್ರ್ಯದ ಬಳಿಕ, ಜಮ್ಮು ಮತ್ತು ಕಾಶ್ಮೀರ ವಿಚಾರ ಬಿಜೆಪಿಗೆ ಸದಾ ಮುಖ್ಯವಾಗಿದೆ. ಜಮ್ಮು ಮತ್ತು ಕಾಶ್ಮೀರ ಎಂದಿಗೂ ಭಾರತಕ್ಕೇ ಸೇರಿದ್ದು. 2014ರವರೆಗೆ ಈ ಪ್ರದೇಶಗಳು ಸದಾ ಪ್ರತ್ಯೇಕತೆ ಹಾಗೂ ಭಯೋತ್ಪಾದಕ ವಿಚಾರದಲ್ಲೇ ಮುಳುಗಿತ್ತು. ಆದರೆ ಕಳೆದ 10 ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಸಾಕಷ್ಟು ಸಕಾರಾತ್ಮಕ ಬದಲಾವಣೆಗಳು ಕಂಡಿವೆ. ಜಮ್ಮು ಮತ್ತು ಕಾಶ್ಮೀರದ ಇತಿಹಾಸದಲ್ಲಿ ಈ ದಿನಗಳು 'ಸ್ವರ್ಣ ಯುಗವಾಗಿ' ದಾಖಲಾಗಲಿದೆ ಎಂದರು. ಹಿಂದಿನ ಸರಕಾರಗಳೆಲ್ಲ ತುಷ್ಟೀಕರಣ ರಾಜಕೀಯದಿಂದ ಜಮ್ಮು ಮತ್ತು ಕಾಶ್ಮೀರವನ್ನು ಅಸ್ಥಿರಗೊಳಿಸಿದ್ದವು ಎಂದು ಅಮಿತ್ ಶಾ ಕಿಡಿಕಾರಿದರು.

ಮೋದಿ ಸರಕಾರದಿಂದ ಸಮಾನ ನ್ಯಾಯ: ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಧಾನಿ ಮೋದಿ ನೇತೃತ್ವದ ಸರಕಾರ ಸಮಾನ ನ್ಯಾಯ ಒದಗಿಸಿದೆ ಎಂದು ಅಮಿತ್ ಶಾ ಹೇಳಿದ್ದಾರೆ. ವರ್ಷಗಳಿಂದ ಸೌಲಭ್ಯಗಳಿಂದ ವಂಚಿತರಾಗಿದ್ದ ಒಬಿಸಿ, ಗುರ್‌ಜಾರ್ಸ್, ಬಾಕರ್‌ವಾಲ್ಸ್, ಪಹಾಡೀಸ್ ಸಮುದಾಯಗಳಿಗೆ ಮೋದಿ ಸರಕಾರ ಮೀಸಲಾತಿ ನೀಡಿದೆ ಎಂದು ಹೇಳಿದ್ದಾರೆ. ಹಾಗೇ ಜಮ್ಮು ಮತ್ತು ಕಾಶ್ಮೀರ ಭಾಗದಲ್ಲಿ ಪ್ರವಾಸೋದ್ಯಮ ಉತ್ತೇಜನಕ್ಕೆ ಸಾಕಷ್ಟು ಯೋಜನೆಗಳನ್ನು ನೀಡುವ ಭರವಸೆಯನ್ನೂ ಅಮಿತ್ ಶಾ ನೀಡಿದ್ದಾರೆ.

ಪ್ರಣಾಳಿಕೆಯ ಪ್ರಮುಖ ಭರವಸೆ

- **ಕೃಷಿ ಕ್ಷೇತ್ರ:** ರೈತರಿಗೆ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ವಾರ್ಷಿಕ 10 ಸಾವಿರ ರು ಸಹಾಯಧನ. ಕೃಷಿ ಕಾರ್ಯಗಳಿಗೆ ಬಳಸುವ ಉಪಕರಣಗಳಿಗೆ ಶೇ.50ರಷ್ಟು ಕಡಿಮೆ ದರದಲ್ಲಿ ವಿದ್ಯುತ್
- **ಉದ್ಯೋಗ ಸೃಷ್ಟಿ:** ಸೂಕ್ತ ನೇಮಕಾತಿ ವ್ಯವಸ್ಥೆ ಗುರಿಯೊಂದಿಗೆ 5 ಲಕ್ಷ ಉದ್ಯೋಗ ಸೃಷ್ಟಿ
- **ಶಿಕ್ಷಣ :** ಪ್ರಗತಿ ಶಿಕ್ಷಾ ಯೋಜನೆ ಅಡಿಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ವಾರ್ಷಿಕ 3000 ರು. ಪ್ರಯಾಣ ಭತ್ಯೆ. ವೈದ್ಯಕೀಯ ಕಾಲೇಜುಗಳಿಗೆ 1 ಸಾವಿರ ಹೆಚ್ಚುವರಿ ಸೀಟು ಹಂಚಿಕೆ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್
- **ಸಮಾಜ ಕಲ್ಯಾಣ:** 'ಮಾ ಸಮ್ಮಾನ್ ಯೋಜನೆ' ಯೋಜನೆ ಅಡಿಯಲ್ಲಿ ಮನೆಯ ಹಿರಿಯ ಮಹಿಳೆಗೆ ವಾರ್ಷಿಕ 18 ಸಾವಿರ ರು ಸಹಾಯಧನ. ಉಜ್ವಲ ಯೋಜನೆ ಫಲಾನುಭವಿಗಳಿಗೆ ವಾರ್ಷಿಕ 2 ಉಚಿತ ಎಲ್‌ಪಿಜಿ ಸಿಲಿಂಡರ್, ಮತ್ತು ಹಿರಿಯ ನಾಗರಿಕರು, ವಿಧವೆಯರ ಹಾಗೂ ಅಂಗವಿಕಲರ ಪಿಂಚಣಿ ಮೂರು ಪಟ್ಟು ಹೆಚ್ಚಳ, ಕಾಶ್ಮೀರಿ ಪಂಡಿತರ ಪುನರ್ವಸತಿಗೆ ಯೋಜನೆ, 'ಹರ್ ಘರ್ ನಲ್ ಸೇ ಜಲ್' ಯೋಜನೆಯಡಿ ಕುಡಿಯುವ ನೀರಿನ ಸೌಲಭ್ಯ
- **ಮೂಲಸೌಕರ್ಯ:** ಪ್ರಮುಖ ಸುರಂಗ ಮಾರ್ಗ ನಿರ್ಮಾಣ ಪೂರ್ಣಗೊಳಿಸುವ ಭರವಸೆ, 10 ಸಾವಿರ ಕಿ.ಮೀ ಗ್ರಾಮೀಣ ರಸ್ತೆ ನಿರ್ಮಾಣ, ಜಮ್ಮು ಮತ್ತು ಶ್ರೀನಗರದಲ್ಲಿ ಮೆಟ್ರೋ ನಿರ್ಮಾಣ.
- **ಆರೋಗ್ಯ:** ಜಾರಿಯಲ್ಲಿರುವ ಆಯುಷ್ಮಾನ್ ಭಾರತ್ ಸೇಹತ್ ಯೋಜನೆಯ 5 ಲಕ್ಷ ರು ಮೇಲೆ ಹೆಚ್ಚುವರಿ 2 ಲಕ್ಷ ರು ಸೇರ್ಪಡೆ.
- ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡಿದವರ ಬಗ್ಗೆ ಶ್ವೇತಪತ್ರ ಬಿಡುಗಡೆ ಭರವಸೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್

ಅನಿರೀಕ್ಷಿತ ಪರಿಸ್ಥಿತಿ ಎದುರಿಸಲು ಸಿದ್ಧರಾಗಿ

ಲಖನೌ: ಭಾರತ ಶಾಂತಿಪ್ರಿಯ ದೇಶ ಹಾಗೇ ಶಾಂತಿ ಕಾಪಾ-ಡಲು ಅನಿರೀಕ್ಷಿತ ಸನ್ನಿವೇಶಗಳಿಗೆ ಸದಾ ಸಿದ್ಧವಾಗಿರಬೇಕು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಶಸ್ತ್ರದಳ ಯೋಧರಿಗೆ ಸೂಚನೆ ನೀಡಿದ್ದಾರೆ.



ಲಖನೌ ಜಂಟಿ ಕಮಾಂಡರ್‌ಗಳ ಸಮಾವೇಶದ ಕೊನೇಯ ದಿನದ ಸಭೆಯಲ್ಲಿ ಮಾತನಾಡಿದ ರಾಜನಾಥ್ ಸಿಂಗ್ 'ಆತ್ಮನಿರ್ಭರ ಭಾರತ' ಹಾಗೂ ರಾಷ್ಟ್ರದ ಹಿತಾಸಕ್ತಿಯನ್ನು ರಕ್ಷಿಸುವೆಡೆಗೆ ಯೋಧರ ಕೊಡುಗೆಯನ್ನು ಶ್ಲಾಘಿಸಿದ್ದಾರೆ. 'ಸಶಕ್ತ ಹಾಗೂ ಸುರಕ್ಷಿತ ಭಾರತ -ಸಶಸ್ತ್ರಪಡೆಗಳ ಪರಿವರ್ತನೆ 'ಧ್ಯೇಯದೊಂದಿಗೆ ನಡೆದ ಸಮಾವೇಶದಲ್ಲಿ ರಕ್ಷಣಾ ಸಚಿವರು ಭವಿಷ್ಯದಲ್ಲಿ ಭಾರತ ಎದುರಿಸ 'ಬಹುದಾದ ಸವಾಲುಗಳ ಬಗ್ಗೆ ದೃಷ್ಟಿಕೋನಗಳನ್ನು ಹೊಂದುವುದು ಹಾಗೂ ಸವಾಲುಗಳನ್ನು ಎದುರಿಸ ಲು ಸಿದ್ಧವಾಗಿರುವುದು ಬಹಳ ಮುಖ್ಯ ಎಂದು ಹೇಳಿದ್ದಾರೆ .

ಜತೆಗೆ ರಷ್ಯಾ-ಉಕ್ರೇನ್, ಇಸ್ರೇಲ್ -ಹಮಾಸ್ ಹಾಗೂ ಬಾಂಗ್ಲಾ ದೇಶದ ಸಂಘರ್ಷಗಳನ್ನು ವಿಶ್ಲೇಶಿಸಿ, ಭಾರತಕ್ಕೆ ಎದುರಾಗ 'ಬಹುದಾದ ಸವಾಲುಗಳನ್ನು ಊಹಿಸಿ ಸಮರ್ಥ ವಾಗಿ ಎದುರಿಸಲು ತಂತ್ರಗಾರಿಕೆ ರೂಪಿಸಿ. ಸದಾ ಅನಿರೀಕ್ಷಿತ ಘಟನೆಗಳಿಗೆ ಸಿದ್ಧವಾಗಿರಿ ಎಂದು ಕಮಾಂಡರ್‌ಗಳಿಗೆ ರಾಜ ನಾಥ್ ಸಿಂಗ್ ಸಲಹೆ ನೀಡಿದರು. ದೇಶದ ಶಾಂತಿ ಮತ್ತು ಸ್ಥಿರತೆಗೆ ಸವಾ ಲುಗಳು ಎದುರಾಗುವ ಸಾಧ್ಯತೆಗಳಿವೆ ಎಂದಿದ್ದಾರೆ. ಭಾರತ ಶಾಂತಿಯುತವಾಗಿ, ಸಮೃದ್ಧವಾಗಿ ಬೆಳೆಯುತ್ತಿದೆ. ಜತೆಗೆ ಸವಾಲುಗಳೂ ಹೆಚ್ಚುತ್ತಿವೆ . ಸುತ್ತಮುತ್ತಲಿನ ಎಲ್ಲಾ ವರ್ತಮಾನಗಳ ಮಾಹಿತಿ ಇರಬೇಕು, ಪ್ರಬಲವಾದ ರಾಷ್ಟ್ರೀ ಯ ಭದ್ರತಾ ಸಂಯೋಜನೆ ಹೊಂದುವುದು ಮುಂದಿನ ದಿನ ಗಳಲ್ಲಿ ಅಗತ್ಯವಾಗಿದೆ ಎಂದು ರಕ್ಷಣಾ ಸಚಿವ ಸಲಹೆ ನೀಡಿದ್ದಾರೆ.

ಸಂದೀಪ್ ಘೋಷ್ ಸೇರಿ ನಾಲ್ವರ ಮನೆ ಮೇಲೆ ಇಡಿ ದಾಳಿ | ಆರೋಪಿ ಅರ್ಜಿ ಸುಪ್ರೀಂನಲ್ಲಿ ವಜಾ

ವೈದ್ಯೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿಲ್ಲ: ಸಿಬಿಐ

ಕೋಲ್ಕತ್ತ: ಆರ್ ಜಿ ಕರ್ ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ ಎಂಬ ಆರೋಪಕ್ಕೆ ಸಿಬಿಐ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ. ಆರೋಪವನ್ನು ತಳ್ಳಿ ಹಾಕಿ ರುವ ಸಿಬಿಐ ಲಭ್ಯವಿರುವ ಸಾಕ್ಷ್ಯಗಳು ಸಾಮೂಹಿಕ ಅತ್ಯಾ ಚಾರವನ್ನು ದೃಢೀಕರಿಸುವುದಿಲ್ಲ, ಪ್ರಕರಣದಲ್ಲಿ ಸಂಜಯ್ ರೇ ಕೈವಾಡ ಮಾತ್ರ ಕಂಡುಬಂದಿದೆ ಎಂದು ಮಾಹಿತಿ ನೀಡಿದೆ.

ಮೂಲಗಳ ಪ್ರಕಾರ ವೈದ್ಯೆ ಹತ್ಯೆ ಪ್ರಕರಣದ ತನಿಖೆ ಈಗಾಗಲೇ ಅಂತಿಮ ಘಟ್ಟ ತಲುಪಿದೆ. ಶೀಘ್ರದಲ್ಲೇ ಸಿಬಿಐ ಚಾರ್ಜ್‌ಶೀಟ್ ಸಲ್ಲಿಕೆ ಮಾಡಲಿದೆ ಎಂದು ತಿಳಿದು ಬಂದಿದೆ. ಎನ್‌ಡಿಟಿವಿ ಮಾಧ್ಯಮದ ವರದಿ ಪ್ರಕಾರ ಸಿಬಿಐ ಈಗಾಗಲೇ ಸುಮಾರು 100 ಹೇಳಿಕೆಗಳನ್ನು ದಾಖಲಿಸಿದ್ದು , 10 ಪಾಲಿಗ್ರಫಿ ಪರೀಕ್ಷೆಗಳನ್ನು ನಡೆಸಿದೆ. ಯಾವ ಪರೀಕ್ಷೆ ಹಾಗೂ ವಿಚಾರಣೆಯಲ್ಲೂ ಸಂಜಯ್ ರೇ ಹೊರತು ಪಡಿಸಿ ಇನ್ನೋರ್ವ ವ್ಯಕ್ತಿ ವೈದ್ಯೆ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದಲ್ಲಿ ಭಾಗಿಯಾದಂತೆ ಕಂಡುಬಂದಿಲ್ಲ ಎಂದು ಹೇಳಲಾಗಿದೆ. ಸೆ. 17ರಂದು ಕೋಲ್ಕತ್ತ ಹೈ ಕೋರ್ಟ್‌ಗೆ ಸಿಬಿಐ ವರದಿ ಸಲ್ಲಿಕೆ ಮಾಡಲಿದೆ.

ಆ.9ರಂದು 31 ವರ್ಷದ ಕಿರಿಯ ವೈದ್ಯೆ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಸಾಕಷ್ಟು ಆರೋಪಗಳು ಕೇಳಿ ಬಂದಿದ್ದವು. ಸಂತ್ರಸ್ತೆ ವೈದ್ಯೆಯ ಸಹಚರರು ಪ್ರಕರಣದಲ್ಲಿ ಸಂಜಯ್ ರೇ ಮಾತ್ರವಲ್ಲ ಬೇರೆಯವರು ಕೂಡ ಭಾಗಿಯಾಗಿರುವ ಸಾಧ್ಯತೆ ಇದೆ, ಇದೊಂದು ಗ್ಯಾಂಗ್‌ರೇಪ್ ಎಂಬ ಶಂಕೆ ವ್ಯಕ್ತಪಡಿಸಿದ್ದರು. ಇದರ ಜತೆಗೆ ಸಂತ್ರಸ್ತೆಯ ಪೋಷಕರು ಪೊಲೀಸರು ತಮಗೆ ಹಣ ನೀಡಿ ಬಾಯಿಮುಚ್ಚಿಸುವ ಪ್ರಯತ್ನ ನಡೆಸಿದ್ದಾರೆ. ತರಾತುರಿಯಲ್ಲಿ ಮಗಳ ಅಂತಿಮ ಸಂಸ್ಕಾರ ನಡೆಸಿದ್ದಾರೆ ಎಂದು ಆರೋಪಿಸಿದ್ದರು. ಸದ್ಯ ತನಿಖೆ ಅಂತಿಮ ಹಂತದಲ್ಲಿ ಇದೆ ಎಂದು ಹೇಳಲಾಗಿದ್ದು ಚಾರ್ಜ್‌ಶೀಟ್‌ನಲ್ಲಿ ಸಾಕಷ್ಟು ವಿಚಾರಗಳು ಹೊರಬೀಳುವ ನಿರೀಕ್ಷೆ ಇದೆ.

ನಾಲ್ವರ ಮನೆ ಮೇಲೆ ಇಡಿ ದಾಳಿ: ಆರ್ ಜಿ ಕರ್ ವೈದ್ಯ ಕೀಯ ಕಾಲೇಜು ಮತ್ತು ಆಸ್ಪತ್ರೆಯ ಹಣಕಾಸು ಅವ್ಯವಹಾರ, ವಿದ್ಯಾರ್ಥಿಗಳಿಂದ ಲಂಚ ಸ್ವೀಕಾರ, ಅಕ್ರಮ ಹಣ ವರ್ಗಾವಣೆ ಸೇರಿ ಹಲವು ಆರೋಪಗಳಿಗೆ ಸಂಬಂಧಿಸಿದಂತೆ ಶುಕ್ರವಾರ ಬೆಳ್ಳಂ ಬೆಳಗ್ಗೆ ಜಾರಿ ನಿರ್ದೇಶನಾಲಯ ಕೋಲ್ಕತ್ತಾದಲ್ಲಿ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಹಾಗೂ ಅವರ ಮೂವರು ಸಹಚರರ ಮನೆ ಸೇರಿ 6-7 ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿದೆ. ಉದ್ಯಮಿ ಬಿಪ್ಲಾಬ್ ಸಿಂಘಾ ನಿವಾಸ ಹಾಗೂ ಆತನ ಸಹಚರ ಕೌಶಿಕ್ ಕೊಳೆ ನಿವಾಸ, ಘೋಷ್ ಸಹಚರ ಹಾಗೂ ಆಸ್ಪತ್ರೆಯ ಡೇಟಾ ಎಂಟ್ರಿ ಆಪರೇಟರ್ ಆಗಿರುವ ಪ್ರಸುನ್ ಚಟರ್ಜಿ ನಿವಾಸ ಸೇರಿ ಬೆಲ್ಘಟ್, ಹೌರಾ, ಸುಭಾಶ್‌ಗ್ರಾಂ ಪಟ್ಟಣದ ನ ಹಲವೆಡೆ ಇಡಿ ದಾಳಿ ನಡೆಸಿ ಶೋಧ ಕಾರ್ಯ ಕೈಗೊಂಡಿದೆ. ಸಿಬಿಐ ಈಗಾಗಲೇ ಸಂದೀಪ್ ಘೋಷ್, ಆರ್ ಜಿ ಕರ್ ಕಾಲೇಜು ಮತ್ತು ಆಸ್ಪತ್ರೆಗೆ ಸಾಮಾಗ್ರಿ ಪೂರೈಕೆ ಮಾಡುತ್ತಿದ್ದ ಇಬ್ಬರು ಉದ್ಯಮಿಗಳು, ಘೋಷ್ ಭದ್ರತಾ ಸಿಬ್ಬಂದಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದೆ.

ಈಗ ಜಾರಿ ನಿರ್ದೇಶನಾಲಯ ಕೂಡ ಹಣಕಾಸು ಅವ್ಯವಹಾರ ಮತ್ತು ಅಕ್ರಮ ಹಣ ವರ್ಗಾವಣೆ ವಿಚಾರವಾಗಿ ತನಿಖೆ ಕೈಗೆತ್ತುಕೊಂಡಿದ್ದು ಇಡಿ ಕೂಡ ಸಂದೀಪ್ ಘೋಷ್‌ನನ್ನ ವಶಕ್ಕೆ ಪಡೆಯುವ ಸಾಧ್ಯತೆ ಇದೆ.

ಸುಪ್ರೀಂನಲ್ಲಿ ಅರ್ಜಿ ವಜಾ

ಹಣಕಾಸು ಅಕ್ರಮಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ಎಸ್‌ಐಟಿಯಿಂದ ಸಿಬಿಐಗೆ ವರ್ಗಾವಣೆ ಮಾಡಿದ ಕೋಲ್ಕತ್ತ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಂದೀಪ್ ಘೋಷ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಕಕ್ಷಿದಾರನನ್ನಾಗಿ ಪರಿಗಣಿಸುವಂತೆ ಘೋಷ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಶುಕ್ರವಾರ ವಜಾಗೊಳಿಸಿದೆ. ವಿಚಾರಣೆ ನಡೆಸಿದ ನ್ಯಾ. ಡಿ ವೈ ಚಂದ್ರಚೂಡ್, ಜೆ ಬಿ ಪರ್ದಿವಾಲ್ ಮತ್ತು ಮನೋಜ್ ಮಿಶ್ರಾ ಅವರ ಪೀಠ ಸಂದೀಪ್ ಘೋಷ್ ಆರೋಪಿಯಾಗಿದ್ದು ಅವರನ್ನು ಕಕ್ಷಿದಾರನನ್ನಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಘೋಷ್ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದೆ. ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್ ವಿ ರಾಜು ಸಿಬಿಐ ಪರ ವಾದ ಮಂಡಿಸಿದ್ದರು. ಘೋಷ್ ಪರ ಹಿರಿಯ ವಕೀಲೆ ಮೀನಾಕ್ಷಿ ಅರೋರಾ ವಾದ ಮಂಡಿಸಿದ್ದರು. ಆರ್ ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಅವ್ಯವಹಾರ ವಿಚಾರದಲ್ಲಿ ಸಂದೀಪ್ ಘೋಷ್‌ಗೆ ದೊಡ್ಡ ಮಟ್ಟದ ಹಿನ್ನಡೆ ಉಂಟಾಗಿದೆ.

ಕರ್ನಾಟಕದ ಐಪಿಎಸ್ ಅಧಿಕಾರಿ ಸೆರೆ

ಪೊಲೀಸ್ ಗೆಳತಿಯ ಮೇಲೆ ಹಲ್ಲೆ ಮನೆಗೆ ಬೆಂಕಿ ಹಚ್ಚಿ ಆತ್ಮಹತ್ಯೆ ಯತ್ನ

ಈರೋಡ್ : ಪೊಲೀಸ್ ಗೆಳತಿಯ ಜತೆ ಲಿವ್ ಇನ್ ಸಂಬಂಧದಲ್ಲಿದ್ದ ಕರ್ನಾಟಕದ ಐಪಿಎಸ್ ಅಧಿಕಾರಿ ಗೆಳತಿಯ ಮೇಲೆ ಹಲ್ಲೆ ನಡೆಸಿ, ಮನೆಗೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದು ಅವರನ್ನ ತಮಿಳುನಾಡು ಪೊಲೀಸರು ಬುಧವಾರ ಸಂಜೆ ಗೋಬಿಚೆಟ್ಟಿಪಾಳ್ಯಂನ ಮನೆಯಲ್ಲಿ ಬಂಧಿಸಿದ್ದಾರೆ.

ಅಧಿಕಾರಿಯನ್ನು ಎಮ್ ಅರುಣ್ ರಂಗರಾಜನ್ (38) ಎಂದು ಹೇಳಲಾಗಿದೆ. ಈತ ಸದ್ಯ ಅಮಾನತಿನಲ್ಲಿದ್ದು ಗೆಳತಿ ಸುಜಾತ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿದ್ದ . ಸುಜಾತ ಕೂಡ ಮಾಜಿ ಸಬ್ ಇನ್‌ಸ್ಪೆಕ್ಟರ್ ಆಗಿದ್ದು ಹಲ್ಲೆ ಬಳಿಕ ಪೊಲೀಸರಿಗೆ ದೂರು ನೀಡಲು ಹೋಗಿದ್ದಾರೆ. ಪೊಲೀಸರು ಘಟನಾ ಸ್ಥಳಕ್ಕೆ ಬರುವ ವೇಳೆ ಅರುಣ್ ಮನೆಯ ಒಳಗೆ ತನ್ನನ್ನು ಲಾಕ್ ಮಾಡಿಕೊಂಡು ಬೆಂಕಿ ಹಚ್ಚಿದ್ದ. ಮನೆ ಬಾಗಿಲು ಒಡೆದು ಒಳ ನುಗ್ಗಿದ ಪೊಲೀಸರು ಆರೋಪಿ ಅರುಣ್ ರಂಗರಾಜನ್‌ನ ಬಂಧಿಸಿದ್ದಾರೆ. ಬಂಧನದ ವೇಳೆ ಅರುಣ್ ಇನ್‌ಸ್ಪೆಕ್ಟರ್ ಕಾಮರಾಜ್ ಮೇಲೆಯೂ ಹಲ್ಲೆಗೆ ಯತ್ನಿಸಿದ್ದ. ಈ ಬಗ್ಗೆ ಪೊಲೀಸ್ ಅಧಿಕಾರಿ ಪಿ ಕಾಮರಾಜ್ ಮಾಹಿತಿ ನೀಡಿದ್ದು, ಕಳೆದ ಫೆಬ್ರವರಿ ತಿಂಗಳಲ್ಲಿ ಕೂಡ ಅರುಣ್ ಇದೇ ರೀತಿ ಸುಜಾತಾ ಮೇಲೆ ಹಲ್ಲೆ ನಡೆಸಿದ್ದ. ಈ ವೇಳೆ ಪೊಲೀಸರು ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಿದ್ದರು. ಆದರೆ ಗೋಬಿಚೆಟ್ಟಿಪಾಳ್ಯಂನಲ್ಲಿನ ಅರುಣ್ ಪೋಷಕರ ಮನೆಗೆ ಬಂದಾಗ ಮತ್ತೆ ಇಬ್ಬರ ನಡುವೆ ಗಲಾಟೆ ನಡೆದಿದ್ದು ಸುಜಾತಾ ಆಸ್ಪತ್ರೆಗೆ ದಾಖಲಾಗಿ ದ್ದರು. ಈ ಹಿನ್ನೆಲೆ ಅರುಣ್‌ನನ್ನ ಬಂಧಿಸಲಾಗಿತ್ತು ಆದರೆ ಸ್ಥಳೀಯ ನ್ಯಾಯಾ ಲಯದಿಂದ ಜಾಮೀನು ಪಡೆದು ಹೊರ ಬಂದಿದ್ದ. ಅರುಣ್ ಮೇಲಿನ ಹಲ್ಲೆ ಆರೋಪದ ಬಳಿಕ ಕರ್ನಾಟಕ ಸರಕಾರ ಆತನನ್ನ ಅಮಾನತ್ತಿನಲ್ಲಿರಿಸಿತ್ತು.

ಅರುಣ್ ರಂಗರಾಜನ್ ಹಿನ್ನಲೆ: ಅರುಣ್ ರಂಗರಾಜನ್ 2012ರ ಛತ್ತೀಸ್‌ಗಢ ಕೆಡರ್‌ನ ಐಪಿಎಸ್ ಅಧಿಕಾರಿ. ಇದೇ ಕೆಡರ್‌ನ ಐಪಿಎಸ್ ಅಧಿಕಾರಿ ಎಲಕ್ಕಿಯಾ ಎಂಬ ಅಧಿಕಾರಿಯನ್ನು ಮದುವೆಯಾಗಿದ್ದು ದಂಪತಿಗಳಿಗೆ ಇಬ್ಬರು ಮಕ್ಕಳಿದ್ದಾರೆ. ದಂಪತಿಗಳು ಕರ್ನಾಟಕಕ್ಕೆ ವರ್ಗಾವಣೆಗೊಂಡಿದ್ದರು. ಅರುಣ್ ರಂಗರಾಜನ್ ಕಲಬುರ್ಗಿಯ ಆಂತರಿಕ ವಿಭಾಗದ ಪೊಲೀಸ್ ಸೂಪರಿಂಟೆಂಡೆಂಟ್ ಆಗಿ ನೇಮಕಗೊಂಡಿದ್ದರು. ಆದರೆ ಅದೇ ಜಿಲ್ಲೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಆಗಿದ್ದ ಸುಜಾತ ಎಂಬುವವರ ಜತೆ ವಿವಾಹೇತರ ಸಂಬಂಧ ಹೊಂದಿದ್ದರು. ಈ ಮಾಹಿತಿ ತಿಳಿಯುತ್ತಿದ್ದಂತೆ ಅರುಣ್‌ನನ್ನ ಕಾರವಾರಕ್ಕೆ ವರ್ಗಾಯಿಸಲಾಗಿತ್ತು ಜತೆಗೆ ಎಲಕ್ಕಿಯಾ ಹಾಗೂ ಸುಜಾತಾ ಇಬ್ಬರೂ ತಮ್ಮ ವೈವಾಹಿಕ ಸಂಬಂಧವನ್ನು ಕೊನೆಗಾಣಿಸಿದ್ದರು.

ರೈಲ್ವೆ ಹುದ್ದೆಗೆ ರಾಜೀನಾಮೆ ನೀಡಿದ ವಿನೇಶ್

ಫೋಗಟ್, ಪುನಿಯಾ ಕಾಂಗ್ರೆಸ್ ಸೇರ್ಪಡೆ

ದೆಹಲಿ: ಕುಸ್ತಿಪಟುಗಳಾದ ವಿನೇಶ್ ಫೋಗಟ್ ಮತ್ತು ಬಜರಂಗ್ ಪುನಿಯಾ ಹರಿಯಾಣ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ. ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುತ್ತಾರೆ ಎಂಬ ವದಂತಿಗೆ ಈ ಬೆಳವಣಿಗೆ ಪುಷ್ಠಿ ನೀಡಿದೆ. ಶುಕ್ರವಾರ ಕೆ ಸಿ ವೇಣುಗೋಪಾಲ್ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಗೊಂಡು ರಾಜಕೀಯಕ್ಕೆ ಪಾದಾರ್ಪಣೆ ಮಾಡಿದ್ದಾರೆ. ಇದಕ್ಕೂ ಮೊದಲು ಕುಸ್ತಿಪಟುಗಳು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿದ್ದಾರೆ.

ಪಕ್ಷದ ಪ್ರಧಾನ ಕಚೇರಿಯಲ್ಲಿ ಕುಸ್ತಿಪಟುಗಳನ್ನು ಹಿರಿಯ ನಾಯಕರು ಆತ್ಮೀಯವಾಗಿ ಬರಮಾಡಿಕೊಂಡಿದ್ದಾರೆ. ಪಕ್ಷ ಸೇರ್ಪಡೆ ಬಳಿಕ ಮಾತನಾಡಿದ ವಿನೇಶ್ ಫೋಗಟ್ ಬಿಜೆಪಿ ವಿರುದ್ಧ ಕಿಡಿಕಾರಿದ್ದಾರೆ. ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ತಮ್ಮ ಹೋರಾಟ ಮುಂದುವರೆಯುವುದಾಗಿ ತಿಳಿಸಿದ ಫೋಗಟ್, ' ಕುಸ್ತಿಯನ್ನು ಅಂದು ಜಂತರ್‌ಮಂತರ್‌ನಲ್ಲಿಯೇ ಬಿಡಬಹುದಿತ್ತು. ಬಿಜೆಪಿ ನಮ್ಮ ವಿರುದ್ಧ ಸುಳ್ಳು ಸುದ್ದಿಗಳನ್ನು ಹರಡಿಸಿದೆ. ನಮ್ಮ ಕುಸ್ತಿ ಜೀವನ ಇಲ್ಲಿಗೆ ಮುಗಿಯಿತು, ದೇಶಕ್ಕಾಗಿ ಆಡುವುದಿಲ್ಲ ಎಂಬಂತೆ ಸುದ್ದಿ ಹಬ್ಬಿಸಲಾಗಿತ್ತು. ಅದಕ್ಕಾಗಿ ಒಲಿಂಪಿಕ್ಸ್ ಮತ್ತು ರಾಷ್ಟ್ರೀಯ ಕ್ರಿಡಾಕೂಟಗಳಲ್ಲಿ ಭಾಗವಹಿಸಿದೆ. ಆದರೆ ನನ್ನ ವಿಚಾರದಲ್ಲಿ ದೇವರ ಯೋಜನೆ ಬೇರೆಯೇ ಇತ್ತು. ಬ್ರಿಜ್‌ಭೂಷಣ್ ವಿರುದ್ಧ ಹೋರಾಟದಲ್ಲಿ ಬೆಂಬಲ ಸೂಚಿಸಿದ್ದಕ್ಕೆ ಬಜರಂಗ ಪುನಿಯಾ ಅವರನ್ನು ನಾಲ್ಕು ವರ್ಷಗಳ ಕಾಲ ಬ್ಯಾನ್ ಮಾಡಲಾಗಿದೆ' ಎಂದು ವಿನೇಶ್ ಆರೋಪಿಸಿದ್ದಾರೆ.

ಪ್ರತಿಭಟನೆ ಸಮಯದಲ್ಲಿ ಬಿಜೆಪಿ ನಾಯಕಿಯರನ್ನೂ ಬೆಂಬಲ ನೀಡುವಂತೆ ಕೋರಲಾಗಿತ್ತು ಆದರೆ ಯಾರೊಬ್ಬರೂ ಬರಲಿಲ್ಲ. ಸಂಕಷ್ಟದ ಸಮಯದಲ್ಲಿ ಕಾಂಗ್ರೆಸ್ ನಮ್ಮ ಜತೆ ಇತ್ತು ಎಂದು ಬಿಜೆಪಿ ವಿರುದ್ಧ ಫೋಗಟ್ ಕಿಡಿಕಾರಿದ್ದಾರೆ.

ವಿನೇಶ್ ಫೊಗಟ್, ಬಜರಂಗ ಪುನಿಯಾ ಕಾಂಗ್ರೆಸ್ ಸೇರ್ಪಡೆಗೂ ಮುನ್ನ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾದರು.

ರೈಲ್ವೆ ಹುದ್ದೆಗೆ ರಾಜೀನಾಮೆ

ಕಾಂಗ್ರೆಸ್ ಸೇರ್ಪಡೆ ಬಳಿಕ ವಿನೇಶ್ ಫೋಗಟ್ ರೈಲ್ವೆ ಹುದ್ದೆಗೆ ಶುಕ್ರವಾರ ರಾಜೀನಾಮೆ ಸಲ್ಲಿಸಿದ್ದಾರೆ. ಈ ಬಗ್ಗೆ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ವಿನೇಶ್ ದೇಶಕ್ಕೆ ಸೇವೆ ಸಲ್ಲಿಸಲು ಅವಕಾಶ ನೀಡಿದ ಭಾರತೀಯ ರೈಲ್ವೆ ಕುಟುಂಬಕ್ಕೆ ಧನ್ಯವಾದ ಎಂದು ಬರೆದುಕೊಂಡಿದ್ದಾರೆ.

ಕೀನ್ಯಾದ ಶಾಲೆಗೆ ಬೆಂಕಿ 17 ವಿದ್ಯಾರ್ಥಿಗಳ ಸಾವು

ಕೀನ್ಯಾ: ವಸತಿ ಶಾಲೆಯಲ್ಲಿ ಅಗ್ನಿ ಅವಘಡ ಸಂಭವಿಸಿದ್ದು ಘಟನೆಯಲ್ಲಿ 17 ಮಕ್ಕಳು ಸಜೀವ ದಹನಗೊಂಡಿದ್ದಾರೆ. 13 ಮಕ್ಕಳಿಗೆ ಸುಟ್ಟ ಗಾಯಗಳಾಗಿವೆ ಎಂದು ವರದಿಯಾಗಿದೆ.



ರಾಜಧಾನಿ ನೈರೋಬಿಯದಿಂದ ಉತ್ತರಕ್ಕೆ 200 ಕಿ,ಮೀಟರ್ ದೂರದಲ್ಲಿನ ನೈರಿ ಕೌಂಟಿಯ ಹಿಲ್‌ಸೈಡ್ ಎಂಡರಾಶಾ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಏಕಾಏಕಿ ಬೆಂಕಿ ಕಾಣಿಸಿ ಕೊಂಡಿದ್ದು, ದುರಂತದಲ್ಲಿ 17 ಮಕ್ಕಳು ದುರಂತ ಅಂತ್ಯ ಕಂಡಿದ್ದಾರೆ. ಗಾಯ ಗೊಂಡಿರುವ ಅನೇಕರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತ ಮಕ್ಕಳೆಲ್ಲರೂ ಸುಮಾರು 14 ವರ್ಷ ವಯಸ್ಸಿನವ ರಾಗಿದ್ದು, ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ. ಶಾಲೆ ಕಟ್ಟಡದ ಬಹುತೇಕ ಭಾಗ ಕಟ್ಟಿಗೆ ಯಿಂದ ನಿರ್ಮಾಣಗೊಂಡ ಹಿನ್ನಲೆ ಬಹುಬೇಗ ಬೆಂಕಿ ಆವರಿಸಿದೆ ಎಂದು ರಕ್ಷಣಾ ತಂಡ ತಿಳಿಸಿದೆ. ಶಾಲೆಯಲ್ಲಿ ಸುಮಾರು 824 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದು ವಸತಿ ನಿಲಯದಲ್ಲಿ 150 ಗಂಡು ಮಕ್ಕಳಿಗೆ ವಸತಿ ಕಲ್ಪಿಸಲಾಗಿತ್ತು.ಮೃತ ಮಕ್ಕಳ ದೇಹಗಳನ್ನು ಪೋಷಕರಿಗೆ ಹಸ್ತಾಂತರಿಸಲಾಗಿದೆ. ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ.

ಹತ್ರಾಸ್ ಭೀಕರ ಅಪಘಾತ 12 ಸಾವು

ಹತ್ರಾಸ್ : ಉತ್ತರ ಪ್ರದೇಶ ಹತ್ರಾಸ್‌ನ ರಾಷ್ಟ್ರೀಯ ಹೆದ್ದಾರಿ 93ರಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು 12 ಮಂದಿ ಪ್ರಯಾಣಿಕರು ಸಾವನ್ನಪ್ಪಿದ್ದಾರೆ. 16 ಮಂದಿ ಗಾಯಗೊಂಡಿದ್ದಾರೆ. ಶುಕ್ರವಾರ ಮಿನಿ ಲಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ಸಂಭ ವಿಸಿದೆ. ಸಾವಿನ ಸಂಖ್ಯೆ ಮತ್ತಷ್ಟು ಏರಿಕೆ ಯಾಗುವ ಸಾಧ್ಯತೆ ಇದೆ. ಬಸ್‌ನಲ್ಲಿದ್ದ ಪ್ರಯಾಣಿಕರು ಹತ್ರಾಸ್‌ನಿಂದ ಆಗ್ರಾಕ್ಕೆ ತೆರಳುತ್ತಿದ್ದರು. ಮಿನಿ ಲಾರಿಯಲ್ಲಿದ್ದವರು ಸೇವಾಲ ಗ್ರಾಮಕ್ಕೆ ಹಿಂತಿರುಗುತ್ತಿದ್ದರು. ಓವರ್‌ಟೇಕ್ ಮಾಡುವ ಭರದಲ್ಲಿ ಈ ಅಪಘಾತ ಸಂಭವಿಸಿದೆ ಎಂದು ಹೇಳಲಾಗಿದೆ. ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಮೃತರ ಗುರುತು ಪತ್ತೆಹಚ್ಚುವ ಕಾರ್ಯ ನಡೆಯುತ್ತಿದ್ದು , ಸಿಎಂ ಯೋಗಿ ಆದಿತ್ಯನಾಥ ಅಪಘಾತದ ಮಾಹಿತಿ ಪಡೆದು ಸಂತಾಪ ಸೂಚಿಸಿದ್ದಾರೆ. ಆಸ್ಪತ್ರೆಗೆ ದಾಖಲಾದವರಲ್ಲಿ ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಶೇ.75 ರಷ್ಟು ಮಕ್ಕಳಿಗೆ ಅಂಕಿಗಳೇ ಬರಲ್ಲ

ಚೆನ್ನೈ: ತಮಿಳುನಾಡು ರಾಜ್ಯಪಾಲ ಆರ್ ಎನ್ ರವಿ ಮತ್ತೊಮ್ಮೆ ರಾಜ್ಯದ ಶಿಕ್ಷಣ ವ್ಯವಸ್ಥೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಮಿಳುನಾಡಿನ ಶೇ.75ರಷ್ಟು ವಿದ್ಯಾರ್ಥಿಗಳಿಗೆ 2 ಅಂಕಿ ಗುರುತಿಸಲೂ ಸಾಧ್ಯವಾಗು ತ್ತಿಲ್ಲ ಎಂದು ಹೇಳಿದ್ದಾರೆ.

ರಾಜಭವನದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ರಾಜ್ಯಪಾಲ ರವಿ, 'ರಾಜ್ಯದಲ್ಲಿ ಶೇ.40ರಷ್ಟು ಮಕ್ಕಳಿಗೆ 2ನೇ ತರಗತಿ ಪುಸ್ತಕ ಓದಲೂ ಬರುವುದಿಲ್ಲ. ಶಾಲೆಗಳ ಶಿಕ್ಷಣದ ಗುಣಮಟ್ಟ ತೀವ್ರ ವಾಗಿ ಕುಸಿದಿದೆ. ಇದು ರಾಜ್ಯ ಹಾಗೂ ದೇಶ ಎರಡಕ್ಕೂ ಅಪಾ ಯಕಾರಿ. ಜತೆಗೆ ಶಿಕ್ಷಣ ಸಂಸ್ಥೆಗಳಲ್ಲಿ ಮಾದಕ ವಸ್ತುಗಳ ಹಂಚಿಕೆಯೂ ಕಂಡು ಬಂದಿದೆ' ಎಂದು ರಾಜ್ಯಪಾಲರು ಆರೋಪಿಸಿದ್ದಾರೆ. ಯಾವುದೇ ನಿರ್ಬಂಧಗಳಿಲ್ಲದೇ ವಿದ್ಯಾರ್ಥಿಗಳಿಗೆ ಡಿಗ್ರಿ, ಪ್ರಮಾ ಣಪತ್ರವನ್ನು ನೀಡುತ್ತಿರುವುದು ಯುವಜನತೆಯನ್ನು ನಿರುದ್ಯೋಗಿಗಳು ಹಾಗೂ ಅಪ್ರಯೋಜಕರನ್ನಾಗಿ ಮಾಡುತ್ತಿದೆ. ಬೋಧನೆ, ಕಲಿಕೆ ಯಲ್ಲಿ ಸಮಸ್ಯೆ ಇರುವುದು ಹಾಗೂ ಮಾದಕ ವಸ್ತುಗಳು ವಿದ್ಯಾರ್ಥಿಗಳ ಕೈಗೆ ಸಿಗುತ್ತಿರುವುದನ್ನು ಒಪ್ಪಿಕೊಂಡು ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ರಾಜ್ಯಪಾಲ ಆರ್ ಎನ್ ರವಿ ಸಲಹೆ ನೀಡಿದ್ದಾರೆ. ಈ ಹಿಂದೆ ಕೂಡ ಪಠ್ಯ ಕ್ರಮವನ್ನು ಟೀಕಿಸಿದ್ದರು.

ಮದ್ಯ ಕುಡಿಸಿ ಮಹಿಳೆ ಮೇಲೆ ಅತ್ಯಾಚಾರ

ಉಜ್ಜಯಿನಿ: ಮಹಿಳಾ ಸುರಕ್ಷತೆ ಬಗ್ಗೆ ದೇಶದಲ್ಲಿ ಸಾಕಷ್ಟು ಚರ್ಚೆ ನಡೆಯುತ್ತಿರುವಾಗಲೇ ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ ಹೇಯ ಕೃತ್ಯವನ್ನು ಬೆಳಕಿಗೆ ಬಂದಿದೆ. ಮಹಿಳೆಗೆ ಮದ್ಯ ಕುಡಿಸಿ ವ್ಯಕ್ತಿಯೊಬ್ಬ ಆಕೆಯ ಮೇಲೆ ನಡು ರಸ್ತೆಯಲ್ಲಿ ಅತ್ಯಾಚಾರವೆಸಗಿದ್ದಾನೆ. ಈ ಘಟನೆಯನ್ನ ಕಂಡೂ ಮಹಿಳೆಯನ್ನ ರಕ್ಷಿಸದೇ ದಾರಿಹೋಕನೊಬ್ಬ ವಿಡಿಯೋ ಚಿತ್ರೀಕರಿಸಿದ್ದಾನೆ.

ಸೆ.4ರಂದು ಕೊಯ್ಲಾ ಫಾಟಕ್ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಅತ್ಯಾಚಾರ ನಡೆದ ಘಟನೆಯನ್ನ ವಿಡಿಯೋ ಮಾಡಿದ್ದ ದಾರಿಹೋಕ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾನೆ. ವಿಡಿಯೊ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತ ಪೊಲೀ ಸರು ಆರೋಪಿ ಲೋಕೇಶ್ ಎಂಬುವವನನ್ನ ಬಂಧಿಸಿದ್ದಾರೆ. ಆತ ಅದೇ ಪ್ರದೇಶದಲ್ಲಿ ತಳ್ಳುವ ಗಾಡಿಯಲ್ಲಿ ಹಣ್ಣು ಮಾರಾಟ ಮಾಡುತ್ತಿದ್ದ ಹಾಗೇ ಸಂತ್ರಸ್ತೆ ಚಿಂದಿ ಆಯುವ ಕೆಲಸ ಮಾಡು ತ್ತಿದ್ದಳು ಎಂದು ಹೇಳಲಾಗಿದೆ. ಆರೋಪಿಯು ಮಹಿಳೆಗೆ ಮದುವೆಯಾಗುವುದಾಗಿ ನಂಬಿಸಿ ಮದ್ಯ ಕುಡಿಸಿ ಅತ್ಯಾಚಾ ರವೆಸಗಿದ್ದಾನೆ. ಘಟನೆ ಕಂಡೂ ಮಹಿಳೆಯನ್ನು ರಕ್ಷಿಸದೇ ನಿಂತು ವಿಡಿಯೋ ಮಾಡಿದ್ದು ಆಘಾತಕಾರಿ ಎಂದು ಪೊಲೀಸರು ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

735 ರು. ಖರ್ಚು ಮಾಡಿದ ದರ್ಶನ್

ಬಳ್ಳಾರಿ: ಬಳ್ಳಾರಿ ಸೆಂಟ್ರಲ್ ಜೈಲಿನಲ್ಲಿರುವ ಕೊಲೆ ಆರೋಪಿ ದರ್ಶನ್ ಕಳೆದ ಒಂಬತ್ತು ದಿನದಲ್ಲಿ ಕ್ಯಾಂಟೀನ್‌ನಲ್ಲಿ ಟೀ, ಕಾಫಿಗಾಗಿ 735 ರೂ. ಖರ್ಚು ಮಾಡಿದ್ದಾನೆ. ಜೈಲಿನಲ್ಲಿ ಒತ್ತಡಕ್ಕೆ ಒಳಗಾಗಿರುವ ಆರೋಪಿ ದರ್ಶನ್ ಕಾಫಿ, ಟೀ ಮೊರೆ ಹೋಗಿದ್ದಾನೆ. ದರ್ಶನ್ ಜೈಲಿನ ಖಾಸಗಿ ಖಾತೆಯಲ್ಲಿದ್ದ ಹಣ ಖರ್ಚಾಗಿದೆ. ಪರಪ್ಪನ ಅಗ್ರಹಾರ ಜೈಲಿನಲ್ಲಿ 35,000 ರು. ದರ್ಶನ್‌ನ ಪಿಪಿಸಿ ಖಾತೆಯಲ್ಲಿತ್ತು. ದರ್ಶನ್ ಬಳ್ಳಾರಿ ಜೈಲಿಗೆ ಬಂದ ಬಳಿಕ ಅದೇ ಹಣ ವರ್ಗಾವಣೆ ಆಗಿತ್ತು. ಇದೀಗ ಅದೇ ಹಣದಲ್ಲಿ ಕಾಫಿ, ಟೀ ಗಾಗಿ ಖರ್ಚು ಮಾಡಿದ್ದಾಗಿ ಕ್ಯಾಂಟೀನ್ ಮೂಲಗಳಿಂದ ಮಾಹಿತಿ ಸಿಕ್ಕಿದೆ. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ದರ್ಶನ್ ಆರಂಭದಲ್ಲಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ. ರಾಜಾತಿಥ್ಯ ಆರೋಪದ ಕಾರಣ ಬಳ್ಳಾರಿ ಜೈಲಿಗೆ ಸ್ಥಳಾಂತರಿಸಲಾಗಿದೆ.

ಗೌರಿ ಹಬ್ಬದ ದಿನವೇ ಹೋದ ಲಕ್ಷ್ಮೀ!

ಬೆಂಗಳೂರು: ಅಮೆರಿಕದಲ್ಲಿ ಉದ್ಯೋಗ ಕಡಿತದ ಬಿಸಿಯ ಹಿನ್ನೆಲೆಯಲ್ಲಿ ಜಾಗತಿಕ ಶೇರು ಮಾರುಕಟ್ಟೆಯಲ್ಲಿ ರಕ್ತಪಾತ ಉಂಟಾಗಿದೆ. ಬೆಂಚ್ ಮಾರ್ಕ್ ಶೇರು ಮಾರುಕಟ್ಟೆ ಸೂಚ್ಯಂಕಗಳು ಶುಕ್ರವಾರ ತೀವ್ರ ಕುಸಿತ ಎದುರಿಸಿದವು. ಮಧ್ಯಾಹ್ನದ ವೇಳೆ ಬಿಎಸ್‌ಇ ಸೆನ್ಸೆಕ್ಸ್ 1,070.69 ಪಾಯಿಂಟ್ಸ್ ಕುಸಿದು 81,130.47 ಕ್ಕೆ ತಲುಪಿದ್ದರೆ, ಎನ್‌ಎಸ್‌ಇ

ನಿಫ್ಟಿ 50 314.10 ಪಾಯಿಂಟ್ಸ್ ಕುಸಿದು 24,831 ಕ್ಕೆ ತಲುಪಿದೆ. ಸಣ್ಣ ಮತ್ತು ಮಿಡ್ಕ್ಯಾಪ್ ಶೇರುಗಳು ಸೇರಿದಂತೆ ಇತರ ಮಾರುಕಟ್ಟೆ ಸೂಚ್ಯಂಕಗಳು ತೀವ್ರವಾಗಿ ಕುಸಿದವು. ಸೂಚ್ಯಂಕ ಚಂಚಲತೆಯು ಶೇ.8 ಕ್ಕಿಂತ ಹೆಚ್ಚಾಗಿತ್ತು. ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ (ಬಿಎಸ್‌ಇ) ಪಟ್ಟಿ ಮಾಡಲಾದ ಎಲ್ಲ ಕಂಪನಿಗಳ ಮಾರುಕಟ್ಟೆ ಬಂಡವಾಳ ಸುಮಾರು 5 ಲಕ್ಷ ಕೋಟಿ ರು.ಗಳ ನಷ್ಟ ಅನುಭವಿಸಿದೆ. ರಿಲಯನ್ಸ್ ಇಂಡಸ್ಟ್ರೀಸ್, ಎಸ್‌ಬಿಐ, ಐಸಿಐಸಿಐ ಬ್ಯಾಂಕ್, ಎಲ್ ಟಿ, ಇನ್ಫೋಸಿಸ್, ಐಟಿಸಿ, ಎಚ್ಸಿಎಲ್ ಟೆಕ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಸೂಚ್ಯಂಕದ ಕುಸಿತದಲ್ಲಿ ಅಗ್ರ ಸ್ಥಾನ ಪಡೆದುಕೊಂಡಿದೆ. ರಿಲಯನ್ಸ್ ಶೇರುಗಳು ಶೇಕಡಾ 1.8 ಕ್ಕಿಂತ ಹೆಚ್ಚು ಕುಸಿದರೆ, ಆಕ್ಸಿಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಮತ್ತು ಎಸ್‌ಬಿಐನಂತ ಬ್ಯಾಂಕಿಂಗ್ ಶೇರುಗಳು ತೀವ್ರವಾಗಿ ಕುಸಿದಿವೆ. ದೇಶದ ಅತಿದೊಡ್ಡ ಸಾರ್ವಜನಿಕ ಬ್ಯಾಂಕಿನ ಶೇರುಗಳನ್ನು ಮಾರಾಟ ಮಾಡಲು ಗೋಲ್ಡ್ಮನ್ ಸ್ಯಾಚ್ಸ್ ಮುಂದಾದ ಹಿನ್ನೆಲೆ ಯಲ್ಲಿ ಎಸ್ಬಿಐ ಶೇರುಗಳ ಮೌಲ್ಯ ಶೇ.4 ಕ್ಕಿಂತ ಹೆಚ್ಚು ಕುಸಿತ ಕಂಡಿತು. ನಿಫ್ಟಿ 50ರಲ್ಲಿ ಎಚ್ಸಿ ಎಲ್ಟೆಕ್, ಟಾಟಾ ಮೋಟಾರ್ಸ್, ಐಟಿಸಿ, ಎನ್ಟಿಪಿಸಿ ಮತ್ತು ಬಿಪಿಸಿಎಲ್ ಹೆಚ್ಚು ನಷ್ಟ ಅನುಭವಿಸಿದ ಇತರ ಶೇರುಗಳಾಗಿವೆ.

ಆರೋಗ್ಯ ವಿಮೆಯ ಜಿಎಸ್‌ಟಿ ಪರಿಶೀಲಿಸಿ

ಬೆಂಗಳೂರು: ಆರೋಗ್ಯ ವಿಮೆಯ ಮೇಲಿನ ಶೇ.18 ರಷ್ಟು ಜಿಎಸ್‌ಟಿಯನ್ನು ಮರು ಪರಿಶೀಲಿಸುವಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಒತ್ತಾಯಿಸಿದ್ದಾರೆ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆದಿರುವ ಆರೋಗ್ಯ

ಸಚಿವರು, ಸೆಪ್ಟೆಂಬರ್ 9 ರಂದು ಸಭೆ ಸೇರಲಿರುವ ಜಿಎಸ್‌ಟಿ ಕೌನ್ಸಿಲ್‌ಗೆ, ಮಧ್ಯಮ ಮತ್ತು ಕಡಿಮೆ ಆದಾಯದ ಪಾಲಿಸಿದಾರರಿಗೆ ಆರೋಗ್ಯ ವಿಮೆಯ ಮೇಲಿನ ಶೇ 18ರಷ್ಟು ವಿಧಿಸಿರುವ ತೆರಿಗೆ ಮರು ಪರಿಶೀಲಿಸುವಂತೆ ಶಿಫಾರಸು ಮಾಡಲು ಮನವಿ ಮಾಡಿದ್ದಾರೆ. ಆರೋಗ್ಯ ವಿಮೆ ಮೇಲೂ ಶೇ.18 ರಷ್ಟು ಜಿಎಸ್‌ಟಿ ಹಾಕುವುದು ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದವರ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಹೆಚ್ಚಿನ ತೆರಿಗೆಯಿಂದಾಗಿ ಹೆಲ್ತ್ ಇನ್ಶೂರೆನ್ಸ್ ಪ್ರೀಮಿಯಂ ದುಬಾರಿಯಾಗಿದ್ದು, ಜನಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ಸಿಗುತ್ತಿಲ್ಲ. ಬಹುತೇಕ ಮಧ್ಯಮ ವರ್ಗದವರು ಇಂದು ಆರೋಗ್ಯ ವಿಮೆಗಳಿಂದ ದೂರವೇ ಉಳಿಯುತ್ತಿದ್ದಾರೆ. ವೈದ್ಯಕೀಯ ತುರ್ತು ಪರಿಸ್ಥಿತಿಗಳ ಸಂದರ್ಭಗಳಲ್ಲಿ ಆರೋಗ್ಯ ವಿಮೆಯ ರಕ್ಷಣೆ ಸಿಗದೇ ಇಡೀ ಕುಟುಂಬ ವರ್ಗವೇ ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದನ್ನು ನಾವು ಕಾಣುತ್ತಿದ್ದೇವೆ ಎಂದು ಸಚಿವ ದಿನೇಶ್ ಗುಂಡೂರಾವ್ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕಾಂಗ್ರೆಸ್ ಕುತಂತ್ರಕ್ಕೆ ಹೆದರುವುದಿಲ್ಲ

ಬೆಂಗಳೂರು: ಸಿದ್ದರಾಮಯ್ಯ ರಾಜೀನಾಮೆ ಕೊಡುವ ಪರಿಸ್ಥಿತಿಯನ್ನು ಕಾಂಗ್ರೆಸ್‌ಗೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಬಿಜೆಪಿ ವಿರುದ್ಧ ಪಿತೂರಿಗಳು ನಡೆಯುತ್ತಿವೆ. ಸಂದರ್ಭ ಬಂದಾಗ



ಇದಕ್ಕೆಲ್ಲಾ ಸೂಕ್ತ ಉತ್ತರ ನೀಡುತ್ತೇನೆ. ಆದರೆ, ಅವರ ಯಾವುದೇ ತಂತ್ರ ಕುತಂತ್ರಕ್ಕೂ ನಾವು ಭಯ ಬೀಳುವ ಪ್ರಶ್ನೆಯೇ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಸದಸ್ಯತ್ವ ಅಭಿಯಾನದ ಪ್ರಯುಕ್ತ ಪಕ್ಷದ ಹಿರಿಯ ಮುಖಂಡರು ಮತ್ತು ಮಾಜಿ ಸಚಿವ ರಾಮಚಂದ್ರಗೌಡ ಮನೆಗೆ ಬಿ.ವೈ. ವಿಜಯೇಂದ್ರ ಭೇಟಿ ನೀಡಿ ಸದಸ್ಯತ್ವ ನೀಡಿದರು. ನಂತರ ಮಾತನಾಡಿದ ಅವರು, ಕರೋನಾ ಹಗರಣದ ಆರೋಪ ಮಾಡುವ ಮೂಲಕ ಜನತೆಯ ಗಮನ ಬೇರೆಡೆ ಸೆಳೆಯುವ ಪ್ರಯತ್ನ ನಡೆಸಲಾಗುತ್ತಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಸಂದರ್ಭ ಬಂದಿದೆ ಎಂದು ರಾಜ್ಯದ ಮುಖ್ಯಮಂತ್ರಿಗಳಿಗೆ ಸ್ಪಷ್ಟವಾಗಿದೆ ಎಂದರು.

ಹೈಜಂಪ್‌ನಲ್ಲೂ ಭಾರತಕ್ಕೆ ಚಿನ್ನ | ಹಿಂದೆಂದೂ ಮಾಡಿರದ ಸಾಧನೆ

6 ಚಿನ್ನ: ಹೊಸ ದಾಖಲೆ ಸೃಷ್ಟಿಸಿದ ಭಾರತ

ಬೆಂಗಳೂರು: ಪ್ಯಾರಿಸ್ ಪ್ಯಾರಾಲಿಂಪಿಕ್ಸ್ 2024ರ ಪುರುಷರ ಹೈ ಜಂಪ್ ಟಿ 64 ಸ್ಪರ್ಧೆಯಲ್ಲಿ ಭಾರತದ ಪ್ರವೀಣ್ ಕುಮಾರ್ ಏಷ್ಯನ್ ಗೇಮ್ಸ್ ದಾಖಲೆ ಮುರಿದು ಚಿನ್ನದ ಪದಕ ಗೆದ್ದಿದ್ದಾರೆ. ಪ್ರವೀಣ್ ಹಿಂದಿನ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. ಈ ಮೂಲಕ ಸತತ ಎರಡು ಆವೃತ್ತಿಯಲ್ಲಿ ಪದಕ ಗೆದ್ದ ಸಾಧನೆ ಮಾಡಿದ್ದಾರೆ. ಪ್ಯಾರಿಸ್‌ನಲ್ಲಿ ನಡೆದ ಫೈನಲ್‌ನಲ್ಲಿ 2.08 ಮೀಟರ್ ಎತ್ತರ ಜಿಗಿದು ಅಮೆರಿಕದ ಡೆರೆಕ್ ಲೋಕ್ಸಿಡೆಂಟ್ (2.06 ಮೀ) ಮತ್ತು ಉಜ್ಬೇಕಿಸ್ತಾನದ ತೆಮುರ್ಬೆಕ್ ಗಿಯಾಜೋವ್ (2.03 ಮೀ) ಅವರನ್ನು ಹಿಂದಿಕ್ಕಿ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾರೆ. ಅಂದ ಹಾಗೆ ಪ್ಯಾರಿಸ್ ಭಾರತಕ್ಕೆ ಇದು ಆರನೇ ಪದಕವಾಗಿದೆ. ಇದಕ್ಕೂ ಮುನ್ನ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಐದು ಚಿನ್ನದ ಪದಕಗಳನ್ನು ಗೆದ್ದಿತ್ತು. ಹೀಗಾಗಿ ಭಾರತದ ಅಥ್ಲೀಟ್‌ಗಳು ಪ್ಯಾರಾಲಿಂಪಿಕ್ಸ್‌ನಲ್ಲಿ ಗರಿಷ್ಠ ಸಾಧನೆ ಮಾಡಿದಂತಾಗಿದೆ.

ಭಾರತ ಈಗ ಒಟ್ಟು 26 ಪದಕಗಳನ್ನು ಗೆದ್ದುಕೊಂಡಿದೆ. ಅದರಲ್ಲಿ 6 ಚಿನ್ನದ ಪದಕವಾಗಿದ್ದರೆ 9 ಬೆಳ್ಳಿ ಹಾಗೂ 26 ಚಿನ್ನದ ಪದಕವನ್ನು ಗಳಿಸಿಕೊಂಡಿದೆ. ಪದಕ ಪಟ್ಟಿಯಲ್ಲಿ 14ನೇ ಸ್ಥಾನವನ್ನು ಹೊಂದಿಕೊಂಡಿದೆ.

ಮೊದಲಿಗೆ 1.89 ಮೀಟರ್ ಎತ್ತರದ ದೂರ ಜಿಗಿದ ಕುಮಾರ್ ವಿಶ್ವಾಸ ಮೂಡಿಸಿಕೊಂಡರು. ನಂತರ ಬಾರ್ ಅನ್ನು 2.10 ಮೀಟರ್‌ಗೆ ಏರಿಸಲಾಯಿತು. ಕುಮಾರ್ ಮತ್ತು ಲೊಸಿಡೆಂಟ್ ಇಬ್ಬರೂ ವೇದಿಕೆಯಲ್ಲಿ ಅಗ್ರ ಸ್ಥಾನಕ್ಕಾಗಿ ಹೋರಾಡಿದರು. ಆದರೆ ಈ ಗುರಿ ದಾಟಲು ಸಾಧ್ಯವಾಗಲಿಲ್ಲ. ಆದಾಗ್ಯೂ 2023 ರ ವಿಶ್ವ ಚಾಂಪಿಯನ್ಶಿಪ್ ಕಂಚಿನ ಪದಕ ವಿಜೇತರ ಅಥ್ಲೀಟ್ ಪಾಲಿಗೆ ವೈಯಕ್ತಿಕ ಅತ್ಯುತ್ತಮ ಪ್ರದರ್ಶನವಾಗಿದೆ.

ಶುಕ್ರವಾರ ನಡೆದ ಪುರುಷರ ಎತ್ತರ ಜಿಗಿತ ಟಿ64 ಫೈನಲ್ ಪಂದ್ಯದಲ್ಲಿ ಪ್ರವೀಣ್ ಕುಮಾರ್ 2.08 ಮೀ ದೂರ ಜಿಗಿದು ಚಿನ್ನ ಗೆದ್ದರು. ಇದು ಪ್ರವೀಣ್ ಗೆದ್ದ ಸತತ 2ನೇ ಪ್ಯಾರಾಲಿಂಪಿಕ್ಸ್ ಪದಕವಾಗಿದೆ. ಕಳೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ವೈಯಕ್ತಿಕ ಅತ್ಯುತ್ತಮ 2.07 ಮೀಟರ್ ಗಳೊಂದಿಗೆ ಬೆಳ್ಳಿ ಗೆದ್ದಿದ್ದರು. ಈ ಬಾರಿ ತಮ್ಮದೇ

ದಾಖಲೆಯನ್ನು ಉತ್ತಮಪಡಿಸುದರ ಜತೆಗೆ ಏಷ್ಯನ್ ದಾಖಲೆಯೊಂದಿಗೆ ಚಿನ್ನ ಗೆದ್ದು ಸಂಭ್ರಮಿಸಿದರು. ಈ ಸಾಧನೆಯೊಂದಿಗೆ, ಪ್ರವೀಣ್ ಪ್ಯಾರಿಸ್‌ನಲ್ಲಿ ಪದಕ ಗೆದ್ದ ಮೂರನೇ ಭಾರತೀಯ ಹೈಜಂಪರ್ ಎನಿಸಿಮೊಂಡರು.

ಇದಕ್ಕೂ ಮುನ್ನ ಶರದ್ ಕುಮಾರ್ ಬೆಳ್ಳಿ, ಮರಿಯಪ್ಪನ್ ತಂಗವೇಲು ಪುರುಷರ ಹೈಜಂಪ್ ಟಿ63 ಸ್ಪರ್ಧೆಯಲ್ಲಿ ಕಂಚಿನ ಪದಕ ಜಯಿಸಿದ್ದರು.

ಉತ್ತರ ಪ್ರದೇಶದ ನೋಯ್ಡಾದ 21 ವರ್ಷದ ಅಥ್ಲೀಟ್ ಮರಿಯಪ್ಪನ್ ತಂಗವೇಲು ನಂತರ ಪ್ಯಾರಾಲಿಂಪಿಕ್ ಎತ್ತರ ಜಿಗಿತ ಸ್ಪರ್ಧೆಗಳಲ್ಲಿ ಚಿನ್ನ ಗೆದ್ದ ಎರಡನೇ ಭಾರತೀಯರಾದರು. ಅಮೆರಿಕದ ಡೆರೆಕ್ ಲೊಸಿಡೆಂಟ್ 2.06 ಮೀ ಜಿಗಿತದೊಂದಿಗೆ ಬೆಳ್ಳಿ ಗೆದ್ದರೆ, ಉಜ್ಬೇಕಿಸ್ತಾನದ ತೆಮುರ್ಬೆಕ್ ಗಿಯಾಜೋವ್ 2.03 ಮೀ ಜಿಗಿತದೊಂದಿಗೆ ಕಂಚಿನ ಪದಕ ಪಡೆದರು.

ಸಮಾರೋಪದಲ್ಲಿ ಧ್ವಜಧಾರಿಯಾಗುವ ಹರ್ವಿಂದರ್ ಮತ್ತು ಪ್ರೀತಿ

ಪ್ಯಾರಿಸ್: ಆರ್ಚರಿಯಲ್ಲಿ ಚಿನ್ನ ಗೆದ್ದು ಇತಿಹಾಸ ನಿರ್ಮಿಸಿದ ಹರ್ವಿಂದರ್ ಸಿಂಗ್ ಮತ್ತು ಸ್ಪ್ರಿಂಟರ್ ಪ್ರೀತಿ ಪಾಲ್ ಅವರು ಭಾನುವಾರ ನಡೆಯುವ ಪ್ಯಾರಾಲಿಂಪಿಕ್ಸ್ ಕ್ರೀಡೆಗಳ ಸಮಾರೋಪ ಸಮಾರಂಭದಲ್ಲಿ ಭಾರತದ ಧ್ವಜಧಾರಿಗಳಾಗಿದ್ದಾರೆ. ಪ್ಯಾರಾಲಿಂಪಿಕ್ಸ್‌ಗಳಲ್ಲಿ ಎರಡು ಪದಕ ಗೆದ್ದ ಭಾರತದ ಮೊದಲ ಮಹಿಳಾ ಸ್ಪರ್ಧಿ ಎಂಬ ಹಿರಿಮೆ ಉತ್ತರಪ್ರದೇಶದ ಪ್ರೀತಿ ಅವರದು. 2021ರ ಕ್ರೀಡೆಗಳಲ್ಲಿ ಕಂಚಿನ ಪದಕ ಗೆದ್ದ ಹರ್ವಿಂದರ್ ಈ ಬಾರಿಯ ಕ್ರೀಡೆಗಳಲ್ಲಿ ಚಿನ್ನದ ಪದಕಕ್ಕೆ ಯಶಸ್ವಿಯಾಗಿ ಗುರಿಯಿಟ್ಟು ಚಾರಿತ್ರಿಕ ಸಾಧನೆಗೆ ಪಾತ್ರರಾಗಿದ್ದರು. 'ಸಮಾರೋಪ ಸಮಾರಂಭದಲ್ಲಿ ನನಗೆ ಧ್ವಜಧಾರಿಯಾಗುವ ಅವಕಾಶ ದೊಡ್ಡಗೌರವವಾಗಿದ್ದು, ಇದನ್ನು ಕನಸಿನ ಮನಸ್ಸಿನಲ್ಲೂ ಯೋಚಿಸಿರಲಿಲ್ಲ ಎಂದು 33 ವರ್ಷ ವಯಸ್ಸಿನ ಬಿಲ್ಲುಗಾರ ಹೇಳಿದರು. ನನ್ನ ಮೇಲೆ ನಂಬಿಕೆಯಿಟ್ಟ ಎಲ್ಲರಿಗೂ ಈ ಗೆಲುವನ್ನು ಸಮರ್ಪಿಸುವೆ. ಹಲವರು ತಮ್ಮ ಕನಸನ್ನು ನನಸುಗೊಳಿಸಲು ನನ್ನ ಸಾಧನೆ ಪ್ರೇರಣೆಯಾಗಬಹುದೆಂಬ ವಿಶ್ವಾಸವಿದೆ' ಎಂದು ಹೇಳಿದರು. 23 ವರ್ಷ ವಯಸ್ಸಿನ ಪ್ರೀತಿ, ಮಹಿಳೆಯರ ಟಿ35 ವಿಭಾಗದ 100 ಮತ್ತು 200 ಮೀ. ವಿಭಾಗಗಳಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು. ಅದೂ ತಮ್ಮ ವೈಯಕ್ತಿಕ ಶ್ರೇಷ್ಠ ಸಾಧನೆಯೊಡನೆ. ಕ್ರಮವಾಗಿ 14.21 ಸೆ. ಮತ್ತು 30.1 ಸೆ. ಅವಧಿಯಲ್ಲಿ. 'ಭಾರತದ ಧ್ವಜಧಾರಿಯಾಗಿ ಪ್ರತಿನಿಧಿಸುತ್ತಿರುವುದು ನನಗೊಲಿದ ಅತಿ ದೊಡ್ಡ ಗೌರವ. ಇದು ನನಗೆ ಮಾತ್ರ ದೊಡ್ಡ ಸಂದರ್ಭವಲ್ಲ. ದೇಶಕ್ಕೆ ಹೆಮ್ಮೆ ಮೂಡಿಸಲು ತಮ್ಮಿಂದಾದ ಎಲ್ಲ ಪ್ರಯತ್ನಗಳನ್ನು ನಡೆಸಿದ ಪ್ಯಾರಾ ಅಥ್ಲೀಟುಗಳಿಗೆ ಸಲ್ಲುವ ಗೌರವ' ಎಂದು ಪ್ರೀತಿ ಪ್ರತಿಕ್ರಿಯಿಸಿದ್ದಾರೆ. ಪ್ರೀತಿ ಅವರಿಗೆ ಸ್ನಾಯು ಸಮಸ್ಯೆ, ವೇಗವಾಗಿ ಕೈ, ಕತ್ತು ತಿರುಗಿಸಲು ಆಗದ ತೊಂದರೆಯಿದೆ.

ಶಾಲೆಯ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ

ಸೇಂಟ್ ಜೋಸೆಫ್ ಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಈಜುಗಾರ್ತಿಯಾದ ಸುಚೇತ ಡೆಬ್ ಬರ್ಮನ್ ಅವರನ್ನು ಸನ್ಮಾನಿಸಲಾಯಿತು. ಶಾಲೆಯ ಪ್ರಾಂಶುಪಾಲರಾದ ಫಾದರ್ ರೋಹನ್ ಡಿ ಅಲ್ಮೇಡ , ಸೇಂಟ್ ಜೋಸೆಫ್ ವಿದ್ಯಾಸಂಸ್ಥೆಗಳ ಮುಖ್ಯಸ್ಥರಾದ ಫಾದರ್ ಜೋಸೆಫ್ ಡಿಸೋಜಾ ಇದ್ದರು.

ಬೆಂಗಳೂರು: ನಗರದ ಸೇಂಟ್ ಜೋಸೆಫ್ ಶಾಲೆಯಲ್ಲಿ 2024ನೇ ಸಾಲಿನ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಲಾಯಿತು.

ಸುಚೇತ ಡೆಬ್ ಬರ್ಮನ್ ಅವರು ಕ್ರೀಡಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ತಾನು ಇದೇ ಶಾಲೆಯ ವಿದ್ಯಾರ್ಥಿ ಎಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತೇನೆ. ಸಂತ ಜೋಸೆಫರ ಶಾಲೆಯು ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಭವಿಷ್ಯ ರೂಪಿಸಿಕೊಳ್ಳಲು ಜ್ಞಾನ ಮತ್ತು ಸ್ಫೂರ್ತಿಯನ್ನು ತುಂಬುತ್ತದೆ ಶಾಲೆಯ ಬಗ್ಗೆ ತನಗೆ ಅಪಾರವಾದ ಗೌರವವಿದೆ. ಇದೇ ಶಾಲೆಯ ಆವರಣದಲ್ಲಿ ಹೋರಾಡಿದ ಪ್ರತಿಕ್ಷಣಗಳ ಅನುಭವ ಈಗ ರೋಮಾಂಚಕವೆನಿಸುತ್ತಿದೆ. ಕೆರೆಗಳ ಸ್ವಚ್ಛತೆ ಪ್ಲಾಸ್ಟಿಕ್ ಮುಕ್ತ ಪರಿಸರ ನಮ್ಮದಾಗಬೇಕು. ಅದಕ್ಕಾಗಿ ನಾವು ಕೆರೆಗಳ ನಿರ್ಮಲೀಕರಣದ ಕಡೆ ಗಮನ ಹರಿಸಬೇಕು. ಕೆರೆಗಳಲ್ಲಿ ಈಜುವ ಮೂಲಕ ಪ್ರಕೃತಿಯ ನೈಸರ್ಗಿಕ ಅನುಭವ ಪಡೆಯಬೇಕು. ಗುರು ಹಿರಿಯರನ್ನು ತಂದೆ ತಾಯಿಂದಿರನ್ನು ಪ್ರೀತಿಸಿ ಗೌರವಿಸಬೇಕು. ಬದುಕಿಗೆ ಮೌಲ್ಯಧಾರಿತ ಮಾನವೀಯತೆಯ ಗುಣವನ್ನು ನಮ್ಮಲ್ಲಿ ಬಿತ್ತುವಂತಹ ಕೆಲಸವನ್ನು ಸೇಂಟ್ ಜೋಸೆಫ್ ಶಾಲೆಯು ಮಾಡುತ್ತಾ ಬಂದಿದೆ ಎಂದರು.

ಕ್ರೀಡಾಕೂಟದಲ್ಲಿ ಓಪನ್ ವಾಟರ್ ಸ್ವಿಮ್ ನ ಫೌಂಡೇಶನ್ ಸ್ಥಾಪಕಿ ಹಾಗೂ ಈಜುಗಾರ್ತಿಯಾದ ಸುಚೇತ ಡೆಬ್ ಬರ್ಮನ್ ಅವರು ಆಗಮಿಸಿದ್ದರು. ಶಾಲೆಯ ಪ್ರಾಂಶುಪಾಲರಾದ ಫಾದರ್ ರೋಹನ್ ಡಿ ಅಲ್ಮೇಡ ಎಸ್ ಜೆ , ಸೇಂಟ್ ಜೋಸೆಫ್ ವಿದ್ಯಾಸಂಸ್ಥೆಗಳ ಮುಖ್ಯಸ್ಥರಾದ ಫಾದರ್ ಜೋಸೆಫ್ ಡಿಸೋಜ, ಎಸ್‌ಜೆ, ಶಾಲೆಯ ಖಜಾಂಚಿ ಫಾದರ್ ರಾಯ್ ಸ್ಟೈನ್ ಪಿಂಟೋ ಭಾಗವಹಿಸಿದ್ದರು.

ಸೋಯಾಬೀನ್, ಉದ್ದು ಖರೀದಿ ಪ್ರಕ್ರಿಯೆಗೆ ಚಾಲನೆ

ಬೆಂಬಲ ಬೆಲೆ ಯೋಜನೆಯಡಿ 4 ಬೆಳೆ ಖರೀದಿ: ಶಿವಾನಂದ ಪಾಟೀಲ

ಬೆಂಗಳೂರು: ಎಪಿಎಂಸಿ ಕಾಯಿದೆ ಮರುಸ್ಥಾಪನೆಯಿಂದ ರೈತರಿಗೆ ಹೆಚ್ಚು ಅನುಕೂಲವಾಗಿದ್ದು, ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಏಕಕಾಲದಲ್ಲಿ 4 ಬೆಳೆಗಳನ್ನು ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಖರೀದಿ

ಮಾಡಲಾಗುತ್ತಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಸರುಕಾಳು, ಸೂರ್ಯಕಾಂತಿ, ಸೋಯಾಬಿನ್ ಮತ್ತು ಉದ್ದಿನಕಾಳನ್ನು ಬೆಂಬಲ ಬೆಲೆ ಯೋಜನೆ ಅಡಿ ಖರೀದಿ ಮಾಡಲಾಗುತ್ತಿದೆ. ಸೋಯಾಬಿನ್ ಮತ್ತು ಉದ್ದಿನಕಾಳು ಖರೀದಿ ಪ್ರಕ್ರಿಯೆ ಆರಂಭಿಸಲು ಗುರುವಾರ (ಆ.5) ಆದೇಶ ಹೊರಡಿಸಲಾಗಿದೆ. ಈಗಾಗಲೇ ಹೆಸರುಕಾಳು ಮತ್ತು ಸೂರ್ಯಕಾಂತಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡಲು ರಾಜ್ಯ ಸರಕಾರ ಖರೀದಿ ಏಜನ್ಸಿಗಳನ್ನು ನೇಮಕ ಮಾಡಿದೆ ಎಂದು ಮಾಹಿತಿ ನೀಡಿದರು.

ಪ್ರತಿ ರೈತರಿಂದ ಗರಿಷ್ಠ 15 ಕ್ವಿಂಟಲ್ ಸೂರ್ಯಕಾಂತಿ ಮತ್ತು 10 ಕ್ವಿಂಟಲ್ ಹೆಸರುಕಾಳು ಖರೀದಿ ಮಾಡಲಿದೆ. ಎಫ್‌ಎಕ್ಯೂ ಗುಣಮಟ್ಟದ ಸೋಯಾಬಿನ್‌ಗೆ ಕ್ವಿಂಟಲ್‌ಗೆ 4,892 ರು. ಹಾಗೂ ಉದ್ದಿನ ಕಾಳಿಗೆ ಕ್ವಿಂಟಲ್‌ಗೆ 7,400 ರು. ಬೆಲೆ ನಿಗದಿಪಡಿಸಲಾಗಿದೆ. ಬೆಂಬಲ ಬೆಲೆಯಲ್ಲಿ ಸುಮಾರು 10 ಲಕ್ಷ ಕ್ವಿಂಟಲ್ ಸೋಯಾಬಿನ್ ಮತ್ತು 2 ಲಕ್ಷ ಕ್ವಿಂಟಲ್ ಉದ್ದಿನಕಾಳು ಖರೀದಿ ಮಾಡಲಾಗುವುದು. 2024-25ನೇ ಸಾಲಿನಲ್ಲಿ 4.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 4.72 ಲಕ್ಷ ಮೆಟ್ರಿಕ್ ಟನ್ ಸೋಯಾಬಿನ್ ಹಾಗೂ 0.77 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 0.40 ಲಕ್ಷ ಮೆಟ್ರಿಕ್ ಟನ್ ಉದ್ದಿನಕಾಳು ಇಳುವರಿ ನಿರೀಕ್ಷೆ ಮಾಡಲಾಗಿತ್ತು ಎಂದು ತಿಳಿಸಿದರು.

ಎಫ್‌ಎಕ್ಯೂ ಗುಣಮಟ್ಟದ ಹೆಸರುಕಾಳಿಗೆ ಪ್ರತಿ ಕ್ವಿಂಟಲ್‌ಗೆ 8,682 ರು. ಹಾಗೂ ಸೂರ್ಯಕಾಂತಿಗೆ 7,280 ರು. ನಿಗದಿಪಡಿಸಲಾಗಿದೆ. ಹೆಸರುಕಾಳು ಖರೀದಿಗೆ 172 ಖರೀದಿ ಕೇಂದ್ರ ಗುರುತಿಸಲಾಗಿದ್ದು, 1982 ರೈತರು ನೋಂದಣಿ ಮಾಡಿಸಿಕೊಂಡಿದ್ದಾರೆ. ಸೂರ್ಯಕಾಂತಿ ಖರೀದಿಗೆ 19 ಖರೀದಿ ಕೇಂದ್ರ ಗುರುತಿಸಲಾಗಿದ್ದು, 461 ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಕೊಬ್ಬರಿ ಖರೀದಿಯಲ್ಲೂ ಈ ಬಾರಿ ಪ್ರಮುಖ ಪಾತ್ರ ವಹಿಸಲಾಗಿದ್ದು, ಇದೇ ಮೊದಲ ಬಾರಿಗೆ ಮಿಲ್ಲಿಂಗ್ ಕೊಬ್ಬರಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡಲಾಗಿದೆ ಎಂದು ಸಚಿವ ಶಿವಾನಂದ ಪಾಟೀಲ್ ನುಡಿದರು.

ವಿಜಿಲೆನ್ಸ್ ಸೆಲ್ ರಚನೆ

ಎಪಿಎಂಸಿ ಯಾರ್ಡ್‌ಗಳಲ್ಲಿ 150 ಕೋಟಿ ರು. ವೆಚ್ಚದಲ್ಲಿ 14ರಿಂದ 15 ಶೀತಲಗೃಹಗಳನ್ನು ಎಪಿಎಂಸಿಗಳಲ್ಲಿ ನಿರ್ಮಾಣ ಮಾಡಲಾಗುವುದು. ರಾಜ್ಯದ 4 ಕಂದಾಯ ವಿಭಾಗಗಳಲ್ಲಿ ವಿಭಾಗಾವಾರು ವಿಜಿಲೆನ್ಸ್ ಸೆಲ್‌ಗಳನ್ನು ರಚಿಸಲಾಗಿದೆ. ವಿಜಿಲೆನ್ಸ್ ರಚನೆ ಪರಿಣಾಮ ಎಪಿಎಂಸಿ ಆದಾಯ ಕೂಡ ಹೆಚ್ಚಾಗಿದೆ, ಈ ವರ್ಷ 380 ರಿಂದ 400 ಕೋಟಿ ರು. ಆದಾಯ ನಿರೀಕ್ಷೆ ಮಾಡಲಾಗಿದ್ದು, ಆರ್ಥಿಕ ವರ್ಷದ 5 ತಿಂಗಳಲ್ಲಿ 133.15 ಕೋಟಿ ರು. ಆದಾಯ ಸಂಗ್ರಹವಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 77.42 ಕೋಟಿ ರು. ಆದಾಯ ಸಂಗ್ರಹವಾಗಿತ್ತು ಎಂದರು.

ಜೆರ್ಸಿಯಲ್ಲಿ ಕಂಗೊಳಿಸಿದ ಗಣಪ

ಮುಂಬಯಿ: ಗೌರಿ ಗಣಪತಿ ಹಬ್ಬಕ್ಕೆ ಅಂತಿಮ ಸಿದ್ಧತೆಗಳು ನಡೆಯುತ್ತಿವೆ. ಇಂದು ದೇಶಾದ್ಯಾಂತ ಗಣೇಶ ಚತುರ್ಥಿ ಆಚರಿಸಲಾಗುತ್ತಿದೆ. ಇನ್ನೊಂದೆಡೆ ಕಲಾವಿದನ ಕೌಶಲ್ಯದಿಂದ ರೂಪಿಸಿರುವ ಬಗೆಬಗೆಯ ಗಣಪಗಳು ಎಲ್ಲರನ್ನೂ ಆಕರ್ಷಿಸುತ್ತಿವೆ. ಪ್ರತಿ ವರ್ಷ ಒಂದಲ್ಲ ಒಂದು ವಿಶೇಷ ರೂಪದಲ್ಲಿ ವಿಘ್ನ ನಿವಾರಕ ಕಂಗೊಳಿಸುತ್ತಾನೆ. ಈ ಬಾರಿ ಗಣೇಶ ಭಾರತ ಕ್ರಿಕೆಟ್ ತಂಡದ ಜೆರ್ಸಿಯಲ್ಲಿ ಅವತಾರ ತಾಳಿದ್ದಾನೆ. ಮುಂಬಯಿ ಮೀರಾ ಭಾಯಂದರ್ ಪರಿಸರದಲ್ಲಿ ಈ ಗಣಪ ದರ್ಶನ ನೀಡಲಿದ್ದಾನೆ. ಟೀಮ್ ಇಂಡಿಯಾ ಜೆರ್ಸಿಯಲ್ಲಿರುವ ಗಣಪನ ವಿಗ್ರಹದ ಫೋಟೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಗಣೇಶ ಭಾರತ ಕ್ರಿಕೆಟ್ ತಂಡದ ಜೆರ್ಸಿ ತೊಟ್ಟು, ಕೈಯಲ್ಲಿ ತ್ರಿವರ್ಣ ಧ್ವಜದೊಂದಿಗೆ ಕಂಗೊಳಿಸಿದರೆ, ಗಣೇಶನ ವಾಹನ ಇಲಿ ಟಿ20 ವಿಶ್ವಕಪ್ ಹೊತ್ತುಕೊಂಡಿದೆ. ಮುಂಬೈಯ ಹಲವೆಡೆ ಈ ಟೀಮ್ ಇಂಡಿಯಾ ಗಣೇಶನ ವಿಗ್ರಹಕ್ಕೆ ಭಾರೀ ಬೇಡಿಕೆ ಕಂಡುಬಂದಿದೆ. ಈ ಹಿಂದೆ ಪ್ರಭಾಸ್ ಅಭಿನಯದ 'ಬಾಹುಬಲಿ', ಸುದೀಪ್ ಮತ್ತು ಶಿವರಾಜ್ ಕುಮಾರ್ ನಟನೆಯ 'ದಿ ವಿಲನ್', ಯಶ್ ನಟನೆಯ

'ಕೆಜಿಎಫ್ 2' ಚಿತ್ರಗಳ ಥೀಮ್ ಬಳಸಿಕೊಂಡು ಗಣೇಶ ಮೂರ್ತಿಯನ್ನು ತಯಾರು ಮಾಡಲಾಗಿತ್ತು.

ಭಾರತ ತಂಡ ಇತ್ತೀಚೆಗೆ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಜಂಟಿ ಆತಿಥ್ಯದಲ್ಲಿ ನಡೆದಿದ್ದ ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ಈ ಮೂಲಕ 17 ವರ್ಷಗಳ ಬಳಿಕ 2ನೇ ಟ್ರೋಫಿ ಗೆದ್ದ ಸಾಧನೆ ಮಾಡಿತ್ತು. ಟಿ20 ವಿಶ್ವಕಪ್ ಗೆದ್ದು ತವರಿಗೆ ಮರಳಿದ ಟೀಮ್ ಇಂಡಿಯಾಕ್ಕೆ ಮುಂಬೈನಲ್ಲಿ ಅಭೂತಪೂರ್ವ ಸ್ವಾಗತ ನೀಡಲಾಗಿತ್ತು. ಲಕ್ಷಾಂತರ ಜನರು ಮರೀನ್ ಡ್ರೈವ್ ನಿಂದ ವಾಂಖಡೆ ಕ್ರೀಡಾಂಗಣದ ವರೆಗೆ ಅದ್ದೂರಿ ಮೆರವಣಿಗೆ ನಡೆಸಿ ಸಂಭ್ರಮಾಚರಣೆ ನಡೆಸಿದ್ದರು.

ಗಣೇಶ ಮೂರ್ತಿ ದರ ದುಬಾರಿ: ಬೆಂಗಳೂರು, ಮುಂಬಯಿ ಮೊದಲಾದೆಡೆ ಪಿಒಪಿ ಗಣಪತಿ ಮಾಡದ ಕಾರಣ ಮಣ್ಣಿನ ಬೆಲೆಯೂ ಏರಿಕೆಯಾಗಿದೆ. ಕ್ವಿಂಟಾಲ್‌ಗೆ 110 ರು.ಗೆ ದೊರೆಯುತ್ತಿದ್ದ ಮಣ್ಣು ದರ 160 ರು.ಗೆ ಏರಿದೆ. ಜತೆಗೆ ಬಣ್ಣ, ಸಿಬ್ಬಂದಿ ವೇತನ ಇತ್ಯಾದಿಗಳೂ ಹೆಚ್ಚಾಗಿದೆ. ಹಾಗಾಗಿ ಈ ಬಾರಿ ಗಣಪತಿ ವಿಗ್ರಹ ರಚನೆಯ ಕಾರ್ಯವೂ ತುಸು ದುಬಾರಿ ಎನಿಸುತ್ತಿದೆ.

ನ್ಯೂಸ್ ಪೇಪರ್‌ನಲ್ಲಿಮಾಡಿದ ಗಣೇಶ ಕೂಡ ಈ ಬಾರಿ ಎಲ್ಲರನ್ನೂ ಆಕರ್ಷಿಸುತ್ತಿದೆ. ಕಡಿಮೆ ಬೆಲೆಗೆ ಇದು ಸಿಗುವುದರಿಂದ ಮಕ್ಕಳು ಕೂಡ ಖರೀದಿಗೆ ಮುಗಿ ಬಿದ್ದಿದ್ದಾರೆ. ಈಗಾಗಲೇ ಶಾಲಾ ಕಾಲೇಜುಗಳಲ್ಲಿ ವರ್ಕ್‌ಶಾಪ್ ಆರಂಭಿಸಿ ಕಾಗದದಲ್ಲಿಗಣೇಶನ ಮೂರ್ತಿಯನ್ನು ತಯಾರಿಸಲು ತರಬೇತಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಂಡಿದ್ದಾರೆ. ಕಡಿಮೆ ಬೆಲೆಗೆ ಇದು ಸಿಗುವುದರಿಂದ ಮಾರುಕಟ್ಟೆಯಲ್ಲಿಕಾಗದದ ಮಾದರಿಯ ಗಣೇಶನಿಗೆ ಭರ್ಜರಿ ಬೇಡಿಕೆ ಉಂಟಾಗಿದೆ.

ಅತ್ಯಧಿಕ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದಿಸುವ ಭಾರತ

ಬೆಂಗಳೂರು: ವಾರ್ಷಿಕವಾಗಿ 57 ಮಿಲಿಯನ್ ಟನ್ ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಪ್ಲಾಸ್ಟಿಕ್ ಮಾಲಿನ್ಯಕ್ಕೆ ವಿಶ್ವದಲ್ಲೇ ಭಾರತ ಹೆಚ್ಚಿನ ಕೊಡುಗೆಯನ್ನು ನೀಡುತ್ತಿದೆ. ನೇಚರ್ ಜರ್ನಲ್‌ನಲ್ಲಿ ಪ್ರಕಟವಾದ ಲೀಡ್ಸ್ ವಿಶ್ವವಿದ್ಯಾಲಯದ ಹೊಸ ಅಧ್ಯಯನ ಇದನ್ನು ಬಹಿರಂಗ ಪಡಿಸಿದೆ.

ಜಾಗತಿಕವಾಗಿ ವರ್ಷದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದಿಂದ ನ್ಯೂಯಾರ್ಕ್ ನಗರದ ಸೆಂಟ್ರಲ್ ಪಾರ್ಕ್ ಅನ್ನು ತುಂಬಬಹುದು. ಇದು 157 ಎಂಪೈರ್ ಸ್ಟೇಟ್ ಕಟ್ಟಡದಷ್ಟು ಎತ್ತರವಾಗುತ್ತದೆ. ಈ ಮಾಲಿನ್ಯದ ಸುಮಾರು ಮೂರನೇ ಎರಡರಷ್ಟು ಭಾಗವು ಸಂಗ್ರಹಿಸದ ಮತ್ತು ವಿಲೇವಾರಿ ಮಾಡದ ತ್ಯಾಜ್ಯದಿಂದ ಹುಟ್ಟಿಕೊಂಡಿದೆ. ಯಾಕೆಂದರೆ ಪ್ರಪಂಚದ ಸುಮಾರು ಶೇ. 15ರಷ್ಟು ಜನರು ಸರಿಯಾದ ತ್ಯಾಜ್ಯ ಸಂಗ್ರಹ ಸೇವೆಗಳನ್ನು ಹೊಂದಿಲ್ಲ. ಇದು ನಿರ್ಮಾಣವಾಗುತ್ತಲೇ ಇರುವ ತ್ಯಾಜ್ಯವನ್ನು ಅವ್ಯವಸ್ಥಿತವಾಗಿ ವಿಲೇವಾರಿ ಮಾಡಲು ಪ್ರೇರೇಪಿಸುತ್ತದೆ.

ಹೆಚ್ಚಿನ ಜನಸಂಖ್ಯೆಯ ತ್ಯಾಜ್ಯ ಮತ್ತು ಸರಿಯಾದ ತ್ಯಾಜ್ಯ ನಿರ್ವಹಣೆ ಕೊರತೆಯಿಂದಾಗಿ ಭಾರತವು ಈಗ ವಿಶ್ವದಲ್ಲೇ ಪ್ರಮುಖ ತ್ಯಾಜ್ಯ ಕೊಡುಗೆದಾರನಾಗಿ ಮಾರ್ಪಟ್ಟಿದೆ. ತ್ಯಾಜ್ಯದ ಗಮನಾರ್ಹ ಭಾಗವು ಇನ್ನೂ ಸಂಗ್ರಹವಾಗದೆ ಉಳಿದಿದೆ. ಭಾರತವು ಬಲವಾದ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಕೊರತೆಯನ್ನು ಎದುರಿಸುತ್ತಿದೆ.

ಆರೋಗ್ಯದ ಮೇಲೆ ಪರಿಣಾಮ: ಪ್ಲಾಸ್ಟಿಕ್ ತ್ಯಾಜ್ಯವನ್ನು ಸುಟ್ಟು ಹಾಕುವುದು ಎಲ್ಲರಿಗೂ ಅನುಕೂಲಕರ ದಾರಿಯೆಂದು ತೋರುತ್ತಿದೆ. ಆದರೆ ಸುಮಾರು ಶೇ. 57ರಷ್ಟು ಮಾಲಿನ್ಯವು ಪ್ಲಾಸ್ಟಿಕ್ ತ್ಯಾಜ್ಯ ಸುಡುವುದರಿಂದ ಆಗುತ್ತಿದೆ. ಪರಿಸರ ಮತ್ತು ಆರೋಗ್ಯದ ಪರಿಣಾಮಗಳನ್ನು ಪರಿಗಣಿಸದೆ ಬೀದಿ, ತ್ಯಾಜ್ಯ ವಿಲೇವಾರಿ ಘಟಕ ಮತ್ತು ಮನೆಗಳಲ್ಲಿ ಅವುಗಳನ್ನು ಸುಡಲಾಗುತ್ತದೆ. ಪ್ಲಾಸ್ಟಿಕ್ ಅನ್ನು ಅನಿಯಂತ್ರಿತವಾಗಿ ಸುಡುವುದು ಮಾನವನ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟು ಮಾಡುತ್ತಿದ್ದು, ನರಗಳ ಅಭಿವೃದ್ಧಿ, ಸಂತಾನೋತ್ಪತ್ತಿ ಸಮಸ್ಯೆಗಳಿಗೆ ಕಾರಣವಾಗುತ್ತಿದೆ.

ಅಗ್ರಸ್ಥಾನದಲ್ಲಿದೆ ಭಾರತ

ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆ ಪಟ್ಟಿಯಲ್ಲಿ ಭಾರತವು ಅಗ್ರಸ್ಥಾನದಲ್ಲಿದೆ. ಭಾರತದಲ್ಲಿ 9.3 ಮಿಲಿಯನ್ ಟನ್ ಪ್ಲಾಸ್ಟಿಕ್ ತ್ಯಾಜ್ಯವನ್ನು ಉತ್ಪಾದಿಸುತ್ತದೆ. ಇದು ಚೀನಾ, ನೈಜೀರಿಯಾ ಮತ್ತು ಇಂಡೋನೇಷ್ಯಾದಂತಹ ಹೆಚ್ಚು ಜನ ಸಂಖ್ಯೆ ಇರುವ ದೇಶಗಳಿಗಿಂತ ದ್ವಿಗುಣವಾಗಿದೆ. ಹಿಂದೆ ಚೀನಾವು ಹೆಚ್ಚಿನ ಮಟ್ಟದ ಪ್ಲಾಸ್ಟಿಕ್ ತ್ಯಾಜ್ಯವನ್ನು ಉತ್ಪಾದಿಸಿತು. ಆದರೆ ಈಗ ಈ ನಿಟ್ಟಿನಲ್ಲಿ ಸಾಕಷ್ಟು ಸುಧಾರಣೆ ಕ್ರಮಗಳನ್ನು ಕೈಗೊಂಡಿದೆ. ಪ್ರಸ್ತುತ ಚೀನಾದಲ್ಲಿ 2.8 ಮಿಲಿಯನ್ ಟನ್ ತ್ಯಾಜ್ಯವನ್ನು ಉತ್ಪಾದನೆಯಾಗುತ್ತಿದ್ದು, ಅದರ ಹಿಂದಿನ ದಾಖಲೆಗಳಿಂದ ಗಣನೀಯ ಪ್ರಮಾಣದಲ್ಲಿ ಸುಧಾರಣೆಯಾಗಿದೆ. ತ್ಯಾಜ್ಯವನ್ನು ಸಂಗ್ರಹಿಸುವ ಮತ್ತು ಸಂಸ್ಕರಿಸುವಲ್ಲಿ ಪಟ್ಟುಬಿಡದ ಸುಧಾರಣೆಗಳಿಂದಾಗಿ ಈಗ ಅದು 4 ನೇ ಸ್ಥಾನದಲ್ಲಿದೆ.

ಬೆಂಗಳೂರಿನ ಮಾಗಡಿ ರಸ್ತೆ ಕೊಡಿಗೆಹಳ್ಳಿ ಗ್ರಾಮದಲ್ಲಿರುವ ಪ್ರತಿಷ್ಠಿತ ಶಾಲೆ ನ್ಯೂ ಹಾರ್ಡ್ವಿಕ್ ಇಂಡಿಯನ್ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಶಾಲೆಯ ಆವರಣದಲ್ಲಿ ಆಯೋಜಿಸಿ ಬಹಳ ಸಂಭ್ರಮದಿಂದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೇಂದ್ರೀಯ ಅರ್ಥಶಾಸ್ತ್ರ ಅಧ್ಯಯನ ಮತ್ತು ನೀತಿಯ ಪ್ರೊಫೆಸರ್ ಮತ್ತು ಡೀನ್ ಡಾ. ಕೃಷ್ಣರಾಜ್ ಅವರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಕೇಂದ್ರೀಯ ಗ್ರಾಮೀಣ ಅಭಿವೃದ್ಧಿ ಅಧ್ಯಯನದ ಡಾ. ಎಚ್. ಎನ್ ದೇವಾನಂದ್ ಮತ್ತು ಶಾಲೆಯ ಅಧ್ಯಕ್ಷ ವಿ. ಕೃಷ್ಣಮೂರ್ತಿ ಮತ್ತು ಶಾಲೆಯ ಕಾರ್ಯದರ್ಶಿ ಪೂರ್ಣ ಕೆ.ಕೆ. ಹಾಗೂ ನಿರ್ದೇಶಕಿ ಹೇಮಾವತಿ ಕೆ.ಕೆ ಮತ್ತು ಪ್ರಾಂಶುಪಾಲ ಉಮಾಶಂಕರ್ ಕೆ. ವಿ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮುಂಬೈ ರಾಜನಿಗೆ ಅಂಬಾನಿ 20 ಕೆಜಿ ತೂಕದ ಚಿನ್ನದ ಕಿರೀಟ

ಮುಂಬೈ: ನಗರದ ಪ್ರಖ್ಯಾತ ಲಾಲ್ ಬಾಗ್ಚಾ ಗಣೇಶ ಮೂರ್ತಿಗೆ ಅನಂತ ಅಂಬಾನಿ 20 ಕೆಜಿ ತೂಕದ ಚಿನ್ನದ ಕಿರೀಟವನ್ನು ಉಡುಗೊರೆಯಾಗಿ ನೀಡಿದ್ದಾರೆ. ಈ ಕಿರೀಟದ ಬೆಲೆ ಸುಮಾರು 15 ಕೋಟಿ ರು ಎಂದು ಅಂದಾಜಿಸಲಾಗಿದೆ. ಗಣೇಶ ಚತುರ್ಥಿ ಹಿನ್ನಲೆ ಮಹಾರಾಷ್ಟ್ರದ ಮುಂಬೈ ನಗರ ಅದ್ದೂರಿ ಹಬ್ಬ ಆಚರಣೆಗೆ ಸಿದ್ಧವಾಗಿದ್ದು ಪ್ರಸಿದ್ದ ಲಾಲ್ ಬಾಗ್ಚಾ ಗಣೇಶ ಮೂರ್ತಿ 2024ರ ಮೊದಲ ದರ್ಶನ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಮೆಚ್ಚುಗೆ ಪಡೆದಿದೆ. ಕಳೆದ 15 ವರ್ಷಗಳಿಂದಲೂ ಅನಂತ್ ಅಂಬಾನಿ ಈ ಗಣೇಶ ಮೂರ್ತಿಯ ಜತೆ ಭಾವನಾತ್ಮಕ ಸಂಬಂಧ ಹೊಂದಿದ್ದು ಮದುವೆ ವರ್ಷದ ಸಮಯದಲ್ಲಿ ಅನಂತ ಅಂಬಾನಿ ವಿಶೇಷ ಉಡುಗೊರೆ ನೀಡಿದ್ದಾರೆ.

ಸಂತೋಷದ ಸೂಚ್ಯಂಕದಲ್ಲಿ ಮಾರಿಷಸ್‌ಗೆ ಉನ್ನತ ಸ್ಥಾನ

ಬೆಂಗಳೂರು: ಜಾಗತಿಕ ಮಾನವತಾವಾದಿ ಹಾಗೂ ಆಧ್ಯಾತ್ಮಿಕ ನಾಯಕ ರವಿಶಂಕರ್ ಗುರೂಜಿಯವರು ಈಗ ಮಾರಿಷಸ್ ಗೆ ನಾಲ್ಕು ದಿವಸಗಳ ಪ್ರವಾಸವನ್ನು ಕೈಗೊಂಡಿದ್ದಾರೆ.

ಮಾರಿಷಸ್ ದೇಶದ ಅಧ್ಯಕ್ಷ ಪೃಥ್ವಿರಾಜ್ ಸಿಂಗ್ ರೂಪುನ್ ಮತ್ತು ಪ್ರಧಾನಮಂತ್ರಿ ಪ್ರವೀಣ್ ಕುಮಾರ್ ಜಗನ್ನಾಥ್ ಅವರು ಗುರುದೇವರನ್ನು ಆದರದಿಂದ ಸ್ವಾಗತಿಸಿದರು. ಪ್ರಧಾನಮಂತ್ರಿ ಜತೆ ನಡೆದ ಸಭೆಯಲ್ಲಿ ಗುರುದೇವರು, ಮಾರಿಷಸ್ ನ ಸಂಸ್ಕೃತಿಯ ಸಂರಕ್ಷಣೆಯ ಬಗ್ಗೆ, ಮಾದಕವಸ್ತು-ಮುಕ್ತ ಮಾರಿಷಸ್ ಗುರಿಯನ್ನು ತಲುಪುವ ವಿಚಾರಗಳ ಬಗ್ಗೆ ಚರ್ಚಿಸಿದರು. ಜಗತ್ತಿನ ಸಂತೋಷದ ಸೂಚ್ಯಂಕದಲ್ಲಿ ಮಾರಿಷಸ್‌ಗೆ ಉನ್ನತ ಸ್ಥಾನವಿದೆ ಎಂದು ಗುರುದೇವ್ ಬಣ್ಣಿಸಿದರು.

ಮಾರಿಷಸ್ ಅಧ್ಯಕ್ಷರ ಭೇಟಿ

ಅಧ್ಯಕ್ಷರನ್ನು ಭೇಟಿ ಮಾಡಿದ ಗುರುದೇವರು, ಅವರೊಡನೆ ಯುವ ಸಬಲೀಕರಣದ ಮಹತ್ವದ ಬಗ್ಗೆ, ಒತ್ತಡ ನಿವಾರಣೆ ಕಾರ್ಯಕ್ರಮ ಗಳ ಮೂಲಕ ಸಾಮರಸ್ಯವನ್ನು ಸ್ಥಾಪಿಸುವ ಕುರಿತು ಮಾತನಾಡಿ ದರು. ಇದರ ಜತೆಗೆ ಮಾರಿಷಸ್‌ಗೆ ಆಯುರ್ವೇದದ ಪರಿಚಯ ಹಾಗೂ ಅದು ವ್ಯಾಪಕ ರೀತಿಯಲ್ಲಿ ಪ್ರಭಾವವನ್ನು ಬೀರುವ ಬಗ್ಗೆ ಮತ್ತು ಕೈದಿಗಳ ಪುನಶ್ಚೇತನ ಕಾರ್ಯಕ್ರಮದ ಬಗ್ಗೆಯೂ ಚರ್ಚಿಸಿದರು. ಕೈದಿಗಳ ಪುನಶ್ಚೇತನ ಕಾರ್ಯಕ್ರಮವು ಬಹಳ ಪರಿಣಾಮಕಾರಿಯಾಗಿರುವುದರಿಂದ ಆರ್ಟ್ ಆಫ್ ಲಿವಿಂಗ್ ಮತ್ತು ಮಾರಿಷಸ್ ಸರಕಾರ ಈ ಕಾರ್ಯಕ್ರಮವನ್ನು ಮುಂದುವರಿಸಲು ಪರಸ್ಪರ ಒಡಂಬಡಿಕೆಗೆ ಸಹಿಹಾಕುವ ಸಿದ್ಧತೆಯೂ ನಡೆದಿದೆ.

ಈ ಪುನಶ್ಚೇತನ ಕಾರ್ಯಕ್ರಮಗಳು ಕೈದಿಗಳ ಭಾವನಾತ್ಮಕ ಒತ್ತಡವನ್ನು ನಿವಾರಿಸಿ, ಹಿಂಸಾಪ್ರವೃತ್ತಿಯಿಂದ ಹೊರಬಂದು ಕೈದಿಗಳು ಮತ್ತೆ ಸಮಾಜದ ಮುಖ್ಯವಾಹಿನಿಗೆ ಸೇರುವಂತೆ ಮಾಡುತ್ತದೆ ಎಂದು ಹೇಳಲಾಗಿದೆ. ಗುರುದೇವರು ಇದರ ಬಗ್ಗೆ ಮಾತನಾಡಿ, ಅವರಲ್ಲಿರುವ ನಿಕೃಷ್ಟವಾದ ಗುಣಗಳಿಂದಾಗಿ ಅವರು ಕಾರಾಗೃಹಕ್ಕೆ ಬಂದಿದ್ದಾರೆ, ಆದರೆ ಆಧ್ಯಾತ್ಮಿಕತೆಯು ಅವರಲ್ಲಿರುವ ಅತ್ಯುತ್ತಮ ಗುಣಗಳನ್ನು ಹೊರತರುತ್ತದೆ. ಅವರು ಒಳ್ಳೆಯ ನಾಗರಿಕರಾಗಿ, ಸಮಾಜಕ್ಕೆ ಸಕಾರಾತ್ಮಕವಾದ ರೀತಿಯಲ್ಲಿ ಕಾಣಿಕೆ ನೀಡುತ್ತಾರೆ ಎಂದು ರವಿಶಂಕರ ಗುರುದೇವ್ ವಿವರಿಸಿದರು.

ವಿಶ್ವವಾಣಿ

ನಮ್ಮ ಗಣಪ

vishwavani.news 07.09.2024 ಶನಿವಾರ

ವಿನಾಯಕ ಚೌತಿಯಂದು ಚಿಣ್ಣರ ಪಾಲಿಗೆ ಪ್ರಿಯನಾದ ಗಣೇಶ ಚಿತ್ರ ಬಿಡಿಸಿ ವಾಟ್ಸ್ ಆ್ಯಪ್ ಮಾಡಿ ಎಂಬ ವಿಶ್ವವಾಣಿ ಕರೆಗೆ ಸಾವಿರಾರು ಮಕ್ಕಳು ಸ್ಪಂದಿಸಿದ್ದಾರೆ. ಇನ್ನಷ್ಟೂ ಚಿತ್ರಗಳು ಹರಿದು ಬರುತ್ತಿವೆ. ಪೆನ್ಸಿಲ್ ಸ್ಕೆಚ್, ಬಣ್ಣದ ಚಿತ್ರ ಸೇರಿ ನಾನಾ ಬಗೆಯ ಚಿತ್ರಗಳು ಮಕ್ಕಳ ಕೈಯಲ್ಲಿ ಅರಳಿದ್ದು, ಕೆಲವೊಂದು ಚಿತ್ರಗಳು ನುರಿತ ಕಲಾವಿದರ ಚಿತ್ರಗಳಂತೆ ಮನಮೋಹಕವಾಗಿವೆ. ಗಣಪನ ಹಬ್ಬದಲ್ಲಿ ಪಾಲ್ಗೊಂಡು ಚಿತ್ರಗಳನ್ನು ಕಳುಹಿಸಿಕೊಟ್ಟ ಎಲ್ಲ ವಿದ್ಯಾರ್ಥಿಗಳಿಗೆ, ಅವರನ್ನು ಪ್ರೋತ್ಸಾಹಿಸಿದ ಪೋಷಕರಿಗೆ ಹಬ್ಬದ ಶುಭಾಶಯಗಳು. ಮಕ್ಕಳ ಆಯ್ದ ಚಿತ್ರಗಳನ್ನು ಇಲ್ಲಿ ಪ್ರಕಟಿಸಿದ್ದೇವೆ. ಇನ್ನಷ್ಟು ಚಿತ್ರಗಳು ಸೋಮವಾರದ ಸಂಚಿಕೆಯಲ್ಲಿ ಪ್ರಕಟವಾಗಲಿವೆ.



ವಿಶ್ರುತ ಸಾಮಗ
8ನೇ ತರಗತಿ
ವಿದ್ಯೋದಯ ಪಬ್ಲಿಕ್ ಶಾಲೆ,
ಉಡುಪಿ

ಕಿಶೋರ್ ರಾವ್
7ನೇ ತರಗತಿ
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,
ಹುಣಸೂರು

ಅಭಿಜ್ಞಾ ಭರತ್
6ನೇ ತರಗತಿ
ಪೂರ್ಣ ಚೇತನ ಪಬ್ಲಿಕ್ ಶಾಲೆ ,
ಮೈಸೂರು

ಅನನ್ಯ ವೀರಯ್ಯಸ್ವಾಮಿ
8ನೇ ತರಗತಿ
ಶ್ರೀ ಶೆಟ್ಟಿ ಸಂಗಪ್ಪ ಮೆಮೋರಿಯಲ್ ಸ್ಕೂಲ್,
ಕಲಬುರ್ಗಿ

ಕನಿಷ್ಕಾ
6ನೇ ತರಗತಿ
ವಿದ್ಯೋದಯ ಪಬ್ಲಿಕ್ ಸ್ಕೂಲ್,
ಉಡುಪಿ

ನಿಹಾರ್ ಜಿ ಎಸ್
5ನೇ ತರಗತಿ
ಜಿ ಎಂ ವಿದ್ಯಾನಿಕೇತನ್ ಪಬ್ಲಿಕ್ ಸ್ಕೂಲ್,
ಉಡುಪಿ

ಝೇಂಕಾರ್ ಕೆ.ಟಿ.
3 ನೇ ತರಗತಿ
ಲರ್ನರ್ಸ್ ಗ್ಲೋಬಲ್ ಶಾಲೆ
ಮೈಸೂರು.

ಸಾನ್ವಿ
6ನೇ ತರಗತಿ
ವಿದ್ಯೋದಯ ಪಬ್ಲಿಕ್ ಸ್ಕೂಲ್,
ಉಡುಪಿ

ಸ್ಫಟಿಕ ಬಿ ಆರ್
ಯುಕೆಜಿ
ಗಾರ್ಡಿಯನ್ ಏಂಜಲ್ ಸ್ಕೂಲ್,
ಚಿತ್ರದುರ್ಗ

ಮನಸ್ವಿ
3ನೇ ತರಗತಿ
ವಿನಾಯಕ ಪಬ್ಲಿಕ್ ಸ್ಕೂಲ್,
ಯಲಹಂಕ

ನಿರೀಕ್ಷಾ ಕೆ ಆರ್
6ನೇ ತರಗತಿ
ವಿದ್ಯಾದಾಯಿನಿ ಇಂಗ್ಲೀಷ್ ಮೀಡಿಯಂ ಸ್ಕೂಲ್,
ಸುರತ್ಕಲ್



ಸಂತೋಷ್ ನಾಯ್ಕ್
6ನೇ ತರಗತಿ
ಜಿ ಹೆಚ್ ಪಿ ಎಸ್ ಹೊನ್ನೇನಹಳ್ಳಿ ಶಾಲೆ ,
ನೆಲಮಂಗಲ

ವಿನಮ್ರತಾ ಹೆಚ್
6ನೇ ತರಗತಿ
ವಿದ್ಯಾ ಸಂಸ್ಕಾರ ಇಂಟರ್‌ನ್ಯಾಶನಲ್
ಪಬ್ಲಿಕ್ ಸ್ಕೂಲ್, ಮಾಚೋಹಳ್ಳಿ

ಭಾಮತಿ
7ನೇ ತರಗತಿ
ಅಮೃತಾ ವಿದ್ಯಾಲಯಂ,
ಮೈಸೂರು

ಅದಿತಿ ಚಿಕ್ಕಮಠ
4ನೇ ತರಗತಿ
ಅಮೃತಾ ವಿದ್ಯಾಲಯಂ,
ಬೆಳಗಾವಿ

ಅನ್ವಿತಾ ಆರ್ ಭಟ್
4ನೇ ತರಗತಿ
ಶ್ರೀ ಕುಮಾರನ್ಸ್ ಚಿಲ್ಡ್ರನ್ಸ್
ಅಕಾಡೆಮಿ, ದೊಡ್ಡಕಲಸಂದ್ರ

ಜೀವನ ಅನಿಲ ರಾಥೋಡ
6ನೇ ತರಗತಿ
ಮಾನಸಗಂಗೋತ್ರಿ ಪ್ರಾಥಮಿಕ ಶಾಲೆ ,
ತಿಡಗುಂದಿ

ಆರಾಧ್ಯ ಇನಾಂದಾರ್
4ನೇ ತರಗತಿ
ಆರ್ಕಿಡ್ಸ್ ಇಂಟರ್‌ನ್ಯಾಶನಲ್ ಸ್ಕೂಲ್
ವಿಜಯನಗರ



ಸಿದ್ಧಾರ್ಥ ಜಕ್ಕಳ್ಳಿ
5ನೇ ತರಗತಿ
ಚಿತ್ರಕೂಟ ಶಾಲೆ

ದ್ರುಶಲ್ ಎಂ.ಎಂ.
3ನೇ ತರಗತಿ,
ಬಿಜಿಎಸ್ ವರ್ಲ್ಡ್ ಸ್ಕೂಲ್,
ಚಿಕ್ಕಬಳ್ಳಾಪುರ

ಲಹರಿ ಭಟ್ ಬಾಳಾಪುರ
4ನೇ ತರಗತಿ
ವೀಡಿಯಾ ಪೂರ್ಣಪ್ರಜ್ಞ ಶಾಲೆ,
ಬೆಂಗಳೂರು



ಸೃಜನ್ ಹೆಗಡೆ
5ನೇ ತರಗತಿ
ಹಿಲ್ ರಾಕ್ ನ್ಯಾಶನಲ್ ಪಬ್ಲಿಕ್ ಸ್ಕೂಲ್,
ಬೆಂಗಳೂರು



ರೇವಂತ ವಿ
6ನೇ ತರಗತಿ
ಕೇಂದ್ರೀಯ ವಿದ್ಯಾಲಯ
ತುಮಕೂರು

ಶಾಂತನು ಹಳೇಮನಿ
1ನೇ ತರಗತಿ
ಶ್ರೀರಾಮ ಪಬ್ಲಿಕ್ ಸ್ಕೂಲ್,
ಚಿಕ್ಕಬಿದರಕಲ್ಲು



ರಂಜಿತಾ ಮೇಲಗೇರಿ
7ನೇ ತರಗತಿ
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,
ಹುನಗುಂದ



ರಿಷನ್ ಕೆ ಎಸ್
7ನೇ ತರಗತಿ
ಆಳ್ವಾಸ್ ಇಂಗ್ಲೀಷ್ ಮೀಡಿಯಂ ಶಾಲೆ,
ಮೂಡುಬಿದರೆ

ರಿಷನ್ ಕೆ ಎಸ್
7ನೇ ತರಗತಿ
ಆಳ್ವಾಸ್ ಇಂಗ್ಲೀಷ್ ಮೀಡಿಯಂ ಶಾಲೆ,
ಮೂಡುಬಿದರೆ



ಜೈವೀರ್ ಆನಂದ ವರದ್
4ನೇ ತರಗತಿ
ಶಾರದಾ ವಿದ್ಯಾಲಯ
ಮಂಗಳೂರು



ಸಾನ್ವಿ ಮುರಳೀಧರ
2ನೇ ತರಗತಿ
ಜಿಂದಾಲ್ ಆದರ್ಶ ವಿದ್ಯಾಲಯ,
ಬಳ್ಳಾರಿ



ಪ್ರಣವ್ ಆರ್ ಕರ್ವನಕಲ್ಲು
8ನೇ ತರಗತಿ
ಬಿ ಎ ಆರ್ ಹೆಚ್ ಎಸ್ ಬೋವಿಕಾನ,
ಕಾಸರಗೋಡು

ವಿಶ್ವವಾಣಿ

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

@vishwavaninews

ಬೆಂಗಳೂರು | ಶನಿವಾರ 07 | 09 | 2024

ಚಿತ್ತ ವಿಹಾರ

ಗುರುವಿಗೆ ಪ್ರಥಮ ಪ್ರಣಾಮ

ವಿದ್ಯೆ ಕಲಿಸದ ತಂದೆ, ಬುದ್ಧಿ ಹೇಳದ ಗುರು, ಬಿದ್ದಿರಲು ಬಂದು ನೋಡದ ತಾಯಿಯು ಶುದ್ಧ ವೈರಿಗಳು ಸರ್ವಜ್ಞ. ಈ ವಚನದ ಪ್ರತಿಯೊಂದು ಸಾಲಿನ ದೃಷ್ಟಾಂತವು ನಮ್ಮ ಬದುಕಿನ ತ್ರಿಭುಜದ ಬಾಹುಗಳಾದ ತಂದೆ, ತಾಯಿ ಹಾಗೂ ಗುರುವಿನ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆ. ಶಿಕ್ಷಕ ಅಥವಾ ಗುರುವನ್ನು ನಮ್ಮ ಸಂಸ್ಕೃತಿ,ಶಾಸ್ತ್ರಗಳಲ್ಲಿ ಸಾಕ್ಷಾತ್ ಬ್ರಹ್ಮ,ವಿಷ್ಣು, ಮಹೇಶ್ವರರಿಗೆ ಹೋಲಿಸಿ ಹೇಳಲಾಗಿದೆ. ಗುರು ಎಂದರೆ ಜ್ಞಾನಪ್ರಭೆ. ನಮ್ಮನ್ನು ಅಜ್ಞಾನದಿಂದ

ಜ್ಞಾನದ ಕಡೆಗೆ ಕರೆದೊಯ್ಯುವ ಶಕ್ತಿ.ಗಾಢ ಅಂಧಕಾರದಿಂದ ಬೆಳಕಿನತ್ತ ದೂಡುವ ಶಿಷ್ಟವ್ಯಕ್ತಿ. 'ಗು' ಅಂದರೆ ಕತ್ತಲೆ.'ರು' ಅಂದರೆ ಕಳೆಯತಕ್ಕವ. ಅಜ್ಞಾನದ ಕತ್ತಲೆಯನ್ನು ಕಳೆದು ಸುಜ್ಞಾನದ ಬೆಳಕಿನತ್ತ ಕಳುಹಿಸುವವನೆ ಗುರು. ಪ್ರತಿ ವ್ಯಕ್ತಿಗೂ ಒಬ್ಬ ಗುರು ಇರಲೇಬೇಕು.ಈತ ಎಂದಿಗೂ ತನ್ನ ಶಿಷ್ಯನಿಗೆ ಒಳ್ಳೆಯದನ್ನೇ ಬಯಸುವ ನಿಷ್ಕಾಮ. ಗುರುವಿನ ಮೂಲಕ ನಾವು ಕಲಿತುಕೊಳ್ಳುವ ವಿದ್ಯೆಗೆ ಅಪಾರ ಬೆಲೆ,ಅರ್ಥ ಇರುತ್ತದೆ.

ಗುರು ಎಂದಿಗೂ ಗುರುವೇ. ಗುರುಗಳೇ ನಮ್ಮ ಪಾಲಿನ ದೇವರು.ದೇವರು ಎಲ್ಲೆಂದರಲ್ಲಿ ಯಾವುದೋ ರೂಪದಲ್ಲಿ ನಮಗೆ ಕಾಣಸಿಗುತ್ತಾನೆ. ಆದರೆ ಅದೇ ಗುರು ಸಿಗುವುದು ತುಂಬಾ ವಿರಳ ಹಾಗೂ ಅಪರೂಪ.ಸಮಾಜದಲ್ಲಿ ಅವರ ಘನತೆ,ಗೌರವ ಹಾಗೂ ಸ್ಥಾನಮಾನಗಳು ಯಾವತ್ತೂ ಕುಸಿದು ಬೀಳುವುದಿಲ್ಲ. ಗುರು ಎಂದರೆ ಪಾಠ ಬೋಧಿಸುವವರು ಮಾತ್ರವಲ್ಲ. ಸನ್ಮಾರ್ಗದಲ್ಲಿ ನಡೆಯುವಂತೆ ದಾರಿತೋರುವ ದಿಗ್ದರ್ಶಕ. ಸರಿ, ತಪ್ಪುಗಳ ಕುರಿತು ತಿಳಿಹೇಳಿ ವಿನಯ ಹಾಗೂ ವಿವೇಕಗಳನ್ನು ಹೇಳಿಕೊಡುವ ಬೋಧಕ. ಮೇಲಾಗಿ ವಿದ್ಯಾರ್ಥಿ ಎಂಬ ಕಾಡಗಲ್ಲನ್ನು ಸುಂದರ ಶಿಲೆಯಾಗಿಸುವ ಸ್ಥಪತಿ. ಒಮ್ಮೆ ಸಂತ ಕಬೀರದಾಸರು ತಮ್ಮ ಗುರು ಮತ್ತು ಭಗವಂತನ ಉಪಸ್ಥಿತಿಯನ್ನು ಏಕಕಾಲಕ್ಕೆ ಎದುರಿಸಿದರೆ ಅವರು ತಮ್ಮ ಗುರುಗಳಿಗೆ ಪ್ರಥಮ ಪ್ರಣಾಮಗಳನ್ನು ಹೇಳುವರಂತೆ. ಏಕೆಂದರೆ ಗುರುಗಳ ಮಾರ್ಗದರ್ಶನದ ಮೂಲಕವೇ ಅವರು ದೈವಿಕ ಸಂಪರ್ಕವನ್ನು ಪಡೆದವರು.ಮೊದಲು ನಮ್ಮೆಲ್ಲರ ಬದುಕಿಗೆ ದಾರಿದೀಪವಾದ ಗುರುವಿನ ಪಾವನ ಚರಣಗಳಿಗೆ ಕೃತಜ್ಞತೆ ವ್ಯಕ್ತ ಮಾಡೋಣ. ಗುರುವಿನ ಅಣತಿಯಂತೆ ಉಳಿದ ಜೀವಮಾನವೆಲ್ಲ ಕಳೆಯೋಣ.

● ರಂಗನಾಥ್ ಗುಡಿಮನಿ

ಮತ್ತೆ ಬಂದಿದೆ ಗಣಪನ ಹಬ್ಬ!

ನಾಡಿಗೆ ಮತ್ತೆ ಬಂದಿದೆ ಗಣೇಶನ ಹಬ್ಬ. ಮನೆ ಮನೆಗಳಲ್ಲಿ ಆಚರಿಸುವುದರ ಜತೆಯಲ್ಲೇ, ಸಾರ್ವಜನಿಕವಾಗಿಯೂ ಈ ಹಬ್ಬವನ್ನು ಆಚರಿಸುವುದು ನಮ್ಮ ದೇಶದ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿದೆ.

● ಡಾ.ಜಯಂತಿ ಮನೋಹರ್

ಪ್ರಪಂಚದ ಬಹುಭಾಗಗಳಲ್ಲಿ ನಮ್ಮ ಗಣಪತಿಯನ್ನು ಕಾಣಬಹುದು. ಗಣಪತಿ ಎಂದಾಕ್ಷಣ ಕಣ್ಣ ಮುಂದೆ ಬರುವುದು ಆನೆಯ ಆನನ ಹೊತ್ತ ಪಾರ್ವತಿಯ ಕಂದ ಗಜಮುಖ. ವಿದ್ಯಾಧಿಪತಿಯೂ ವಿಘ್ನನಿವಾರಕನೂ ಆದ ಗಣಪತಿ ಜಾತಿ ಭೇದ ಪಂಥ ಭೇದವಿಲ್ಲದೆ ಪೂಜೆಗೊಳ್ಳುವ ದೇವಾಧಿದೇವ. ಯಾವುದೇ ಪ್ರಮುಖ ಕಾರ್ಯಾರಂಭದಲ್ಲಿಯೂ ಗಣಾಧಿಪತಿಯನ್ನು ನೆನೆಯುವುದು ನಮ್ಮ ಸಂಸ್ಕೃತಿಯ ಪ್ರಮುಖ ಭಾಗವಾಗಿದೆ. ವಿಘ್ನನಿವಾರಕನಾಗಿ ವಿದ್ಯಾಧಿಪತಿಯಾಗಿ ಗಣಾಧಿಪತಿಯ ಆರಾಧನೆ ಭಾರತದಲ್ಲಷ್ಟೇ ಅಲ್ಲದೆ ಸಾಗರದಾಚೆಯ ಅನೇಕ ನಾಡುಗಳಲ್ಲಿ ಕಾಣುತ್ತದೆ. ಗಣಾಧಿಪತಿಗೆ ಬೌದ್ಧ ಪರಂಪರೆಯಲ್ಲಿಯೂ ಪ್ರಮುಖ ಸ್ಥಾನವಿದೆ. ವೇದೋಪನಿಷತ್ತುಗಳಲ್ಲಿ, ಪುರಾಣ ಹಾಗೂ ವಿವಿಧ ಸಾಹಿತ್ಯ – ಕಲಾಪ್ರಕಾರಗಳಲ್ಲಿ ಮತ್ತು ಜಾನಪದ ನೆಲೆಗಳಲ್ಲಿ ಕಂಡುಬರುವ ಗಣಪತಿಯ ಆರಾಧನೆ ವೈಶಿಷ್ಟ್ಯಪೂರ್ಣ.

ಗಣಾನಾಂ ತ್ವಾ ಗಣಪತಿಂ ಹವಾಮಹೇ ಕವಿಂ
ಕವೀನಾಮುಪಮಶ್ರವಸ್ತಮಮ್ ।
ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ಆ ನಃ ಶೃಣ್ವನ್ನೂತಿಭಿಃ
ಸೀದಸಾದನಮ್ ॥ :2.23.1

ಕವಿಗಳಲ್ಲಿ ಶ್ರೇಷ್ಠ ಕವಿ, ದೈವೀ ವಾಕ್ಕಿನ ಒಡೆಯ, ಮಂತ್ರಗಳ ಜ್ಯೇಷ್ಠರಾಜ, ಬ್ರಹ್ಮಣಸ್ಪತಿ, ಮಂತ್ರಗಣಗಳಿಗೆ ಒಡೆಯ ಎಂಬ ಗಣಪತಿಯ ವರ್ಣನೆ ಇರುವ ಋಗ್ವೇದದ ಪ್ರಸಿದ್ಧವಾದ ಈ ಮಂತ್ರವನ್ನು ಯಾಗಗಳಲ್ಲಿ, ಹೋಮಗಳಲ್ಲಿ, ದೇವಾಲಯ ಮತ್ತು ಮನೆಗಳಲ್ಲಿ ನಡೆಯುವ ಆರಾಧನೆಯ ಸಮಯದಲ್ಲಿ ಪಠಿಸುವುದನ್ನು ಕಾಣುತ್ತೇವೆ.

ಅನೇಕ ಆಗ್ನೇಯ ಏಶಿಯಾ ರಾಷ್ಟ್ರಗಳೊಂದಿಗೆ ಪ್ರಸಕ್ತ ಶಕೆ ಒಂದನೇ ಶತಮಾನದಿಂದಲೂ ಭಾರತದ ಸಂಪರ್ಕ ಇದ್ದ ಸಂಗತಿ ತಿಳಿಯುತ್ತದೆ. ಸಮುದ್ರಯಾನದಲ್ಲಿ ವ್ಯಾಪಾರಿಗಳೊಂದಿಗೆ ಪಯಣಿಸುತ್ತಿದ್ದ ಸಾಹಸಿ ಯುವಕರು, ವಿದ್ವಾಂಸರು, ಋಷಿಗಳು ದೂರದೂರದ ನಾಡುಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸಿದರು. ಈಗಲೂ ಕಾಣು ವಂತೆ, ಭಾರತದಲ್ಲಿರುವಂತೆ ಅನೇಕ ಪ್ರದೇಶಗಳಲ್ಲಿ ವಿಘ್ನನಿವಾರಕನಾಗಿ, ಜ್ಞಾನಾಧಿದೇವತೆಯಾಗಿ ಗಣಪನಿಗೆ ಅಗ್ರಪೂಜೆ ಸಲ್ಲುತ್ತದೆ.

ಚೀನಾ ದೇಶದಲ್ಲಿ ದೊರಕಿರುವ ಅತ್ಯಂತ ಪ್ರಾಚೀನ ಗಣೇಶ ಶಿಲ್ಪಗಳೆಂದರೆ ಟುನ್-ಹುವಾಂಗ್ ಎಂಬ ಸ್ಥಳದಲ್ಲಿ ಗುಹೆಗಳ ಬಂಡೆ ಕಲ್ಲಿನ ಮೇಲೆ ಕೆತ್ತಿರುವ ಒಂದು ಶಿಲ್ಪ ಮತ್ತು ಕುಂಗ್ ಸಿಯನ್ ಎಂಬ ಕಡೆ ಗುಹೆಯಲ್ಲಿ ಕೆಳಭಾಗದಲ್ಲಿ ಉಬ್ಬು ಶಿಲ್ಪಗಳಲ್ಲಿರುವ ಮತ್ತೊಂದು ಗಣೇಶ ಮೂರ್ತಿ. ಇದರ ಕಾಲವನ್ನು 6ನೆಯ ಶತಮಾನವೆಂದು ಗುರುತಿಸಲಾಗುತ್ತದೆ.

ಜಪಾನಿನಲ್ಲಿ ಕಾಂಗಿಟೆನ್ – ಶೋಟೆನ್ ಎಂದು ಕರೆಯುವ ಗಣಪತಿಯ 300 ದೇವಾಲಯಗಳು ಟೋಕಿಯೋ ಪ್ರದೇಶದಲ್ಲಿ ಇದ್ದ ಉಲ್ಲೇಖ ದೊರೆಯುತ್ತದೆ. ಒಟ್ಟಿಗೆ ಎರಡು ಮೂರ್ತಿಗಳು ಸೇರಿದಂತಿರುವ ಗಣೇಶ ಇಲ್ಲಿ ಕಾಣುವುದು ವಿಶೇಷ.

ಅಫ್ಘಾನಿಸ್ತಾನದಲ್ಲಿದ್ದ ಭಾರತೀಯ ಸಂಸ್ಕೃತಿಯ ಕುರುಹಾಗಿ 5 ರಿಂದ 7 ನೇ ಶತಮಾನದ ಅವಧಿಯ ಗಣೇಶನ ಮೂರ್ತಿಗಳು ದೊರೆತಿವೆ. ಇಲ್ಲಿನ ಒಂದು ಶಿಲ್ಪ ನಿಂತುಕೊಂಡಿರುವ ಭಂಗಿಯಲ್ಲಿದ್ದು, ಗ್ರೀಕ್ ಮತ್ತು ಭಾರತದ ಶಿಲ್ಪಗಳ ಮಿಶ್ರಣವಾಗಿದೆ. ಬಲಗಾಲನ್ನು ಸ್ವಲ್ಪ ಮುಂದಿಟ್ಟಿರುವ ಈ ಮೂರ್ತಿಯ ತಲೆಯ ಮೇಲೆ ಬಹಳ ಚಿಕ್ಕ ಕಿರೀಟವಿದೆ. ಭಿನ್ನವಾಗಿ ರುವ ಮೂರ್ತಿಗೆ ನಾಲ್ಕು ಕೈಗಳಿತ್ತೆಂದು ತೋರುತ್ತದೆ. ದೊಡ್ಡ ಹೊಟ್ಟೆ ಮತ್ತು ಹಾವಿನ ಯಜ್ಞೋಪವೀತ ಇವೆಲ್ಲವೂ ಸೇರಿ ಬಹಳ ಮಟ್ಟಿಗೆ ಭಾರತದ ಗಣಪನನ್ನೇ ಹೋಲುತ್ತದೆ. ಮತ್ತೊಂದು ವಿಗ್ರಹ ಕಾಬೂಲಿನ ಬಳಿಯಲ್ಲೂ ದೊರೆತಿದೆ.

ಟಿಬೆಟ್‌ನಲ್ಲಿ

ಟಿಬೆಟ್‌ನಲ್ಲಿ ಗಣೇಶನಿಗೆ ದುಷ್ಟ ಶಕ್ತಿಗಳಿಂದ ರಕ್ಷಿಸುವ ದೇವತೆಯೆಂದು ವಿಶೇಷವಾಗಿ ಆರಾಧಿಸುತ್ತಾರೆ.

ಅನೇಕ ದೇವಸ್ಥಾನಗಳ ಮುಖ್ಯದ್ವಾರದ ಮೇಲೆ ಗಣೇಶನ ಮೂರ್ತಿಗಳು ಕಂಡು ಬರುತ್ತವೆ. ಮಹಾಯಾನ ಬೌದ್ಧಧರ್ಮಕ್ಕೆ ಸೇರಿದ ಪ್ಯಾಗ್ಸ್-ಪಾ ಎಂಬ ಭಿಕ್ಷುವೊಬ್ಬನು 13ನೆಯ ಶತಮಾನದಲ್ಲಿ ಟಿಬೆಟ್ ಪಕ್ಕದಲ್ಲಿಯೇ ಇರುವ ಮಂಗೋಲಿಯಾ ದೇಶಕ್ಕೆ ಗಣೇಶ ಮೂರ್ತಿಯನ್ನು ಕೊಂಡೊಯ್ದ ಉಲ್ಲೇಖ ದೊರೆಯುತ್ತದೆ. ಇಲ್ಲಿಯೂ ಗಣೇಶ ನೃತ್ಯ ಭಂಗಿಯಲ್ಲಿದ್ದು, ಮೂಷಿಕ ವಾಹನನಾಗಿ ಒಂದು ಕೈಯ್ಯಲ್ಲಿ ಭಕ್ಷ್ಯಗಳ ಪಾತ್ರೆ ಅಥವಾ ಕಪಾಲವನ್ನು ಹಿಡಿದಿದ್ದಾನೆ. ಮತ್ತೊಂದು ಕೈಯ್ಯಲ್ಲಿ ಶಿವನ ಆಯುಧವಾದ ತ್ರಿಶೂಲವನ್ನೂ, ಮಗದೊಂದು ಕೈಯ್ಯಲ್ಲಿ ಪರಶುವನ್ನೂ ಹಿಡಿದುಕೊಂಡಿರುವುದು ವಿಶೇಷ.

ಶ್ರೀಲಂಕಾದಲ್ಲಿ ಪೊಲೊನ್ನಾರುವಿನಲ್ಲಿರುವ ಶಿವ ದೇವಾಲಯದ ಒಂದು ಕಂಭದ ಮೇಲೆ ನಾಲ್ಕು ಕೈಗಳಿರುವ ಕುಳಿತಿರುವ ಒಂದು ಸುಂದರ ಗಣೇಶ ಮೂರ್ತಿ ಇದೆ. ಕೊಲೊಂಬೋದಿಂದ 150 ಮೈಲಿಯಿರುವ ಕಟಲ್ ಎಂಬ ಹಳ್ಳಿಯ ಸುಬ್ರಹ್ಮಣ್ಯ ದೇವಸ್ಥಾನದಲ್ಲೂ ಗಣೇಶನ ವಿಗ್ರಹವಿದ್ದು ಸಾಕಷ್ಟು ಪ್ರಾಮುಖ್ಯ ಪಡೆದಿದೆ. ಭಾರತದಿಂದ ಬರ್ಮಾಕ್ಕೆ ವ್ಯಾಪಾರಕ್ಕೆಂದು ಹೋದ ವರ್ತಕರು ಬರ್ಮಾ ದೇಶದ ನದೀ ಮುಖಜ ಭೂಮಿಯಲ್ಲಿ ಬಹು ಸಂಖ್ಯೆಯಲ್ಲಿ ನೆಲಸಿದರು. ಅಲ್ಲಿ ಅನೇಕ ಚಿಕ್ಕ ಚಿಕ್ಕ ಗಣೇಶ ಮೂರ್ತಿಗಳು ದೊರೆತಿವೆ. ನೇಪಾಳದ ಕೆಲವು ಗಣೇಶನ ಮೂರ್ತಿಗಳಿಗೆ ಮೂರು ಅಥವಾ ಐದು ಮುಖಗಳು, ಆರು ಅಥವಾ ಹತ್ತು ಕೈಗಳು ಕಂಡು ಬರುತ್ತವೆ.

ಥಾಯ್ ಲ್ಯಾಂಡಿನಲ್ಲಿ ಬೌದ್ಧ ಮತ ತಲುಪುವ ಪೂರ್ವದಲ್ಲಿಯೇ ಗಣೇಶನ ಆರಾಧನೆ ನಡೆಯುತ್ತಿದ್ದ ಉಲ್ಲೇಖವಿದೆ. ಇಲ್ಲಿ ದೊರೆತಿರುವ ಒಂದು ಅಪೂರ್ವ ಕಂಚಿನ ಗಣೇಶನ ಮೂರ್ತಿ ತನ್ನ ಸೊಂಡಿಲನ್ನು ಎಡ ಪಕ್ಕಕ್ಕೆ ತಿರುಗಿಸಿಕೊಂಡಿದೆ. ಯಜ್ಞೋಪವೀತವಾಗಿ ನಾಗನನ್ನು ಧರಿಸಿರುವ ಮೂರ್ತಿ ರತ್ನ ಖಚಿತವಾದ ಮುಕುಟದಿಂದ ಶೃಂಗಾರಗೊಂಡಿದೆ. ಮತ್ತೊಂದು ಮೂರ್ತಿಯನ್ನು ಬ್ಯಾಂಕಾಕಿನ ದೇವಾಲಯದಲ್ಲಿ ಗುರುತಿಸುತ್ತಾರೆ. ಇದರಲ್ಲಿ ಒಂದು ಕಾಲಿನ ಮೇಲೆ ಮತ್ತೊಂದು ಕಾಲನ್ನಿಟ್ಟುಕೊಂಡಿರುವ ಗಣೇಶನ ಭಂಗಿ ವಿಶಿಷ್ಟವಾಗಿದೆ.

ದೊಡ್ಡ ಹೊಟ್ಟೆಯ ಸಂಕೇತ

ವೇದಮಂತ್ರಗಳು, ಬ್ರಹ್ಮಣಸ್ಪತಿ ಬೃಹಸ್ಪತಿ - ಗಣಪತಿ ಎಂಬೆಲ್ಲಾ ಸ್ತುತಿಸುವ ಪರಬ್ರಹ್ಮನ ವಿಶ್ವ ದೈವೀಶಕ್ತಿಯ ಅಗಾಧವಾದ ಸ್ವರೂಪವನ್ನು ಗಣಪನ ದೊಡ್ಡ ಹೊಟ್ಟೆ ಸಂಕೇತಿಸುತ್ತದೆ. ಈ ದೊಡ್ಡ ಹೊಟ್ಟೆಯನ್ನು ಸುತ್ತಿಕೊಂಡಿರುವ ಸರ್ಪ, ಬ್ರಹ್ಮಾಂಡವನ್ನು ವ್ಯಾಪಿಸಿರುವ ಕಾಲಾತೀತನಾದ ಆದಿಶೇಷನನ್ನು ಸಂಕೇತಿಸುತ್ತದೆ. ನಮ್ಮ ರಾಗ ದ್ವೇಷಗಳ ನಿಯಂತ್ರಣವನ್ನು ಗಣಪತಿಯ ಕೈಯಲ್ಲಿರುವ ಪಾಶ-ಅಂಕುಶಗಳು ಸೂಚಿಸುತ್ತವೆ. ಅವನ ಆನೆಯ ಮುಖದಿಂದ ಹೊರಡುವ ಘೀಂಕಾರವೇ 'ಪ್ರಣವ ಓಂಕಾರ'ವಾಗಿ ಗಣಪನ ಇಡೀ ದೇಹವೇ ಓಂಕಾರದ ಸ್ವರೂಪದಲ್ಲಿದೆ ಎಂಬ ಭಾವವನ್ನೂ ತಿಳಿಸುತ್ತಿದೆ.

ಜಾವಾದಲ್ಲಿ

ಇಂಡೋನೇಷಿಯಾದ ಜಾವಾ ದ್ವೀಪದಲ್ಲಿರುವ ಪರಶಿವನ ದೇವಸ್ಥಾನದಲ್ಲಿ ಗಣೇಶನ ವಿಗ್ರಹಗಳು ಪ್ರತಿಷ್ಠಾಪನೆಗೊಂಡಿವೆ. ಇಲ್ಲಿನ ಡಿಯಾಂಗ್ ಪ್ರದೇಶದಲ್ಲಿ ದೊರೆತ ಶಿಲ್ಪದಲ್ಲಿ ನಾಲ್ಕು ಕೈಗಳಿರುವುದು ಕಂಡು ಬಂದಿದೆ. ಗಣಪ ಇಲ್ಲಿ ಕೈಗಳಲ್ಲಿ ದಂತ, ಪರಶು ಹಾಗೂ ಅಕ್ಷಮಾಲೆಯನ್ನು ಹಿಡಿದಿದ್ದಾನೆ. ಕತ್ತಿನಲ್ಲಿ ರತ್ನಹಾರ ಧರಿಸಿರುವ ಈ ಮೂರ್ತಿಯ ತಲೆಯ ಮೇಲೆ ಕಿರೀಟವಿಲ್ಲ. ಇಲ್ಲಿ ಗಣೇಶ ಕಪಾಲಧಾರಿಯಾಗಿರುವುದು ಕಂಡು ಬರುತ್ತದೆ. ಒಂಬತ್ತನೇ ಶತಮಾನದಲ್ಲಿ ನಿರ್ಮಾಣವಾದ 'ಗೋ ಗಜ' ದೇವಾಲಯ ಬಾಲಿಯ ಸಮೀಪವಿರುವ ಉಬುದ್‌ನಲ್ಲಿದೆ. ಈ ದೇಶದಲ್ಲಿ ವ್ಯಾಪಕವಾಗಿ ಕಾಣುವ ಗಣೇಶನ ಆರಾಧನೆಯೊಂದಿಗೆ ಅವರ 20,000 ರುಪಾಯಿಯ ನೋಟಿನ ಮೇಲಿರುವ ಗಣೇಶನ ಚಿತ್ರ ವಿಶೇಷವಾದುದು.

ಜ್ಞಾನ ಪ್ರದಾಯಕ ವಿಘ್ನ ನಿವಾರಕ ಸಾಧಕರಿಗೆ ಮೂಲಾಧಾರ ಚಕ್ರದಲ್ಲಿ ನಿಂತು ಸಾಧನೆಯಲ್ಲಿ ಸಿದ್ಧಿ ಕೊಡುವ ದೇವನಾದ ಪಾರ್ವತಿಯ ಮುದ್ದು ಕುವರ ಗಣಪತಿ ಅಮೆರಿಕ, ಆಸ್ಟ್ರೇಲಿಯಾ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ನಿರ್ಮಾಣವಾಗಿರುವ ಆಧುನಿಕ ದೇವಾಲಯಗಳಲ್ಲಿ ಅಗ್ರಪೂಜೆಗೆ ಭಾಜನನಾಗಿರುವ ಜನಪ್ರಿಯ ದೇವ. ನಮ್ಮ ನಾಡಿನಲ್ಲಂತೂ ಇಂದು ಗಣೇಶನ ಹಬ್ಬದಾಚರಣೆ ಪ್ರಸಿದ್ಧ ಎನಿಸಿದೆ.

ಚೌತಿಗೆ ಚೌಪದಿಗಳು

ಭಕ್ತಪ್ರಿಯ ಹೇ ಗಜಮುಖನೇ
ನಿನಗೆ ನನ್ನ ಮೊದಲ ವಂದನೆ
ಏರಲಿ ನನ್ನ ತಿಂಗಳ ಸಂಪಾದನೆ
ಇಳಿಯಲಿ ನನ್ನವಳು ನೀಡುವ ವೇದನೆ

ಹೊಸ ತಲೆ ಬಂತು ಗಣೇಶನಿಗೆ
ಶಿವನಿಂದ ಅವನ ಸಾವಾದಾಗ
ಹೊಸ ತಲೆ ಇಡಬೇಕೆನಿಸುತ್ತದೆ ನನಗೆ
ತಲೆ ವಿಪರೀತ ನೋವಾದಾಗ!

ಇಲ್ಲವಾಗಿದೆ ಶಾಂತಿ ತೋರುವವರಿಲ್ಲ ಸಿಂಪತಿ
ಆದಮೇಲೆ ಜಗಳಗಂಟಿಯ ಪತಿ
ಮೊದಲೇ ಇದ್ದಿದ್ದರೆ ನನ್ನವಳ ಮಾಹಿತಿ
ಆಗಿಬಿಡುತ್ತಿದ್ದೆ ಬ್ರಹ್ಮಚಾರಿ ಗಣಪತಿ!

● ಡಾ. ವಿಶ್ವನಾಥ ಎನ್ ನೇರಳಕಟ್ಟೆ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್,
ರಾಘವೇಂದ್ರ ಸ್ವಾಮಿ ಮಠದ ಹತ್ತಿರ,
ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ
ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ದಾನ ಸ್ವೀಕರಿಸಲು ತಾನೇ ಬಂದ ಭಗವಂತ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಬ್ಬ ಅಜ್ಜಿ ಕೂಲಿ ಕೆಲಸ ಮಾಡಿ ಕಾಲಯಾಪನೆ ಮಾಡುತ್ತಿದ್ದಳು. ಅವಳ ಬಹಳ ಕಾಲದ ಬಯಕೆ ಸಾಯುವ ಮುನ್ನ ಒಮ್ಮೆ ತಿರುಪತಿಗೆ ಹೋಗಿ ತಿಮ್ಮಪ್ಪನ ದರ್ಶನ ಮಾಡಿ ಬರುವುದು. ಅದಕ್ಕಾಗಿ ಅವಳು ದಿನವೂ ಸಂಪಾದನೆಯ ಒಂದಷ್ಟು ಭಾಗವನ್ನು ಕೂಡಿಡುತ್ತಿದ್ದಳು. ಇನ್ನೇನು ತಿರುಪತಿಗೆ ಹೋಗಲು ಬೇಕಾದಷ್ಟು ಹಣ ಸಂಗ್ರಹವಾಯಿತು ಎನ್ನುವಾಗ, ಆ ಊರಿನಲ್ಲಿ ಹಿಂದೆಂದೂ ಕಂಡರಿಯದ ಕ್ಷಾಮ ಬಂತು. ಮಕ್ಕಳು ಮರಿಗಳು ಹೊಟ್ಟೆಗಿಲ್ಲದೆ ಕಂಗಾಲಾದುವು, ಜಾನುವಾರುಗಳು ಮೇವು ಇಲ್ಲದೆ ಹಸಿವೆಯಿಂದ ಬಳಲುತ್ತಿದ್ದವು.

ಅಜ್ಜಿಗೆ ಯಾಕೋ ತಿರುಪತಿಗೆ ಹೋಗೋದು ಬೇಡ ಅನಿಸಿತು. ಅವಳು ಕೂಡಿಟ್ಟ ಹಣವನ್ನೆಲ್ಲಾ ಖರ್ಚು ಮಾಡಿ ಊರಿಗೆಲ್ಲ ಉಣಬಡಿಸಿದಳು.

ಮತ್ತೆ ಕೆಲವು ವರ್ಷಗಳವರೆಗೆ ಹಣ ಸಂಗ್ರಹಿಸುತ್ತಾ ಇದ್ದಹಾಗೆ ಮತ್ತೊಮ್ಮೆ ಊರಿನಲ್ಲಿ ಕ್ಷಾಮ ಬಂತು. ಮತ್ತೆ ಅಜ್ಜಿ ತನ್ನ ದುಡ್ಡನ್ನೆಲ್ಲ ಖರ್ಚುಮಾಡಿ ಊರವರಿಗೆಲ್ಲ ಉಣಬಡಿಸಿದಳು. ಇದೇ ರೀತಿ ಮೂರನೆಯ ಬಾರಿಯೂ ಆಯಿತು. ಮತ್ತೆ ಅಜ್ಜಿ ಊರವರಿಗೆ ಉಣಬಡಿಸುತ್ತಿದ್ದಾಗ ಯಾರೋ ಅಜ್ಜಿಯನ್ನು ಉದ್ದೇಶಿಸಿ ಹೇಳಿದರು- 'ಅಜ್ಜಿ ನಿನಗೆ ವಯಸ್ಸಾಗುತ್ತಾ ಬಂತು, ಇನ್ನು ನೀನು ದುಡಿದು ಹಣ ಸಂಪಾದನೆ ಮಾಡಲಾರೆ, ಇನ್ನು ಹೇಗೆ ತಿಮ್ಮಪ್ಪನ ದರ್ಶನ ಮಾಡಬಲ್ಲೆ?'

ಅಜ್ಜಿ ಅವನನ್ನು ಹೊರಗೆ ಊಟ ಮಾಡುತ್ತಿದ್ದ ಬಡವರನ್ನು, ಮೇವು ತಿನ್ನುತ್ತಿದ್ದ ಜಾನುವಾರುಗಳನ್ನು ತೋರಿಸಿ ಹೇಳಿದಳು- 'ಹುಚ್ಚಪ್ಪಾ ತಿಮ್ಮಪ್ಪನೇ ಸಾಕ್ಷಾತ್ ನನ್ನ ಮನೆಯಲ್ಲಿ ಊಟ ಮಾಡುತ್ತಿರುವಾಗ, ನಾನು ಅವನನ್ನು ಕಾಣಲು ತಿರುಪತಿಗೆ ಯಾಕೆ ಹೋಗಬೇಕು?' ಎಂದಳು ಮುದುಕಿ ನಗುತ್ತಾ.

ನಾವೆಲ್ಲರೂ ಕೂಡ ಭಗವಂತನನ್ನು ಯಾತ್ರೆಗಳಲ್ಲಿ ದೂರದ ದೇವಸ್ಥಾನಗಳಲ್ಲಿ, ಕಾಣುವ ಪ್ರಯತ್ನ ಮಾಡುತ್ತೇವೆ. ಅವನನ್ನು ಹರಕೆಗಳ ಮೂಲಕ, ಹುಂಡಿಗೆ ಹಾಕುವ ದುಡ್ಡಿನ ಮೂಲಕ ಮೆಚ್ಚಿಸಲು ಪ್ರಯತ್ನಿಸುತ್ತೇವೆ. ಆದರೆ ಎಂದಿಗೆ ನಾವು ಭಗವಂತನನ್ನು ನಮ್ಮ ಸುತ್ತಲಿರುವ ಜೀವಿಗಳಲ್ಲಿ ಕಾಣಲು ಪ್ರಾರಂಭ ಮಾಡುತ್ತೇವೆಯೋ, ಅಂದಿಗೆ ನಾವಿರುವ ಸ್ಥಳವೇ ತೀರ್ಥಕ್ಷೇತ್ರವಾಗುತ್ತದೆ. ಒಮ್ಮೆ ಯೋಚಿಸಿ ನೋಡಿ ಅಗತ್ಯವಿರುವ ಬಡವರಿಗೆ, ಹಸಿವಿನಿಂದ ಬಳಲುತ್ತಿರುವವರಿಗೆ ಹೊಟ್ಟೆ ತುಂಬ ಊಟ ಹಾಕಿದಾಗ ಸಿಗುವ ಸಂತೋಷ ಸಂತೃಪ್ತಿ, ದೇವಾಲಯದಲ್ಲಿ ದೇವರ ಮುಂದೆ ಬಾಗಿದಾಗ ಸಿಗುವ ಸಂತೃಪ್ತಿಯಷ್ಟೇ ಸಮನಾದದ್ದು.

ಭಗವಂತನ ಪೂಜೆ, ಧ್ಯಾನ, ನಮ್ಮ ಸಂಸ್ಕೃತಿ ಸಂಸ್ಕಾರವನ್ನು ಮುಂದುವರಿಸಿಕೊಂಡು ಹೋಗುವುದು ಬಹಳ ಮುಖ್ಯ. ಅದರಲ್ಲಿ ಎರಡು ಮಾತಿಲ್ಲ. ಆದರೆ ಭೂಮಿಯ ಮೇಲೆ ಸಾವಿರಾರು ಮನುಷ್ಯರು ಹಸಿವಿನಿಂದ ಕಂಗೆಟ್ಟು ಕುಳಿತಿರುವಾಗ ಎಲ್ಲವೂ ಇರುವ ಭಗವಂತನಿಗೆ ಚಿನ್ನದ ಕಿರೀಟ, ವಜ್ರ ವೈಢೂರ್ಯಗಳನ್ನ ಸಮರ್ಪಿಸಿ ಕೃತಜ್ಞತಾ ಭಾವದಿಂದ ನಮಿಸುವುದು ಎಷ್ಟು ಸರಿ? ಎನ್ನುವ ಭಾವ ಮೂಡುತ್ತದೆ. ನಾವೆಲ್ಲ ವಿದ್ಯಾವಂತರು, ನಾವು ಯೋಚಿಸುವ ಪರಿಯನ್ನು, ಭೂಮಿಯಲ್ಲಿ ಇದರ ಮನುಷ್ಯರೊಡೆಗೆ ನಮ್ಮ ಧೋರಣೆಯನ್ನು ಸ್ವಲ್ಪ ಬದಲಾಯಿಸಿಕೊಂಡರೂ ಸಾಕಲ್ಲವೇ?

ನಮ್ಮಂತೆ ಒಬ್ಬೊಬ್ಬರು ಈ ರೀತಿ ಮತ್ತೊಬ್ಬರ ಕಷ್ಟಕ್ಕೆ ಸ್ಪಂದಿಸ ತೊಡಗಿದಾಗ ಅದೆಷ್ಟೋ ಜೀವಗಳ ಹಸಿವು ನೀಗುತ್ತದೆ. ಅದೆಷ್ಟು ಜೀವಗಳು ಸಮಾಧಾನದ ನಿಟ್ಟುಸಿರನ್ನು ಬಿಡುವಂತಹಾಗುತ್ತದೆ.

ಇಂತಹ ಒಂದು ಪ್ರಪಂಚವನ್ನು ನಾವೆಲ್ಲರೂ ಸೇರಿ ಕಟ್ಟಬೇಕು. ಇಂದಿನ ದಿನಗಳಲ್ಲಿ ನಾವೆಲ್ಲರೂ ವಿದ್ಯಾವಂತರಾಗಿ, ನಮ್ಮ ಅಜ್ಜಿ ತಾತಂದಿರ ಕಾಲಕ್ಕಿಂತ ಹೆಚ್ಚು ಆರ್ಥಿಕವಾಗಿ ಸಮರ್ಥರಾಗಿದ್ದೇವೆ. ಮೊದಲಿಗಿಂತ ನಮ್ಮ ಖರ್ಚು ವೆಚ್ಚಗಳು ಮತ್ತು ದುಡಿಯುವ ಶಕ್ತಿ ಹೆಚ್ಚಾಗಿದೆ. ಅಂತೆಯೇ ಅನಗತ್ಯ ಖರ್ಚುಗಳು ಕೂಡ ಹೆಚ್ಚಾಗಿವೆ. ಮನೆಯಲ್ಲಿ ಬೇಕು ಬೇಡವೋ ಕಪಾಟಿನ ತುಂಬಾ ಬಟ್ಟೆಗಳ ರಾಶಿ, 100 ರೀತಿಯ ಅಲಂಕಾರಿಕ ವಸ್ತುಗಳು, ತಿನ್ನಲಿ ತಿನ್ನದೇ ಇರಲಿ ತುಂಬು ತುಳುಕುತ್ತಿರುವ ಫ್ರಿಡ್ಜ್. ಇನ್ನಾದರೂ ದುಡಿದ ಹಣವನ್ನು, ಆ ಹಣದಿಂದ ಕೊಳ್ಳುವ ವಸ್ತುಗಳನ್ನು ಹೆಚ್ಚು ಜಾಣ್ಮೆಯಿಂದ ಬಳಸೋಣ. ಕೊಳ್ಳುಬಾಕತನಕ್ಕೆ ಮರುಳಾಗದೆ ಸಂತೃಪ್ತಿಯಿಂದ ಬದುಕಿ ಇತರರಿಗೂ ನೆರವಾಗೋಣ. ಎಲ್ಲರಿಗೂ ಗಣೇಶನ ಹಬ್ಬದ ಹಾರ್ದಿಕ ಶುಭಾಶಯಗಳು.

ಕಲಾವಿದನ ಕೈಯಲ್ಲಿ ಗಣಪತಿ

ಕಲಾವಿದರೂ, ಬ್ಯಾಂಕ್ ಉದ್ಯೋಗಿಯೂ ಆಗಿರುವ ಇವರು ಮಣ್ಣಿನ ಗಣಪತಿ ಮೂರ್ತಿ ರಚಿಸಿ, ಆಸಕ್ತರಿಗೆ ನೀಡುವುದು ವಿಶೇಷ ಎನಿಸುತ್ತದೆ.

● ನರೇಂದ್ರ ಎಸ್ ಗಂಗೊಳ್ಳಿ

ಚೌತಿ ಹಬ್ಬದ ಸಮಯದಲ್ಲಿ ಉಡುಪಿ ಜಿಲ್ಲೆ ಕುಂದಾಪುರ ತಾಲೂಕಿನ ಗಂಗೊಳ್ಳಿ ಗ್ರಾಮಕ್ಕೆ ಬಂದು ರಥ ಬೀದಿಯ ಪಕ್ಕದ ರಸ್ತೆಯಲ್ಲಿ ಇಣುಕಿದರೆ, ಸಂಗೀತ ನಿರ್ದೇಶಕ ಗುರುಕಿರಣ್ ಗಣಪತಿಯ ಮೂರ್ತಿಯನ್ನು ತಯಾರು ಮಾಡುತ್ತಿದ್ದಾರಾ ಎನ್ನುವ ಭ್ರಮೆಗೆ ಒಳಗಾಗುತ್ತೀರಿ. ಥೇಟ್ ಅವರನ್ನೇ ಹೋಲುವ ವ್ಯಕ್ತಿಯೊಬ್ಬರು ಅಲ್ಲಿ ನಿಮಗೆ ಕಾಣ ಸಿಗುತ್ತಾರೆ. ಅವರು ಗಣಪತಿಯ ಮೂರ್ತಿ ತಯಾರಿಸುತ್ತಾರೆ!

ಗಂಗೊಳ್ಳಿಯ ನಾಗರಾಜ್ ಖಾರ್ವಿ ಅವರು ಕಳೆದ 22 ವರ್ಷಗಳಿಂದ ಈ ಭಾಗದಲ್ಲಿ ಗಣಪತಿ ಮೂರ್ತಿಯ ರಚನೆಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ವೃತ್ತಿಯಲ್ಲಿ ಬ್ಯಾಂಕ್ ಉದ್ಯೋಗಿ; ಬಿಡುವಿನ ವೇಳೆಯಲ್ಲಿ ಕಲಾ ರಂಗದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಇವರು, ಜೇಡಿ ಮಣ್ಣಿನಿಂದ ಗಣಪತಿ ಮೂರ್ತಿ ತಯಾರಿಸುತ್ತಾರೆ! ಆರಂಭದಲ್ಲಿ ಎರಡು ಮೂರ್ತಿಗಳ ರಚನೆಯಿಂದ ಆರಂಭಗೊಂಡ ಈ ಕಾರ್ಯ ಇದೀಗ ವರ್ಷಕ್ಕೆ 18 ಭಿನ್ನ ಗಾತ್ರದ ವಿವಿಧ ರೀತಿಯ ಮೂರ್ತಿಗಳನ್ನು ನಿರ್ಮಾಣ ಮಾಡುವಷ್ಟು ಜನಪ್ರಿಯತೆಯನ್ನು ಗಳಿಸಿಕೊಂಡಿದೆ.

ಎರಡು ತಿಂಗಳ ಹಿಂದಿನಿಂದಲೇ ಮೂರ್ತಿಗಳ ತಯಾರಿಯಲ್ಲಿ ಪಡೆದುಕೊಳ್ಳುವ ಇವರು ನೈಸರ್ಗಿಕ ಬಣ್ಣವನ್ನೇ ಬಳಸುತ್ತಾರೆ. ಈ ಮೂರ್ತಿಗಳ ರಚನೆಯಿಂದ ಮನಸ್ಸಿಗೆ ವಿಶೇಷ ಆನಂದ ನೆಮ್ಮದಿ ಸಿಗುತ್ತದೆ. ಅದಕ್ಕಿಂತ ದೊಡ್ಡದು ಯಾವುದು ಇಲ್ಲ ಎಂದು ಅಭಿಪ್ರಾಯ ಪಡುವ ನಾಗರಾಜ್ ಅವರು ಕುಂದಾಪುರದ ಖ್ಯಾತ ನಾಟಕ ತಂಡವಾದ ರೂಪಕಲಾ ದಲ್ಲಿ ಕಲಾವಿದರಾಗಿ ನಟಿಸಿ ಜನ ಮೆಚ್ಚುಗೆ ಪಡೆದುಕೊಂಡಿದ್ದಾರೆ. ವೇದಿಕೆಯಲ್ಲಿ ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್‌ರನ್ನು ಹಾವ ಭಾವಗಳಲ್ಲಿ ಅನುಸರಿಸುವ ಇವರು ಅವರ ಶೈಲಿಯಲ್ಲೇ ಹಾಡುವುದನ್ನು ರೂಢಿಸಿಕೊಂಡಿದ್ದಾರೆ.

ಪ್ರತಿ ವರ್ಷ ಹತ್ತಾರು ಗಣಪತಿ ಮೂರ್ತಿ ತಯಾರಿಸಿ, ಆಸಕ್ತರಿಗೆ ನೀಡುವುದು ಇವರ ಹವ್ಯಾಸ.

ಪ | ದ | ಬಂ | ಧ



ಎಡದಿಂದ ಬಲಕ್ಕೆ

1. ಬೇರೆಯವರಿಂದ ಪಡೆದ ಸಾಲ (4)
3. ನಳಿಕೆಯೊಳಗೆ ಹಾಕಿದರೂ ನೆಟ್ಟಗೆ ಆಗದಿರುವುದು (4)
6. ಗರ್ಭಿಣಿಗೆ ಉಂಟಾದ ಹಂಬಲ (3)
8. ಕಣ್ಣಿನಿಂದ ಸುರಿದ ಅಶ್ರು (3)
10. ಸಣ್ಣದೊಂದು ಸರೀಸೃಪ, ಗೌಳಿ (2)
11. ವಿಧಿ ಬರಹ ಬರೆದಿರುವ ಹಣೆ (3)
12. ಸಣ್ಣದಾದ ಬಾಗಿಲು (2)
13. ದಿವಸವೂ ಬಳಸುವ ಧಾನ್ಯ (3)
15. ಕೈ ಅಥವಾ ಕಾಲಿಗೆ ಹಾಕಿಕೊಳ್ಳುವ ಬಳೆ (3)
19. ಶುಭಸಮಯದಲ್ಲಿ ಉಡುವ ಜೋಡಿವಸ್ತ್ರ (4)
20. ಮೋಸಕ್ಕೆ ಮತ್ತೊಂದು ಹೆಸರು (4)

ಎಡದಿಂದ ಬಲಕ್ಕೆ

1. ಕಾಲಿಗೆ ಹಾಕಿಕೊಳ್ಳುವ ಚಪ್ಪಲಿ (3)
2. ಗಟ್ಟಿಮುಟ್ಟಾದ ದೇಹವನ್ನು ಹೀಗೆ ಹೇಳಬಹುದು (4)
4. ತಲೆಕೆಳಗಾಗಿ ಬಂದವನು ಅಶಕ್ತ (4)
5. ರಾಮನ ಜೊತೆಗೆ ಕಾಡಿಗೆ ಹೋದ ಸಹೋದರ (3)
6. ಬಡವನಲ್ಲ, ಶ್ರೀಮಂತ (3)
7. ಮಾಡುವ ಕಾರ್ಯ (3)
8. ವಿಪತ್ತಿಗೆ ಮತ್ತೊಂದು ಹೆಸರು (3)
9. ನಿಶ್ಚಯ ಇಲ್ಲಿ ಅಸ್ತವ್ಯಸ್ತವಾಗಿದೆ (3)
14. ವನಮಾಲೆಯನ್ನು ಧರಿಸಿದವನು (4)
16. ಒಂದು ಬಗೆಯ ಚರ್ಮವಾದ್ಯ (4)
17. ಕೊನೆಗೆ ಅನುಸ್ವಾರ ಹೊಂದಿರುವ ಕಾಗೆ (3)
18. ನೀರಿನ ಚಿಲುಮೆ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ

1. ಶೋಚನೀಯ 3. ತಲ್ಲಣ 4. ಪ್ರಸವ 5. ಮಾಧವ 6. ಕರಟು 8. ಕಂದಕ 10. ಧರಣಿಪ 12. ನವನಿಧಿ 14. ನರಕ 16. ಪಂಕಜ 18. ಸರಕು 19. ಠರಾವು 20. ಸಮೀರ 21. ಆದಿಶೇಷ

ಮೇಲಿನಿಂದ ಕೆಳಕ್ಕೆ

2. ನೀರವ 3. ತವಕ 4. ಪ್ರಮಾದ 5. ಮಾಗಧ 7. ರದನಿ 8. ಕಂಪನ 9. ಕನಕ 11. ರಕ್ಷಕ 13. ಧಿಮಾಕು 15. ರಹವು 17. ಜಠರ 18. ಸನಾದಿ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಸಮಾಚಾರ ಸಣ್ಣದಲ್ಲ

ವಿಜಯಪುರ ಸೈಕ್ಲಿಸ್ಟ್‌ಗಳ ಸಾಧನೆ

ವಿಜಯಪುರ: ತಮಿಳುನಾಡಿನ ಚೆನ್ನೈನಲ್ಲಿ ಆ.31ರಿಂದ ಸೆ.1ರವರೆಗೆ ನಡೆದ ಖೇಲೋ ಇಂಡಿಯಾ ಮಹಿಳಾ ಲೀಗ್ ರೋಡ್ ಸೈಕ್ಲಿಂಗ್ ಸ್ಪರ್ಧೆಯಲ್ಲಿ ವಿಜಯಪುರದ 07 ಮಹಿಳಾ ಸೈಕ್ಲಿಸ್ಟ್‌ಗಳು ಸಾಧನೆ ಮಾಡಿ ಪದಕ ಪಡೆದಿದ್ದು, ಅವರ ಸಾಧನೆಗೆ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಅಭಿನಂದನೆ ಸಲ್ಲಿಸಿದ್ದಾರೆ. ಖೇಲೋ ಇಂಡಿಯಾ ಮಹಿಳಾ ಲೀಗ್ ರೋಡ್ ಸೈಕ್ಲಿಂಗ್ ಕಿರಿಯ ಬಾಲಕಿಯರ ವಿಭಾಗದಲ್ಲಿ ಕೋಕಿಲಾ ಚವ್ಹಾಣ (ಬಂಗಾರ), ಜ್ಯೋತಿ ರಾಠೋಡ (ಬೆಳ್ಳಿ) ಹಾಗೂ ದೀಪಿಕಾ ಫಡತರೆ (ಕಂಚು) ಪಡೆದಿದ್ದಾರೆ. ಕಿರಿಯ ಮಹಿಳಾ ವಿಭಾಗದಲ್ಲಿ ಪಾಯಲ್ ಚವ್ಹಾಣ (ಬಂಗಾರ) ಹಾಗೂ ಆರಾಧನಾ ಸಂತೋಷ (ಬೆಳ್ಳಿ), ಅಕ್ಷತಾ ಭೂತನಾಳ ಹಾಗೂ ಅಕ್ಷತಾ ಬಿರಾದಾರ (ಕಂಚು) ಪಡೆದಿದ್ದಾರೆ. ಸೈಕ್ಲಿಂಗ್ ತರಬೇತಿದಾರರಾದ ಅಲಕಾ ಎನ್.ಫಡತರೆ, ಅನಂತ ದೇಸಾಯಿ, ಖೇಲೋ ಇಂಡಿ ತರಬೇತಿದಾರರಾದ ರಮೇಶ ರಾಠೋಡ ಮತ್ತು ಕಚೇರಿ ಅಧೀಕ್ಷಕ ಎಸ್.ಬಿ.ಕಡಕಲ್ ಅವರು ಹಾಜರಿದ್ದರು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಕೇವಲ 10ರನ್‌ಗೆ ಮಂಗೋಲಿಯಾ ಆಲೌಟ್

ಬಾಂಗಿ: ಸಿಂಗಪುರ ವಿರುದ್ಧ ನಡೆದ ಟ್ವೆಂಟಿ-20 ಅಂತಾರಾಷ್ಟ್ರೀಯ ಪಂದ್ಯದಲ್ಲಿ ಮಂಗೋಲಿಯಾ ಕೇವಲ 10 ರನ್ನಿಗೆ ಆಲೌಟ್ ಆಗಿದೆ. ಮಲೇಷ್ಯಾದಲ್ಲಿ ನಡೆದ ಟ್ವೆಂಟಿ-20 ವಿಶ್ವಕಪ್ ಏಷ್ಯಾ ಅರ್ಹತಾ ಸುತ್ತಿನ 'ಎ' ಗುಂಪಿನ ಪಂದ್ಯದಲ್ಲಿ ಈ ಫಲಿತಾಂಶ ದಾಖಲಾಯಿತು. ಈ ಗುರಿ ಬೆನ್ನಟ್ಟಿದ ಸಿಂಗಪುರ ಒಂದು ವಿಕೆಟ್ ನಷ್ಟಕ್ಕೆ ಕೇವಲ ಐದು ಎಸೆತಗಳಲ್ಲಿ ಗೆಲುವು ದಾಖಲಿಸಿತು. ಇದು ಟ್ವೆಂಟಿ-20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತಂಡವೊಂದರಿಂದ ದಾಖಲಾದ ಕನಿಷ್ಠ ಮೊತ್ತವಾಗಿದೆ. ಕಳೆದ ವರ್ಷ ಸ್ಪೇನ್ ವಿರುದ್ಧ ಐಲ್ ಆಫ್ ಮ್ಯಾನ್ ತಂಡ ಕೂಡ ಕೇವಲ 10 ರನ್ನಿಗೆ ಆಲೌಟ್ ಆಗಿತ್ತು. ಸಿಂಗಪುರದ ಪರ ಹರ್ಷ ಭಾರದ್ವಾಜ್ ನಾಲ್ಕು ಓವರ್‌ಗಳಲ್ಲಿ ಕೇವಲ ಮೂರು ರನ್ನಿಗೆ ಆರು ವಿಕೆಟ್ ಕಬಳಿಸಿದರು.

ವಿರಾಮ
ಪ್ರತಿ ಭಾನುವಾರ

ದೀರ್ಘಾವಧಿ ಬಳಿಕ ರಾಜಸ್ತಾನ್ ತಂಡಕ್ಕೆ ಮರಳಿದ ದ್ರಾವಿಡ್ | ಹಲವು ವರ್ಷಗಳ ಒಪ್ಪಂದಕ್ಕೆ ಸಹಿ

ಸಂಗಕ್ಕಾರ ಆರ್‌ಆರ್‌ಗೆ ನಿರ್ದೇಶಕ

ಮುಂಬೈ: ಟೀಮ್ ಇಂಡಿಯಾ ಮಾಜಿ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರನ್ನು ಐಪಿಎಲ್‌ನ ರಾಜಸ್ಥಾನ ರಾಯಲ್ಸ್ ತಂಡದ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ. ಹಲವು ವರ್ಷಗಳ ಒಪ್ಪಂದಕ್ಕೆ ದ್ರಾವಿಡ್ ಸಹಿ ಹಾಕಿದ್ದಾರೆ ಎಂದು ಫ್ರಾಂಚೈಸಿ ಶುಕ್ರವಾರ ಅಧಿಕೃತ ಪ್ರಕಟಣೆ ಬಿಡುಗಡೆ ಮಾಡಿದೆ.

ರಾಜಸ್ಥಾನ ರಾಯಲ್ಸ್ ತಂಡದ ಮಾಜಿ ನಾಯಕ ಮತ್ತು ಮಾಜಿ ಕೋಚ್ ರಾಹುಲ್ ದ್ರಾವಿಡ್ ಅವರು, 2011ರಿಂದ 2015ರವರೆಗೆ ಐದು ವರ್ಷಗಳ ಕಾಲ ನಮ್ಮ ಜತೆ ಕೆಲಸ ಮಾಡಿದ್ದಾರೆ. ಈಗ ಮತ್ತೆ ಫ್ರಾಂಚೈಸಿಯ ಎಲ್ಲ ಕ್ರಿಕೆಟ್ ಕಾರ್ಯತಂತ್ರಗಳನ್ನು ಕಾರ್ಯಗತಗೊಳಿಸಲು ಸದ್ಯದಿಂದಲೇ ತಂಡದ ಕ್ರಿಕೆಟ್ ನಿರ್ದೇಶಕರಾದ ಕುಮಾರ ಸಂಗಕ್ಕರ ಕತೆ ಕೆಲಸ ಮಾಡಲಿದ್ದಾರೆ ಎಂದು ಫ್ರಾಂಚೈಸಿ ಪ್ರಕಟಣೆಯಲ್ಲಿ ತಿಳಿಸಿದೆ.

2014ರಲ್ಲಿ ರಾಜಸ್ಥಾನ ರಾಯಲ್ಸ್ ಕೋಚ್ ಆಗಿದ್ದ ದ್ರಾವಿಡ್, ಬಳಿಕ ಭಾರತದ 19 ವರ್ಷದೊಳಗಿನವರ ತಂಡ, ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಕೋಚ್ ಮತ್ತು ಭಾರತ ಕ್ರಿಕೆಟ್ ತಂಡದ ಕೋಚ್ ಆಗಿ ಕೆಲಸ ಮಾಡಿದ್ದಾರೆ. ಟಿ-20 ವಿಶ್ವಕಪ್ ಸರಣಿಗೆ ಟೀಮ್ ಇಂಡಿಯಾ ಮುಖ್ಯ ಕೋಚ್ ಆಗಿ ರಾಹುಲ್ ದ್ರಾವಿಡ್ ಅವರ ಅವಧಿ ಅಂತ್ಯವಾಗಿತ್ತು.

ಈ ಹಿಂದೆ ನನ್ನ ತವರು ತಂಡ ಎಂದು ಕರೆಯುತ್ತಿದ್ದ ರಾಜಸ್ಥಾನ್ ರಾಯಲ್ಸ್ ತಂಡಕ್ಕೆ ಮರಳುತ್ತಿರುವುದಕ್ಕೆ ತುಂಬಾ ಸಂತೋಷವಾಗುತ್ತಿದೆ. ಟಿ20 ವಿಶ್ವಕಪ್ ಟೂರ್ನಿಯ ಬಳಿಕ ಮತ್ತೊಂದು ಸವಾಲನ್ನು ಸ್ವೀಕರಿಸಲು ಸೂಕ್ತ ಸಮಯ ನನಗೆ ಬಂದಿದೆ. ಇದನ್ನು ಪೂರೈಸಲು ರಾಜಸ್ಥಾನ್ ರಾಯಲ್ಸ್ ಸೂಕ್ತ ತಂಡವಾಗಿದೆ.

ಮುಂದುವರಿಯಲಿರುವ ಸಂಗಾಕ್ಕಾರ

ರಾಹುಲ್ ದ್ರಾವಿಡ್ ಅವರು ಹೆಡ್ ಕೋಚ್ ಆದ ಬಳಿಕ ಕುಮಾರ ಸಂಗಕ್ಕಾರ ಅವರನ್ನು ತಂಡದಿಂದ ಕೈ ಬಿಡಲಾಗುವುದು ಎಂಬ ಎಲ್ಲ ಊಹಾಪೋಹಾಗಳು ಸುಳ್ಳಾಗಿವೆ. ಶ್ರೀಲಂಕಾ ದಿಗ್ಗಜ ರಾಜಸ್ಥಾನ್ ರಾಯಲ್ಸ್ ತಂಡ ಕ್ರಿಕೆಟ್ ಡೈರೆಕ್ಟರ್ ಆಗಿ ಮುಂದಿವರಿಯಲಿದ್ದಾರೆ.

ದ್ರಾವಿಡ್ ಅವರ ಅಸಾಧಾರಣ ತರಬೇತಿ ಕೌಶಲವನ್ನು ಭಾರತ ಕ್ರಿಕೆಟ್ ತಂಡದ ಪರಿವರ್ತನೆಯಲ್ಲಿ ನೋಡಿದ್ದೇವೆ. ಫ್ರಾಂಚೈಸಿ ಜತೆ ಅವರಿಗೆ ಗಾಢ ಸಂಬಂಧವಿದೆ. ನಮ್ಮ ಜತೆ ಹಲವು ಬಾರಿ ಮಾತುಕತೆ ವೇಳೆ ಕ್ರೀಡೆ ಬಗೆಗಿನ ಅವರ ಉತ್ಸಾಹವನ್ನು ನೋಡಿದ್ದೇವೆ.
- ರಾಹುಲ್ ದ್ರಾವಿಡ್
ರಾಜಸ್ಥಾನ ರಾಯಲ್ಸ್ ತಂಡದ ಕೋಚ್

ಡೈಮಂಡ್ ಲೀಗ್ : ನೀರಜ್ ಚೋಪ್ರಾ ಫೈನಲ್‌ಗೆ ಅರ್ಹತೆ

ನವದೆಹಲಿ: ಪ್ಯಾರಿಸ್ ಒಲಿಂಪಿಕ್ಸ್‌ನ ಬೆಳ್ಳಿ ಪದಕ ವಿಜೇತ ನೀರಜ್ ಚೋಪ್ರಾ, ಡೈಮಂಡ್ ಲೀಗ್‌ನ ಅಂತಿಮ ಹಂತಕ್ಕೆ ಅರ್ಹತೆ ಪಡೆದಿದ್ದಾರೆ. ಎರಡು ದಿನಗಳ ಫೈನಲ್ ಹಣಾಹಣಿ ಬ್ರಸೆಲ್ಸ್‌ನಲ್ಲಿ ಸೆ. 13 ಮತ್ತು 14 ರಂದು ನಡೆಯಲಿದೆ.

ನೀರಜ್ ಜತೆಗೆ ಪ್ಯಾರಿಸ್ ಗೇಮ್ಸ್ ಕಂಚಿನ ಪದಕ ವಿಜೇತ ಆಂಡರ್ಸನ್ ಪೀಟರ್ಸ್, ಜೂಲಿಯನ್ ವೆಬ್ಬರ್, ಜಾಕುಬ್ ವಡ್ಲೆಜ್, ಆಂಡ್ರಿಯನ್ ಮರ್ಡೇರ್ ಮತ್ತು ರೋಡ್ರಿಕ್ ಗೆಂಕಿ ಡೀನ್ ಅರ್ಹತೆ ಪಡೆದ ಉಳಿದ ಜಾವೆಲಿನ್ ಪಟುಗಳು. 6 ಮಂದಿ ನೇರವಾಗಿ ಫೈನಲ್ ಪ್ರವೇಶಿಸಿದ್ದಾರೆ.. ಲೌಸನ್ನೆಯಲ್ಲಿ ಕಳೆದ ತಿಂಗಳು ನಡೆದಿದ್ದ ಡೈಮಂಡ್ ಲೀಗ್ ಸ್ಪರ್ಧೆಯಲ್ಲಿ ನೀರಜ್ ಈ ಋತುವಿನ ಅತ್ಯುತ್ತಮ 89.49 ಮೀಟರ್ ಎಸೆಯುವ ಮೂಲಕ 26ರ ಹರೆಯದ ನೀರಜ್ ಚೋಪ್ರಾ, ಎರಡನೇ ಸ್ಥಾನ ಪಡೆದಿದ್ದರು.

ಹಲವು ವರ್ಷಗಳಿಂದ 90 ಮೀಟರ್ ದೂರಕ್ಕೆ ಜಾವೆಲಿನ್ ಎಸೆಯುವುದಕ್ಕೆ ಸತತ ಪ್ರಯತ್ನ ನಡೆಸುತ್ತಿರುವ ನೀರಜ್ ಇನ್ನು ಮುಂದೆ 90 ಮೀ. ಗುರಿಯನ್ನು ದೇವರಿಗೆ

ಬಿಡುತ್ತೇನೆ ಎಂದಿದ್ದಾರೆ. 89.94 ಮೀ. ದೂರ ಭರ್ಜಿ ಎಸೆತ ನೀರಜ್‌ರ ಈವರೆಗಿನ ಶ್ರೇಷ್ಠ ನಿರ್ವಹಣೆ. ಈ ಎಸೆತವನ್ನು 2022ರ ಸ್ಟಾಕ್ ಹೋಮ್ ಡೈಮಂಡ್ ಲೀಗ್‌ನಲ್ಲಿ ಎಸೆದಿದ್ದರು.

ಗಾಯದ ಮಧ್ಯೆಯೂ ಚೋಪ್ರಾ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದ ಫೈನಲ್‌ನಲ್ಲಿ 89.45 ಮೀ.ದೂರಕ್ಕೆ ಜಾವೆಲಿನ್ ಎಸೆದು ಬೆಳ್ಳಿಪದಕ ಗೆದ್ದಿದ್ದರು. ಬಳಿಕ ನೀರಜ್ ಜರ್ಮನಿಯಲ್ಲಿ ತೊಡೆಸಂಧು ನೋವಿಗೆ ಚಿಕಿತ್ಸೆ ಪಡೆಯಲಿದ್ದಾರೆ ಎಂದು ಹೇಳಲಾಗಿತ್ತು. ಆದರೆ, ಡೈಮಂಡ್ ಲೀಗ್‌ನಲ್ಲಿ ಪಾಲ್ಗೊಳ್ಳಲು ಅವರು ಚಿಕಿತ್ಸೆಯನ್ನು ಮುಂದೂಡಿದ್ದರು. ಫೈನಲ್ ಮುಕ್ತಾಯದ ಬಳಿಕ ನೀರಜ್ ಮತ್ತೆ ವೈದ್ಯರನ್ನು ಸಂಪರ್ಕಿಸಿ ಶಸ್ತ್ರಚಿಕಿತ್ಸೆಯ ಬಗ್ಗೆ ಚರ್ಚೆ ನಡೆಸಲಿದ್ದಾರೆ ಎನ್ನಲಾಗಿದೆ.

ಅಮೆರಿಕನ್ ಓಪನ್ ಟೆನಿಸ್ ಅಂತಿಮ ಘಟ್ಟಕ್ಕೆ

ಇಂದು ಸಬಲೆಂಕಾ-ಪೆಗುಲಾ ಹಣಾಹಣಿ

ನ್ಯೂಯಾರ್ಕ್: ಅಮೆರಿಕನ್ ಮುಕ್ತ ಟೆನಿಸ್ ಪಂದ್ಯಾವಳಿಯ ಮಹಿಳಾ ಸಿಂಗಲ್ಸ್‌ನಲ್ಲಿ ವಿಶ್ವದ ನಂ.2 ಅರೀನಾ ಸಬಲೆಂಕಾ ಅಂತಿಮ ಸುತ್ತುಲ್ ಪ್ರವೇಶಿಸಿದ್ದಾರೆ. ಶನಿವಾರ ತಡರಾತ್ರಿ ನಡೆಯುವ ಫೈನಲ್ ಪಂದ್ಯದಲ್ಲಿ ಅಮೆರಿಕದ ಜೆಸ್ಸಿಕಾ ಪೆಗುಲಾ ವಿರುದ್ಧ ಸಬಲೆಂಕಾ ಪ್ರಶಸ್ತಿಗಾಗಿ ಸೆಣಸಲಿದ್ದಾರೆ.

ಶುಕ್ರವಾರ ನಡೆದ ಮಹಿಳಾ ಸಿಂಗಲ್ ಸೆಮಿಫೈನಲ್‌ನ ಜಿದ್ದಾಜಿದ್ದಿನ ಪಂದ್ಯದಲ್ಲಿ ಸಬಲೆಂಕಾ ಸ್ಥಳೀಯ ಆಟಗಾರ್ತಿ ಎಮ್ಮಾ ನವಾರೊ ಅವರನ್ನು 6-3, 7-6 (7-2) ಅಂತರದಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದರು. ಈ ಮೂಲಕ ಸತತವಾಗಿ ಫೈನಲ್ ಪ್ರವೇಶಿಸಿದ ಹೆಗ್ಗಳಿಕೆ ಪಡೆದರು.. ಕಳೆದ ವರ್ಷವೂ ಸಬಲೆಂಕಾ ಅಂತಿಮ ಹಂತ ಪ್ರವೇಶಿಸಿದ್ದರು. ಆದರೆ,

ಕೋಕೊ ಗಾಫ್ ವಿರುದ್ಧ ಸೋತು ಎರಡನೇ ಸ್ಥಾನ ಪಡೆದಿದ್ದರು. ಇದೀಗ ಮತ್ತೆ ಫೈನಲ್ ಪ್ರವೇಶಿಸಿರುವ ಅವರು ಚೊಚ್ಚಲ ಟ್ರೋಫಿಯ ನಿರೀಕ್ಷೆಯಲ್ಲಿದ್ದಾರೆ. ಸಬಲೆಂಕಾ ಈ ಹಿಂದೆ ಎರಡು ಬಾರಿ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿ ಜಯಿಸಿದ್ದರು.

ಸಬಲೆಂಕಾ ಎದುರಾಳಿಯಾಗಿದ್ದ ಅಮೆರಿಕದ ಜೆಸ್ಸಿಕಾ ಪೆಗುಲಾ ವಿಶ್ವದ ನಂಬರ್ 1 ಖ್ಯಾತಿಯ ಇಗಾ ಸ್ವಿಯಾಟೆಕ್ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿ ಸೆಮಿಫೈನಲ್ ಹಂತಕ್ಕೇರಿದ್ದರು. ಸೆಮಿಯಲ್ಲಿ ಕರೋಲಿನಾ ಮುಚೋವಾ ವಿರುದ್ಧ ಮೂರು ಸೆಟ್‌ಗಳ ಹೋರಾಟದ ಬಳಿಕ ಗೆಲುವಿನ ನಿಟ್ಟುಸಿರುಬಿಟ್ಟರು. ಗೆಲುವಿನ ಅಂತರ 1-6, 6-4, 6-2. ಮುಚೋವಾ ಬ್ರೆಜಿಲ್‌ನ ಬೀಟ್ರಿಜ್ ಹಡ್ಡಾಡ್ ಮಾಯಾ ಅವರನ್ನು 6-1, 6-4 ರಿಂದ ಸೋಲಿಸಿ ಸೆಮಿಫೈನಲ್ ಪ್ರವೇಶಿಸಿದ್ದರು. ಆದರೆ ಸೆಮಿಫೈನಲ್‌ನಲ್ಲಿ ಇದೇ ಪ್ರದರ್ಶನ ತೋರುವಲ್ಲಿ ವಿಫಲರಾಗಿ ಸೋಲು ಕಂಡರು. ಕಳೆದ ವರ್ಷ ಕೂಡ ಕರೋಲಿನಾ ಮುಚೋವಾ ಅಮೆರಿಕ ಓಪನ್‌ನ ಸೆಮಿಫೈನಲ್‌ನಲ್ಲಿ ಕೋಕೊ ಗಾಫ್ ವಿರುದ್ಧ ಸೋತಿದ್ದರು. ಈ ಬಾರಿಯೂ ಸೆಮಿ ಹರ್ಡಲ್ಸ್ ದಾಟುವಲ್ಲಿ ವಿಫಲರಾಗಿದ್ದರು.

ವಿಕ್ರಮ್ ರಾಥೋಡ್ ನ್ಯೂಜಿಲೆಂಡ್ ತಂಡಕ್ಕೆ ಸಹಾಯಕ ಬ್ಯಾಟಿಂಗ್ ಕೋಚ್

ಲಂಕಾ ಸ್ಪಿನ್ನರ್ ಕಿವೀಸ್ ತರಬೇತುದಾರ

ಮುಂಬಯಿ: ಭಾರತ ಕ್ರಿಕೆಟ್ ತಂಡದ ಮಾಜಿ ಬ್ಯಾಟಿಂಗ್ ಕೋಚ್ ವಿಕ್ರಮ್ ರಾಥೋಡ್ ಮತ್ತು ಶ್ರೀಲಂಕಾದ ಹಿರಿಯ ಸ್ಪಿನ್ನರ್ ರಂಗನಾ ಹೆರಾತ್ ಅವರು ಏಷ್ಯಾದಲ್ಲಿ ಮುಂಬರುವ ಟೆಸ್ಟ್‌ಗೆ ಸಿದ್ಧರಾಗಲು ನ್ಯೂಜಿಲೆಂಡ್ ತಂಡಕ್ಕೆ ಮಾರ್ಗದರ್ಶನ ನೀಡಲಿದ್ದಾರೆ. ನ್ಯೂಜಿಲೆಂಡ್ ತಂಡ ಸೆಪ್ಟೆಂಬರ್ 9 ರಿಂದ ನಡೆಯಲಿರುವ ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯವನ್ನಾಡಲು ಶುಕ್ರವಾರ ಭಾರತಕ್ಕೆ ಬಂದಿಳಿದಿದೆ. ಎರಡೂ ತಂಡಗಳ ಈ ಟೆಸ್ಟ್ ಪಂದ್ಯ ಭಾರತದ ಗ್ರೇಟರ್ ನೋಯ್ಡಾದಲ್ಲಿ ನಡೆಯಲಿದೆ.

ಟಿ20 ಗೆಲುವಿನಲ್ಲಿ ಪ್ರಮುಖ ಪಾತ್ರ

ವಿಕ್ರಮ್ ರಾಥೋಡ್ ಮಾಜಿ ಕೋಚ್ ರಾಹುಲ್ ದ್ರಾವಿಡ್ ಅಧಿಕಾರಾವಧಿಯಲ್ಲಿ ತಂಡದ ಬ್ಯಾಟಿಂಗ್ ಕೋಚ್ ಆಗಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಭಾರತದ ಟಿ20 ವಿಶ್ವಕಪ್ ಗೆಲುವಿನಲ್ಲೂ ರಾಥೋಡ್ ಮಾರ್ಗದರ್ಶನ ಪ್ರಮುಖ ಪಾತ್ರವಹಿಸಿತ್ತು.

ರಾಥೋಡ್ 90 ರ ದಶಕದಲ್ಲಿ ಭಾರತದ ಪರ 6 ಟೆಸ್ಟ್ ಪಂದ್ಯಗಳನ್ನು ಆಡಿದ್ದರು. ನ್ಯೂಜಿಲೆಂಡ್ ತಂಡ ಅಫ್ಘಾನಿಸ್ತಾನ ವಿರುದ್ಧದ ಸರಣಿ ಬಳಿಕ ಶ್ರೀಲಂಕಾ ಮತ್ತು ಭಾರತ ವಿರುದ್ಧ ಟೆಸ್ಟ್ ಸರಣಿ ಆಡಲಿದೆ.

ಏಷ್ಯಾದ ಪಿಚ್‌ಗಳು ಸ್ಪಿನ್ ಟ್ರ್ಯಾಕ್ ಆಗಿರುವ ಕಾರಣ ಇದನ್ನು ಸಮರ್ಥವಾಗಿ ಎದುರಿಸಿ ಆಡುವ ನಿಟ್ಟಿನಲ್ಲಿ ಕಿವೀಸ್ ಕ್ರಿಕೆಟ್ ಮಂಡಳಿ ವಿಕ್ರಮ್ ರಾಥೋಡ್ ಮತ್ತು ರಂಗನಾ ಹೆರಾತ್ ನೆರವು ಪಡೆದಿದೆ.

ಕಿವೀಸ್‌ಗೆ ಗೆಲುವು ಅತ್ಯಗತ್ಯ

ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದ ದಿನಾಂಕ ಈಗಾಗಲೇ ಐಸಿಸಿ ಪ್ರಕಟಿಸಿದೆ. ನ್ಯೂಜಿಲೆಂಡ್ ಇದುವರೆಗೆ 6 ಪಂದ್ಯಗಳಲ್ಲಿ 3 ರಲ್ಲಿ ಗೆದ್ದು 36 ಅಂಕ ಗಳಿಸಿ ಮೂರನೇ ಸ್ಥಾನದಲ್ಲಿದೆ.

ಫೈನಲ್ ಪ್ರವೇಶಿಸುವ ನಿಟ್ಟಿನಲ್ಲಿ ಕಿವೀಸ್‌ಗೆ ಮುಂದಿನ ಸರಣಿಯಲ್ಲಿ ಗೆಲುವು ಅತ್ಯಗತ್ಯ. ಮೊದಲ ಆವೃತ್ತಿಯಲ್ಲೇ ಕಿವೀಸ್ ಭಾರತ ತಂಡವನ್ನು ಮಣಿಸಿ ಚೊಚ್ಚಲ ಟ್ರೋಫಿ ಗೆದ್ದ ಸಾಧನೆ ಮಾಡಿತ್ತು. ನ್ಯೂಜಿಲೆಂಡ್ ಶ್ರೀಲಂಕಾ ವಿರುದ್ಧ 2 ಟೆಸ್ಟ್, ಭಾರತ ವಿರುದ್ಧ 3 ಟೆಸ್ಟ್ ಪಂದ್ಯಗಳನ್ನು ಆಡಲಿದೆ.

ಅನುಭವಿ ಬೌಲರ್ ಹೆರಾತ್

ಅಫ್ಘಾನಿಸ್ತಾನ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ವಿಕ್ರಮ್ ರಾಥೋಡ್ ನ್ಯೂಜಿಲೆಂಡ್ ತಂಡದ ಸಹಾಯಕ ಬ್ಯಾಟಿಂಗ್ ಕೋಚ್ ಆಗಿ, ಶ್ರೀಲಂಕಾದ ರಂಗನಾ ಹೆರಾತ್ ಸ್ಪಿನ್ ಬೌಲಿಂಗ್ ಕೋಚ್ ಆಗಿ ಕಾರ್ಯನಿರ್ವಹಿಸಲಿದ್ದಾರೆ. ರಂಗನಾ ಹೆರಾತ್ ಭಾರತದ ನೆಲದಲ್ಲಿ ಆಡಿದ ಅಪಾರ ಅನುಭವ ಹೊಂದಿದ್ದಾರೆ. ಲಂಕಾ ಪರ 93 ಟೆಸ್ಟ್ ಪಂದ್ಯಗಳಿಂದ 433 ವಿಕೆಟ್ ಪಡೆದ ಸಾಧನೆ ಮಾಡಿದ್ದಾರೆ. ಮೂರೂ ಮಾದರಿಯ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 525 ವಿಕೆಟ್ ಗಳಿಸಿದ್ದಾರೆ. 2016 ರಲ್ಲಿ ಏಕದಿನ ಮತ್ತು ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ್ದ ಹೆರಾತ್, 2018ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸುವ ಮೂಲಕ ತಮ್ಮ ಅಂತಾರಾಷ್ಟ್ರೀಯ ವೃತ್ತಿ ಜೀವನಕ್ಕೆ ತೆರೆ ಎಳೆದಿದ್ದರು.

ರೊನಾಲ್ಡೊ ಸಾಧನೆಯ ಕಿರಿಟಕ್ಕೆ ಮತ್ತೊಂದು ಗರಿ

ಬೆಂಗಳೂರು: ಪೋರ್ಚುಗಲ್ ದೇಶದ ದಿಗ್ಗಜ ಫುಟ್ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ತಮ್ಮ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿ ಸೇರಿಸಿಕೊಂಡಿದ್ದಾರೆ. ಲಿಸ್ಬನ್‌ನಲ್ಲಿ ನಡೆದ ಯುಇಎಫ್‌ಎ ನೇಷನ್ಸ್ ಲೀಗ್ ಗುಂಪು ಹಂತದ ಪಂದ್ಯದಲ್ಲಿ ಕ್ರೊವೇಷಿಯಾದ ವಿರುದ್ಧದ ಪಂದ್ಯದಲ್ಲಿ ರೊನಾಲ್ಡೊ ಈ ವಿಕ್ರಮ ಸಾಧಿಸಿದರು.

ಈ ಪಂದ್ಯದಲ್ಲಿ ಪೋರ್ಚುಗಲ್ 2-1 ಗೋಲುಗಳ ಅಂತರದಿಂದ ಕ್ರೊವೇಷಿಯಾವನ್ನು ಸೋಲಿಸುವ ಮೂಲಕ ರೊನಾಲ್ಡೊ ಅವರ ಹೊಸ ಮೈಲುಗಲ್ಲಿಗೆ ಸಾಕ್ಷಿಯಾಯಿತು. ಈ ಐತಿಹಾಸಿಕ ಸಾಧನೆಯೊಂದಿಗೆ ರೊನಾಲ್ಡೊ ಫುಟ್ಬಾಲ್ ಇತಿಹಾಸದಲ್ಲಿ 900 ಗೋಲುಗಳನ್ನು ಹೊಡೆದ ಏಕೈಕ ಆಟಗಾರ ಎಂಬ ಕೀರ್ತಿಗೆ ಪಾತ್ರರಾದರು. ಅವರು 900ನೇ ಗೋಲು ಗಳಿಸುತ್ತಿದ್ದಂತೆ ಮೈದಾನದಲ್ಲಿ ಭಾವುಕರಾದರು. ಈ ವೇಳೆ ಮೈದಾನದಲ್ಲಿ ಸಹ ಆಟಗಾರರು ಹಾಗೂ ಅಭಿಮಾನಿಗಳು ರೊನಾಲ್ಡೊ ಅವರನ್ನು ಅಭಿನಂದಿಸಿದರು. ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಮಾನಿಗಳು, ಫುಟ್ಬಾಲ್ ಪ್ರೇಮಿಗಳು, ಸೆಲೆಬ್ರಿಟಿಗಳು, ನಾನಾ ದೇಶಗಳ ರಾಜಕೀಯ ನಾಯಕರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಹಸಿದವರ ತುತ್ತಿನ ಕಥೆ

ಅನ್ನದ ಬೆಲೆ ಹಸಿದವನಿಗೆ ಗೊತ್ತು. ಹಿಂದೆ ಬಡವರು ತುತ್ತು ಅನ್ನಕ್ಕಾಗಿ ಪರದಾಡುವ ಸ್ಥಿತಿಯಿತ್ತು. ಹಳ್ಳಿಗಳಲ್ಲಿ ಹಬ್ಬ ಹರಿದಿನಗಳಲ್ಲಷ್ಟೇ ಅನ್ನ ಮಾಡುತ್ತಿದ್ದರು, ಆಗ ಅನ್ನವೇ ಪರಮಾನ್ನ. ಹೀಗೆ ತುತ್ತಿನ ಬೆಲೆಯನ್ನು ಸಾರುವ ಅನ್ನ ತೆರೆಗೆ ಬಂದಿದ್ದು, ಅನ್ನದ ಬೆಲೆಯನ್ನು ಸಾರುತ್ತದೆ.

ಚಾಮರಾಜನಗರದ ಕಣ್ಣೂರಿನ ಚಿಕ್ಕನಿಂಗ ಮತ್ತು ಸಿವಿ ದಂಪತಿಯ ಮುದ್ದಾದ ಮಗ ಮಹಾದೇವ. ಈತನಿಗೆ ಅನ್ನ ಎಂದರೆ ಪಂಚಪ್ರಾಣ. ಊಟಕ್ಕೆ ಅನ್ನವೇ ಬೇಕು ಎಂದು ಸದಾ ಹಠ ಹಿಡಿಯುತ್ತಾನೆ. ಆದರೆ ಮನೆಯಲ್ಲಿ ಬಡತನ, ಹೀಗಾಗಿ ಅನ್ನ ಮಾಡುವುದೇ ಕಷ್ಟ. ಚಿಕ್ಕನಿಂಗ ಮದೇಶ್ವರನ ಭಕ್ತ, ಮಡದಿ ಮತ್ತು ಮಗನೊಂದಿಗೆ ಮಲೆಮಹದೇಶ್ವರ ಬೆಟ್ಟಕ್ಕೆ ಹೋಗುವಾಗ, ಜಾತ್ರೆಯ ಜನಜಂಗುಳಿಯ ನಡುವೆ ಮಹಾದೇವ ಕಳೆದು ಹೋಗುತ್ತಾನೆ. ಇದರಿಂದ ಕಂಗಾಲಾದ ಚಿಕ್ಕನಿಂಗ ಮಗನನ್ನು ಹುಡುಕಿ ಸುಸ್ತಾಗುತ್ತಾನೆ. ಮಹಾದೇವನ ತಾಯಿ ಸಿವಿ ಮಗ ಸಿಗಲಿ ಎಂದು ದೇವರಿಗೆ ಹರಕೆ ಕಟ್ಟಿಕೊಳ್ಳುತ್ತಾಳೆ. ಅಷ್ಟಕ್ಕೂ ಮಹಾದೇವ ಎಲ್ಲಿರುತ್ತಾನೆ, ಆತನನ್ನು ಹುಡುಕುವ ದಾರಿಯಲ್ಲಿ ಎಷ್ಟೆಲ್ಲಾ ಕಷ್ಟಗಳು ಎದುರಾಗುತ್ತವೆ ಎಂಬುದನ್ನು ಚಿತ್ರ ನೋಡಿಯೇ ತಿಳಿಯಬೇಕು.

ಎಪ್ಪತ್ತು ಎಂಬತ್ತರ ದಶಕದಲ್ಲಿ ಸಾಗುವ ಅನ್ನ ಚಿತ್ರವೂ ಅಂದಿನ ಬಡವರ ಆರ್ಥಿಕ ಸ್ಥಿತಿಯನ್ನು ವಾಸ್ತವವಾಗಿ, ಭಾವನಾತ್ಮಕ ನೆಲೆಗಟ್ಟಿನಲ್ಲಿ ಕಟ್ಟಿಕೊಟ್ಟಿದ್ದಾರೆ ನಿರ್ದೇಶಕ ಇಸ್ಲಾಹುದ್ದೀನ್. ಅಂದು ಬಡವರ ಪಾಲಿಗೆ ಅನ್ನವೇ ಬಂಗಾರವಾಗಿತ್ತು. ಅಂದಿನ ಪರಿಸ್ಥಿತಿಯನ್ನು ಕಂಡ ಎಲ್ಲರಿಗೂ ಈ ಚಿತ್ರ ಬಲು ಬೇಗ ಕನೆಕ್ಟ್ ಆಗುತ್ತದೆ. ಹಳೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಜನರ ಬದುಕು ಬವಣೆ, ಭಾಷೆ, ಸಂಸ್ಕೃತಿ, ಧಾರ್ಮಿಕ ನಂಬಿಕೆಗಳು ಇವೆಲ್ಲವೂ ನೈಜವಾಗಿ ಮೂಡಿಬಂದಿವೆ.

ಸಣ್ಣನಿಂಗ ಪಾತ್ರಕ್ಕೆ ಸಂಪತ್ ಮೈತ್ರೇಯ ಅಕ್ಷರಶಃ ಜೀವತುಂಬಿ ಅಭಿನಯಿಸಿದ್ದಾರೆ, ಗ್ರಾಮ್ಯ ಭಾಷೆ ಅಲ್ಲಿನ ಸೊಗಡಿಗೆ ಹೊಂದಿಕೊಂಡಿದ್ದಾರೆ. ಸಿವಿ ಪಾತ್ರಕ್ಕೆ ಪದ್ಮಶ್ರೀ ಜೀವತುಂಬಿದ್ದು, ಸೆಂಟಿಮೆಂಟ್ ಮೂಲಕ ಮನಗೆಲ್ಲುತ್ತಾರೆ. ಬಾಲ ನಟನಾಗಿ ನಂದನ್ ಮೆಚ್ಚುವ ಅಭಿನಯ ತೋರಿದ್ದಾನೆ. ಉಳಿದಂತೆ ಬಲರಾಜವಾಡಿ, ಭುವನಾ ಎಲ್ಲರೂ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಹಿನ್ನೆಲೆ ಸಂಗೀತ, ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಒಮ್ಮೆಯಾದರೂ ಅನ್ನ ಚಿತ್ರವನ್ನು ನಸೋಡಲೇಬೇಕು, ಅನ್ನದ ಮಹತ್ವವನ್ನು ತಿಳಿಯಲೇಬೇಕು.

ಚಿತ್ರ: ಅನ್ನ
ನಿರ್ದೇಶನ: ಎನ್.ಎಸ್. ಇಸ್ಲಾಹುದ್ದೀನ್
ನಿರ್ಮಾಣ : ಎಸ್. ಬಸವರಾಜು
ತಾರಾಗಣ: ಸಂಪತ್ ಮೈತ್ರೇಯ, ಪದ್ಮಶ್ರೀ, ಮಾಸ್ಟರ್ ನಂದನ್, ಬಲ ರಾಜವಾಡಿ, ಭುವನಾ ಮತ್ತಿತರರು.
ರೇಟಿಂಗ್: ★★★

ಸೆನ್ಸಾರ್ ಅಂಗಳದಲ್ಲಿ ಭಗೀರಥ

ವಿಭಿನ್ನ ಕಥೆ ಹೊತ್ತ ಭಗೀರಥ ತೆರೆಗೆ ಸಿದ್ಧವಾಗಿದ್ದಾನೆ. ರಾಮ್ ಜನಾರ್ಧನ್ ಕಥೆ ಬರೆದು ನಿರ್ದೇಶನ ಮಾಡುತ್ತಿರುವ ಈ ಚಿತ್ರದಲ್ಲಿ ಜಯಪ್ರಕಾಶ್ ನಾಯಕನಾಗಿ ನಟಿಸಿದ್ದಾರೆ. ನಿಸರ್ಗಾ ಹಾಗೂ ರೂಪಶ್ರೀ ನಾಯಕಿರಾಗಿ ಬಣ್ಣಹಚ್ಚಿದ್ದಾರೆ. ಶೀರ್ಷಿಕೆಯೇ ಹೇಳುವಂತೆ ಇದು ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಕಥೆಯನ್ನು ಒಳಗೊಂಡಿದೆ. ಲವ್, ಫ್ಯಾಮಿಲಿ ಸ್ಟೋರಿಯ ಜತೆಗೆ ಆ್ಯಕ್ಷನ್ ಕೂಡ ಚಿತ್ರದಲ್ಲಿ ಬೆರೆತಿದೆ. ಚಂದನಾ ರಾಘವೇಂದ್ರ, ಸುಧಾ ಬೆಳವಾಡಿ, ಶಿವರಾಜ್ ಕೆ.ಆರ್ ಪೇಟೆ, ರವಿಕಾಳೆ, ಶ್ರೀನಿವಾಸಪ್ರಭು, ಬಲ ರಾಜವಾಡಿ, ನಯನಾ, ಸುರಭಿ ರವಿ, ಶ್ರೀಯಾ ಪಾವನಿ, ನಿಸರ್ಗಾ ಅಣ್ಣಪ್ಪ, ರೂಪಶ್ರೀ, ಶಶಿಧರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಭಗೀರಥ ಹೆಸರೆ ಹೇಳುವಂತೆ ಅಸಾಧ್ಯವಾದುದ್ದನ್ನು ಸಾಧಿಸುವವನು ಎಂದು, ನಮ್ಮ ಚಿತ್ರದ ಕಥೆಯೂ ಇದೇ ಅರ್ಥದಲ್ಲಿ ಸಾಗುತ್ತದೆ. ಈಗಾಗಲೇ ಚಿತ್ರೀಕರಣ ಮುಗಿದಿದ್ದು, ಸೆನ್ಸಾರ್ ಅಂಗಳಕ್ಕೆ ಪ್ರವೇಶಿಸಿದೆ ಎನ್ನುತ್ತಾರೆ ಜನಾರ್ಧನ್. ಸಾಯಿ ರಮೇಶ್ ಪ್ರೊಡಕ್ಷನ್ ಲಾಂಛನದಲ್ಲಿ ಕೆ.ರಮೇಶ್ ಮತ್ತು ಬಿ.ಭೈರಪ್ಪ ಚಿತ್ರ ನಿರ್ಮಾಣ ಮಾಡಿದ್ದಾರೆ.

ಯಾವುದಕ್ಕೂ ಹೆದರದ, ವಿಲ್ ಪವರ್ ಇರುವ ಮನುಷ್ಯನ ಪಾತ್ರ ನನ್ನದು. ಈ ಚಿತ್ರದಲ್ಲಿ ಸಾಹಸ ಸನ್ನಿವೇಶಗಳು ಗಮನಸೆಳೆಯುತ್ತವೆ. ನಾನು ಕರಾಟೆ ಪಟು ಆಗಿರುವುದರಿಂದ ಸಾಹಸ ಸನ್ನಿವೇಶದಲ್ಲಿ ನಟಿಸುವುದು ಸುಲಭವಾಯಿತು ಎಂದು ನಟ ಜಯಪ್ರಕಾಶ್ ಹೇಳಿದರು. ನಿಸರ್ಗಾ, ರಾಧಾ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದರೆ, ರೂಪಶ್ರೀ, ರುಕ್ಮಿಣಿ ಪಾತ್ರ ನಿರ್ವಹಿಸಿದ್ದಾರೆ. ಶಶಿಧರ್ ಖಳನಾಗಿ ಅಬ್ಬರಿಸಿದ್ದಾರೆ. ಪ್ರದೀಪ್ ವರ್ಮ ಸಂಗೀತ ನಿರ್ದೇಶನ ಹಾಗೂ ಸೂರಿ ಚಿತ್ತೂರು ಛಾಯಾಗ್ರಹಣ ಈ ಚಿತ್ರಕ್ಕಿದೆ.

ಪ್ರೀತಿಗೆ ಹೊಸ ಅರ್ಥ ನೀಡಿದ ಪ್ರೇಮಕಥೆ



ಪ್ರೀತಿ ಮಧುರ, ಅಮರ. ಪ್ರೀತಿಯಲ್ಲಿ ಬಿದ್ದ ಮೇಲೆ ಕಾಡುವ ನೆನೆಪುಗಳು ಸದಾ ಮನದಲ್ಲಿ ಹಸಿರಾಗಿರುತ್ತವೆ. ಅದರ ಜತೆಗೆ ಮನದ ತೊಳಲಾಟವೂ ಸಹಜ. ನಿಜವಾದ ಪ್ರೀತಿಗೆ ಅರ್ಥ ಹುಡುಕುವ ನಿಟ್ಟಿನಲ್ಲಿ ಇಬ್ಬನಿ ತಬ್ಬಿದ ಇಳೆಯಲಿ ತೆರೆಯಲ್ಲಿ ಸಾಗುತ್ತಾ ಮಧುರ ನೆನಪುಗಳನ್ನು ಮೆಲುಕು ಹಾಕುವಂತೆ ಮಾಡುತ್ತದೆ. ಆತ ಸಿದ್, ಯುವ ಉದ್ಯಮಿ. ಸಂಪ್ರದಾಯಸ್ಥ ಕುಟುಂಬದ ಹುಡುಗ, ತನ್ನ ಸಂಬಂಧಿ ರಾಧಾಳ ಜತೆಗೆ ಮದುವೆ ಮಾಡಲು ಮನೆಯವರು ಚಿಂತಿಸುತ್ತಿರುತ್ತಾರೆ ಆದರೆ, ತನಗಿಂತ ತುಂಬಾ ಕಿರಿಯಳಾದ ರಾಧಾಳನ್ನು ಮದುವೆಯಾಗಲು ಆತನ ಮನಸ್ಸು ಒಪ್ಪುವುದಿಲ್ಲ. ಈ ನಡುವೆಯೇ ಸಿದ್‌ಗೆ ಅನಾಹಿತಾಳ ಪರಿಚಯವಾಗುತ್ತದೆ. ಮೊದಲ ನೋಟದಲ್ಲೇ ಆಕೆಗೆ ಮನಸೋತ ಸಿದ್, ಅನಾಹಿತಳನ್ನು ವರಿಸಲು ನಿರ್ಧರಿಸುತ್ತಾನೆ. ಆದರೆ ಮುಂಗೋಪಿಯಾದ ಸಿದ್ ಹಾಗೂ ಅನಾಹಿತ ಪ್ರೀತಿಯಲ್ಲಿ ಬಿರುಕು ಮೂಡುತ್ತದೆ.

ಹೀಗಿರುವಾಗಲೇ ಫ್ಲಾಶ್ ಬ್ಯಾಕ್ ಸ್ಟೋರಿ ತೆರೆದುಕೊಳ್ಳುತ್ತದೆ. ಸಿದ್ ಬಾಲ್ಯದಲ್ಲಿ ಕ್ರಿಕೆಟ್ ಪ್ರೇಮಿಯಾಗಿರುತ್ತಾನೆ. ಹಾಗಾಗಿ ಆತನ ತಾಯಿಗೆ ತನ್ನ ಮಗ ದೊಡ್ಡ ಕ್ರಿಕೆಟರ್ ಆಗಬೇಕು ಎಂಬ ಆಸೆಯಿರುತ್ತದೆ. ಅಂತೆಯೇ ಸಿದ್ ಅದೇ ದಾರಿಯಲ್ಲಿ ಸಾಗುತ್ತಿರುತ್ತಾನೆ, ಆದರೆ ಅದ್ಯಾಕೋ ಕ್ರಿಕೆಟ್‌ನಿಂದ ದೂರಾಗುತ್ತಾನೆ. ಅದಕ್ಕೆ ಕಾರಣ ಏನು, ಸಿದ್, ರಾಧಾ ಅಥವಾ ಅನಹಿತಾ ಈ ಇಬ್ಬರಲ್ಲಿ ಯಾರನ್ನು ವರಿಸುತ್ತಾನೆ ಎಂಬುದನ್ನು ತೆರೆಯಲ್ಲಿ ನೋಡಿ ತಿಳಿದಿರೆ ಚೆಂದ. ಆನಂದ.

ಇಬ್ಬನಿ ತಬ್ಬಿದ ಇಳೆಯಲಿ ಸಿನಿಮಾ ಕಥೆ ಸರಳವಾಗಿದ್ದು, ಮನಸಿಗೆ ಹಿತ ನೀಡುತ್ತದೆ. ಪ್ರೀತಿಯ ಹೊಸ ಅಧ್ಯಾಯ ಪ್ರಕೃತಿಯ ರಮ್ಯ ಮನೋಹರ ದೃಶ್ಯ ಕಾವ್ಯ ಮನಸ್ಸಿಗೆ ಮುದ ನೀಡುತ್ತದೆ. ಪ್ರೀತಿಯನ್ನು ಕಳೆದುಕೊಂಡ ಜಾಗದಲ್ಲಿಯೇ ಹುಡುಕಿದರೆ ಮತ್ತೆ ಸಿಗಬಹುದೇ, ಅಂದುಕೊಂಡವರನ್ನು ಕೈ ಹಿಡಿದರೆ ಜೀವನ ಸುಖಮಯವಾಗಿರುತ್ತದೆಯೇ ಹೀಗೆ ಹತ್ತು ಹಲವು ಪ್ರಶ್ನೆಗಳು ಮನಸನ್ನು ಕಾಡುತ್ತವೆ.

ಇದೆಲ್ಲವೂ ಬೆರೆತ ಒಂದು ಅದ್ಭುತ ಪ್ರೇಮಕಥೆಯನ್ನು ಮನಸಿಗೆ ಹಿಡಿಸುವಂತೆ ಕಟ್ಟಿಕೊಡುವಲ್ಲಿ ನಿರ್ದೇಶಕ ಚಂದ್ರಜಿತ್ ಬೆಳ್ಳಿಯಪ್ಪ ಯಶಸ್ವಿಯಾಗಿದ್ದಾರೆ. ಪಯಣದಲ್ಲಿ ಸಾಗುವ ಪ್ರೀತಿಯ ಜತೆಗೆ ಹಾಡುಗಳು ಮನಸಿಗೆ ಮುದ ನೀಡುತ್ತವೆ.

ಸಿದ್ ಪಾತ್ರಕ್ಕೆ ವಿಹಾನ್ ಜೀವತುಂಬಿ ನಟಿಸಿದ್ದಾರೆ. ಲವ್ವರ್ ಬಾಯ್ ಆ್ಯಂಗ್ರಿಯನ್ ಮ್ಯಾನ್‌ಮ್ಯಾನ್ ಆಗಿ ಗಮನಸೆಳೆಯುತ್ತಾರೆ. ಮಯೂರಿ ಸಿಂಪಲ್ ಲುಕ್‌ನಲ್ಲಿ ಮನಗೆಲ್ಲುತ್ತಾರೆ. ಅಹಿತಾಳಾಗಿ ಅಂಕಿತಾ ಅಮರ್ ಮುಗ್ಧತೆಯ ಮೂಲಕ ಮನಸನ್ನು ಆವರಿಸುತ್ತಾರೆ. ಉಳಿದಂತೆ ಗಿರಿಜಾ ಶೆಟ್ಟರ್, ಶಂಕರ್ ಮೂರ್ತಿ, ಸಲೀಂ ಹೀಗೆ ಎಲ್ಲರೂ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಚಿತ್ರದ ಹಾಡುಗಳು ಮಧುರವಾಗಿ ಮೂಡಿಬಂದಿದ್ದು, ಸಿನಿಮಾ ನೋಡಿ ಹೊರಬಂದ ಮೇಲೂ ಗೀತೆಗಳು ಮನಸನ್ನು ಆವರಿಸುತ್ತವೆ. ಇಬ್ಬನಿ ತಬ್ಬಿದ ಇಳೆಗೆ ಸಂಗೀತ ಶಕ್ತಿತುಂಬಿದೆ. ಛಾಯಾಗ್ರಹಣವೂ ಅದ್ಭುತವಾಗಿದೆ. ಇಬ್ಬನಿ ತಬ್ಬಿದ ಇಳೆಯನು ಮನೆಮಂದಿಯೆಲ್ಲಾ ಕುಳಿತು, ನೋಡಿ ಆನಂದಿಸಬಹುದು.

ಚಿತ್ರ : ಇಬ್ಬನಿ ತಬ್ಬಿದ ಇಳೆಯಲಿ
ನಿರ್ದೇಶನ : ಚಂದ್ರಜಿತ್ ಬೆಳ್ಳಿಯಪ್ಪ
ನಿರ್ಮಾಣ : ರಕ್ಷಿತ್ ಶೆಟ್ಟಿ ಮತ್ತು ಜಿ.ಎಸ್. ಗುಪ್ತ
ತಾರಾಗಣ : ವಿಹಾನ್, ಅಂಕಿತಾ, ಮಯೂರಿ, ಗಿರಿಜಾ, ಶಂಕರ್ ಮೂರ್ತಿ ಮುಂತಾದವರು.
ರೇಟಿಂಗ್ : 3.5

ರಾಮ್ ಚಿತ್ರದಲ್ಲಿ ತ್ಯಾಗರಾಜರು

ಚಂದನವನದ ತ್ಯಾಗರಾಜರು ಎಂದಿನ ಪ್ರಸಿದ್ಧಿ ಪಡೆದಿರುವ ರಮೇಶ್ ಅರವಿಂದ್ ಹಾಗೂ ಗಣೇಶ್ ಒಂದೇ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಈ ಚಿತ್ರದ ಮುಹೂರ್ತ ಗೌರಿ ಹಬ್ಬದದಂದು ನೆರವೇರಿತು. ನಟಿ ಜಾನ್ವಿ ರಾಯಲ ಚಿತ್ರಕ್ಕೆ ಕ್ಲ್ಯಾಪ್ ಮಾಡಿದರೆ, ನಿರ್ದೇಶಕ ವಿಖ್ಯಾತ್ ಪತ್ನಿ ಸ್ವಾತಿ ವಿಖ್ಯಾತ್ ಕ್ಯಾಮೆರಾಗೆ ಚಾಲನೆ ನೀಡಿ ಶುಭಕೋರಿದರು. ರಮೇಶ್ ಅರವಿಂದ್ ಹಾಗೂ ಗಣೇಶ್ ಸಂಗಮದ ಹೊಸ ಚಿತ್ರಕ್ಕೆ ಯುವರ್ಸ್ ರಾಮ್ ಸಿನ್ಸಿಯರ್ಲಿ ಎಂಬ ಟೈಟಲ್ ಇಡಲಾಗಿದೆ. ಫಸ್ಟ್ ಲುಕ್ ಕೂಡ ಬಿಡುಗಡೆ ಮಾಡಲಾಗಿದ್ದು, ಆರಂಭದಿಂದಲೇ ನಿರೀಕ್ಷೆ ಹೆಚ್ಚುವಂತೆ ಮಾಡಿದೆ.

ಪುಷ್ಪಕ ವಿಮಾನ, ಇನ್ಸ್‌ಪೆಕ್ಟರ್ ವಿಕ್ರಮ್, ಮಾನ್ಸೂನ್ ರಾಗದಂತಹ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ಎ.ಆರ್. ವಿಖ್ಯಾತ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ದಿ ರಾಯಲ ಸ್ಟುಡಿಯೋಸ್ ಬ್ಯಾನರ್ ನಲ್ಲಿ ಸತ್ಯ ರಾಯಲ ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ನವೀನ್ ಕುಮಾರ್ ಛಾಯಾಗ್ರಹಣ, ಹರೀಶ್ ಕೊಮ್ಮೆ ಸಂಕಲನ, ಜೆ ಅನೂಪ್ ಸೀಳಿನ್ ಸಂಗೀತ ನಿರ್ದೇಶನ, ಗುಣ ಕಲಾ ನಿರ್ದೇಶನ , ಪ್ರಶಾಂತ್ ರಾಜಪ್ಪ , ಯದುನಂದನ್ ಹಾಗೂ ಸಚಿನ್ ಸಂಭಾಷಣೆ ಚಿತ್ರಕ್ಕಿದೆ.

ನಿರ್ದೇಶಕ ವಿಖ್ಯಾತ್ ಗೆ ಇರುವ ಸೌಂದರ್ಯ ಪ್ರಜ್ಞೆ ಮೆಚ್ಚಲೇಬೇಕು. ಅವರು ನಿರ್ಮಾಣ ಮಾಡಿದ ಚಿತ್ರಗಳ ಪೋಸ್ಟರ್, ಟೀಸರ್ ಗಳಲ್ಲಿ ಸೂಕ್ಷ್ಮ ಮನೋಭಾವವಿದೆ. ಅವರು ನಿರ್ದೇಶನ ಮಾಡುತ್ತಿರುವುದು ಖುಷಿ ತಂದಿದೆ. ಸತ್ಯ ಹಾಗೂ ವಿಖ್ಯಾತ್ ಇಬ್ಬರಲ್ಲಿ ಬಹಳ ಉತ್ಸಾಹವಿದೆ. ಗಣೇಶ್ ಹಾಗೂ ನನ್ನ ಕಾಂಬೋ ನಿಮಗೆ ಎಷ್ಟು ಖುಷಿ ಕೊಡುತ್ತದೆಯೋ. ನಮಗೂ ಅಷ್ಟೇ ಖುಷಿ ಕೊಟ್ಟಿದೆ.
- ರಮೇಶ್ ಅರವಿಂದ್